ಸೋಮವಾರ, ಜುಲೈ 1, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 182 | ಪುಟ 14
www.prajavani.net
prajavani.net prajavani prajavani prajavani

# ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

**ಶಿಕ್ಷಣ**
ತೆರೆದ ಪುಸ್ತಕ ಪರೀಕ್ಷೆಯ ಸವಾಲುಗಳೇನು?



ವಿದೇಶ ವಿದ್ಯಮಾನ
ಬ್ರಿಟನ್ ಚುನಾವಣೆ: ಬದಲಾವಣೆ ಸನ್ನಿಹಿತ?
'ಭಾರತದ ಸಂಸ್ಕೃತಿಗೆ ಜಾಗತಿಕ ಮನ್ನಣೆ' 11
ಪಿ.ಎಂ. ಪೋಷಣ್: ಪೂರೈಕೆಯಾಗದ ಆಹಾರ ಧಾನ್ಯ 5
ಹೆಚ್ಚುವರಿ ಡಿಸಿಎಂ: ಖರ್ಗೆ– ಡಿಕೆಶಿ ಚರ್ಚೆ? 8
ನಕಲಿ ಇನ್‌ವಾಯ್ಸ್ ಸವಾಲು 10

# ಇಂದಿನಿಂದ ಹೊಸ ಕಾನೂನು ಜಾರಿ

## ಬ್ರಿಟಿಷ್ ಕಾಲದ ಮೂರು ಅಪರಾಧ ಕಾಯ್ದೆಗಳು ರದ್ದು



ಪ್ರಜಾವಾಣಿ ವಾರ್ತೆ/ ಪಿಟಿಐ

**ನವದೆಹಲಿ:** ದೇಶದ ಕ್ರಿಮಿನಲ್ ನ್ಯಾಯ ವ್ಯವಸ್ಥೆಯಲ್ಲಿ ವ್ಯಾಪಕ ಬದಲಾವಣೆ ತರುವ ಹೊಸ ಮೂರು ಕ್ರಿಮಿನಲ್ ಅಪರಾಧ ಕಾನೂನುಗಳು ಸೋಮವಾರದಿಂದ (ಜುಲೈ 1) ಜಾರಿಗೆ ಬರಲಿವೆ.

ಭಾರತೀಯ ನ್ಯಾಯ ಸಂಹಿತೆ 2023, ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ 2023 ಮತ್ತು ಭಾರತೀಯ ಸಾಕ್ಷ್ಯ ಅಧಿನಿಯಮ 2023 ಹೊಸದಾಗಿ ಅನುಷ್ಠಾನಗೊಳ್ಳಲಿರುವ ಕಾಯ್ದೆಗಳು.

163 ವರ್ಷಗಳ ಹಿಂದೆ ರೂಪುಗೊಂಡ ಭಾರತೀಯ ದಂಡ ಸಂಹಿತೆ, 126 ವರ್ಷಗಳ ಹಿಂದಿನ ಅಪರಾಧ ದಂಡಪ್ರಕ್ರಿಯಾ ಸಂಹಿತೆ ಮತ್ತು 151 ವರ್ಷಗಳ ಹಿಂದೆ ರೂಪುಗೊಂಡ ಭಾರತೀಯ ಸಾಕ್ಷ್ಯ ಕಾಯ್ದೆಯ ಬದಲಿಗೆ ಈ ಮೂರು ಕಾನೂನುಗಳು ಜಾರಿಗೆ ಬರಲಿವೆ.

ಸಮಾಜದ ವಾಸ್ತವಾಂಶ ಮತ್ತು ಅಪರಾಧಗಳನ್ನು ಪರಿಣಾಮಕಾರಿಯಾಗಿ ಎದುರಿಸುವ ಕಾರ್ಯವಿಧಾನವನ್ನು ಹೊಸ ಕಾನೂನುಗಳ ಮೂಲಕ ಒದಗಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

9ನೇ ಪುಟ ನೋಡಿ

### ಮೂರು ಕಾನೂನುಗಳ ಕೆಲವು ಅಂಶಗಳು

- ಅಪರಾಧ ಪ್ರಕರಣಗಳಲ್ಲಿ ವಿಚಾರಣೆ ಪೂರ್ಣಗೊಂಡ 45 ದಿನಗಳ ಒಳಗಾಗಿ ತೀರ್ಪು ಪ್ರಕಟಿಸಬೇಕು. ಮೊದಲ ವಿಚಾರಣೆ ನಡೆದ 60 ದಿನಗಳ ಒಳಗಾಗಿ ಆರೋಪಪಟ್ಟಿ ಸಲ್ಲಿಸಬೇಕು
- ಅತ್ಯಾಚಾರ ಪ್ರಕರಣಗಳಲ್ಲಿ ಸಂತ್ರಸ್ತೆಯ ಹೇಳಿಕೆಯನ್ನು ಆಕೆಯ ಪೋಷಕರು ಅಥವಾ ಸಂಬಂಧಿಕರ ಸಮ್ಮುಖದಲ್ಲಿ ಮಹಿಳಾ ಪೊಲೀಸ್ ಅಧಿಕಾರಿಯೇ ದಾಖಲಿಸಿಕೊಳ್ಳಬೇಕು. ವೈದ್ಯಕೀಯ ವರದಿ ಏಳು ದಿನಗಳ ಒಳಗೆ ಸಲ್ಲಿಕೆಯಾಗಬೇಕು
- 12 ವರ್ಷಕ್ಕಿಂತ ಕೆಳಗಿನ ಬಾಲಕಿಯರ ಮೇಲಿನ ಅತ್ಯಾಚಾರ ಪ್ರಕರಣಕ್ಕೆ ಕನಿಷ್ಠ 20 ವರ್ಷ ಜೈಲು
- ಅಪರಾಧಗಳ ಬಗ್ಗೆ ಎಲೆಕ್ಟ್ರಾನಿಕ್ ಸಂವಹನ ಮಾಧ್ಯಮ ಬಳಸಿ ದೂರು ನೀಡಬಹುದು. ವ್ಯಕ್ತಿಯು ಪೊಲೀಸ್ ಠಾಣೆಗೆ ಖುದ್ದಾಗಿ ಹೋಗುವ ಅಗತ್ಯವಿಲ್ಲ
- 'ಜೀರೊ ಎಫ್‌ಐಆರ್' ಪರಿಕಲ್ಪನೆಯಡಿ, ವ್ಯಕ್ತಿಯು ಅಪರಾಧ ಕೃತ್ಯದ ಬಗ್ಗೆ ಯಾವುದೇ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಬಹುದು. ಠಾಣಾ ವ್ಯಾಪ್ತಿಯ ಪ್ರಶ್ನೆ ಉದ್ಭವಿಸದು
- ಬಂಧಿತ ವ್ಯಕ್ತಿಯು ತನ್ನ ಸ್ಥಿತಿಯ ಬಗ್ಗೆ ತಾನು ಇಚ್ಛಿಸಿದ ಇನ್ನೊಬ್ಬ ವ್ಯಕ್ತಿಗೆ ಮಾಹಿತಿ ನೀಡಬಹುದು. ಬಂಧಿತ ವ್ಯಕ್ತಿಗೆ ತಕ್ಷಣಕ್ಕೆ ನೆರವು ಪಡೆಯಲು ಇದರಿಂದ ಸಾಧ್ಯವಾಗಲಿದೆ
- ಬಂಧನದ ವಿವರಗಳನ್ನು ಪೊಲೀಸ್ ಠಾಣೆಗಳು ಹಾಗೂ ಜಿಲ್ಲಾ ಕೇಂದ್ರಗಳಲ್ಲಿ ಎಲ್ಲರಿಗೂ ಕಾಣುವಂತೆ ಪ್ರಕಟಿಸಬೇಕು.
- ಮಹಿಳೆಯರನ್ನು ಗುರಿಯಾಗಿಸಿಕೊಂಡ ಕೆಲವು ಅಪರಾಧಗಳಲ್ಲಿ, ಸಂತ್ರಸ್ತೆಯ ಹೇಳಿಕೆಯನ್ನು ಸಾಧ್ಯವಾದಷ್ಟು ಮಟ್ಟಿಗೆ ಮಹಿಳಾ ಮ್ಯಾಜಿಸ್ಟ್ರೇಟ್ ಸಮಕ್ಷಮದಲ್ಲಿ ದಾಖಲು ಮಾಡಿಕೊಳ್ಳಬೇಕು
- ಆರೋಪಿ ಹಾಗೂ ಸಂತ್ರಸ್ತರಿಗೆ ಎಫ್‌ಐಆರ್, ಪೊಲೀಸ್ ವರದಿ, ದೋಷಾರೋಪ ಪಟ್ಟಿ, ಹೇಳಿಕೆಗಳು, ತಪ್ಪೊಪ್ಪಿಗೆಗಳು ಮತ್ತು ಇತರ ದಾಖಲೆಗಳನ್ನು 14 ದಿನಗಳೊಳಗೆ ನೀಡಬೇಕು
- ಸಮನ್ಸ್‌ಗಳನ್ನು ಎಲೆಕ್ಟ್ರಾನಿಕ್ ಸಂವಹನ ಮಾಧ್ಯಮದ ಮೂಲಕ ರವಾನಿಸಬಹುದು
- ಪ್ರಕರಣಗಳ ವಿಚಾರಣೆಯನ್ನು ನ್ಯಾಯಾಲಯಗಳು ಗರಿಷ್ಠ ಎರಡು ಸಲ ಮಾತ್ರ ಮುಂದೂಡಬಹುದು
- ಸಾಕ್ಷಿಗಳ ಸುರಕ್ಷತೆ ಮತ್ತು ಸಹಕಾರವನ್ನು ಖಚಿತಪಡಿಸಿಕೊಳ್ಳಲು ಎಲ್ಲ ರಾಜ್ಯಗಳು ಸಾಕ್ಷಿಗಳ ರಕ್ಷಣೆಗೆ ವಿಶೇಷ ಯೋಜನೆಗಳನ್ನು ಜಾರಿಗೊಳಿಸಬೇಕು
- ಗಂಭೀರ ಸ್ವರೂಪದ ಅಪರಾಧ ನಡೆದ ಸಂದರ್ಭಗಳಲ್ಲಿ ವಿಧಿವಿಜ್ಞಾನ ತಜ್ಞರು ಸ್ಥಳಕ್ಕೆ ತೆರಳಿ ಸಾಕ್ಷ್ಯ ಸಂಗ್ರಹಿಸುವುದು ಕಡ್ಡಾಯ. ಅಪರಾಧ ನಡೆದ ಸ್ಥಳದಲ್ಲಿ ಸಾಕ್ಷ್ಯ ಸಂಗ್ರಹಿಸುವ ಪ್ರಕ್ರಿಯೆಯನ್ನು ವಿಡಿಯೊ ಚಿತ್ರೀಕರಣ ಮಾಡಬೇಕು
- ತಲೆಮರೆಸಿಕೊಂಡ ಆರೋಪಿಗಳ ವಿಚಾರಣೆ ಮತ್ತು ಅವರ ವಿರುದ್ಧ ತೀರ್ಪು ನೀಡಲು ಅವಕಾಶ
- ಮಹಿಳೆಯರು, 15 ವರ್ಷಕ್ಕಿಂತ ಕೆಳಗಿನ ಮತ್ತು 60 ವರ್ಷ ಮೇಲ್ಪಟ್ಟವರು, ಅಂಗವಿಕಲರು ಹಾಗೂ ತೀವ್ರ ಅನಾರೋಗ್ಯ ಸಮಸ್ಯೆ ಇರುವವರಿಗೆ ಪೊಲೀಸ್ ಠಾಣೆಗೆ ಹೋಗುವುದರಿಂದ ವಿನಾಯಿತಿ

### ಹೊಸ ಕಾನೂನು ಮಿಶ್ರ ಪ್ರತಿಕ್ರಿಯೆ


**ಬೆಂಗಳೂರು:** ಕ್ರಿಮಿನಲ್ ಅಪರಾಧಕ್ಕೆ ಸಂಬಂಧಿಸಿದ ಮೂರು ಹೊಸ ಕಾನೂನುಗಳ ಜಾರಿ ಕುರಿತು ವಕೀಲರ ವಲಯದಲ್ಲಿ ಮಿಶ್ರ ಪ್ರತಿಕ್ರಿಯೆಗಳು ವ್ಯಕ್ತವಾಗಿವೆ. ಹಳೆಯ ಮತ್ತು ಹೊಸ ಎರಡೂ ಕಾನೂನುಗಳನ್ನು 20 ವರ್ಷಗಳವರೆಗೆ ಬಳಸಬೇಕಾಗುತ್ತದೆ ಎಂದು ಕೆಲವರು ಹೇಳಿದರೆ, ಹೊಸ ಕಾನೂನುಗಳ ಆಧಾರದಲ್ಲೇ ಎಲ್ಲವೂ ನಡೆಯುತ್ತದೆ ಎಂಬುದು ಇನ್ನೂ ಕೆಲವರ ಅಭಿಪ್ರಾಯ.

9ನೇ ಪುಟ ನೋಡಿ

**ಭಾರತೀಯರು ಸಂಸತ್ತಿನ ಮೂಲಕ ಭಾರತೀಯರಿಗಾಗಿ ಮಾಡಿರುವ ಈ ಕಾನೂನು ಬ್ರಿಟಿಷರ ಕಾಲದ ಅಪರಾಧ ಕಾನೂನುಗಳ ಅಂತ್ಯವನ್ನು ಸೂಚಿಸುತ್ತದೆ**
**ಅಮಿತ್ ಶಾ,** ಗೃಹ ಸಚಿವ

## ಟಿ20: ರೋಹಿತ್, ಜಡೇಜ ವಿದಾಯ





**ನವದೆಹಲಿ(ಪಿಟಿಐ):** ಭಾರತ ಕ್ರಿಕೆಟ್ ತಂಡದ ನಾಯಕ ರೋಹಿತ್ ಶರ್ಮಾ ಮತ್ತು ಆಲ್‌ರೌಂಡರ್ ರವೀಂದ್ರ ಜಡೇಜ ಅವರು ಅಂತರ-ರಾಷ್ಟ್ರೀಯ ಟಿ20 ಕ್ರಿಕೆಟ್‌ಗೆ ನಿವೃತ್ತಿ ಘೋಷಿಸಿದರು.

ಶನಿವಾರ ಬಾರ್ಬಾಡೋಸ್‌ನಲ್ಲಿ ಭಾರತ ತಂಡವು ಟಿ20 ವಿಶ್ವಕಪ್ ಜಯಿಸಿದ ನಂತರ ನಡೆದ ಪತ್ರಿಕಾ ಗೋಷ್ಠಿಯಲ್ಲಿ ರೋಹಿತ್ ನಿವೃತ್ತಿ ಘೋಷಿಸಿದರು. ಇದೀಗ ಜಡೇಜ ಕೂಡ ವಿದಾಯ ಹೇಳಿದ್ದಾರೆ. ಮುಂಬೈನ ರೋಹಿತ್ 159 ಟಿ20 ಪಂದ್ಯಗಳಿಂದ 4231 ರನ್ ಗಳಿಸಿದ್ದಾರೆ. ಅದರಲ್ಲಿ ಐದು ಶತಕಗಳು ಸೇರಿವೆ. ಸೌರಾಷ್ಟ್ರದ ನವಗಾಂವ್ ಖೇಡಾ ಮೂಲದ 35 ವರ್ಷದ ಜಡೇಜ ಒಟ್ಟು 74 ಟಿ20 ಪಂದ್ಯಗಳನ್ನು ಆಡಿದ್ದಾರೆ.

## ಮದ್ಯದ ದರ ಇಳಿಕೆಗೆ ತಾತ್ಕಾಲಿಕ ತಡೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಉತ್ಪಾದನಾ ವೆಚ್ಚದ ಮಾಹಿತಿ ಹಂಚಿಕೊಳ್ಳಲು ಮದ್ಯ ಉತ್ಪಾದಕರು ತಕರಾರು ಎತ್ತಿರುವ ಕಾರಣದಿಂದ ಮದ್ಯದ ದರಗಳ ಇಳಿಕೆ ಪ್ರಕ್ರಿಯೆಯನ್ನು ಅಬಕಾರಿ ಇಲಾಖೆಯು ತಾತ್ಕಾಲಿಕವಾಗಿ ತಡೆ ಹಿಡಿದಿದೆ. ಸೋಮವಾರದಿಂದ ದರ ಇಳಿಕೆ ಜಾರಿಗೆ ಬರಬೇಕಿತ್ತು.

ಹೆಚ್ಚುವರಿ ಅಬಕಾರಿ ಸುಂಕ (ಎಇಡಿ) ಇಳಿಕೆ ಮತ್ತು ಇತರ ರಾಜ್ಯಗಳಿಗೆ ಸಮನಾಗಿ ಮದ್ಯದ ಘೋಷಿತ ದರ ನಿಗದಿಪಡಿಸುವ ಮೂಲಕ ದರ ಇಳಿಕೆಗೆ ಅಬಕಾರಿ ನಿಯಮಗಳಿಗೆ ತಿದ್ದುಪಡಿ ತರಲು ಇಲಾಖೆ ಎರಡು ಕರಡು ಅಧಿ-ಸೂಚನೆಗಳನ್ನು ಹೊರಡಿಸಿತ್ತು.

9ನೇ ಪುಟ ನೋಡಿ

## 'ನೀಟ್' ಪ್ರಸ್ತಾಪ, ವಾಕ್ಸಮರ ನಿರೀಕ್ಷೆ

**ನವದೆಹಲಿ (ಪಿಟಿಐ):** ಸಂಸತ್ತಿನ ಕಲಾಪ ಸೋಮವಾರ ಪುನರಾರಂಭ ವಾಗಲಿದ್ದು, 'ನೀಟ್' ಅಕ್ರಮವನ್ನು ಮುಖ್ಯವಾಗಿ ಪ್ರಸ್ತಾಪಿಸಿ ಸರ್ಕಾರದ ವಿರುದ್ಧ ವಾಗ್ಯುದ್ಧ ನಡೆಸಲು ವಿರೋಧ ಪಕ್ಷಗಳು ಸಿದ್ಧತೆ ನಡೆಸಿದ್ದು, ಉಭಯ ಸದನಗಳು ವಾಕ್ಸಮರಕ್ಕೆ ವೇದಿಕೆ ಯಾಗುವ ಸಾಧ್ಯತೆಗಳಿವೆ.

ನೀಟ್ ಅವ್ಯವಹಾರದ ಜೊತೆಗೆ, ಸೇನೆಗೆ ಯುವ ಜನರ ನೇಮಕಾತಿಯ 'ಅಗ್ನಿಪಥ್' ಯೋಜನೆ, ಹಣದುಬ್ಬರ ಸಮಸ್ಯೆ ಹಾಗೂ ಯುವಜನರನ್ನು ಕಾಡುತ್ತಿರುವ ನಿರುದ್ಯೋಗದ ಸಮಸ್ಯೆಗಳ ಕುರಿತೂ ವಿರೋಧಪಕ್ಷಗಳು ಪ್ರಮುಖವಾಗಿ ಗಮನಸೆಳೆಯುವ ಸಾಧ್ಯತೆಗಳು ಇವೆ. 9

## ಜನರಲ್ ದ್ವಿವೇದಿ ಸೇನಾ ಮುಖ್ಯಸ್ಥ

**ನವದೆಹಲಿ (ಪಿಟಿಐ):** ಭಾರತೀಯ ಸೇನೆಯ 30ನೇ ಮುಖ್ಯಸ್ಥರಾಗಿ ಜನರಲ್ ಉಪೇಂದ್ರ ದ್ವಿವೇದಿ ಅವರು ಭಾನುವಾರ ಅಧಿಕಾರ ಸ್ವೀಕರಿಸಿದರು.

ಸೇನೆಯಲ್ಲಿ ನಾಲ್ಕು ದಶಕಗಳಿಗೂ ಹೆಚ್ಚು ಕರ್ತವ್ಯ ನಿರ್ವಹಿಸಿದ ಬಳಿಕ ನಿವೃತ್ತಿ ಹೊಂದಿದ ಜನರಲ್ ಮನೋಜ್ ಪಾಂಡೆ ಅವರು ದ್ವಿವೇದಿ ಅವರಿಗೆ ಅಧಿಕಾರ ಹಸ್ತಾಂತರ ಮಾಡಿದರು. ಚೀನಾ ಮತ್ತು ಪಾಕಿಸ್ತಾನ ಗಡಿಗಳಲ್ಲಿ ಹಲವು ಕಾರ್ಯಾಚರಣೆಗಳ ಅನುಭವವನ್ನು ಉಪೇಂದ್ರ ದ್ವಿವೇದಿ ಅವರು ಹೊಂದಿದ್ದಾರೆ. 11

### ಚಿನಕುರುಳಿ

ಪ್ರಕಾಶ್ ಶೆಟ್ಟಿ




## ವಿದ್ಯುತ್ ಬಿಲ್ ಪಾವತಿಗೆ ₹5,257 ಕೋಟಿ ಸಾಲ

• ರಾಜೇಶ್ ರೈ ಚಟ್ಲ

**ಬೆಂಗಳೂರು:** ಗ್ರಾಮ ಪಂಚಾಯಿತಿಗಳು ಸೇರಿದಂತೆ ಗ್ರಾಮೀಣ ಸ್ಥಳೀಯಾಡಳಿತ ಸಂಸ್ಥೆಗಳು ಬಾಕಿ ಉಳಿಸಿಕೊಂಡಿರುವ ₹5,257.70 ಕೋಟಿ ವಿದ್ಯುತ್ ಬಿಲ್ ಅನ್ನು ವಿದ್ಯುತ್ ಸರಬರಾಜು ಕಂಪನಿಗಳಿಗೆ ಪಾವತಿಸಲು ವಸತಿ ಮತ್ತು ನಗರಾಭಿವೃದ್ಧಿ ನಿಗಮದಿಂದ (ಹುಡ್ಕೊ) ರಾಜ್ಯ ಸರ್ಕಾರ ಸಾಲ ಪಡೆದಿದೆ.

ಕುಡಿಯುವ ನೀರು ಸರಬರಾಜು ಮತ್ತು ಬೀದಿದೀಪಗಳ ಸ್ಥಾಪನೆಗೆ ಸಂಬಂಧಿಸಿದಂತೆ ಗ್ರಾಮ ಪಂಚಾಯಿತಿಗಳು ಮತ್ತು ಗ್ರಾಮೀಣ ಸ್ಥಳೀಯಾಡಳಿತ ಸಂಸ್ಥೆಗಳು 2015ರ ಏಪ್ರಿಲ್ 1ರಿಂದ 2023ರ ಮಾರ್ಚ್ 31ರವರೆಗೆ ಒಟ್ಟು ₹5,257.70 ಕೋಟಿಯನ್ನು ಕೆಪಿಸಿಎಲ್, ಕೆಪಿಟಿಸಿ ಮತ್ತು ಎಸ್ಕಾಂಗಳಿಗೆ (ವಿದ್ಯುತ್ ಪೂರೈಕೆ ಕಂಪನಿಗಳು) ಪಾವತಿಸಲು ಬಾಕಿ ಉಳಿಸಿಕೊಂಡಿವೆ.

ಈ ಮೊತ್ತ ಪಾವತಿಗೆ ರಾಜ್ಯ ಸರ್ಕಾರವು ಹುಡ್ಕೊದಿಂದ ಸಾಲ ಪಡೆದಿರುವುದಕ್ಕೆ ಸಂಬಂಧಿಸಿದ ದಾಖಲೆಗಳು 'ಪ್ರಜಾವಾಣಿ'ಗೆ ಲಭ್ಯವಾಗಿವೆ.

ಆರ್ಥಿಕ ಇಲಾಖೆಯು ಮಾರ್ಚ್ 25ರಂದು ನೀಡಿದ್ದ ಟಿಪ್ಪಣಿ ಅನ್ವಯ, ಭದ್ರತೆಗೆ ಸರ್ಕಾರದ ಖಾತ್ರಿ ನೀಡಿ, ವಿದ್ಯುತ್ ಪೂರೈಕೆ ಕಂಪನಿಗಳಿಗೆ ಪಾವತಿಸಲು ಬಾಕಿ ಇರುವ ಮೊತ್ತವನ್ನು ಸಾಲ ಪಡೆದು ಚುಕ್ತಾ ಮಾಡುವಂತೆ ಇಂಧನ ಇಲಾಖೆಗೆ ರಾಜ್ಯ ಸರ್ಕಾರ ಮಾರ್ಚ್ 30ರಂದು ಆದೇಶ ನೀಡಿತ್ತು.

9ನೇ ಪುಟ ನೋಡಿ

**ಯಾರಿಗೆ, ಎಷ್ಟು ಬಾಕಿ?**

| ಕಂಪನಿ | ಮೊತ್ತ (₹ ಕೋಟಿಗಳಲ್ಲಿ) |
|---|---|
| ಕೆಪಿಸಿಎಲ್ | 3,680.40 |
| ಕೆಪಿಟಿಸಿ | 525.77 |
| ಬೆಸ್ಕಾಂ | 603.49 |
| ಮೆಸ್ಕಾಂ | 22.22 |
| ಹೆಸ್ಕಾಂ | 90.26 |
| ಜೆಸ್ಕಾಂ | 267.86 |
| ಚೆಸ್ಕಾಂ | 67.70 |
| ಒಟ್ಟು | 5,257.70 |

ವಾಹನ ದಟ್ಟಣೆ ನಿವಾರಿಸಲು ಯೋಜನೆ ರೂಪಿಸುವಂತೆ ಬಿಬಿಎಂಪಿಗೆ ಡಿಸಿಎಂ ಡಿ.ಕೆ.ಶಿವಕುಮಾರ್ ಸೂಚನೆ

## 11 ಮೇಲ್ಸೇತುವೆ ನಿರ್ಮಾಣಕ್ಕೆ ₹3 ಸಾವಿರ ಕೋಟಿ

• ಆರ್. ಮಂಜುನಾಥ್



ಮೈಸೂರು ರಸ್ತೆಯ ಸ್ಯಾಟಲೈಟ್ ಬಸ್ ನಿಲ್ದಾಣ ಬಳಿ ವಾಹನ ದಟ್ಟಣೆ
—ಪ್ರಜಾವಾಣಿ ಚಿತ್ರ / ಕಿಶೋರ್ ಕುಮಾರ್ ಬೋಳಾರ್

**ಬೆಂಗಳೂರು:** ನಗರದಲ್ಲಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡುವ ಉದ್ದೇಶದಿಂದ ಇನ್ನೂ 11 ಮೇಲ್ಸೇತುವೆಗಳನ್ನು ನಿರ್ಮಿಸಲು ಯೋಜಿಸಲಾಗಿದ್ದು, ಇದಕ್ಕಾಗಿ ₹3 ಸಾವಿರ ಕೋಟಿ ವೆಚ್ಚ ಮಾಡಲು ನಿರ್ಧರಿಸಲಾಗಿದೆ.

ಹಲವು ಪ್ರಮುಖ ಜಂಕ್ಷನ್ ಹಾಗೂ ಸ್ಥಳಗಳಲ್ಲಿ ವಾಹನ ದಟ್ಟಣೆ ಉಂಟಾಗುತ್ತಿದ್ದು, ಮೇಲ್ಸೇತುವೆ ಅಥವಾ ಗ್ರೇಡ್ ಸೆಪರೇಟರ್‌ಗಳನ್ನು 28 ಕಿ.ಮೀ.ನಷ್ಟು ನಿರ್ಮಿಸುವ ಮೂಲಕ ಸಂಚಾರವನ್ನು ಸುಗಮಗೊಳಿಸಬಹುದು. ಈ ನಿಟ್ಟಿನಲ್ಲಿ ವಿಸ್ತೃತ ಯೋಜನಾ ವರದಿ (ಡಿಪಿಆರ್) ತಯಾರಿಸಲು ಬಿಬಿಎಂಪಿ ಮುಖ್ಯ ಆಯುಕ್ತರಿಗೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೂಚಿಸಿದ್ದಾರೆ.

ಕನಕಪುರ ರಸ್ತೆ, ಮೈಸೂರು ರಸ್ತೆ, ಹಳೇ ಮದ್ರಾಸ್ ರಸ್ತೆ ಹಾಗೂ ಹೊಸೂರು ರಸ್ತೆಗಳಲ್ಲಿ ನಿತ್ಯವೂ ವಾಹನ ದಟ್ಟಣೆ ಹೆಚ್ಚಾಗಿರುತ್ತದೆ. ಈ ದಟ್ಟಣೆ ನಿವಾರಣೆಗೆ ಕ್ರಮ ಕೈಗೊಳ್ಳಲು ಹಲವು ಬಾರಿ ಸೂಚನೆ ನೀಡಿದ್ದರೂ ನಿರೀಕ್ಷಿತ ಪ್ರಮಾಣದಲ್ಲಿ ಕೆಲಸವಾಗಿಲ್ಲ. ಹೀಗಾಗಿ, ಮೇಲ್ಸೇತುವೆ ನಿರ್ಮಾಣವೇ ಶಾಶ್ವತ ಪರಿಹಾರ ಎಂಬ ನಿರ್ಧಾರಕ್ಕೆ ಬರಲಾಗಿದೆ.

ಸಂಚಾರ ಪೊಲೀಸರ ಸಲಹೆಯಂತೆ ಜಂಕ್ಷನ್‌ಗಳ ಅಭಿವೃದ್ಧಿಯಿಂದ ವಾಹನ ದಟ್ಟಣೆ ಕಡಿಮೆಯಾಗುತ್ತದೆ ಎಂದು ನಿರೀಕ್ಷಿಸಲಾಗಿತ್ತು. ಆದರೆ, ಈ ಬಾರಿಯ ಮಳೆಗಾಲದಲ್ಲೂ ರಸ್ತೆಯಲ್ಲೇ ನೀರು ನಿಂತು ಹಲವು ತೊಂದರೆಗಳಾದವು. ಜಂಕ್ಷನ್‌ಗಳ ದಟ್ಟಣೆ ನಿವಾರಣೆಯಾಗಲಿಲ್ಲ. ಹೀಗಾಗಿ ಮೇಲ್ಸೇತುವೆ ಅಥವಾ ಗ್ರೇಡ್ ಸೆಪರೇಟರ್ ನಿರ್ಮಿಸಲು ಯೋಜಿಸಲಾಗಿದೆ.

ರಾಜ್ಯ ಸರ್ಕಾರ ಈಗಾಗಲೇ 9 ಹೈ ಟ್ರಾಫಿಕ್ ಡೆನ್ಸಿಟಿ ಕಾರಿಡಾರ್‌ಗಳ ನಿರ್ಮಾಣಕ್ಕೆ ಅನುಮೋದನೆ ನೀಡಿದೆ. ಇದರ ಜೊತೆಯಲ್ಲಿ ಹೊಸದಾಗಿ 11 ಮೇಲ್ಸೇತುವೆ/ಗ್ರೇಡ್ ಸೆಪರೇಟರ್‌ಗಳನ್ನು ನಿರ್ಮಿಸಲು ಉಪ ಮುಖ್ಯಮಂತ್ರಿ ಒಲವು ತೋರಿದ್ದಾರೆ. ಡಿಪಿಆರ್ ಸಿದ್ಧವಾದ ಮೇಲೆ, ಟೆಂಡರ್ ಕರೆದು ಈ ವರ್ಷದಲ್ಲೇ ಕಾಮಗಾರಿ ಆರಂಭಿಸಲೂ ಸೂಚಿಸಿದ್ದಾರೆ. ಈ 11 ಮೇಲ್ಸೇತುವೆ/ಗ್ರೇಡ್ ಸೆಪರೇಟರ್‌ಗಳನ್ನು ರಾಜ್ಯ ಸರ್ಕಾರ ಹಾಗೂ ಬಿಬಿಎಂಪಿ ಜಂಟಿ ಅನುದಾನದಲ್ಲಿ ನಿರ್ಮಿಸಲು ಯೋಜಿಸಲಾಗಿದೆ. ಇದಕ್ಕಾಗಿ ಸರ್ಕಾರ ಶೇ 60ರಷ್ಟು ವಿಶೇಷ ಅನುದಾನ ಬಿಡುಗಡೆ ಮಾಡಲಿದ್ದು, ಉಳಿದದ್ದನ್ನು ಬಿಬಿಎಂಪಿ ಭರಿಸಬೇಕಿದೆ. ಕೇಂದ್ರ ಸರ್ಕಾರದಿಂದಲೂ ವಿಶೇಷ ಅನುದಾನ ಪಡೆಯಲು ಚಿಂತಿಸಲಾಗಿದೆ.

**ಮುಖ್ಯಾಂಶಗಳು**
- ರಾಜ್ಯ ಸರ್ಕಾರದಿಂದ ವಿಶೇಷ ಅನುದಾನ
- ಜಂಟಿ ಅನುದಾನದಲ್ಲಿ ಕಾಮಗಾರಿ
- ಈ ವರ್ಷವೇ ಕಾಮಗಾರಿ ಆರಂಭಿಸಲು ಯೋಜನೆ

'ನಗರದಲ್ಲಿ ಸುರಂಗ ರಸ್ತೆಯ ಮೂಲಕ ಪ್ರಮುಖ ರಸ್ತೆ ಹಾಗೂ ಹೊರವಲಯದ ರಸ್ತೆಗಳನ್ನು ಸಂಪರ್ಕಿಸಲು ಈಗಾಗಲೇ ಯೋಜಿಸಲಾಗಿದೆ. ಪ್ರತಿ ಕಿ.ಮೀ.ಗೆ ₹450 ಕೋಟಿ ವೆಚ್ಚವಾಗುವ ಈ ಯೋಜನೆ ಡಿಪಿಆರ್ ಇನ್ನೂ ಸಿದ್ಧವಾಗಿಲ್ಲ. ಎರಡೆರಡು ಬಾರಿ ಟೆಂಡರ್‌ಗಳನ್ನು ಕರೆಯಲಾಗಿದೆ. ಆದರೆ ಇನ್ನೂ ಅಂತಿಮವಾಗಿಲ್ಲ. ಹೀಗಾಗಿ, ತುರ್ತಾಗಿ ನಗರದಲ್ಲಿ ಅಭಿವೃದ್ಧಿ ಯೋಜನೆಗಳನ್ನು ಆರಂಭಿಸಬೇಕಿದೆ. ಬಿಬಿಎಂಪಿ ಚುನಾವಣೆ ಏನಾದರೂ ಪ್ರಕಟವಾದರೆ ಹೇಳಿಕೊಳ್ಳಲು ಅಭಿವೃದ್ಧಿ ಯೋಜನೆಗಳೇ ಇಲ್ಲದ ಸ್ಥಿತಿ ಇದೆ. ಒಂದು ವರ್ಷದಲ್ಲಿ ಕಣ್ಣಿಗೆ ಕಾಣುವಂತಹ ಕಾಮಗಾರಿ ಗಳಾಗಿಲ್ಲ. ಹೀಗಾಗಿ, 11 ಮೇಲ್ಸೇತುವೆಗ ಳನ್ನು ನಿರ್ಮಿಸುವ ಯೋಜನೆಗೆ ತುರ್ತಾಗಿ ಅನುಮೋದನೆ ನೀಡಲು ನಿರ್ಧರಿಸಲಾಗಿದೆ' ಎಂದು ಮೂಲಗಳು ತಿಳಿಸಿವೆ.

**9 ಕಾರಿಡಾರ್:** ನಗರದಲ್ಲಿ 12 ಹೈ ಟ್ರಾಫಿಕ್ ಡೆನ್ಸಿಟಿ ಕಾರಿಡಾರ್‌ಗಳ ಅಭಿವೃದ್ಧಿಗೆ ಹಿಂದಿನ ಸರ್ಕಾರ ಸಮ್ಮತಿಸಿತ್ತು. ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ಮೂಲಕ ನಡೆಸಲಾಗುವ ಈ ಕಾಮಗಾರಿಗಳಿಗೆ ₹400 ಕೋಟಿ ವೆಚ್ಚ ಮಾಡಲು ನಿರ್ಧರಿಸಲಾಗಿತ್ತು. ನಂತರ ಅದನ್ನು ರದ್ದುಪಡಿಸಿ, 117.2 ಕಿ.ಮೀಯ 9 ಹೈ ಟ್ರಾಫಿಕ್ ಡೆನ್ಸಿಟಿ ಕಾರಿಡಾರ್‌ಗಳನ್ನು ಬಿಬಿಎಂಪಿಯಿಂದಲೇ ನಿರ್ವಹಣೆ ಮಾಡಲು ₹273 ಕೋಟಿಗೆ 2022ರ ಡಿ.17ರಂದು ಅನುಮೋದಿಸಲಾಗಿತ್ತು. ಇದಕ್ಕೆ ಸಂಬಂಧಿಸಿದ ಎಲ್ಲ ಟೆಂಡರ್ ಪ್ರಕ್ರಿಯೆ ಮುಗಿದಿದ್ದು, ಕಾರ್ಯಾದೇಶವನ್ನೂ ನೀಡಲಾಗಿತ್ತು. ಅದನ್ನು ಕಾಂಗ್ರೆಸ್ ಸರ್ಕಾರವೂ ಕಳೆದ ನವೆಂಬರ್‌ನಲ್ಲಿ ಅನುಮೋದಿಸಿತ್ತು.

**ಮೇಲ್ಸೇತುವೆ/ ಗ್ರೇಡ್ ಸೆಪರೇಟರ್‌ಗೆ ಪ್ರಸ್ತಾವ ಎಲ್ಲೆಲ್ಲಿ?**

| ಸ್ಥಳ | ರಸ್ತೆ ಉದ್ದ (ಕಿ.ಮೀ.) | ಸಿಗ್ನಲ್ ಮುಕ್ತ ಜಂಕ್ಷನ್ | ಅಂದಾಜು ಮೊತ್ತ (₹ಕೋಟಿಗಳಲ್ಲಿ) |
|---|---|---|---|
| ಥಣಿಸಂದ್ರ ಮುಖ್ಯರಸ್ತೆಯ ಬೆಳ್ಳಹಳ್ಳಿಯಿಂದ ರಾಮಕೃಷ್ಣಹೆಗಡೆ ನಗರ ಜಂಕ್ಷನ್‌ವರೆಗೆ ಇಂಟಿಗ್ರೇಟೆಡ್ ಮೇಲ್ಸೇತುವೆ (ಭಾರತಿ ಸಿಟಿ ಜಂಕ್ಷನ್, ಸಂಪಿಗೆ ಹಳ್ಳಿ ಜಂಕ್ಷನ್, ತಿರುಮೇನಹಳ್ಳಿ ಜಂಕ್ಷನ್) | 9 | 10 | 950 |
| ಹೊಸೂರು ರಸ್ತೆ ಸರ್ಜಾಪುರ ಮುಖ್ಯರಸ್ತೆ ಜಂಕ್ಷನ್‌ನಿಂದ ಆಡುಗೋಡಿ ಜಂಕ್ಷನ್‌ನಿಂದ ಆನೆಪಾಳ್ಯ ಜಂಕ್ಷನ್‌ವರೆಗೆ ಮೇಲ್ಸೇತುವೆ | 3 | 4 | 330 |
| ಬನಶಂಕರಿ ತರಕಾರಿ ಮಂಡಿಯಿಂದ ಬನ್ನೇರುಘಟ್ಟ ಮುಖ್ಯರಸ್ತೆವರೆಗೆ ಮೇಲ್ಸೇತುವೆ (ಇಂದಿರಾಗಾಂಧಿ ವೃತ್ತ, ಆಸ್ಟಲ್ ಆಸ್ಪತ್ರೆ, 9ನೇ ಬ್ಲಾಕ್, ಎಸ್‌ಬಿಐ ಸಿಗ್ನಲ್) | 3 | 8 | 300 |
| ಕನಕಪುರ ಮುಖ್ಯರಸ್ತೆಯ ಕೃಷ್ಣರಾವ್ ಪಾರ್ಕ್ ಜಂಕ್ಷನ್‌ನಿಂದ ಬನಶಂಕರಿ ದೇವಸ್ಥಾನದ ಜಂಕ್ಷನ್‌ವರೆಗಿಗೂ ಎಲಿವೇಟೆಡ್ ಕಾರಿಡಾರ್ (ಯಡಿಯೂರು ಟರ್ಮಿನಲ್ಸ್, ಯಡಿಯೂರು ಮಾರುಕಟ್ಟೆ, ಹೆರಿಗೆ ಆಸ್ಪತ್ರೆ, ಜೆಎಸ್‌ಎಸ್ ಸಿಗ್ನಲ್, ಹುಣಸೇಮರ ಸಿಗ್ನಲ್) | 2.9 | 6 | 290 |
| ಹಡ್ಸನ್ ವೃತ್ತದಿಂದ ಮಿನರ್ವ ವೃತ್ತದವರೆಗೆ ಇಂಟಿಗ್ರೇಟೆಡ್ ಮೇಲ್ಸೇತುವೆ (ಮಿನರ್ವ ವೃತ್ತ, ಭಾರತ್ ಟಾಕೀಸ್, ಶಿವಾಜಿ ಟಾಕೀಸ್, ಟೌನ್‌ಹಾಲ್, ಎಲ್‌ಐಸಿ, ಹಲಸೂರು ಪೊಲೀಸ್ ಠಾಣೆ, ಹಡ್ಸನ್ ವೃತ್ತ, ಕಬ್ಬನ್ ಪಾರ್ಕ್) | 2.7 | 8 | 270 |
| ಮೈಸೂರು ರಸ್ತೆ ಸಿರ್ಸಿ ವೃತ್ತದಿಂದ ಬಿಎಚ್‌ಇಎಲ್ ಜಂಕ್ಷನ್‌ವರೆಗೆ ಮೇಲ್ಸೇತುವೆ | 2.4 | 6 | 250 |
| ಹಳೇ ಮದ್ರಾಸ್ 100 ಅಡಿ ಸಂಪರ್ಕ ರಸ್ತೆಯಿಂದ ಸುರಂಜನ್‌ದಾಸ್ ರಸ್ತೆ ಸದ್ದುಗುಂಟೆಪಾಳ್ಯ ಜಂಕ್ಷನ್‌ವರೆಗೆ ಮೇಲ್ಸೇತುವೆ | 1.8 | 3 | 200 |
| ಆನಂದರಾವ್ ವೃತ್ತ ಮೇಲ್ಸೇತುವೆಯನ್ನು ಕೆ.ಆರ್. ವೃತ್ತದವರೆಗೆ ಮುಂದುವರಿಸುವುದು | 1.5 | 2 | 165 |
| ಕೋಣನಕುಂಟೆ ಕ್ರಾಸ್ ಸಿಗ್ನಲ್, ಕನಕಪುರ ರಸ್ತೆ | 0.9 | 1 | 100 |
| ಅಡ್ಯಾಯಾರ್ ಆನಂದ ಭವನ, ರಘುವನಹಳ್ಳಿ, ಕನಕಪುರ ರಸ್ತೆ | 0.8 | 1 | 90 |
| ಓಕಳಿಪುರದಿಂದ ಮೆಜೆಸ್ಟಿಕ್‌ವರೆಗೆ (ಬಸ್ ನಿಲ್ದಾಣ) ಕೆಳಸೇತುವೆ (ಸಂಗೊಳ್ಳಿ ರಾಯಣ್ಣ ವೃತ್ತದ ಮೂಲಕ) | 0.5 | 1 | 55 |
| ಒಟ್ಟು | 28.5 | 50 | 3,000 |



ನಗರದಲ್ಲಿ ಭಾನುವಾರ ನಡೆದ ಸಮಾರಂಭದಲ್ಲಿ ಕ್ವೀನ್ಸ್ ಪ್ರೀಮಿಯರ್ ಲೀಗ್ ಟ್ರೋಫಿಯನ್ನು ನಟ ಅನಿರುದ್ಧ್ ಜತ್ಕರ್ ಅನಾವರಣ ಮಾಡಿದರು. ಸಿನಿ ಕಲಾವಿದೆಯರು ಇದ್ದಾರೆ

## ಕಲಾವಿದೆಯರಿಗೆ ಕ್ಯುಪಿಎಲ್ ಕ್ರಿಕೆಟ್ ಟೂರ್ನಿ 20ರಿಂದ

**ಬೆಂಗಳೂರು:** ಕಿರುತೆರೆ ಹಾಗೂ ಹಿರಿತೆರೆ ಕಲಾವಿದೆಯರಿಗಾಗಿ ಮೊದಲ ಬಾರಿಗೆ ಕ್ವೀನ್ಸ್ ಪ್ರೀಮಿಯರ್ ಲೀಗ್ (ಕ್ಯುಪಿಎಲ್) ಕ್ರಿಕೆಟ್ ಟೂರ್ನಿ ಆಯೋಜಿಸಲಾಗಿದೆ.

ಕ್ರಿಯೇಟಿವ್ ಫ್ರೆಂಡ್ಸ್ ಸಂಸ್ಥೆ ಸಹಯೋಗದಲ್ಲಿ ನಗರದಲ್ಲಿ ಜುಲೈ 20, 21ರಂದು ಈ ಟೂರ್ನಿ ನಡೆಯಲಿದೆ. ಭಾನುವಾರ ನಡೆದ ಸರಳ ಸಮಾರಂಭದಲ್ಲಿ ಹತ್ತು ತಂಡಗಳಿಗೂ ನಾಯಕರ ಆಯ್ಕೆ ಹಾಗೂ ಪೋಷಾಕು ಬಿಡುಗಡೆ ಮಾಡಲಾಯಿತು. ಇದೇ ವೇಳೆ ನಟ ಅನಿರುದ್ಧ್ ಜತ್ಕರ್ ಅವರು ಟ್ರೋಫಿಯನ್ನು ಅನಾವರಣ ಮಾಡಿದರು.

ಬೆಳಗಾವಿ ಕ್ವೀನ್ಸ್, ಹುಬ್ಬಳ್ಳಿ ಕ್ವೀನ್ಸ್, ಬೆಂಗಳೂರು ಕ್ವೀನ್ಸ್, ಮೈಸೂರು ಕ್ವೀನ್ಸ್, ಕೋಲಾರ್ ಕ್ವೀನ್ಸ್, ಮಂಗಳೂರು ಕ್ವೀನ್ಸ್, ಶಿವಮೊಗ್ಗ ಕ್ವೀನ್ಸ್, ಚಿತ್ರದುರ್ಗ ಕ್ವೀನ್ಸ್, ಹಾಸನ ಕ್ವೀನ್ಸ್, ಬಳ್ಳಾರಿ ಕ್ವೀನ್ಸ್ ತಂಡಗಳಿಗೆ ಆಟಗಾರರನ್ನು ಆಯ್ಕೆ ಮಾಡಲಾಯಿತು. ಐದು ಓವರ್‌ಗಳ ಪಂದ್ಯ ಇದಾಗಿದ್ದು, ವಿಜೇತ ತಂಡಕ್ಕೆ ₹6 ಲಕ್ಷ ನಗದು ಹಾಗೂ ರನ್ನರ್ಸ್ ಅಪ್ ತಂಡಕ್ಕೆ ₹3 ಲಕ್ಷ ಬಹುಮಾನ ನೀಡಲಾಗುತ್ತದೆ.

## ಭಾರತೀಯ ದಾದಿಯರ ಕಾರ್ಯಕಾರಿ ಸಮಿತಿಗೆ ಆಯ್ಕೆ

**ಬೆಂಗಳೂರು:** ಭಾರತೀಯ ಮಜ್ದೂರ್ ಸಂಘದ ಅಡಿಯಲ್ಲಿ ಭಾರತೀಯ ದಾದಿಯರು ಮತ್ತು ಇತರ ವೃತ್ತಿಪರರ ಸಂಘದ ರಾಷ್ಟ್ರೀಯ ಕಾರ್ಯಕಾರಿ ಸಮಿತಿ ಭಾನುವಾರ ರಚನೆಗೊಂಡಿದೆ.

ರಾಷ್ಟ್ರೀಯ ಅಧ್ಯಕ್ಷರಾಗಿ ಕೆ.ಕೆ. ವಿಜಯಕುಮಾರ್, ಸಂಚಾಲಕರಾಗಿ ಗಿಜು ಥಾಮಸ್, ಸಹಸಂಚಾಲಕರಾಗಿ ಎಂ.ಎ. ಅನಿಲ್ ಕುಮಾರ್, ರಾಜ್ಯ ಸಂಚಾಲಕರಾಗಿ ಶಾಂತಾಬಾಯಿ ಕಟ್ಟಿಮನಿ ಆಯ್ಕೆಯಾಗಿದ್ದಾರೆ ಎಂದು ಸಮಿತಿಯು ಪ್ರಕಟಣೆಯಲ್ಲಿ ತಿಳಿಸಿದೆ.

## ಕಸಾಪ: ವಿವಿಧ ಹುದ್ದೆಗಳಿಗೆ ಅರ್ಜಿ ಆಹ್ವಾನ

**ಬೆಂಗಳೂರು:** ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಕೇಂದ್ರ ಕಚೇರಿಯಲ್ಲಿ ವಿವಿಧ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ.

ಗಣಕ ಸಹಾಯಕರು, ಕಚೇರಿ ಸಹಾಯಕರು, ಲೆಕ್ಕಪತ್ರ ಸಹಾಯಕರು ಹಾಗೂ ಪರಿಷತ್ತಿನ ಸಭಾಂಗಣಗಳ ನಿರ್ವಹಣೆಗೆ ತಾಂತ್ರಿಕ ನಿರ್ವಾಹಕರ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ. ಈ ಉದ್ಯೋಗವು ತಾತ್ಕಾಲಿಕವಾದದ್ದಾಗಿರುತ್ತದೆ. ಕನ್ನಡವನ್ನು ಓದಲು, ಬರೆಯಲು ಮತ್ತು ಸಂವಹನ ನಡೆಸಲು ಬರುವವರಿಗೆ ಮಾತ್ರ ಅವಕಾಶ ನೀಡಲಾಗುತ್ತದೆ. ಕನ್ನಡದ ಮೇಲಿನ ಪ್ರೀತಿ ಮತ್ತು ಗೌರವದಿಂದ ಮಾಡುವ ಕೆಲಸ ಇದಾಗಿದ್ದು, ಗೌರವಧನ ನೀಡಲಾಗುತ್ತದೆ.

ಯುವಕರಿಗೆ ಆದ್ಯತೆ ಇದ್ದರೂ ಇತ್ತೀಚೆಗೆ ನಿವೃತ್ತಿಯಾದವರೂ ಅರ್ಜಿ ಸಲ್ಲಿಸಬಹುದು. ವೃತ್ತಿ ಅನುಭವವನ್ನು ಪರಿಗಣಿಸಲಾಗುತ್ತದೆ. ಪರಿಷತ್ತಿನ ಕೇಂದ್ರ ಕಚೇರಿಯಿಂದ ಜುಲೈ 15ರೊಳಗೆ ಅರ್ಜಿಯ ಪ್ರತಿ ಪಡೆದು, ಜುಲೈ 31ರೊಳಗೆ ಖುದ್ದಾಗಿ ಅಥವಾ 'ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು, ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-18' ಈ ವಿಳಾಸಕ್ಕೆ ತಲುಪಿಸಬೇಕು ಎಂದು ಪ್ರಕಟಣೆ ತಿಳಿಸಿದೆ.

ಪಂಡಿತ್ ರಾಜೀವ್ ತಾರಾನಾಥ್ ನುಡಿನಮನ

## 'ಮತೀಯತೆಯಿಂದ ಸಂಗೀತ ಮಲಿನ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ದೇಶದಲ್ಲಿ ಹುಟ್ಟುತ್ತಿರುವ ಮತೀಯ ರಾಜಕಾರಣವನ್ನು ಪಂಡಿತ್ ರಾಜೀವ್ ತಾರಾನಾಥ್ ಅವರು ಕಟುವಾಗಿ ವಿರೋಧಿಸುತ್ತಿದ್ದರು' ಎಂದು ವಿಮರ್ಶಕ ರಹಮತ್ ತರೀಕೆರೆ ಅವರು ಹೇಳಿದರು.

'ಅಭಿನಯ ತರಂಗ' ನಗರದಲ್ಲಿ ಭಾನುವಾರ ಆಯೋಜಿಸಿದ್ದ ಪಂಡಿತ್ ರಾಜೀವ್ ತಾರಾನಾಥ್ ನುಡಿನಮನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಮನುಷ್ಯ ಸಂಬಂಧಗಳನ್ನು ಒಡೆಯುವ ಕೃತ್ಯ ನಡೆದಾಗಲೆಲ್ಲಾ ಸಂಗೀತಗಾರರು ಅದನ್ನು ತಡೆಯುವ ಕೆಲಸ ಮಾಡಿದ್ದಾರೆ. 1992ರ ಗಲಭೆಯ ಸಂದರ್ಭದಲ್ಲಿ ರಾಜೀವ್ ಆದಿಯಾಗಿ ಹಲವು ಸಂಗೀತಗಾರರು, ಇವರದ್ದು ತಪ್ಪು... ಅವರದ್ದು ತಪ್ಪು ಎಂಬ ಚರ್ಚೆಗೇ ಹೋಗಲಿಲ್ಲ. ಬದಲಿಗೆ ಗೇಟ್ ವೇ ಆಫ್ ಇಂಡಿಯಾ ಬಳಿ ಸೇರಿ, ಹಾಡುತ್ತಿದ್ದರು. ಹೀಗೆ ಹಾಡುವ ಮೂಲಕ ಜನರನ್ನು ಒಗ್ಗೂಡಿಸುವ ಕೆಲಸ ಮಾಡಿದ್ದರು' ಎಂದು ಅವರು ನೆನಪಿಸಿಕೊಂಡರು.

'ಆದರೆ ಈಗ, ಧರ್ಮಾತೀತವಾಗಿ ಇರಬೇಕಿದ್ದ ರಂಗಭೂಮಿ ಮತ್ತು ಸಂಗೀತವು ಮತೀಯತೆಯಿಂದ ಮಲಿನವಾಗುತ್ತಿದೆ. ಈಗ, ಒಂದು ನಿರ್ದಿಷ್ಟ ಧರ್ಮದ ತಬಲ ವಾದಕರನ್ನು ದೂರವಿಡುವುದು ಹೇಗೆ ಎಂಬುದರ ಬಗೆ ಸದಾ ಯೋಚಿಸಲಾಗುತ್ತಿದೆ ಎಂದು ಹಲವು ಸಂಗೀತಗಾರರು ಆತಂಕ ವ್ಯಕ್ತಪಡಿಸುತ್ತಿದ್ದಾರೆ. ಪಂಡಿತ್ ರಾಜೀವ್ ತಾರಾನಾಥರು ಇಂಥದ್ದನ್ನು ಕಟುವಾಗಿ ವಿರೋಧಿಸುತ್ತಿದ್ದರು' ಎಂದು ಅವರು ಹೇಳಿದರು.

ರಾಜೀವ್ ತಾರಾನಾಥ್ ಅವರ ಜೀವನ ಚರಿತ್ರೆ ಬರೆಯುವ ಸಂದರ್ಭದಲ್ಲಿ ಅವರೊಂದಿಗಿನ ಒಡನಾಟದ ಕ್ಷಣಗಳನ್ನು ಲೇಖಕಿ ಸುಮಂಗಲ ಅವರು ಹಂಚಿಕೊಂಡರು. ಗಾಯಕಿ ಎಂ.ಡಿ. ಪಲ್ಲವಿ ಮತ್ತು ಗಾಯಕ ರೂಮಿ ಹರೀಶ್ ಅವರು ಗೀತನಮನ ಸಲ್ಲಿಸಿದರು.



'ಅಭಿನಯ ತರಂಗ' ಆಯೋಜಿಸಿದ್ದ ನುಡಿನಮನ ಕಾರ್ಯಕ್ರಮದಲ್ಲಿ ರಾಜೀವ್ ತಾರಾನಾಥ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಲಾಯಿತು. ಗಾಯಕ ರೂಮಿ ಹರೀಶ್, ಲೇಖಕಿ ಸುಮಂಗಲ, ಸಾಹಿತಿ ರಹಮತ್ ತರೀಕೆರೆ, ನಿವೃತ್ತ ಐಪಿಎಸ್ ಅಧಿಕಾರಿ ಚಂದ್ರಶೇಖರ್ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು —ಪ್ರಜಾವಾಣಿ ಚಿತ್ರ

## 'ಕಂಡ ಹಾಗೇ ಹೇಳುವ ಛಾತಿ ಇದ್ದ ಪಂಡಿತ್ ರಾಜೀವ್ ತಾರಾನಾಥ್'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಇದ್ದಿದ್ದನ್ನು ಇದ್ದಹಾಗೆ, ಕಂಡಿದ್ದನ್ನು ಕಂಡ ಹಾಗೆ ಹೇಳುವ ಛಾತಿ ರಾಜೀವ್ ತಾರಾನಾಥ್ ಅವರಿಗೆ ಇತ್ತು ಎಂದು ನಿವೃತ್ತ ಐಎಎಸ್ ಅಧಿಕಾರಿ ಐ.ಎಂ. ವಿಠ್ಠಲಮೂರ್ತಿ ತಿಳಿಸಿದರು.

ಸಾಹಿತಿ ಮತ್ತು ಕಲಾವಿದರ ವೇದಿಕೆ ಭಾನುವಾರ ಹಮ್ಮಿಕೊಂಡಿದ್ದ 'ರಾಜೀವ್ ತಾರಾನಾಥ್ ಅವರಿಗೆ ನುಡಿ ಗೌರವ ಅರ್ಪಣೆ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಪ್ರತಿಭೆ ಮತ್ತು ಅನುಭವದಿಂದ ಅವರಿಗೆ ಈ ದಿಟ್ಟತನ ಬಂದಿತ್ತು. ಆತ್ಮವಿಶ್ವಾಸ, ಸ್ವಾಭಿಮಾನ ಮತ್ತು ಜ್ಞಾನದಿಂದ ಅವರು ಎತ್ತರಕ್ಕೆ ಏರಿದ್ದರು. ಸಂಗೀತ ಮತ್ತು ಅಡುಗೆ ಮಾತ್ರ ಸೃಜನಶೀಲವಾದುದು. ಉಳಿದೆಲ್ಲವೂ ನಕಲು ಎನ್ನುವುದು ರಾಜೀವ್ ತಾರಾನಾಥ್ ಅವರ ಅಭಿಪ್ರಾಯವಾಗಿತ್ತು ಎಂದು ನೆನಪು ಮಾಡಿಕೊಂಡರು.

ನಿವೃತ್ತ ಐಪಿಎಸ್ ಅಧಿಕಾರಿ ಸಿ. ಚಂದ್ರಶೇಖರ್ ಮಾತನಾಡಿ, 'ಸಂಗೀತದ ಎಲ್ಲ ರಾಗಗಳನ್ನು ಕಲಿಯಲು ಹೋದರೆ ಯಾವ ರಾಗವನ್ನೂ ಪರಿಪೂರ್ಣವಾಗಿ ತಿಳಿಯಲು ಸಾಧ್ಯವಿಲ್ಲ. ನಾಲ್ಕೈದು ರಾಗಗಳನ್ನಷ್ಟೇ ಪೂರ್ಣವಾಗಿ ತಿಳಿಯಬೇಕು. 62 ರಾಗಗಳಿದ್ದು, ಎಲ್ಲ ರಾಗಗಳನ್ನು ಕಲಿಸಲಾಗುವುದು ಎಂದು ಸಂಗೀತ ಶಾಲೆಗಳು ಹೇಳುವುದನ್ನು ಗಂಭೀರವಾಗಿ ತೆಗೆದುಕೊಳ್ಳಬಾರದು ಎಂಬುದು ರಾಜೀವ್ ತಾರಾನಾಥ್ ಅವರ ಸಲಹೆಯಾಗಿತ್ತು' ಎಂದು ಸ್ಮರಿಸಿದರು.

ನಿವೃತ್ತ ಐಎಎಸ್ ಅಧಿಕಾರಿ ಚಿರಂಜೀವಿ ಸಿಂಘ್, ನೃತ್ಯ ಕಲಾವಿದೆ ಪ್ರತಿಭಾ ಸರೋದ್, ಸರೋದ್ ಕಲಾವಿದೆ ಕೃಷ್ಣಾ ಮನವಳ್ಳಿ, ಕಲಾವಿದ ಶ್ರೀನಿವಾಸ ಜಿ. ಕಪ್ಪಣ್ಣ ಮಾತನಾಡಿದರು. 'ಪಂಡಿತ್ ರಾಜೀವ್ ತಾರಾನಾಥ್-ಮೆಲುಕು' ಸಾಕ್ಷ್ಯಚಿತ್ರವನ್ನು ಪ್ರದರ್ಶಿಸಲಾಯಿತು.



ಭಾನುವಾರ ನಡೆದ ನುಡಿಗೌರವ ಅರ್ಪಣೆ ಕಾರ್ಯಕ್ರಮದಲ್ಲಿ ರಾಜೀವ್ ತಾರಾನಾಥ್ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಲಾಯಿತು
— ಪ್ರಜಾವಾಣಿ ಚಿತ್ರ

### ನಗರದಲ್ಲಿ ಇಂದು

**ರಕ್ತದಾನ ಶಿಬಿರ:** ಉಪಸ್ಥಿತಿ: ದಿನೇಶ್ ಗುಂಡೂರಾವ್, ಪ್ರಿಯಕೃಷ್ಣ, ಸತೀಶ್ ಮಾಧವನ್, ಆಯೋಜನೆ: ರೋಟರಿ ಬುಗಲ್ ರಾಕ್, ಸ್ಥಳ: ಡಾ.ಬಿ.ಆರ್. ಅಂಬೇಡ್ಕರ್ ಕ್ರೀಡಾಂಗಣ, ಬಸವೇಶ್ವನಗರ, ಬೆಳಿಗ್ಗೆ 8

**ಪತ್ರಿಕಾ ದಿನಾಚರಣೆ ಅಂಗವಾಗಿ 'ಮಾಧ್ಯಮ–ಸಾಮಾಜಿಕ ಜಾಲತಾಣ' ಕುರಿತು ವಿಚಾರಸಂಕಿರಣ:** ಉದ್ಘಾಟನೆ: ಸಿದ್ದರಾಮಯ್ಯ, ಪ್ರಧಾನ ಭಾಷಣ: ಕೃಷ್ಣಪ್ರಸಾದ್, ಪ್ರಾಸ್ತಾವಿಕ ನುಡಿ: ಕೆ.ಆರ್. ಶ್ರೀಧರ್, ಅಧ್ಯಕ್ಷತೆ: ಶಿವಾನಂದ ತಗಡೂರು, ಉಪಸ್ಥಿತಿ: ಕೆ.ವಿ. ಪ್ರಭಾಕರ್, ಕೆ.ವಿ. ತ್ರಿಲೋಕಚಂದ್ರ, ಸುರಳ್ಕರ್ ವಿಕಾಸ್ ಕಿಶೋರ್, ಆಯೋಜನೆ: ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಸ್ಥಳ: ಪ್ರೆಸ್‌ಕ್ಲಬ್, ಕಬ್ಬನ್ ಉದ್ಯಾನ, ಬೆಳಿಗ್ಗೆ 10.15

**2023–24ನೇ ಶೈಕ್ಷಣಿಕ ಸಾಲಿನ ಸಾಂಸ್ಕೃತಿಕ, ಕ್ರೀಡಾ ಹಾಗೂ ಎನ್‌ಎಸ್‌ಎಸ್ ಚಟುವಟಿಕೆಗಳ ಸಮಾರೋಪ ಸಮಾರಂಭ:** ಅತಿಥಿಗಳು: ಟಿ.ಎಸ್. ನಾಗಾಭರಣ, ಉಪಸ್ಥಿತಿ: ನಿರ್ಮಲ್ ಕುಮಾರ್ ಕೆ.ಆರ್., ಎನ್.ಎಸ್. ವಿಜಯ, ಎಂ. ಕೃಷ್ಣದಾಸ್, ಬಿ.ಎಲ್. ನಂದಿನಿ, ಟಿ.ಆರ್. ವೆಂಕಟರೆಡ್ಡಿ, ಪ್ರಾಸ್ತಾವಿಕ ನುಡಿ: ಕೆ.ಎಸ್. ಗೋಪಾಲಕೃಷ್ಣ, ಅಧ್ಯಕ್ಷತೆ: ಟಿ. ನಾರಾಯಣಪ್ಪ, ಆಯೋಜನೆ ಮತ್ತು ಸ್ಥಳ: ಬಿಇಎಸ್ ಕಲೆ ಮತ್ತು ವಾಣಿಜ್ಯ ಸಂಜೆ ಮಹಾವಿದ್ಯಾಲಯ, ಜಯನಗರ 4ನೇ ಬಡಾವಣೆ, ಸಂಜೆ 6

**ಪ್ರವಚನ ವಾಹಿನಿ:** 'ಶ್ರೀಮದ್ ರಾಮಾನುಜರ ಮಾನವೀಯತೆ, ಅಂಡಾಳ್‌ರ, ತಿರುಪ್ಪಾವೈ' ಕುರಿತು ಉಪನ್ಯಾಸ: ಎನ್.ಕೆ. ರಾಮಶೇಷನ್, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ 9ನೇ ಬಡಾವಣೆ, ಸಂಜೆ 6.30

**'ಸಮಗ್ರ ಮಹಾಭಾರತ' ಧಾರ್ಮಿಕ ಪ್ರವಚನ:** ವ್ಯಾಸನಕೆರೆ ಪ್ರಭಂಜನಾಚಾರ್ಯ, ಆಯೋಜನೆ ಮತ್ತು ಸ್ಥಳ: ಪೂರ್ಣಪ್ರಜ್ಞ ವಿದ್ಯಾಪೀಠ ಪ್ರತಿಷ್ಠಾನ, ಕತ್ರಿಗುಪ್ಪೆ ಮುಖ್ಯರಸ್ತೆ, ಸಂಜೆ 6.30




ಯಶವಂತಪುರ, ಕಂಟೋನ್ಮೆಂಟ್ ರೈಲು ನಿಲ್ದಾಣಗಳ ನವೀಕರಣ ಕಾಮಗಾರಿ ಪರಿಶೀಲಿಸಿದ ಸಚಿವ ಸೋಮಣ್ಣ

# ರೈಲು ನಿಲ್ದಾಣಗಳಲ್ಲಿ ವಿಶ್ವದರ್ಜೆ ಸೌಲಭ್ಯ

ಪ್ರಜಾವಾಣಿ ವಾರ್ತೆ

**ಮುಖ್ಯಾಂಶಗಳು**

- ನಗರದ ಬೇಡಿಕೆಗೆ ಅನುಗುಣವಾಗಿ ರೈಲು ನಿಲ್ದಾಣ ಅಭಿವೃದ್ಧಿ
- ಯಶವಂತಪುರ ನಿಲ್ದಾಣದ ಅಭಿವೃದ್ಧಿಗೆ ₹367 ಕೋಟಿ
- ಕಂಟೋನ್ಮೆಂಟ್ ನಿಲ್ದಾಣದ ಆಧುನೀಕರಣಕ್ಕೆ ₹486 ಕೋಟಿ

**ಬೆಂಗಳೂರು:** ನವೀಕರಣಗೊಳ್ಳುತ್ತಿರುವ ಯಶವಂತಪುರ ಮತ್ತು ಬೆಂಗಳೂರು ಕಂಟೋನ್ಮೆಂಟ್ ರೈಲು ನಿಲ್ದಾಣಗಳಲ್ಲಿ ಪ್ರಯಾಣಿಕರಿಗೆ ವಿಶ್ವದರ್ಜೆಯ ಸೌಲಭ್ಯಗಳು ದೊರೆಯಲಿವೆ ಎಂದು ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ತಿಳಿಸಿದರು.

ಈ ಎರಡೂ ನಿಲ್ದಾಣಗಳಲ್ಲಿನಡೆಯುತ್ತಿರುವನವೀಕರಣಯೋಜನೆಗಳನ್ನು ಭಾನುವಾರ ಪರಿಶೀಲನೆ ನಡೆಸಿದ ಬಳಿಕ ಅವರು ಮಾತನಾಡಿದರು.

ಬೆಳೆಯುತ್ತಿರುವ ನಗರದ ಬೇಡಿಕೆಗೆ ಅನುಗುಣವಾಗಿ ರೈಲು ನಿಲ್ದಾಣಗಳ ಮೂಲಸೌಕರ್ಯಗಳನ್ನು ಹೆಚ್ಚಿಸಿ, ಆಧುನೀಕರಣಗೊಳಿಸಲಾಗುತ್ತಿದೆ. ರಾಜ್ಯದ ರೈಲ್ವೆ ಜಾಲದಲ್ಲಿ ಯಶವಂತಪುರ ಮತ್ತು ಬೆಂಗಳೂರು ಕಂಟೋನ್ಮೆಂಟ್ ನಿಲ್ದಾಣಗಳು ಪ್ರಮುಖ ಕೇಂದ್ರಗಳು. ಭಾರತೀಯ ರೈಲ್ವೆಯು ಹಾಕಿಕೊಂಡಿರುವ ನಿಲ್ದಾಣದ ಪುನರಾಭಿವೃದ್ಧಿ ಕಾರ್ಯಕ್ರಮದ ಭಾಗವಾಗಿ ಯಶವಂತಪುರ ನಿಲ್ದಾಣವನ್ನು ₹367 ಕೋಟಿ ಹಾಗೂ ಕಂಟೋನ್ಮೆಂಟ್ ನಿಲ್ದಾಣವನ್ನು ₹486 ಕೋಟಿ ವೆಚ್ಚದಲ್ಲಿ ಮೇಲ್ದರ್ಜೆಗೆ ಏರಿಸಲಾಗುತ್ತಿದೆ ಎಂದು ಮಾಹಿತಿ ನೀಡಿದರು.



ಯಶವಂತಪುರ ರೈಲು ನಿಲ್ದಾಣದ ನವೀಕರಣ ಕಾಮಗಾರಿಯನ್ನು ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ, ಕಾರ್ಮಿಕ ಮತ್ತು ಉದ್ಯೋಗ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ, ಸಂಸದ ಪಿ.ಸಿ. ಮೋಹನ್, ಶಾಸಕ ರಿಜ್ವಾನ್ ಅರ್ಷದ್ ಮತ್ತು ಅಧಿಕಾರಿಗಳು ಪರಿಶೀಲಿಸಿದರು

ಪ್ರಯಾಣಿಕರ ಸೌಕರ್ಯ, ಅನುಕೂಲ, ಸುರಕ್ಷತೆಗೆ ಆದ್ಯತೆ ನೀಡಲಾಗಿದೆ. ಆರಾಮದಾಯಕವಾದ ಕಾಯುವ ಪ್ರದೇಶ, ಮಲ್ಟಿ-ಲೆವೆಲ್ ಪಾರ್ಕಿಂಗ್, ಮಕ್ಕಳಿಗಾಗಿ ಆಟದ ವಲಯ, ಸ್ಥಳೀಯ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟಕ್ಕೆ ಸ್ಥಳಾವಕಾಶಗಳ ಇರಲಿದೆ ಎಂದು ತಿಳಿಸಿದರು.

ಕಂಟೋನ್ಮೆಂಟ್‌ನ ಪಾರಂಪರಿಕ ಕಟ್ಟಡವನ್ನು ಸಂರಕ್ಷಿಸಬೇಕು. ಮೆಟ್ರೊ ರೈಲು ನಿಲ್ದಾಣದ ಸಂಪರ್ಕ ಸಮರ್ಪಕವಾಗಿದ್ದರೆ ಪ್ರಯಾಣಿಕರಿಗೆ ಅನುಕೂಲವಾಗಲಿದೆ ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಕಾರ್ಮಿಕ ಮತ್ತು ಉದ್ಯೋಗ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ, ಸಂಸದ ಪಿ.ಸಿ. ಮೋಹನ್, ಶಾಸಕ ರಿಜ್ವಾನ್ ಅರ್ಷದ್, ನೈಋತ್ಯ ರೈಲ್ವೆಯ ಪ್ರಧಾನ ವ್ಯವಸ್ಥಾಪಕ ಅರವಿಂದ್ ಶ್ರೀವಾಸ್ತವ, ವಿಭಾಗೀಯ ವ್ಯವಸ್ಥಾಪಕ ಯೋಗೇಶ್ ಮೋಹನ್, ಮುಖ್ಯ ಆಡಳಿತಾಧಿಕಾರಿ (ನಿರ್ಮಾಣ) ರಾಮಗೋಪಾಲ್, ಜಂಟಿ ನಿರ್ದೇಶಕ ಅನೀಶ್ ಹೆಗಡೆ, ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ ಮಂಜುನಾಥ ಕನಮಡಿ ಉಪಸ್ಥಿತರಿದ್ದರು.

## ನಾಪತ್ತೆಯಾಗಿದ್ದ ವಿದ್ಯಾರ್ಥಿಗಳು ಪತ್ತೆ

ಪ್ರಜಾವಾಣಿ ವಾರ್ತೆ

**ಕೆಜಿಎಫ್:** ತಾಲ್ಲೂಕಿನ ಚಿಗರಾಪುರ ಮೊರಾರ್ಜಿ ದೇಸಾಯಿ ವಸತಿಶಾಲೆಯಿಂದ ಶನಿವಾರ ರಾತ್ರಿ ನಾಪತ್ತೆಯಾಗಿದ್ದ ವಿದ್ಯಾರ್ಥಿಗಳು ಭಾನುವಾರ ರಾತ್ರಿ ಮುಳಬಾಗಿಲಿನಲ್ಲಿ ಪತ್ತೆಯಾಗಿದ್ದಾರೆ.

ಶಾಲೆಯಲ್ಲಿ ಎಸ್‌ಎಸ್‌ಎಲ್‌ಸಿ ಓದುತ್ತಿದ್ದ ಮುಳಬಾಗಿಲು ತಾಲ್ಲೂಕಿನ ದರ್ಶನ್‌ಕುಮಾರ್ ಮತ್ತು ಹರ್ಷವರ್ಧನ್ ಶನಿವಾರ ರಾತ್ರಿ ವಸತಿಶಾಲೆಯ ಕಾಂಪೌಂಡ್ ಹಾರಿ ನಾಪತ್ತೆಯಾಗಿದ್ದರು. ಇಬ್ಬರೂ ತಮ್ಮ ಕೊಠಡಿಯ ಬೀಗದ ಕೈಯನ್ನು ಭದ್ರತಾ ಕೊಠಡಿಯಲ್ಲಿ ಹಾಕಿ ಹೋಗಿದ್ದರು. ಈ ವಸತಿ ಶಾಲೆಯಲ್ಲಿ ಭದ್ರತಾ ಸಿಬ್ಬಂದಿ ಇಲ್ಲ.

ಶನಿವಾರ ರಾತ್ರಿ ಮಕ್ಕಳ ಹಾಜರಾತಿ ತೆಗೆದುಕೊಳ್ಳುವಾಗ ಇಬ್ಬರು ವಿದ್ಯಾರ್ಥಿಗಳು ಕಾಣೆಯಾಗಿರುವುದು ತಿಳಿದುಬಂದಿತ್ತು. ನಾಪತ್ತೆ ಕುರಿತು ಪೋಷಕರಿಗೆ ಮಾಹಿತಿ ನೀಡಿದ್ದ ಮೊರಾರ್ಜಿ ವಸತಿಶಾಲೆಯ ಪ್ರಾಂಶುಪಾಲೆ ಭಾರತಿ ಅವರು ಭಾನುವಾರ ಬೇತಮಂಗಲ ಪೊಲೀಸರಿಗೆ ದೂರು ನೀಡಿದ್ದರು.

## ಬಿಎನ್‌ಎಸ್ ಉಲ್ಲೇಖಿಸಿ ಇಂದಿನಿಂದ ಎಫ್‌ಐಆರ್

ಪ್ರಜಾವಾಣಿ ವಾರ್ತೆ



ಬಿ. ದಯಾನಂದ

**ಬೆಂಗಳೂರು:** ಹೊಸ ಮೂರು ಕ್ರಿಮಿನಲ್ ಅಪರಾಧ ಕಾನೂನುಗಳು ಸೋಮವಾರ ದಿಂದ ಜಾರಿಗೆ ಬರುತ್ತಿದ್ದು, ಭಾರತೀಯ ನ್ಯಾಯ ಸಂಹಿತೆ (ಬಿಎನ್‌ಎಸ್) ಕಲಂಗಳ ಅಡಿಯಲ್ಲಿ ಪ್ರಕರಣ ದಾಖಲಿಸುವಂತೆ ಪೊಲೀಸರಿಗೆ ಸೂಚನೆ ನೀಡಲಾಗಿದೆ ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ತಿಳಿಸಿದ್ದಾರೆ.

ಬಿಎನ್‌ಎಸ್ ಕಾಯ್ದೆಗಳ ಅನುಷ್ಠಾನ ಕುರಿತು ಈಗಾಗಲೇ ಇಲಾಖೆ ಎಲ್ಲ ಹಂತದ ಅಧಿಕಾರಿ ಹಾಗೂ ಸಿಬ್ಬಂದಿಗೆ ತರಬೇತಿ ನೀಡಲಾಗಿದೆ. ಜತೆಗೆ, ಮೈಸೂರು ಪೊಲೀಸ್ ಅಕಾಡೆಮಿಯಿಂದ ಕನ್ನಡದಲ್ಲೇ ಹೊಸ ಕಾಯ್ದೆಗಳ ಕನ್ನಡ ಕೈಪಿಡಿ ಸಿದ್ದಪಡಿಸಿ ವಿತರಿಸಲಾಗಿದೆ. ಅದೇ ಪ್ರಕಾರ ಸೋಮವಾರದಿಂದ ಪೊಲೀಸರು ಬಿಎನ್‌ಎಸ್ ಕಾಯ್ದೆಗಳನ್ನು ಉಲ್ಲೇಖಿಸಿ ಎಫ್‌ಐಆರ್ ದಾಖಲಿಸಲಿದ್ದಾರೆ ಎಂದು ಮಾಹಿತಿ ನೀಡಿದ್ದಾರೆ.

ಹೊಸ ಕಾಯ್ದೆ ಹಾಗೂ ಕಲಂಗಳು ಎಫ್‌ಐಆರ್‌ನಲ್ಲಿ ಮಾತ್ರವಲ್ಲದೆ, ಪೊಲೀಸ್ ಐ.ಟಿ (ವೆಬ್‌ಸೈಟ್)ಯಲ್ಲೂ ಬದಲಾವಣೆ ಆಗಿದೆ. ಎಫ್‌ಐಆರ್ ಜತೆಗೆ ಇಲ್ಲಿಯೂ ಬಿಎನ್‌ಎಸ್, ಬಿಎನ್‌ಎಸ್‌ಎಸ್ ಮತ್ತು ಬಿಎಸ್‌ಎ ಕಾಯ್ದೆಗಳ ಬಗ್ಗೆಯೂ ಸಾರ್ವಜನಿಕರಿಗೆ ಮಾಹಿತಿ ಲಭ್ಯವಾಗುವಂತೆ ಸಿದ್ದಪಡಿಸಲಾಗಿದೆ. ಪೊಲೀಸ್ ಐ.ಟಿ ಸಂಪೂರ್ಣವಾಗಿ ಬದಲಾಗಿ, ಹೊಸ ಸ್ವರೂಪದಲ್ಲಿ ಲಭ್ಯವಾಗುತ್ತಿದೆ ಎಂದು ಮೂಲಗಳು ತಿಳಿಸಿವೆ.

ಕಾನೂನು ಕಾಲೇಜುಗಳು ಉಪನ್ಯಾಸಕರು, ನಿವೃತ್ತ ನ್ಯಾಯಮೂರ್ತಿಗಳ ಮೂಲಕ ಯಾವ ಅಪರಾಧಕ್ಕೆ ಯಾವ ಕಾಯ್ದೆ ಅಳವಡಿಸಬೇಕು? ಈ ಹೊಸ ಕಾಯ್ದೆಗಳು ಹಾಗೂ ಕಲಂಗಳ ಬಗ್ಗೆ ತರಬೇತಿ ನೀಡಲಾಗಿದೆ. ಕಾರ್ಯಾಗಾರಗಳು, ವಿಚಾರಸಂಕಿರಣಗಳು, ತರಬೇತಿ ಶಿಬಿರಗಳು, ಕಾನೂನು ತಜ್ಞರೊಂದಿಗೆ ಸಂವಾದ ಏರ್ಪಡಿಸಿ ಅರಿವು ಮೂಡಿಸಲಾಗಿದೆ. ಈ ಹೊಸ ಕಾಯ್ದೆಗಳ ಬಗ್ಗೆ ಕಳೆದ ಒಂದೂವರೆ ತಿಂಗಳಿಂದ ಕಾನ್‌ಸ್ಟೆಬಲ್‌ನಿಂದ ಎಸ್ಪಿ/ಡಿಸಿಪಿ ಹಂತದ ಅಧಿಕಾರಿಗಳಿಗೆ ಹಂತ ಹಂತವಾಗಿ ತರಬೇತಿ ನೀಡಲಾಗಿದೆ ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

# ಬಿಎಂಟಿಸಿ ಗುತ್ತಿಗೆ ನೌಕರ ಸೇರಿ ಇಬ್ಬರ ಸಾವು

ಎರಡು ಪ್ರತ್ಯೇಕ ಅಪಘಾತ ಪ್ರಕರಣ • ನಿಯಂತ್ರಣ ತಪ್ಪಿ ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದು ಬೈಕ್ ಸವಾರ ಸಾವು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಗರದಲ್ಲಿ ಭಾನುವಾರ ನಡೆದ ಎರಡು ಪ್ರತ್ಯೇಕ ಅಪಘಾತಗಳಲ್ಲಿ ಇಬ್ಬರು ಮೃತಪಟ್ಟು, ಒಬ್ಬರು ಗಂಭೀರವಾಗಿ ಗಾಯಗೊಂಡಿದ್ದಾರೆ.

ಹೆಬ್ಬಾಳದ ಭದ್ರಪ್ಪ ಬಡಾವಣೆ ಸಮೀಪದ ರಿಂಗ್ ರಸ್ತೆಬದಿಯಲ್ಲಿ ನಿಲುಗಡೆ ಮಾಡಿದ್ದ ಸಿಮೆಂಟ್ ಮಿಕ್ಸರ್ ವಾಹನಕ್ಕೆ ಬೈಕ್‌ವೊಂದು ಡಿಕ್ಕಿ ಹೊಡೆದ ಪರಿಣಾಮ ಸವಾರ ಮೃತಪಟ್ಟಿದ್ದಾರೆ.

ಜಾಲಹಳ್ಳಿಯ ಮುತ್ಯಾಲನಗರ ನಿವಾಸಿ ಜನಾರ್ದನ್ (26) ಮೃತಪಟ್ಟವರು. ಭಾನುವಾರ ಮುಂಜಾನೆ ಈ ಅಪಘಾತ ಸಂಭವಿಸಿದೆ ಎಂದು ಸಂಚಾರ ಪೊಲೀಸರು ಹೇಳಿದರು.

‘ಬಿಎಂಟಿಸಿಯಲ್ಲಿ ಗುತ್ತಿಗೆ ನೌಕರನಾಗಿರುವ ಜನಾರ್ದನ್ ಅವರು ಯಲಹಂಕದ ಪುಟ್ಟೇನಹಳ್ಳಿ ಬಿಎಂಟಿಸಿ ಘಟಕದಲ್ಲಿ ಕೆಲಸ ಮಾಡುತ್ತಿದ್ದರು. ಕೆಲಸ ಮುಗಿಸಿಕೊಂಡು ಬೈಕ್‌ನಲ್ಲಿ ಯಲಹಂಕದಿಂದ ಮುತ್ಯಾಲ ನಗರಕ್ಕೆ ತೆರಳುತ್ತಿದ್ದರು. ಮಾರ್ಗಮಧ್ಯೆ ರಿಂಗ್ ರಸ್ತೆಯಲ್ಲಿ ಹೋಗುವಾಗ ನಿಯಂತ್ರಣ ತಪ್ಪಿ ರಸ್ತೆ ಬದಿ ನಿಲುಗಡೆ ಮಾಡಿದ್ದ ಸಿಮೆಂಟ್ ಮಿಕ್ಸರ್ ವಾಹನಕ್ಕೆ ಹಿಂದಿನಿಂದ ಡಿಕ್ಕಿ ಹೊಡೆದಿದ್ದಾರೆ’ ಎಂದು ಸಂಚಾರ ಪೊಲೀಸರು ಹೇಳಿದರು.

‘ಡಿಕ್ಕಿಯಿಂದ ಬೈಕ್ ಸವಾರ ಗಂಭೀರವಾಗಿ ಗಾಯಗೊಂಡಿದ್ದರು. ಕೂಡಲೇ ಅವರನ್ನು ಸ್ಥಳೀಯರು ಸಮೀಪದ ಆಸ್ಪತ್ರೆಗೆ ಕರೆದೊಯ್ಯಲು ಮುಂದಾದರು. ಮಾರ್ಗ ಮಧ್ಯದಲ್ಲಿಯೇ ಮೃತಪಟ್ಟರು’ ಎಂದು ಮೂಲಗಳು ಹೇಳಿವೆ.

‘ಮೃತದೇಹದ ಮರಣೋತ್ತರ ಪರೀಕ್ಷೆ ನಡೆಸಿ ವಾರಸುದಾರರಿಗೆ ಹಸ್ತಾಂತರ ಮಾಡಲಾಗಿದೆ. ಯಾವುದೇ ಸಿಗ್ನಲ್ ಲೈಟ್ ಹಾಕದೆ ರಸ್ತೆಯಲ್ಲಿ ಸಿಮೆಂಟ್ ಮಿಕ್ಸರ್ ವಾಹನ ನಿಲುಗಡೆ ಮಾಡಿದ್ದೇ ಅಪಘಾತಕ್ಕೆ ಕಾರಣ ಎಂಬುದು ಮೇಲ್ನೋಟಕ್ಕೆ ಗೊತ್ತಾಗಿದೆ. ವಾಹನ ಚಾಲಕನನ್ನು ವಶಕ್ಕೆ ಪಡೆದು ವಿಚಾರಣೆಗೆ ಒಳಪಡಿಸಲಾಗಿದೆ’ ಎಂದು ಸಂಚಾರ ಪೊಲೀಸರು ಮಾಹಿತಿ ನೀಡಿದರು. ಹೆಬ್ಬಾಳ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

### ಹಳೇ ದ್ವೇಷ: ಮಾರಕಾಸ್ತ್ರಗಳಿಂದ ಕೊಚ್ಚಿ ವ್ಯಕ್ತಿಯ ಕೊಲೆ

**ಬೆಂಗಳೂರು:** ವ್ಯಕ್ತಿಯೊಬ್ಬರ ಮೇಲೆ ಕಲ್ಲು ಎತ್ತಿ ಹಾಕಿ ಕೊಲೆ ಮಾಡಲಾಗಿದ್ದು, ಈ ಸಂಬಂಧ ಪುಲಕೇಶಿನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಹಾಲಕ್ಷ್ಮಿ ಲೇಔಟ್‌ನ ಕುರುಬರಹಳ್ಳಿ ನಿವಾಸಿ ಅಪ್ಪು(34) ಕೊಲೆಯಾದ ವ್ಯಕ್ತಿ.

ಕೃತ್ಯ ಎಸಗಿದ ಆರೋಪಿಗಳಿಗಾಗಿ ಶೋಧ ಕಾರ್ಯ ನಡೆಯುತ್ತಿದೆ. ಠಾಣೆ ವ್ಯಾಪ್ತಿಯ ಜೀವನಹಳ್ಳಿ ರೈಲ್ವೆ ಟ್ರ್ಯಾಕ್ ಸಮೀಪ ಶನಿವಾರ ರಾತ್ರಿ ಆರೋಪಿಗಳು ಕೃತ್ಯ ಎಸಗಿ ಪರಾರಿ ಆಗಿದ್ದಾರೆ ಎಂದು ಪೊಲೀಸರು ಹೇಳಿದರು.

‘ಕೊಲೆಯಾದ ಅಪ್ಪು ಈ ಹಿಂದೆ ಕೆಲವು ಯುವಕರ ಮೇಲೆ ಹಲ್ಲೆ ನಡೆಸಿದ್ದರು. ಶನಿವಾರ ರಾತ್ರಿ 7 ಗಂಟೆ ಸುಮಾರಿಗೆ ಜೀವನಹಳ್ಳಿ ರೈಲ್ವೆ ಟ್ರ್ಯಾಕ್ ಬಳಿ ಅಪ್ಪು ಮೇಲೆ ಹಲ್ಲೆ ನಡೆಸಿದ್ದಾರೆ. ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಿ ಪರಾರಿ ಆಗಿದ್ದಾರೆ’ ಎಂದು ಪೊಲೀಸರು ಹೇಳಿದರು.

**ಕೃತ್ಯದಲ್ಲಿ ಎಂಟು ಮಂದಿ ಭಾಗಿ:** ಕೃತ್ಯದಲ್ಲಿ ಎಂಟು ಮಂದಿ ಭಾಗಿಯಾಗಿರುವ ಮಾಹಿತಿ ಸಿಕ್ಕಿದೆ. ಎರಡು ಗುಂಪುಗಳ ನಡುವೆ ಹಳೇ ದ್ವೇಷವಿತ್ತು. ಅಪ್ಪು ಅವರನ್ನು ಶನಿವಾರ ರಾತ್ರಿ ಸಂಧಾನಕ್ಕೆ ಕರೆಸಿಕೊಂಡು ಹಲ್ಲೆ ನಡೆಸಿ ಪರಾರಿಯಾಗಿದ್ದಾರೆ. ಅಕ್ಕಪಕ್ಕದ ಸ್ಥಳದಲ್ಲಿನ ಸಿ.ಸಿ.ಟಿ.ವಿ. ಕ್ಯಾಮೆರಾದ ದೃಶ್ಯಾವಳಿ ಪರಿಶೀಲಿಸಲಾಗಿದೆ. ಕೃತ್ಯ ಎಸಗಿರುವ ಆರೋಪಿಗಳ ಮಾಹಿತಿ ಸಿಕ್ಕಿದೆ. ಬಂಧನಕ್ಕೆ ಕಾರ್ಯಾಚರಣೆ ನಡೆಸಲಾಗುತ್ತಿದೆ. ಕೃತ್ಯ ನಡೆದ ಸ್ಥಳವು ರೈಲ್ವೆ ಪೊಲೀಸರ ವ್ಯಾಪ್ತಿಗೆ ಬಂದರೂ ತಾವೇ ತನಿಖೆ ನಡೆಸುತ್ತಿರುವುದಾಗಿ ಪುಲಕೇಶಿನಗರ ಠಾಣೆ ಪೊಲೀಸರು ತಿಳಿಸಿದ್ದಾರೆ. ಅಪ್ಪು ವಿರುದ್ಧ ಈ ಹಿಂದೆ ಮಾದಕ ವಸ್ತು ಮಾರಾಟ ಪ್ರಕರಣ ದಾಖಲಾಗಿತ್ತು.

**ಅಪರಾಧ ಸುದ್ದಿ**

### ಸವಾರ ಸಾವು

ಬೈಕ್ ಚಲಾಯಿಸುವಾಗ ನಿಯಂತ್ರಣ ತಪ್ಪಿ ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದ ಪರಿಣಾಮ ಸವಾರ ಸ್ಥಳದಲ್ಲೇ ಮೃತಪಟ್ಟು, ಹಿಂಬದಿ ಸವಾರ ಗಾಯಗೊಂಡಿರುವ ಘಟನೆ ಮಡಿವಾಳ ಸಂಚಾರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಕುರುಬರಹಳ್ಳಿ ನಿವಾಸಿ ಕುಮಾರಸ್ವಾಮಿ(28) ಮೃತ ಸವಾರ. ಬೊಮ್ಮನಹಳ್ಳಿ ನಿವಾಸಿ ನವೀನ್ ಕುಮಾರ್ ಗಾಯಗೊಂಡ ಹಿಂಬದಿ ಸವಾರ. ಭಾನುವಾರ ಬೊಮ್ಮನಹಳ್ಳಿ ಆಕ್ಸ್‌ಫರ್ಡ್ ಕಾಲೇಜು ಸಮೀಪದ ಸರ್ವಿಸ್ ರಸ್ತೆಯಲ್ಲಿ ಘಟನೆ ನಡೆದಿದೆ.

ಪೀಣ್ಯ ಕೈಗಾರಿಕಾ ಪ್ರದೇಶದ ಕಾರ್ಖಾನೆಯಲ್ಲಿ ಸವಾರ ಕುಮಾರಸ್ವಾಮಿ ಕೆಲಸ ಮಾಡುತ್ತಿದ್ದರು. ಈತನ ಸ್ನೇಹಿತ, ಶಿವಮೊಗ್ಗ ಮೂಲದ ನವೀನ್ ಕುಮಾರ್ ಬೊಮ್ಮನಹಳ್ಳಿಯ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದರು.

ಬೈಕ್‌ನಲ್ಲಿ ಬೊಮ್ಮನಹಳ್ಳಿಯಿಂದ ಶಿವಮೊಗ್ಗಕ್ಕೆ ಹೊರಟಿದ್ದರು. ಆಗ ಆಕ್ಸ್‌ಫರ್ಡ್ ಕಾಲೇಜು ಸಮೀಪದ ಸರ್ವಿಸ್ ರಸ್ತೆಯಲ್ಲಿ ಈ ಅಪಘಾತ ಸಂಭವಿಸಿದೆ ಎಂದು ಸಂಚಾರ ಪೊಲೀಸರು ಹೇಳಿದರು.

**‘ಇಬ್ಬರೂ ಹೆಲ್ಮೆಟ್ ಧರಿಸಿರಲಿಲ್ಲ’:** ಇಬ್ಬರೂ ಹೆಲ್ಮೆಟ್ ಧರಿಸಿದ ಪರಿಣಾಮ ತಲೆಗೆ ಗಂಭೀರ ಪೆಟ್ಟು ಬಿದ್ದು, ತೀವ್ರ ರಕ್ತಸ್ರಾವವಾಗಿತ್ತು. ನವೀನ್ ಕುಮಾರ್ ತಲೆಗೆ ಗಂಭೀರ ಪೆಟ್ಟು ಬಿದ್ದಿದ್ದು, ಚಿಕಿತ್ಸೆ ಮುಂದುವರಿದಿದೆ ಎಂದು ಪೊಲೀಸರು ಹೇಳಿದರು

### ತೆಲಂಗಾಣದಿಂದ ಕಾರಿನಲ್ಲಿ ಬಂದು ವ್ಯಕ್ತಿ ಅಪಹರಣ

**ಬೆಂಗಳೂರು:** ತೆಲಂಗಾಣದಿಂದ ಕಾರಿನಲ್ಲಿ ಬಂದು ನಗರದ ಮಹಾತ್ಮ ಗಾಂಧಿ ರಸ್ತೆಯ ಹೋಟೆಲ್‌ವೊಂದರಲ್ಲಿ ತಂಗಿದ್ದ ವ್ಯಕ್ತಿಯನ್ನು ಸಿನಿಮೀಯ ಶೈಲಿಯಲ್ಲಿ ಅಪಹರಿಸಿದ್ದ ಆರೋಪಿಗಳ ಪೈಕಿ ಇಬ್ಬರನ್ನು ಹಲಸೂರು ಠಾಣೆ ಪೊಲೀಸರು ಬಂಧಿಸಿದ್ದಾರೆ.

ತೆಲಂಗಾಣದ ಶಿವಕೃಷ್ಣ ಹಾಗೂ ಜಾಯ್ ಸ್ಟೀವನ್ ಎಂಬುವವರನ್ನು ಬಂಧಿಸಲಾಗಿದೆ. ಉಳಿದ 8 ಮಂದಿಗೆ ಹುಡುಕಾಟ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

‘ತೆಲಂಗಾಣ ರಾಜು ಅಲಿಯಾಸ್ ಅಜ್ಮೀರಾ ಅವರು ಕಳೆದ ಆರು ತಿಂಗಳ ಹಿಂದೆ ನಗರಕ್ಕೆ ಬಂದು ಹೋಟೆಲ್‌ನಲ್ಲಿ ವಾಸ್ತವ್ಯ ಮಾಡಿದ್ದರು. ಜೂನ್ 16ರಂದು ಎರಡು ಕಾರಿನಲ್ಲಿ ಬಂದಿದ್ದ 10 ಮಂದಿ ಹಲ್ಲೆ ನಡೆಸಿ ರಾಜು ಅವರನ್ನು ಅಪಹರಣ ಮಾಡಿ ತೆಲಂಗಾಣಕ್ಕೆ ಕರೆದೊಯ್ದಿದ್ದರು. ಅಲ್ಲಿ ಕೂಡಿ ಹಾಕಿ ಹಲ್ಲೆ ನಡೆಸಿದ್ದರು. ಹಣಕ್ಕೆ ಬೇಡಿಕೆ ಇಟ್ಟಿದ್ದರು’ ಎಂದು ಪೊಲೀಸರು ಹೇಳಿದರು.

‘ರಾಜು ಅವರು ಷೇರು ವ್ಯವಹಾರ ನಡೆಸುತ್ತಿದ್ದರು. ಬಂದ ಹಣದಿಂದ ವಿಲಾಸಿ ಜೀವನ ನಡೆಸುತ್ತಿದ್ದರು. ಚಿತ್ರರಂಗದ ನಟರು ಹಾಗೂ ಕ್ರಿಕೆಟ್ ಆಟಗಾರರ ಜತೆಗೆ ಫೋಟೊ ತೆಗೆಸಿಕೊಳ್ಳುವ ಅಭ್ಯಾಸ ಅವರಿಗಿತ್ತು. ಅಲ್ಲದೇ ಅಪಹರಣ ಮಾಡಿದ್ದ ಆರೋಪಿಗಳಿಂದ ಸಾಲ ಪಡೆದುಕೊಂಡಿದ್ದರು. ಈ ಸಂಬಂಧ ತೆಲಂಗಾಣದಲ್ಲಿ ಪ್ರಕರಣ ದಾಖಲಾಗಿತ್ತು. ರಾಜು ಸಾಲ ತೀರಿಸಿರಲಿಲ್ಲ. ಇದರಿಂದ ಸಿಟ್ಟಿಗೆಟ್ಟಿದ್ದ ಆರೋಪಿಗಳು, ರಾಜು ಅವರಿಗಾಗಿ ಹುಡುಕಾಟ ನಡೆಸಿದ್ದರು. ಬೆಂಗಳೂರಿಗೆ ಬಂದಿರುವ ಮಾಹಿತಿ ತಿಳಿದು, ಅಪಹರಣಕ್ಕೆ ಸಂಚು ರೂಪಿಸಿದ್ದರು’ ಎಂದು ಪೊಲೀಸರು ಹೇಳಿದರು.

**ಜೀವನ ಶೈಲಿ ಗಮನಿಸಿದ್ದ ಆರೋಪಿಗಳು:** ‘ರಾಜು ಅವರ ಜೀವನ ಶೈಲಿಯನ್ನು ಗಮನಿಸಿದ್ದ ಆರೋಪಿಗಳು ಅಪಹರಣ ಮಾಡಿ ಹೆಚ್ಚಿನ ಹಣ ಪಡೆಯುವ ಪ್ರಯತ್ನದಲ್ಲಿದ್ದರು. ಜೂನ್ 16ರಂದು ಸ್ನೇಹಿತನ ಜತೆಗೆ ಊಟಕ್ಕೆ ತೆರಳಿದ್ದ ಸಂದರ್ಭದಲ್ಲಿ ಅಪಹರಣ ಮಾಡಿದ್ದರು. ತೆಲಂಗಾಣಕ್ಕೆ ಕರೆದೊಯ್ದು ಅಲ್ಲಿನ ಫಾರ್ಮ್ ಹೌಸ್‌ವೊಂದರಲ್ಲಿ ಕೂಡಿ ಹಾಕಿ ಹಲ್ಲೆ ನಡೆಸಿ ₹5 ಕೋಟಿ ಹಣ, ಬಿಟ್ ಕಾಯಿನ್ ನೀಡುವಂತೆ ಬೆದರಿಸಿದ್ದರು. ರಾಜು ಸ್ನೇಹಿತ ನೀಡಿದ್ದ ದೂರು ಆಧರಿಸಿ ಕಾರ್ಯಾಚರಣೆ ನಡೆಸಲಾಯಿತು. ಆರೋಪಿಗಳು ನ್ಯಾಯಾಂಗ ಬಂಧನದಲ್ಲಿದ್ದಾರೆ’ ಎಂದು ಪೊಲೀಸರು ಹೇಳಿದರು.

## ಅಧಿಕ ಲಾಭದ ಆಮಿಷ ವೈದ್ಯನಿಗೆ ₹36 ಲಕ್ಷ ವಂಚನೆ

ಪ್ರಜಾವಾಣಿ ವಾರ್ತೆ

**ತುಮಕೂರು:** ‘ಷೇರು ಮಾರುಕಟ್ಟೆಯಲ್ಲಿ ಹಣ ಹೂಡಿಕೆ ಮಾಡಿ ಉತ್ತಮ ಲಾಭ ಗಳಿಸಬಹುದು’ ಎಂದು ನಂಬಿಸಿ ವೈದ್ಯ, ತಿಪಟೂರಿನ ಎಚ್.ವಿದ್ಯಾಸಾಗರ್ ಎಂಬುವವರಿಗೆ ₹36.40 ಲಕ್ಷ ವಂಚಿಸಲಾಗಿದೆ.

ವಿದ್ಯಾಸಾಗರ್ ಮೊದಲಿಗೆ ‘ಏಂಜೆಲೋನ್’ ಎಂಬ ಅಪ್ಲೇಕಶನ್‌ನ ಬಳಸಿಕೊಂಡು ಷೇರು ಮಾರುಕಟ್ಟೆಯಲ್ಲಿ ಹಣ ಹೂಡಿಕೆ ಮಾಡುತ್ತಿದ್ದರು. ಫೇಸ್‌ಬುಕ್‌ನಲ್ಲಿ ಷೇರು ಮಾರುಕಟ್ಟೆಗೆ ಸಂಬಂಧಿಸಿದ ಜಾಹೀರಾತು ನೋಡಿ ಅದರಲ್ಲಿದ್ದ ಲಿಂಕ್ ಮೂಲಕ ವಾಟ್ಸ್ ಆ್ಯಪ್ ಗ್ರೂಪ್‌ಗೆ ಸೇರಿಸಿದ್ದಾರೆ.

ಸದರಿ ಗ್ರೂಪ್‌ನಲ್ಲಿ ಷೇರು ಮಾರುಕಟ್ಟೆಗೆ ಸಂಬಂಧಿಸಿದ ಮಾಹಿತಿ ಹಂಚಿಕೊಂಡಿದ್ದಾರೆ. ನಂತರ ‘ಎಸ್‌ಎಸ್‌ಎಐಐ’ ಆ್ಯಪ್ ಡೌನ್‌ಲೋಡ್ ಮಾಡಿಕೊಂಡು ಹಣ ಹೂಡಿಕೆ ಮಾಡಿದರೆ ಹೆಚ್ಚಿನ ಲಾಭ ಪಡೆಯಬಹುದು ಎಂದು ತಿಳಿಸಿದ್ದಾರೆ. ಲಾಭ ಗಳಿಕೆಯ ಆಮಿಷ ಒಡ್ಡಿದ್ದಾರೆ. ಇದನ್ನು ನಂಬಿದ ವಿದ್ಯಾಸಾಗರ್ ಜೂನ್ 4ರಿಂದ 21ರ ವರೆಗೆ ವಿವಿಧ ಬ್ಯಾಂಕ್ ಖಾತೆಗಳಿಗೆ ಹಂತ ಹಂತವಾಗಿ ₹40.80 ಲಕ್ಷ ಹಣ ವರ್ಗಾವಣೆ ಮಾಡಿದ್ದಾರೆ. ಇದರಲ್ಲಿ ಅವರಿಗೆ ₹4.40 ಲಕ್ಷ ವಾಪಸ್ ಹಾಕಿದ್ದಾರೆ.

‘ಬಾಕಿ ಹಣ ವಾಪಸ್ ನೀಡದೆ ವಂಚಿಸಿದ್ದಾರೆ. ಸೈಬರ್ ಆರೋಪಿಗಳ ವಿರುದ್ಧ ಕ್ರಮಕೈಗೊಳ್ಳುವಂತೆ’ ಸೈಬರ್ ಠಾಣೆಗೆ ದೂರು ನೀಡಿದ್ದು ಪ್ರಕರಣ ದಾಖಲಾಗಿದೆ.

## ಡಿಸಿಸಿ ಬ್ಯಾಂಕ್: ₹11 ಕೋಟಿ ವಂಚನೆ, ದೂರು

ಪ್ರಜಾವಾಣಿ ವಾರ್ತೆ

**ಚಿಂತಾಮಣಿ:** ರೈತರ ಹೆಸರಲ್ಲಿ ನಕಲಿ ದಾಖಲೆ ಸೃಷ್ಟಿಸಿ ಸಾಲಮನ್ನಾದ ₹11 ಕೋಟಿ ವಂಚಿಸಿದ್ದಾರೆ ಎಂದು ಕೋಲಾರ -ಚಿಕ್ಕಬಳ್ಳಾಪುರ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ (ಡಿಸಿಸಿ) ವ್ಯವಸ್ಥಾಪಕ ಜಿ.ಚಂದ್ರಶೇಖರ್ ಎಂಬುವವರ ವಿರುದ್ಧ ಚಿಂತಾಮಣಿ ಗ್ರಾಮಾಂತರ ಠಾಣೆಯಲ್ಲಿ ಭಾನುವಾರ ಪ್ರಕರಣ ದಾಖಲಾಗಿದೆ.

ಡಿಸಿಸಿ ವ್ಯವಸ್ಥಾಪಕ ಜಿ.ಚಂದ್ರಶೇಖರ್ ವಿರುದ್ಧ ತಳಗವಾರ ಗ್ರಾಮದ ಟಿ.ಎಸ್.ಪ್ರತಾಪ್ ಪೊಲೀಸರಿಗೆ ದೂರು ನೀಡಿದ್ದಾರೆ. ಈ ಬಗ್ಗೆ ಸೂಕ್ತ ತನಿಖೆ ನಡೆಸಿ ಕ್ರಮ ಕೈಗೊಳ್ಳಬೇಕು ಎಂದು ಅವರು ಒತ್ತಾಯಿಸಿದ್ದಾರೆ.

ಆರ್ಥಿಕ ಸಂಕಷ್ಟದಲ್ಲಿರುವ ಬಡ ರೈತ ಕುಟುಂಬಗಳಿಗೆ ನೆರವಾಗಲು ರಾಜ್ಯ ಸರ್ಕಾರ 2016-17 ಮತ್ತು 2018-19ರಲ್ಲಿ ಸಾಲ ಮನ್ನಾ ಯೋಜನೆ ರೂಪಿಸಿತ್ತು. ಆದರೆ, ಚಂದ್ರಶೇಖರ್ ಅವರು 2018ರಲ್ಲಿ ರೈತರ ಹೆಸರಲ್ಲಿ ನಕಲಿ ದಾಖಲೆ ಸೃಷ್ಟಿಸಿ ಸಾಲ ಮನ್ನಾ ಹಣ ದುರುಪಯೋಗ ಮಾಡಿಕೊಂಡಿದ್ದಾರೆ ಎಂದು ದೂರಿನಲ್ಲಿ ತಿಳಿಸಿದ್ದಾರೆ.

2021ರ ಜ.8 ರಂದು ನಡೆದ ಡಿಸಿಸಿ ಬ್ಯಾಂಕ್‌ನ ಆಡಳಿತ ಮಂಡಳಿ ಸಭೆಯಲ್ಲಿ ₹ 11 ಕೋಟಿ ನಷ್ಟಕ್ಕೆ ಸಂಬಂಧಿಸಿದಂತೆ ವ್ಯವಸ್ಥಾಪಕ ಚಂದ್ರಶೇಖರ್ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಲಿಲ್ಲ. ವಂಚನೆ ಮಾಡಿದ ಅಧಿಕಾರಿ ವಿರುದ್ಧ ಯಾವುದೇ ಕ್ರಮ ಕೈಗೊಳ್ಳದಿರುವುದನ್ನು ನೋಡಿದರೆ ಬ್ಯಾಂಕಿನ ಉನ್ನತ ವ್ಯಕ್ತಿಗಳು ಈ ಅವ್ಯವಹಾರದಲ್ಲಿ ಶಾಮೀಲಾಗಿರುವ ಸಾಧ್ಯತೆ ಇದೆ ಎಂದು ದೂರುದಾರರು ಶಂಕೆ ವ್ಯಕ್ತಪಡಿಸಿದ್ದಾರೆ.

ಡಿಸಿಸಿ ಬ್ಯಾಂಕ್ ಮಾಜಿ ಅಧ್ಯಕ್ಷ ಬ್ಯಾಲಹಳ್ಳಿ ಗೋವಿಂದಗೌಡ ಅವರಿಗೆ ಆದಾಯ ಮೂಲವಿಲ್ಲ. ಆದರೂ ಕೋಟ್ಯಂತರ ಮೌಲ್ಯದ ಆಸ್ತಿ ಹೊಂದಿದ್ದಾರೆ. ಆಪ್ತರ ಹೆಸರಿನಲ್ಲಿಯೂ ಕ್ರಮ ಆಸ್ತಿ ಸಂಪಾದಿಸಿದ್ದಾರೆ. ಈ ಹಗರಣದಲ್ಲಿ ಬ್ಯಾಲಹಳ್ಳಿ ಗೋವಿಂದ ಗೌಡ ಅವರ ಪಾತ್ರ ಪ್ರಮುಖವಾಗಿರಬಹುದು ಎಂಬ ಸಂಶಯವಿದೆ. ಆದ್ದರಿಂದ ಕಾನೂನು ರೀತಿ ತನಿಖೆ ನಡೆಸಿ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ದೂರಿನಲ್ಲಿ ಕೋರಿದ್ದಾರೆ.

## ಸಮನ್ವಯ ಸಮಿತಿ ರಚಿಸಲು ನಿರ್ಧಾರ

ಪ್ರಜಾವಾಣಿ ವಾರ್ತೆ

**ಮಂಡ್ಯ:** ಇಲ್ಲಿ ಡಿ.20, 21 ಹಾಗೂ 22ರಂದು ಆಯೋಜಿಸಿರುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಜವಾಬ್ದಾರಿ ನಿರ್ವಹಿಸಲು ಸಮನ್ವಯ ಸಮಿತಿ ರಚಿಸಲು ತೀರ್ಮಾನಿಸಲಾಯಿತು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ಅವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಕಸಾಪ ಪದಾಧಿಕಾರಿಗಳೊಂದಿಗೆ ನಡೆದ ಪೂರ್ವಸಿದ್ಧತಾ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಯಿತು.

## ಪರಿಸರ ರಕ್ಷಣೆ ವೈಯಕ್ತಿಕ ಜವಾಬ್ದಾರಿ: ಮಂಜಪ್ಪ



ಪರಿಸರ ಸೇನೆ ಮತ್ತು ಜಗಯೋಗಾಲಯ ಸಂಘಟನೆ ಸದಸ್ಯರು ಭೀಮನಕುಪ್ಪೆ ಕೆರೆ ಸ್ವಚ್ಛಗೊಳಿಸಿದರು

ಪ್ರಜಾವಾಣಿ ವಾರ್ತೆ

**ಕೆಂಗೇರಿ:** ಪರಿಸರ ರಕ್ಷಣೆ ಎಲ್ಲರ ವೈಯಕ್ತಿಕ ಜವಾಬ್ದಾರಿ. ಈ ಕಾರ್ಯಕ್ಕೆ ಅನ್ಯರ ಸಹಕಾರ ನಿರೀಕ್ಷೆ ಸಲ್ಲದು ಎಂದು ಪರಿಸರ ಪ್ರೇಮಿ ಬಡಮಾರನಹಳ್ಳಿ ಪೊರಕೆ ಮಂಜಪ್ಪ ಹೇಳಿದರು.

ಪರಿಸರ ಸೇನೆ ಮತ್ತು ಜಗಯೋಗಾಲಯ ಸಂಘಟನೆ ವತಿಯಿಂದ ಆಯೋಜಿಸಲಾಗಿದ್ದ ಯೋಗ ಶಿಬಿರ ಹಾಗೂ ಶ್ರಮದಾನ ಕಾರ್ಯಕ್ರಮದಲ್ಲಿ ಭೀಮನಕುಪ್ಪೆ ಕೆರೆ ಸ್ವಚ್ಛಗೊಳಿಸಿ ಅವರು ಮಾತನಾಡಿದರು.

‘ಸಂಘಟನೆಯ ವತಿಯಿಂದ ಪ್ರತಿ ತಿಂಗಳ ನಾಲ್ಕನೇ ಶನಿವಾರ ಶ್ರಮದಾನ ಹಾಗೂ ಯೋಗ ಶಿಬಿರ ಆಯೋಜಿಸಲಾಗುತ್ತಿದೆ. ಈ ಕಾರ್ಯಕ್ರಮದ ಮೂಲಕ ನೂರಾರು ಸಸಿಗಳನ್ನು ನೆಡಲಾಗುತ್ತಿದೆ. ಕೆರೆಗಳ ಸ್ವಚ್ಛತಾ ಕಾರ್ಯ ಹಮ್ಮಿಕೊಳ್ಳಲಾಗುತ್ತಿದೆ. ಆಸಕ್ತ ಪರಿಸರ ಪ್ರೇಮಿಗಳು ಮೊಬೈಲ್ ಸಂಖ್ಯೆ 8095623071 ಸಂಪರ್ಕಿಸಿ ಸಾಮಾಜಿಕ ಕಾರ್ಯದಲ್ಲಿ ತೊಡಗಿಕೊಳ್ಳಬಹುದು’ ಎಂದು ಮನವಿ ಮಾಡಿದರು.

ಸ್ಥಳೀಯರ ಸಹಕಾರದೊಂದಿಗೆ ಶಿರಾ ತಾಲ್ಲೂಕಿನ ಐದು ಗ್ರಾಮಗಳನ್ನು ಕೆಲ ತಿಂಗಳಲ್ಲಿ ಸಂಪೂರ್ಣ ಸ್ವಚ್ಛ ಗ್ರಾಮವನ್ನಾಗಿಸುವ ಗುರಿ ಹೊಂದಲಾಗಿದೆ ಎಂದರು.

ಯೋಗ ಶಿಕ್ಷಕಿ ತೇಜಸ್ವಿನಿ, ವೃಕ್ಷಾಸನ ಪ್ರದರ್ಶಿಸಿದರು. ಕ್ರಮಬದ್ಧ ಯೋಗಾಸನದ ಬಗ್ಗೆ ಮಾಹಿತಿ ಹಂಚಿಕೊಂಡರು.

ಬಡಮಾರನಹಳ್ಳಿ ಪೊರಕೆ ಮಂಜಪ್ಪ, ಜಗ ಯೋಗಾಲಯದ ಜಗದೀಶ್, ತೇಜಸ್ವಿನಿ, ಮಧುಸೂದನ್, ಕಲ್ಲೇಶ್, ಗಿರೀಶ್, ರವೀಂದ್ರ, ಶ್ರೀಕುಮಾರ್, ಪದ್ಮಮ್ಮ, ಅಕ್ಷತಾ ಕೆರೆ ಸ್ವಚ್ಛತಾ ಅಭಿಯಾನದಲ್ಲಿ ಪಾಲ್ಗೊಂಡಿದ್ದರು.

## ಚಿತ್ರಾವಳಿ



ತ್ರಿಲೋಕ ಬರಹ ಪ್ರಕಾಶನವು ಸುಚಿತ್ರ ಸಿನಿಮಾ ಅಕಾಡೆಮಿಯಲ್ಲಿ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ‘ಕಾಣುವಂತೆ ಕಾಣದಂತೆ’ ಪುಸ್ತಕವನ್ನು ಸಾಹಿತಿ ಬರಗೂರು ರಾಮಚಂದ್ರಪ್ಪ ಬಿಡುಗಡೆ ಮಾಡಿದರು. ಜಾನಪದ ಕಲಾವಿದೆ ಮಂಜಮ್ಮ ಜೋಗತಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕಿ ಪುಷ್ಪಲತಾ, ವಿಕ್ರಮ್ ಬಿ.ಕೆ. ಪಾಲ್ಗೊಂಡಿದ್ದರು



ಜಯನಗರದ ‘ಯುವ ಪಥ’ದ ವಿವೇಕ ಆಡಿಟೋರಿಯಂನಲ್ಲಿ ನಡೆದ ‘ಕರ್ನಾಟಕ ಶಾಸ್ತ್ರೀಯ ಸಂಗೀತ ರಂಗಪ್ರವೇಶ’ ಕಾರ್ಯಕ್ರಮದಲ್ಲಿ ಯುವ ಗಾಯಕ ಅಕುಲ್ ಗೊಂಚಿಕಾರ್ ಶಾಸ್ತ್ರೀಯ ಸಂಗೀತ ಕಛೇರಿ ನಡೆಸಿಕೊಟ್ಟರು



‘ವಿಶ್ವ ಸಂವಾದ ಕೇಂದ್ರ ಕರ್ನಾಟಕ’ ವತಿಯಿಂದ ಆಯೋಜಿಸಿದ್ದ ವಿಎಸ್‌ಕೆ ಮಾಧ್ಯಮ ಪ್ರಶಸ್ತಿ ಸಮಾರಂಭದಲ್ಲಿ ಡಾ.ಪೂರ್ವಿ ಜಯರಾಜ್ ಅವರಿಗೆ ‘ವಿಎಸ್‌ಕೆ ಡಿಜಿಟಲ್ ಮಾಧ್ಯಮ ಪ್ರಶಸ್ತಿ, ಅಂಕಣಕಾರ ಪ್ರೊ. ಪ್ರೇಮಶೇಖರ ಅವರಿಗೆ ಹೊ.ವೆ. ಶೇಷಾದ್ರಿ ಅಂಕಣಕಾರ ಪ್ರಶಸ್ತಿ, ‘ಸ್ತ್ರೀ ಜಾಗೃತಿ’ ಪತ್ರಿಕೆ ಸಂಪಾದಕಿ ಶೋಭಾ ಎಚ್‌ಜಿ. ಅವರಿಗೆ ಬೆ.ಸು.ನಾ. ಮಲ್ಯ ಪತ್ರಿಕೋದ್ಯಮ ಪ್ರಶಸ್ತಿ, ‘ಏಷ್ಯಾನೆಟ್ ಸುವರ್ಣ ನ್ಯೂಸ್’ ಸಂಪಾದಕ ಅಜಿತ್ ಹನುಮಕ್ಕನವರ್ ಅವರಿಗೆ ಚಂದ್ರಶೇಖರ ಭಂಡಾರಿ ಪ್ರಶಸ್ತಿ, ‘ವಿಜಯ ಕರ್ನಾಟಕ’ ಪತ್ರಿಕೆಯ ಸಂಪಾದಕ ಸುದರ್ಶನ್ ಚನ್ನಂಗಿಹಳ್ಳಿ ಅವರಿಗೆ ತಿ.ತಾ.ಶರ್ಮ ಪತ್ರಿಕೋದ್ಯಮ ಪ್ರಶಸ್ತಿ ನೀಡಿ ಗೌರವಿಸಲಾಯಿತು. (ನಿಂತವರು– ಎಡದಿಂದ) ವಿಶ್ವ ಸಂವಾದ ಕೇಂದ್ರದ ಟ್ರಸ್ಟಿ ವಿಶ್ವನಾಥ್ ಭಟ್, ‘ಆರ್ಗನೈಸರ್’ ಸಂಪಾದಕ ಪ್ರಫುಲ್ ಖೇತ್ಕರ್ ಮತ್ತು ಆರ್.ಎಸ್.ಎಸ್ ನ ದಕ್ಷಿಣ ಮಧ್ಯ ಕ್ಷೇತ್ರೀಯ ಸಂಘ ಚಾಲಕ ಡಾ.ಪಿ.ವಾಮನ್ ಶೆಣೈ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು



ಬಿ.ಎಂ.ಶ್ರೀ. ಪ್ರತಿಷ್ಠಾನ, ಕನ್ನಡ ಸಂಘರ್ಷ ಸಮಿತಿ ಹಾಗೂ ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಜಂಟಿಯಾಗಿ ನಗರದಲ್ಲಿ ಆಯೋಜಿಸಿದ್ದ ಕಮಲಾ ಹಂಪನಾ ಅವರಿಗೆ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ತಾ.ಸಿ. ತಿಮ್ಮಯ್ಯ, ಪತ್ರಕರ್ತ ರಾಮಣ್ಣ ಎಚ್.ಕೋಡಿಹೊಸಹಳ್ಳಿ,ನಿಡುಮಾಮಿಡಿಯ ವೀರಭದ್ರಚನ್ನಮಲ್ಲ ದೇಶಿಕೇಂದ್ರ ಸ್ವಾಮೀಜಿ, ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಎಂ.ಪ್ರಕಾಶಮೂರ್ತಿ,ಕನ್ನಡ ಸಂಘರ್ಷ ಸಮಿತಿ ಅಧ್ಯಕ್ಷ ಎ.ಎಸ್.ನಾಗರಾಜಸ್ವಾಮಿ,ಕನ್ನಡ ಜನಶಕ್ತಿ ಕೇಂದ್ರದ ಅಧ್ಯಕ್ಷ ಸಿ.ಕೆ ರಾಮೇಗೌಡ,ಬಿ. ಎಂ.ಶ್ರೀ. ಪ್ರತಿಷ್ಠಾನದ ಕಾರ್ಯದರ್ಶಿ ಶಾಂತರಾಜು ಅವರು ಕಮಲಾ ಹಂಪನಾ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು



ಹೈಕೋರ್ಟ್ ವಿಶ್ರಾಂತ ನ್ಯಾಯಮೂರ್ತಿ ಚಂದ್ರಶೇಖರಯ್ಯ ಅವರಿಗೆ ಒಕ್ಕಲಿಗ ಯುವ ಬ್ರಿಗೇಡ್ ವತಿಯಿಂದ ‘ಜೀವಮಾನ ಸಾಧನೆ’ಯ ಅಭಿನಂದನೆ ಸಲ್ಲಿಸಲಾಯಿತು. ಅವರ ಪತ್ನಿ ಸರಸ್ವತಮ್ಮ,ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ, ಹೈಕೋರ್ಟ್ ನ್ಯಾಯಮೂರ್ತಿ ಟಿ.ಜಿ. ಶಿವಶಂಕರೇಗೌಡ, ಮಾಜಿ ಮುಖ್ಯಮಂತ್ರಿ ಡಿ.ವಿ. ಸದಾನಂದಗೌಡ, ರಾಜಸ್ಥಾನದ ಐಜಿಪಿ ರಾಘವೇಂದ್ರ ಸುಹಾಸ್, ಪೊಲೀಸ್ ಅಧಿಕಾರಿ ಸಜೀತ್ ವಿ.ಜೆ., ಎನ್. ಎಸ್.ನಾಗೇಶ್, ಒಕ್ಕಲಿಗ ಯುವ ಬ್ರಿಗೇಡ್ ಸಂಸ್ಥಾಪಕ ನಂಜೇಗೌಡ ನಂಜುಂಡ ಉಪಸ್ಥಿತರಿದ್ದರು



ಪೀಣ್ಯ 2ನೇ ಹಂತದಲ್ಲಿ ತ್ಯಾಗರಾಜ ಕೋ ಆಪರೇಟಿವ್ ಬ್ಯಾಂಕ್‌ನ 14ನೇ ಶಾಖೆಯನ್ನು ಶಾಸಕ ಎಸ್.ಟಿ.ಸೋಮಶೇಖರ್ ಉದ್ಘಾಟಿಸಿದರು. ಬ್ಯಾಂಕ್ ಉಪಾಧ್ಯಕ್ಷ ಕೆ.ಜಿ.ರಾಮೇಗೌಡ, ಬಿಬಿಎಂಪಿ ಮಾಜಿ ಸದಸ್ಯ ಲಕ್ಷ್ಮಿಕಾಂತ ರೆಡ್ಡಿ, ತಾಲ್ಲೂಕು ಪಂಚಾಯಿತಿ ಮಾಜಿ ಸದಸ್ಯ ಗರುಡಪ್ಪ, ಎಸ್.ವಾಸುದೇವ್ ಹಾಜರಿದ್ದರು


ಪ್ರಜಾವಾಣಿ ಸೋಮವಾರ, 1 ಜುಲೈ 2024

# ಶಿಕ್ಷಣ






# ತೆರೆದ ಪುಸ್ತಕ ಪರೀಕ್ಷೆಯ ಸವಾಲುಗಳೇನು?



**ಬೇದ್ರೆ ಮಂಜುನಾಥ, ಮೈಸೂರು**

ಭಾರತೀಯ ಶಿಕ್ಷಕರಿಗೆ ಇದು ಬಹುದೊಡ್ಡ ಸವಾಲು. ಪಠ್ಯಪುಸ್ತಕದಲ್ಲಿರುವ ಪರಿಕಲ್ಪನೆಗಳು ಮತ್ತು ಮೂಲಾಂಶಗಳು ವಿದ್ಯಾರ್ಥಿಗಳಿಗೆ ಅರ್ಥವಾಗುವಂತೆ ವಿವರಿಸುವುದರ ಜೊತೆಗೆ ಪ್ರಯೋಗಗಳನ್ನು ಒಳಗೊಂಡಂತೆ ವಿಶೇಷವಾದ ಮೌಲ್ಯಾಂಕನ ವಿಧಾನ ರೂಪಿಸುವುದು ಹಳೆಯ ಪದ್ಧತಿಗೆ ಒಗ್ಗಿಕೊಂಡ ಶಿಕ್ಷಕರಿಗೆ ಕಷ್ಟವಾದ ಕೆಲಸ.

ಸುಮ್ಮನೇ ಮನಬಂದಂತೆ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯಲು ಯತ್ನಿಸುವಂತಿಲ್ಲ. ಪ್ರಶ್ನೆಗಳಿಗೆ ಪಠ್ಯಪುಸ್ತಕದಲ್ಲಿ ಮುದ್ರಿತವಾಗಿರುವ ವಾಕ್ಯಗಳನ್ನು ಯಾಥಾ ನಕಲು ಮಾಡುವಂತಿಲ್ಲ!

ವಿದ್ಯಾರ್ಥಿಗಳು ಹೊಸತನ್ನು ಕಲಿಯುವಂತೆ ಪ್ರೇರೇಪಣೆ ನೀಡುವಲ್ಲಿ ಈ ವಿಧಾನ ಸಫಲವಾಗುವುದಿಲ್ಲ. ಹೇಗೂ ಪಠ್ಯಪುಸ್ತಕ ಇಲ್ಲವೇ ಅಧ್ಯಯನ ಸಾಮಗ್ರಿಯನ್ನು ನೋಡಿಕೊಂಡು ಉತ್ತರಿಸಲು ಅವಕಾಶವಿರುವುದರಿಂದ ಪಠ್ಯವಿಷಯವನ್ನು ಓದಿ, ಅರ್ಥಮಾಡಿಕೊಂಡು, ಜ್ಞಾಪಕದಲ್ಲಿ ಇಟ್ಟುಕೊಂಡು, ಉತ್ತರಿಸುವ ಅಂತಃಪ್ರೇರಣೆಯು ಕ್ರಮೇಣ ಕಡಿಮೆಯಾಗುತ್ತದೆ ಮತ್ತು ಇಲ್ಲವಾಗುತ್ತದೆ.

ಯಾವ ಪ್ರಶ್ನೆಗೆ ಎಲ್ಲಿ ಉತ್ತರ ಇದೆ ಎಂದು ಪಠ್ಯಪುಸ್ತಕವನ್ನು ತಡಕಾಡಲು ಹೆಚ್ಚು ಸಮಯ ತೆಗೆದುಕೊಳ್ಳುವ ಸಾಧ್ಯತೆ ಇರುವುದರಿಂದ ಅರೆಬರೆ ಉತ್ತರಗಳನ್ನು ನೀಡುವ ಮತ್ತು ನಿಗದಿತ ಸಮಯದೊಳಗೆ ಸೂಕ್ತ ಉತ್ತರ ಹುಡುಕಲು ಸೋಲುವ ಸಾಧ್ಯತೆಗಳಿರುವುದರಿಂದ ಸಮಯ ನಿರ್ವಹಣೆ ಸವಾಲು ಎದುರಾಗುತ್ತದೆ.

ಈ ವಿಧಾನದಲ್ಲಿ ವಿದ್ಯಾರ್ಥಿಗಳಲ್ಲಿ ಅಸಮಾನತೆ ಹೆಚ್ಚುವ ಸಾಧ್ಯತೆಗಳಿವೆ. ಪಠ್ಯಪುಸ್ತಕ ಅಥವಾ ಅತ್ಯುತ್ತಮ ಅಧ್ಯಯನ ಸಾಮಗ್ರಿ ಎಲ್ಲರಿಗೂ ಲಭ್ಯವಾಗದಿರುವ ಸಾಧ್ಯತೆಗಳಿವೆ.

ಹಣಕೊಟ್ಟು ಉತ್ತಮ ಅಧ್ಯಯನ ಸಾಮಗ್ರಿ ಕೊಂಡುಕೊಳ್ಳುವ ಸಾಮರ್ಥ್ಯ ಇರುವ ವಿದ್ಯಾರ್ಥಿಗಳು ತಮ್ಮ ಸಹಪಾಠಿಗಳಿಗಿಂತ ಹೆಚ್ಚು ಅಂಕಗಳಿಸುವ ಸಾಧ್ಯತೆಗಳು ಇರುವುದರಿಂದ ಸೌಲಭ್ಯ ವಂಚಿತ ವಿದ್ಯಾರ್ಥಿಗಳಿಗೆ ಅನ್ಯಾಯವಾಗಲಿದೆ. ವಿದ್ಯಾರ್ಥಿಗಳು ಪುಸ್ತಕಗಳಿಂದ ಇಲ್ಲವೇ ಅನಧಿಕೃತ ಪಠ್ಯಪೂರಕ ಸಾಮಗ್ರಿಯಿಂದ ವಾಕ್ಯಗಳನ್ನು ಯಥಾವತ್ತಾಗಿ ಬಳಸುವುದರಿಂದ ಕೃತಿಚೌರ್ಯದ ಸಾಧ್ಯತೆ ಹೆಚ್ಚಿದೆ. ಇದರಿಂದಾಗಿ ಸಾಗಾಣಿಕೆಯ ಸಮಸ್ಯೆ ಕೂಡಾ ಉಂಟಾಗಬಹುದು. ತೆರೆದ ಪುಸ್ತಕ ಪರೀಕ್ಷೆಗಾಗಿ ವಿದ್ಯಾರ್ಥಿಗಳು ಪಠ್ಯಪುಸ್ತಕದೊಂದಿಗೆ ಹೆಚ್ಚಿನ ಅಧ್ಯಯನ ಸಾಮಗ್ರಿಯನ್ನು ಪರೀಕ್ಷಾ ಕೇಂದ್ರಕ್ಕೆ ತರುವ ಅವಶ್ಯಕತೆ ಹೆಚ್ಚಾಗಲಿದ್ದು ಅವುಗಳನ್ನು ಸಾಗಿಸುವುದು ತಲೆನೋವಿನ ಸಂಗತಿಯಾಗಬಹುದು.

## ಸಮಸ್ಯೆಗಳಿಗೆ ಪರಿಹಾರ ಏನು?

ಪ್ರೊ. ಯಶ್‌ಪಾಲ್ ಸಮಿತಿಯ ವರದಿಯಲ್ಲಿ ಸೂಚಿಸಲಾಗಿರುವ ಒತ್ತಡರಹಿತ ಕಲಿಕೆ ಅಥವಾ ಸಂತಸ ಕಲಿಕೆಯನ್ನು ಪ್ರೋತ್ಸಾಹಿಸಲು ತೆರೆದ ಪುಸ್ತಕ ಮೌಲ್ಯಾಂಕನವನ್ನು ಜಾರಿಗೊಳಿಸಲು ಶಿಕ್ಷಣ ಇಲಾಖೆ ಮುಂದಾಗಿದೆ.

ಪಾಶ್ಚಾತ್ಯ ದೇಶಗಳಲ್ಲಿನ ಕಲಿಕಾ ಮಟ್ಟವನ್ನು ಭಾರತೀಯ ವಿದ್ಯಾರ್ಥಿಗಳೂ ಮುಟ್ಟಬೇಕು ಎಂಬ ಹುಮ್ಮಸ್ಸಿನಲ್ಲಿ ವಿವಿಧ ರೀತಿಯ ಕಠಿಣ ಪರೀಕ್ಷೆಗಳನ್ನು ನಡೆಸುವುದನ್ನು ನಿಲ್ಲಿಸಿ ಕಲಿಕೆಯತ್ತ ಮುಖಮಾಡಲು ಇದರಿಂದ ಅನುಕೂಲವಾಗುತ್ತದೆ. ಕಲಿಕೆಯಲ್ಲಿ ವಿಮರ್ಶಾತ್ಮಕ ವಿಧಾನವನ್ನು ಅಳವಡಿಸುವುದು, ಶಿಕ್ಷಕರು ವಿದ್ಯಾರ್ಥಿಗಳೊಂದಿಗೆ ಸಮಾಲೋಚನೆ ನಡೆಸಿ, ಕಲಿಕೆಯನ್ನು ಆಪ್ತವಾಗಿಸಬೇಕು ಮತ್ತು ಕೇವಲ ಪಠ್ಯಕ್ರಮವನ್ನು ಪೂರ್ತಿಗೊಳಿಸಿ ಪರೀಕ್ಷೆಗೆ ಸಿದ್ಧಗೊಳಿಸುವುದನ್ನು ಕೈಬಿಡಬೇಕು ಎಂಬುದು ಇದರ ಸಾರಾಂಶವಾಗಿದೆ.

ತೆರೆದ ಪುಸ್ತಕ ಮೌಲ್ಯಾಂಕನದ ಗರಿಷ್ಠ ಪ್ರಯೋಜನ ಪಡೆದುಕೊಳ್ಳಲು ಪಠ್ಯಕ್ರಮದಲ್ಲಿರುವ ಪರಿಕಲ್ಪನೆಗಳನ್ನ ಅರ್ಥಮಾಡಿಕೊಳ್ಳುವಂತೆ ಮತ್ತು ಸೂಕ್ತ ಸಮಯದಲ್ಲಿ ಅದನ್ನು ಹುಡುಕಿ ಸ್ವಂತ ವಾಕ್ಯಗಳಲ್ಲಿ ಉತ್ತರಿಸುವಂತೆ ವಿದ್ಯಾರ್ಥಿಗಳನ್ನು ತರಬೇತುಗೊಳಿಸಬೇಕು. ಅಂಕಗಳಿಕೆಯ ಜೊತೆಗೆ ಸಂತಸ ಕಲಿಕೆಗೆ ಆದ್ಯತೆ ನೀಡಬೇಕು. ಸಾಂಪ್ರದಾಯಿಕ ಚಾಕ್ ಅಂಡ್ ಟಾಕ್ ವಿಧಾನವನ್ನು ಬದಿಗಿರಿಸಿ, ಗಿಳಿಪಾಠದ ಗೀಳನ್ನು ತೊರೆದು, ಹೊಸ ರೀತಿಯಲ್ಲಿ ಪಠ್ಯಕ್ರಮದಲ್ಲಿನ ಪರಿಕಲ್ಪನೆಗಳನ್ನು ವಿವರಿಸಿ, ಅದಕ್ಕೆ ಸೂಕ್ತವಾದ ಪ್ರಶ್ನೆಗಳನ್ನು, ಪ್ರಯೋಗಗಳನ್ನು ರೂಪಿಸುವಂತೆ ಶಿಕ್ಷಕರನ್ನು ತರಬೇತುಗೊಳಿಸಬೇಕು.

ಬಹುಶಃ ತೆರೆದ ಪುಸ್ತಕ ಮೌಲ್ಯಾಂಕನ ಎಂದರೆ 'ಕಾಪಿ ಹೊಡೆಯುವುದು', 'ನೋಡಿಕೊಂಡು ಬರೆದು ಪಾಸುಮಾಡುವುದು', ಎಂಬ ಉಡಾಫೆಯನ್ನು ತೊರೆದು ಕಲಿಕೆಯ ಗುಣಮಟ್ಟವನ್ನು ಖಾತ್ರಿಮಾಡಿಕೊಳ್ಳಲು ಇರುವ ನೂತನ ವಿಧಾನ ಎಂದು ಪರಿಗಣಿಸಿ, ಪಾಠಗಳಿಗೆ ಜೀವ ತುಂಬುವ 'ಶಿಕ್ಷಕರು' ಭವಿಷ್ಯದ ಸಾಧಕರನ್ನು ಸೃಷ್ಟಿಸಬಲ್ಲರು, ಅಲ್ಲವೇ?

## ವಿದ್ಯಾರ್ಥಿ ವೇತನ ಕೈಪಿಡಿ

### ಟಾಟಾ ಕ್ಯಾಪಿಟಲ್ ಪಂಖ್

ಟಾಟಾ ಕ್ಯಾಪಿಟಲ್ ಲಿಮಿಟೆಡ್‌ನ ಉಪಕ್ರಮವಾಗಿದ್ದು, ಸಮಾಜದಲ್ಲಿ ಆರ್ಥಿಕವಾಗಿ ಹಿಂದುಳಿದ ವರ್ಗಕ್ಕೆ ಸೇರಿದ ವಿದ್ಯಾರ್ಥಿಗಳಿಗೆ ತಮ್ಮ ಶೈಕ್ಷಣಿಕ ಕನಸುಗಳನ್ನು ಈಡೇರಿಸಿಕೊಳ್ಳಲು ಹಣಕಾಸಿನ ನೆರವನ್ನು ನೀಡುವ ಗುರಿ ಹೊಂದಿದೆ.

**ಅರ್ಹತೆ:** ಪ್ರಸ್ತುತ 11, 12ನೇ ತರಗತಿಗಳಲ್ಲಿರುವ, ಸಾಮಾನ್ಯ ಪದವಿ (ಬಿ.ಕಾಂ., ಬಿ.ಎಸ್‌ಸಿ, ಬಿಎ ಇತ್ಯಾದಿ), ಡಿಪ್ಲೊಮಾ ಮತ್ತು ಐಟಿಐ ಕೋರ್ಸ್‌ಗಳನ್ನು ಅಭ್ಯಾಸ ಮಾಡುತ್ತಿರುವ ಭಾರತೀಯ ವಿದ್ಯಾರ್ಥಿಗಳು ಅರ್ಹರಾಗಿರುತ್ತಾರೆ.

ಅರ್ಜಿದಾರರು ತಮ್ಮ ಹಿಂದಿನ ತರಗತಿಯಲ್ಲಿ ಕನಿಷ್ಠ ಶೇ 60ರಷ್ಟು ಅಂಕಗಳನ್ನು ಗಳಿಸಿರಬೇಕು. ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯವು ಎಲ್ಲಾ ಮೂಲಗಳಿಂದ ₹ 2.5 ಲಕ್ಷ ಅಥವಾ ಅದಕ್ಕಿಂತ ಕಡಿಮೆ ಇರಬೇಕು.

**ಆರ್ಥಿಕ ಸಹಾಯ:** ₹ 10 ರಿಂದ ₹ 12 ಸಾವಿರ ಅಥವಾ ಕೋರ್ಸ್ ಶುಲ್ಕದ ಶೇ 80ರಷ್ಟು ಪೂರೈಕೆ

**ಅರ್ಜಿ ಸಲ್ಲಿಸಲು ಕೊನೆ ದಿನ:** 15-09-2024

**ಅರ್ಜಿ ಸಲ್ಲಿಸುವ ವಿಧಾನ:** ಆನ್‌ಲೈನಲ್ಲಿ ಅರ್ಜಿ ಹಾಕಿ.

**ಹೆಚ್ಚಿನ ಮಾಹಿತಿಗೆ:** Short Url:www.b4s.in/praja/TCPS27

### ಕೋಟಕ್ ಲೈಫ್ ಇನ್ಶೂರೆನ್ಸ್

ವಾಣಿಜ್ಯ ವಿಭಾಗದಲ್ಲಿ ತಮ್ಮ ಸ್ನಾತಕಪೂರ್ವ ವಿದ್ಯಾಭ್ಯಾಸ ಮುಂದುವರಿಸಲು ಆರ್ಥಿಕ ಸಹಕಾರವನ್ನು ನೀಡಲು ಕೋಟಕ್ ಲೈಫ್ ಇನ್ಶೂರೆನ್ಸ್ ಕಂಪನಿ ಹಮ್ಮಿಕೊಂಡಿರುವ ಯೋಜನೆಯಾಗಿದೆ.

**ಅರ್ಹತೆ:** ನಿರ್ದಿಷ್ಟ ಕಾಲೇಜುಗಳಲ್ಲಿ ದಾಖಲಾಗಿರುವ ಬಿ.ಕಾಂ ಮೊದಲ ವರ್ಷದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಅರ್ಜಿದಾರರು 10 ಮತ್ತು 12ನೇ ತರಗತಿಗಳಲ್ಲಿ ಶೇ 65ರಷ್ಟು ಅಂಕ ಗಳಿಸಿರಬೇಕು. ವಾರ್ಷಿಕ ಆದಾಯ ₹ 3,60,000ದ ಮಿತಿಯಲ್ಲಿರಬೇಕು.

**ಆರ್ಥಿಕ ಸಹಾಯ:** ₹ 30,000

**ಅರ್ಜಿ ಸಲ್ಲಿಸಲು ಕೊನೆ ದಿನ:** 31-07-2024

**ಅರ್ಜಿ ಸಲ್ಲಿಸುವ ವಿಧಾನ:** ಆನ್‌ಲೈನಲ್ಲಿ ಅರ್ಜಿ ಹಾಕಿ.

**ಹೆಚ್ಚಿನ ಮಾಹಿತಿಗೆ:** Short Url:www.b4s.in/praja/KLISP2

### ಆಧಾರ್ ಕೌಶಲ್

ಅಂಗವಿಕಲ ವಿದ್ಯಾರ್ಥಿಗಳು ತಮ್ಮ ಶೈಕ್ಷಣಿಕ ಸೌಲಭ್ಯವನ್ನು ಪಡೆದುಕೊಳ್ಳಲು ಆಧಾರ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ (ಎಎಚ್‌ಎಫ್‌ಎಲ್) ನೀಡುವ ಅವಕಾಶವಾಗಿದೆ.

**ಅರ್ಹತೆ:** ಭಾರತದಾದ್ಯಂತ ಸಾಮಾನ್ಯ ಅಥವಾ ವೃತ್ತಿಪರ ಪದವಿಪೂರ್ವ ಕೋರ್ಸ್‌ಗಳಲ್ಲಿ ಓದುತ್ತಿರುವ ಅಂಗವಿಕಲ ವಿದ್ಯಾರ್ಥಿಗಳು ಅರ್ಹರು. ಹಿಂದಿನ ಶೈಕ್ಷಣಿಕ ವರ್ಷದಲ್ಲಿ ಕನಿಷ್ಠ ಶೇ 60ರಷ್ಟು ಅಂಕಗಳನ್ನು ಗಳಿಸಿರಬೇಕು. ₹ 2.5- 3 ಲಕ್ಷದಷ್ಟು ಒಟ್ಟು ವಾರ್ಷಿಕ ಕುಟುಂಬದ ಆದಾಯ ಹೊಂದಿರುವ ಅರ್ಜಿದಾರರು ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ.

**ಆರ್ಥಿಕ ಸಹಾಯ:** ₹ 10,000 ರಿಂದ ₹ 50,000 ವಿದ್ಯಾರ್ಥಿ ವೇತನ.

**ಅರ್ಜಿ ಸಲ್ಲಿಸಲು ಕೊನೆ ದಿನ:** 23-07-2024

**ಅರ್ಜಿ ಸಲ್ಲಿಸುವ ವಿಧಾನ:** ಆನ್‌ಲೈನಲ್ಲಿ ಅರ್ಜಿ ಹಾಕಿ.

**ಹೆಚ್ಚಿನ ಮಾಹಿತಿಗೆ:** Short Url: www.b4s.in/praja/AKSP1

### ಲೆಗ್ರಾಂಡ್ ಎಂಪವರಿಂಗ್

ಭಾರತದಾದ್ಯಂತ ಬಿ.ಟೆಕ್, ಬಿ.ಇ., ಬಿ.ಆರ್ಕ್. ಅಥವಾ ಇತರ ಹಣಕಾಸು ಅಥವಾ ವಿಜ್ಞಾನದಲ್ಲಿ (ಉದಾಹರಣೆಗೆ ಬಿ.ಎಸ್‌ಸಿ, ಬಿ.ಕಾಂ., ಬಿಬಿಎ ಇತ್ಯಾದಿ ಪದವಿ ಓದುತ್ತಿರುವವರಿಂದ ಅರ್ಜಿಗಳನ್ನು ಆಹ್ವಾನಿಸುತ್ತದೆ.

**ಅರ್ಹತೆ:** ಭಾರತದಾದ್ಯಂತದ ಪ್ರತಿಭಾನ್ವಿತ ಹುಡುಗಿಯರು, ಅಂಗವಿಕಲರು, ಎಲ್‌ಜಿಬಿಟಿಕ್ಯೂ + ವಿದ್ಯಾರ್ಥಿಗಳು, ಕೋವಿಡ್ ಪೀಡಿತ ಕುಟುಂಬದಿಂದ ಬಂದ, ಒಬ್ಬರೇ ಪೋಷಕರಿರುವ ಅಥವಾ ಅನಾಥ ವಿದ್ಯಾರ್ಥಿಗಳನ್ನು ವಿಶೇಷ ವರ್ಗವೆಂದು ಪರಿಗಣಿಸಲಾಗುತ್ತದೆ.

ಅರ್ಜಿದಾರರು 2023-24ನೇ ಸಾಲಿನಲ್ಲಿ 12ನೇ ತರಗತಿ ಉತ್ತೀರ್ಣರಾಗಿರಬೇಕು. ವಿದ್ಯಾರ್ಥಿನಿಯರು 10 ಮತ್ತು 12ನೇ ತರಗತಿ ಪರೀಕ್ಷೆಗಳಲ್ಲಿ ಕನಿಷ್ಠ ಶೇ 70ರಷ್ಟುಅಂಕಗಳನ್ನು ಪಡೆದಿರಬೇಕು.

ವಿಶೇಷ ವರ್ಗದ ವಿದ್ಯಾರ್ಥಿಗಳು 10 ಮತ್ತು 12ನೇ ತರಗತಿ ಪರೀಕ್ಷೆಗಳಲ್ಲಿ ಶೇ 60ರಷ್ಟು ಅಂಕಗಳನ್ನು ಪಡೆದಿರಬೇಕು. ವಿನಾಯಿತಿಗಳನ್ನು ಪರಿಗಣಿಸಬಹುದು. ಎಲ್ಲಾ ಮೂಲಗಳಿಂದ ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯವು ₹ 5,00,000 ಕ್ಕಿಂತ ಕಡಿಮೆಯಿರಬೇಕು. ವಿಶೇಷ ವರ್ಗದ ವಿದ್ಯಾರ್ಥಿಗಳಿಗೆ ಆದ್ಯತೆ ನೀಡಲಾಗುವುದು.

**ಆರ್ಥಿಕ ಸಹಾಯ:** ಶೈಕ್ಷಣಿಕ ಕಾರ್ಯಕ್ಷಮತೆಯ ಆಧಾರದ ಮೇಲೆ ಕೋರ್ಸ್ ಪೂರ್ಣಗೊಳ್ಳುವವರೆಗೆ ವಿದ್ಯಾರ್ಥಿನಿಯರಿಗೆ ಶೇ 60ರಷ್ಟು ಕೋರ್ಸ್ ಶುಲ್ಕವನ್ನು ವರ್ಷಕ್ಕೆ ₹ 60,000ದವರೆಗೆ ನೀಡಲಾಗುತ್ತದೆ.


ವಿಶೇಷ ವರ್ಗದ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಕಾರ್ಯಕ್ಷಮತೆಯ ಆಧಾರದ ಮೇಲೆ ಕೋರ್ಸ್ ಪೂರ್ಣಗೊಳ್ಳುವವರೆಗೆ ವರ್ಷಕ್ಕೆ ₹ 1,00,000ದವರೆಗೆ ಅಂದರೆ ಶೇ 80ರಷ್ಟು ಶುಲ್ಕ ನೀಡಲಾಗುತ್ತದೆ. **ಅರ್ಜಿ ಸಲ್ಲಿಸಲು ಕೊನೆ ದಿನ:** 15-07-2024.

**ಅರ್ಜಿ ಸಲ್ಲಿಸುವ ವಿಧಾನ:** ಆನ್‌ಲೈನಲ್ಲಿ ಅರ್ಜಿ ಹಾಕಿ.

**ಹೆಚ್ಚಿನ ಮಾಹಿತಿಗೆ:** Short Url: www.b4s.in/praja/LFLS9

# ನೀಟ್ ಪರೀಕ್ಷೆಗೆ ಸಿದ್ಧತೆ ಹೇಗಿರಬೇಕು?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ



ಪ್ರದೀಪ್ ಕುಮಾರ್ ವಿ.

- **ಸರ್, ನೀಟ್ ಪರೀಕ್ಷೆಗೆ ಸಿದ್ಧತೆ ನಡೆಸುವ ಬಗ್ಗೆ ಮಾಹಿತಿ ಕೊಡಿ.**

**ಹೆಸರು,** ಊರು ತಿಳಿಸಿಲ್ಲ.

ನೀಟ್ (ನ್ಯಾಷನಲ್ ಎಲಿಜಿಬಿಲಿಟಿ ಅಂಡ್ ಎಂಟ್ರೆನ್ಸ್ ಟೆಸ್ಟ್) ಪರೀಕ್ಷೆ ಅತ್ಯಂತ ಸ್ಪರ್ಧಾತ್ಮಕವಾಗಿರುತ್ತದೆ. ಈ ಸಲಹೆಗಳನ್ನು ಗಮನಿಸಿ:

- ಹಿಂದಿನ ವರ್ಷಗಳ ಕಟ್‌ಆಫ್ ರ‍್ಯಾಂಕಿಂಗ್ ಮಾಹಿತಿಯನ್ನು ವಿಶ್ಲೇಷಿಸಿ, ನಿಮ್ಮ ಆದ್ಯತೆಯ ಅನುಸಾರ, ನಾನಾ ಕಾಲೇಜುಗಳಿಗೆ ಬೇಕಾಗಬಹುದಾದ ರ‍್ಯಾಂಕ್ ಮತ್ತು ಅಂಕಗಳ ಗುರಿಯನ್ನು ನಿಗದಿಪಡಿಸಿ.
- ನಿಮ್ಮ ಸಾಮರ್ಥ್ಯ ಮತ್ತು ದೌರ್ಬಲ್ಯಗಳನ್ನು ಗಮನದಲ್ಲಿಟ್ಟುಕೊಂಡು, ಖುದ್ದಾಗಿ ಅಥವಾ ಕೋಚಿಂಗ್ ಮೂಲಕ ತಯಾರಾಗಲು, ಸೂಕ್ತವಾದ ಕಾರ್ಯತಂತ್ರವನ್ನು ರೂಪಿಸಿ.
- ವಿಷಯಸೂಚಿಯ ಪ್ರಕಾರ ಮತ್ತು ಕಳೆದ ವರ್ಷಗಳ ಪ್ರಶ್ನೆಪತ್ರಿಕೆಗಳನ್ನು ಗಮನಿಸಿ, ಅಣಕು-ಪರೀಕ್ಷೆ ಆಧಾರಿತ ತಯಾರಿಯನ್ನು, ನಿರಂತರವಾಗಿ ಮಾಡುತ್ತಿರಬೇಕು.
- ಪರೀಕ್ಷೆಯಲ್ಲಿ ಯಶಸ್ವಿಯಾಗಲು, ನಿಗದಿತ ವೇಳಾಪಟ್ಟಿಯಂತೆ ಸಮಗ್ರವಾದ ಓದುವಿಕೆ ಇರಬೇಕು. ಮನೆಯಲ್ಲಿ ಓದುವಾಗ ಕಣ್ಣಿಗೂ, ಮನಸ್ಸಿಗೂ ತರಬೇತಿಯ ಅಗತ್ಯವಿರುತ್ತದೆ.
- ಹಾಗೂ, ಓದಿದ ವಿಷಯಗಳು ದೀರ್ಘಾವಧಿ ಸ್ಮರಣೆಯಲ್ಲಿರಬೇಕಾದರೆ, ಓದುವಿಕೆ ಪರಿಣಾಮಕಾರಿಯಾಗಿರಬೇಕು.

ಓದುವಿಕೆಯ ಕಾರ್ಯತಂತ್ರಗಳಲ್ಲಿ ಓದುವ ಪ್ರಕ್ರಿಯೆಯ ಜೊತೆ ಸಮೀಕ್ಷೆ, ಪ್ರಶ್ನಿಸುವಿಕೆ, ಪುನರುಚ್ಚಾರಣೆ ಮತ್ತು ಪುನರಾವರ್ತನೆ ಇರಬೇಕು.

ಈ ಎಲ್ಲಾ ಕಾರ್ಯತಂತ್ರಗಳ ಜೊತೆಗೆ ಸಮಯದ ನಿರ್ವಹಣೆ, ಏಕಾಗ್ರತೆ, ಸಾಕಷ್ಟು ಪರಿಶ್ರಮ, ದೃಢತೆ, ಗೆಲ್ಲುವ ಆಶಾಭಾವನೆ ಅತ್ಯಗತ್ಯ. ಪರಿಣಾಮಕಾರಿ ಓದುವಿಕೆಯ ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ: https://www.youtube.com/watch?v=3PzmKRaJHmk

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್‌ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.inಕ್ಕೆ ಕಳಿಸಬಹುದು.

# ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ




## ಎಸ್ಸೆಸ್ಸೆಲ್ಸಿ-ಸಮಾಜವಿಜ್ಞಾನ

### ಸಮಾಜ ವಿಜ್ಞಾನ : ಇತಿಹಾಸ

### ಅಧ್ಯಾಯ-2 ಬ್ರಿಟಿಷ್ ಆಳ್ವಿಕೆಯ ವಿಸ್ತರಣೆ

ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ಭರ್ತಿ ಮಾಡಿ.

1. ಮೊದಲನೇ ಆಂಗ್ಲೋ-ಮರಾಠ ಯುದ್ಧದ ಅಂತ್ಯದಲ್ಲಿ ಮರಾಠರು ಮತ್ತು ಬ್ರಿಟಿಷರ ಮಧ್ಯ ______________ ಒಪ್ಪಂದ ಆಯಿತು.
2. ಸಹಾಯಕ ಸೈನ್ಯ ಪದ್ಧತಿಯನ್ನು ಜಾರಿಗೆ ತಂದವನು ______________.
3. ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿಯನ್ನು ______________ ರಲ್ಲಿ ಜಾರಿಗೆ ತರಲಾಯಿತು.
4. ದತ್ತು ಮಕ್ಕಳಿಗೆ ಹಕ್ಕಿಲ್ಲವೆಂಬ ನೀತಿಯನ್ನು ಜಾರಿಗೆ ತಂದವನು ______________

ಉತ್ತರ:- 1) ಸಾಲ್‌ಬಾಯ್ ಒಪ್ಪಂದವನ್ನು 2) ವೆಲ್ಲೆಸ್ಲಿ 3) 1848 4) ಡಾಲ್‌ಹೌಸಿ

ಹೆಚ್ಚಿನ ಪ್ರಶ್ನೆಗಳು

5) ಬಕ್ಸಾರ್ ಕದನದಲ್ಲಿ ಸೋತು ಬ್ರಿಟಿಷರ ಆಶ್ರಯದಲ್ಲಿದ್ದ ಮೊಗಲ್ ಚಕ್ರವರ್ತಿ ಎರಡನೇ ಷಾ ಆಲಂನನ್ನು .........ರು ಕರೆತಂದು ಮತ್ತೆ ದೆಹಲಿಯ ಸಿಂಹಾಸನದಲ್ಲಿ ಕುಳ್ಳಿರಿಸಿದರು

ಉತ್ತರ:- ಮರಾಠ

6) ಸಹಾಯಕ ಸೈನ್ಯ ಪದ್ಧತಿಯ ನಿಬಂಧನೆಗೆ ಒಳಗಾದ ಮೊದಲ ರಾಜ್ಯ ............................ .

ಉತ್ತರ:- ಹೈದರಾಬಾದ್

7) ಮರಾಠ ಮನೆತನಗಳ ನಾಯಕರ ನಡುವಿನ ಸಂಘರ್ಷವೇ ............................ ಯುದ್ಧಕ್ಕೆ ಕಾರಣವಾಯಿತು

ಉತ್ತರ:- ಎರಡನೇ ಆಂಗ್ಲೋ-ಮರಾಠ ಯುದ್ಧ

8) ಪೇಶ್ವೆಯು ..................ಒಪ್ಪಂದಕ್ಕೆ ಸಹಿ ಹಾಕುವ ಮೂಲಕ ಸಹಾಯಕ ಸೈನ್ಯ ಪದ್ಧತಿಯನ್ನು ಒಪ್ಪಿದನು. ಪೇಶ್ವೆಯು ಸಹಾಯಕ ಸೈನ್ಯ ಪದ್ಧತಿಯನ್ನು ಒಪ್ಪಿದ್ದನು

ಉತ್ತರ:- ಬೆಸ್ಸಿನ್

9) 1839ರಲ್ಲಿ ರಣಜಿತ್ ಸಿಂಗನು ಮರಣ ಹೊಂದಿದ ನಂತರ ಪಂಜಾಬಿನಲ್ಲಿ ರಾಜಕೀಯ ಅರಾಜಕತೆ ತಲೆ ಎತ್ತಿತು. ..................ರ 'ನಿರಂತರ ಮೈತ್ರಿ ಒಪ್ಪಂದ'ವನ್ನು ಉಲ್ಲಂಘಿಸಿ ಪಂಜಾಬನ್ನು ಆಕ್ರಮಿಸಲು ಬ್ರಿಟಿಷರು ಸಂಚು ರೂಪಿಸಿದರು.

ಉತ್ತರ:- 1809

10) 1780ರಲ್ಲಿ ಜನಿಸಿದ ರಣಜಿತ್ ಸಿಂಗನು ಸಿಖ್‌ರ 12 ಮಿಸ್ಲ್ (ಒಕ್ಕೂಟ)ಗಳಲ್ಲಿ ಒಂದಾದ ..................ಮಿಸ್ಲ್‌ನ ನಾಯಕ ಮಹಾಸಿಂಗ್‌ನ ಮಗ.

ಉತ್ತರ:- ಸುಖರ್ ಚಾಕೀಯಾ

11) ರಣಜಿತ್ ಸಿಂಗನು ..................ನಲ್ಲಿ ಫಿರಂಗಿಗಳನ್ನು ತಯಾರಿಸಲು ಎರಕ ಹೊಯ್ಯುವ ಕಾರ್ಖಾನೆಯನ್ನು ತೆರೆದನು.

ಉತ್ತರ:- ಲಾಹೋರ್

ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ

1) ಮೊದಲ ಆಂಗ್ಲೋ-ಮರಾಠ ಯುದ್ಧ ಬಗ್ಗೆ ಬರೆಯಿರಿ

ಉತ್ತರ: ಬಕ್ಸಾರ್ ಕದನದಲ್ಲಿ ಸೋತು ಬ್ರಿಟಿಷರ ಆಶ್ರಯದಲ್ಲಿದ್ದ ಮೊಗಲ್ ಚಕ್ರವರ್ತಿ ಎರಡನೇ ಷಾ ಆಲಂನನ್ನು ಮರಾಠರು ಕರೆತಂದು ಮತ್ತೆ ದೆಹಲಿಯ ಸಿಂಹಾಸನದಲ್ಲಿ ಕುಳ್ಳಿರಿಸಿದರು. ಚಕ್ರವರ್ತಿಯು ಮೊದಲು ಬ್ರಿಟಿಷರಿಗೆ ನೀಡಿದ್ದ ಕೋರ ಮತ್ತು ಅಲಹಾಬಾದ್‌ಗಳನ್ನು ಮರಾಠರಿಗೆ ಕೊಟ್ಟನು. ಇದರಿಂದ ಮರಾಠರು ಮತ್ತು ಬ್ರಿಟಿಷರ ನಡುವೆ ವೈರತ್ವವು ಮನೆ ಮಾಡಿತು. ಮರಾಠರ ಬಲಿಷ್ಠ ಪೇಶ್ವೆ ಮಾಧವರಾವ್ ಇದೇ ಸಮಯದಲ್ಲಿ ತೀರಿಕೊಂಡದ್ದು ಮರಾಠರಿಗೆ ತುಂಬಲಾರದ ನಷ್ಟವಾಯಿತು. ಪೇಶ್ವೆಯ ಸ್ಥಾನಕ್ಕೆ ಅವನ ತಮ್ಮ ನಾರಾಯಣ ರಾಯನು ಬಂದನಾದರೂ ಅವನನ್ನು ಅವನ ಚಿಕ್ಕಪ್ಪ ರಘೋಬ(ರಘುನಾಥ ರಾವ್)ನು ಕೊಲೆ ಮಾಡಿದನು. ಇದರಿಂದ ಪೇಶ್ವೆಯ ಸ್ಥಾನಕ್ಕೆ ಕಲಹ ಏರ್ಪಟ್ಟಿತು. ನಾನಾ ಫಡ್ನವೀಸ್ ನೇತೃತ್ವದಲ್ಲಿ ಪೇಶ್ವೆ ಸ್ಥಾನಾಕಾಂಕ್ಷಿಯಾದ ರಘೋಬನ ಬದಲು ನಾರಾಯಣರಾಯನ ಮಗ ಎರಡನೇ ಮಾಧವರಾವ್‌ಗೆ ಮರಾಠ ಒಕ್ಕೂಟವು ಪಟ್ಟಕಟ್ಟಿತು. ಮರಾಠ ಮನೆತನಗಳಿಂದ ನಿರೀಕ್ಷಿತ ಬೆಂಬಲ ಸಿಗದ ರಘೋಬನು ಬ್ರಿಟಿಷರ ಬೆಂಬಲ ಕೋರಿದನು. ಬ್ರಿಟಿಷರು ಈ ಸಂದರ್ಭವನ್ನು ತಮ್ಮ ಲಾಭಕ್ಕೆ ಬಳಸಿಕೊಳ್ಳಲು ಯೋಚಿಸಿದರು. ಬ್ರಿಟಿಷರು ಮತ್ತು ಮರಾಠ ಒಕ್ಕೂಟಗಳ ನಡುವೆ 1775-1782ರವರೆಗೆ ನಡೆದ ದೀರ್ಘ ಯುದ್ಧದಲ್ಲಿ ಮರಾಠರು ಪ್ರಾರಂಭಿಕ ಯಶಸ್ಸನ್ನು ಸಾಧಿಸಿದರೂ, ಅಂತಿಮವಾಗಿ ಅಹಮದಾಬಾದ್ ಅನ್ನು ಕಳೆದುಕೊಂಡರು. ಮರಾಠ ಒಕ್ಕೂಟವು ಯುದ್ಧ ಮುಂದುವರೆಸಲಾಗದೇ ಬ್ರಿಟಿಷರೊಂದಿಗೆ ಸಾಲ್‌ಬಾಯ್ ಒಪ್ಪಂದವನ್ನು ಮಾಡಿಕೊಂಡಿತು. ಎರಡನೇ ಮಾಧವರಾವನನ್ನು ಪೇಶ್ವೆಯಾಗಿ ನೇಮಿಸಲಾಯಿತು

1) ಸಹಾಯಕ ಸೈನ್ಯ ಪದ್ಧತಿ ನಿಬಂಧನೆಗಳು ಯಾವುವು?

ಉತ್ತರ: ಭಾರತೀಯ ರಾಜ್ಯಗಳನ್ನು ನಿಯಂತ್ರಣಕ್ಕೆ ಒಳಪಡಿಸಿಕೊಳ್ಳುವ ಸಲುವಾಗಿ ಸಹಾಯಕ ಸೈನ್ಯ ಪದ್ಧತಿ ಎಂಬ ನೀತಿಯನ್ನು ವೆಲ್ಲೆಸ್ಲಿಯು 1798ರಲ್ಲಿ ಜಾರಿಗೆ ತಂದನು. ಸಹಾಯಕ ಸೈನ್ಯ ಪದ್ಧತಿಯು ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿ ಮತ್ತು ಭಾರತೀಯ ರಾಜ್ಯಗಳ ನಡುವಿನ ಒಂದು ಸೈನಿಕ ಒಪ್ಪಂದವಾಗಿದೆ. ಸಹಾಯಕ ಸೈನ್ಯ ಪದ್ಧತಿಯ ನಿಬಂಧನೆಗಳು:

1. ಭಾರತೀಯ ರಾಜನು ಬ್ರಿಟಿಷ್ ಸೈನಿಕ ತುಕಡಿಯನ್ನು ತನ್ನ ರಾಜ್ಯದಲ್ಲಿ ಇರಿಸಿಕೊಳ್ಳಬೇಕು.
2. ಸೇನೆಯ ವೇತನ ಮತ್ತು ನಿರ್ವಹಣೆಯ ವೆಚ್ಚವನ್ನು ಸಂಬಂಧಪಟ್ಟ ರಾಜ್ಯವೇ ಭರಿಸಬೇಕು. ಇಲ್ಲವೆ ನಿರ್ದಿಷ್ಟ ಕಂದಾಯ ಪ್ರದೇಶವನ್ನು ಬಿಟ್ಟುಕೊಡಬೇಕು.
3. ರಾಜನ ಆಸ್ಥಾನದಲ್ಲಿ ಬ್ರಿಟಿಷ್ ರೆಸಿಡೆಂಟನನ್ನು ನೇಮಿಸಿಕೊಳ್ಳಬೇಕು.
4. ಬ್ರಿಟಿಷರ ಅನುಮತಿ ಇಲ್ಲದೆ ಆಸ್ಥಾನದಲ್ಲಿ ಯಾವುದೇ ಯುರೋಪಿಯನ್ನರನ್ನು ನೇಮಿಸಿಕೊಳ್ಳುವಂತಿಲ್ಲ
5. ಭಾರತದ ಯಾವುದೇ ರಾಜ್ಯಗಳೊಂದಿಗೆ ಯುದ್ಧ ಅಥವಾ ಸಂಧಾನ ಮಾಡಿಕೊಳ್ಳಬೇಕಾದರೆ ಗವರ್ನರ್ ಜನರಲ್‌ನ ಸಮ್ಮತಿ ಬೇಕು.
6. ಇದಕ್ಕೆ ಪ್ರತಿಯಾಗಿ ಕಂಪನಿಯು ಆ ರಾಜ್ಯಕ್ಕೆ ಆಂತರಿಕ ಮತ್ತು ಬಾಹ್ಯ ರಕ್ಷಣೆಯನ್ನು ಒದಗಿಸುವುದು.

3) ಸಹಾಯಕ ಸೈನ್ಯ ಪದ್ಧತಿಗೆ ಒಳಗಾದ ಮೊದಲ ರಾಜ್ಯ ಯಾವುದು?

ಉತ್ತರ:- ಸಹಾಯಕ ಸೈನ್ಯ ಪದ್ಧತಿಗೆ ಒಪ್ಪಂದಕ್ಕೆ ಸಹಿ ಮಾಡಿದ ಮೊದಲ ರಾಜ್ಯ ಹೈದರಾಬಾದ್ ಸಂಸ್ಥಾನ.

4) ಸಹಾಯಕ ಸೈನ್ಯ ಪದ್ಧತಿಗೆ ಒಳಗಾದ ರಾಜ್ಯಗಳನ್ನು ಹೆಸರಿಸಿ

ಉತ್ತರ:- ಮೈಸೂರು, ಔಡ್, ತಂಜಾವೂರು, ಮರಾಠ, ಆರ್ಕಾಟ್, ಪೂನಾ, ಬಿರಾರ್, ಗ್ವಾಲಿಯರ್ ಮೊದಲಾದ ರಾಜ್ಯಗಳು ಈ ಒಪ್ಪಂದಕ್ಕೆ ಒಳಪಟ್ಟವು

5) ಎರಡನೇ ಆಂಗ್ಲೋ-ಮರಾಠ ಯುದ್ಧದ ಬಗ್ಗೆ ಬರೆಯಿರಿ

(ಮುಂದುವರಿಯುವುದು)

## II PUC MATHS

### DIFFERENTIABILITY

*Multiple Choice questions:-*

2] $\frac{d}{dx}\left(e^{\log(x+\sqrt{x^2+a^2})}\right)$

a) $e^{\log(x+\sqrt{x^2+a^2})}$

b) $1+\frac{x}{\sqrt{x^2+a^2}}$

c) $e^{\log(x+\sqrt{x^2+a^2})}\left(1+\frac{x}{\sqrt{x^2+a^2}}\right)$

d) none of these

Soln:-(b)

3] If $y=\sqrt{\frac{1-x}{1+x}}$, then

a) $\frac{dy}{dx}+y=0$

b) $(1-x^2)\frac{dy}{dx}+y=0$

c) $(1-x^2)\frac{dy}{dx}=y$

d) $(1-x^2)\frac{dy}{dx}+x=0$

Soln:-(b)

4] $\frac{d}{dx}\left(\frac{1-\tan x}{1+\tan x}\right)$ at $x=0$ is

a) 1 b) −1

c) 2 d) −2

Soln:-(b)

*Answer the following:-*

1) Prove that, $\frac{d}{dx}\sin^{-1}-x=\frac{1}{\sqrt{1-x^2}}$, $x\in(-1,\ 1)$ by definition.

Proof :- Let $y=\sin^{-1}x$,

$y\in\left[-\frac{\pi}{2},\ \frac{\pi}{2}\right]$ and $x\in[-1,\ 1]$

$\Rightarrow x=\sin y$

$$\frac{dy}{dx}=\frac{1}{\left(\frac{dx}{dy}\right)}=\frac{1}{\frac{d}{dy}\sin y}$$

$$=\frac{1}{\underset{h\to0}{Lt}\left\{\frac{\sin(y+h)-\sin y}{h}\right\}}$$

$$=\frac{1}{\underset{h\to0}{Lt}\left\{\frac{2\cos\frac{2y+h}{2}\sin\frac{h}{2}}{h}\right\}}$$

$$=\frac{1}{\underset{h\to0}{Lt}\left\{\cos\left(\frac{2y+h}{2}\right)\right\}\left(\frac{\sin\frac{h}{2}}{\frac{h}{2}}\right)}$$

$$=\frac{1}{(\cos y)(1)}$$

$$=\frac{1}{\sqrt{1-\sin^2 y}}$$

$$=\frac{1}{\sqrt{1-x^2}}$$

{+ve sign is taken $\therefore \cos y>0$ for $y\in\left[-\frac{\pi}{2},\frac{\pi}{2}\right]$}

2. Prove that $\frac{d}{dx}\cos^{-1}x=-\frac{1}{\sqrt{1-x^2}}$ by definition.

Proof :- Let $y=\cos^{-1}x$,

$y\in[0,\ \pi]$ and $x\in[-1,\ 1]$

$\Rightarrow x=\cos y$

$$\frac{d}{dx}\cos^{-1}x=\frac{d}{dx}y=\frac{1}{\left(\frac{dx}{dy}\right)}=\frac{1}{\frac{d}{dy}(\cos y)}$$

$$=\frac{1}{\underset{h\to0}{Lt}\left\{\frac{\cos(y+h)-\cos y}{h}\right\}}\quad\text{[from def]}$$

$$=\frac{1}{\underset{h\to0}{Lt}\left\{\frac{-2\sin\frac{2y+h}{2}\sin\frac{h}{2}}{h}\right\}}$$

$$=\frac{1}{(-1)\underset{h\to0}{Lt}\left(\sin\frac{2y+h}{2}\right)\left(\frac{\sin\frac{h}{2}}{\frac{h}{2}}\right)}$$

$=-\frac{1}{\sin y}$, provided $\neq0$ and $y\neq\pi$

$$\therefore\frac{d}{dx}\cos^{-1}x=-\frac{1}{\sqrt{1-\cos^2 y}}$$

$$=-\frac{1}{\sqrt{1-x^2}},$$

[$\because \sin y>0$ for $y\in(0,\pi)$]

3. Prove that $\frac{d}{dx}\tan^{-1}x=\frac{1}{1+x^2}$ by definition.

Proof :- Let $y=\tan^{-1}x$,

$y\in\left[-\frac{\pi}{2},\frac{\pi}{2}\right], x\in R.$

$\Rightarrow x=\tan y$

$$\therefore\frac{d}{dx}\tan^{-1}x=\frac{d}{dx}y=\frac{1}{\left(\frac{dx}{dy}\right)}=\frac{1}{\frac{d}{dy}(\tan y)}$$

$$=\frac{1}{\underset{h\to0}{Lt}\left\{\frac{\tan(y+h)-\tan y}{h}\right\}}$$

$$=\frac{1}{\underset{h\to0}{Lt}\left\{\frac{\sin(y+h-y)}{\cos(y+h)\cos y}\right\}}$$

$$=\frac{1}{\underset{h\to0}{Lt}\left\{\frac{\sin(y+h)\cos y-\cos(y+h)\sin y}{h\cos(y+h)\cos y}\right\}}$$

*(Contd....)*

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

### ಆರ್‌ಟಿಒದಲ್ಲಿ ಅಕ್ರಮವಾಗಿ ಟ್ರ್ಯಾಕ್ಟರ್ ನೋಂದಣಿ ದಂಧೆ

# ಜಪ್ತಿಯಾದ ಟ್ರ್ಯಾಕ್ಟರ್ ವಂಚನೆಯೇ ಅಸ್ತ್ರ

ಪ್ರಜಾವಾಣಿ ವಾರ್ತೆ

**ರಾಮನಗರ:** ನಕಲಿ ಬೋನಫೈಡ್ ಪ್ರಮಾಣಪತ್ರ ಹಾಗೂ ದಾಖಲೆಗಳನ್ನು ಸೃಷ್ಟಿಸಿ ಟ್ರ್ಯಾಕ್ಟರ್‌ಗಳನ್ನು ಅಕ್ರಮವಾಗಿ ನೋಂದಣಿ ಮಾಡುತ್ತಿದ್ದ ಜಾಲವು, ರಾಜ್ಯದ ವಿವಿಧೆಡೆ ಜಪ್ತಿಯಾದ ಹಳೆ ಟ್ರ್ಯಾಕ್ಟರ್‌ಗಳನ್ನು ಗುರಿಯಾಗಿಸಿಕೊಂಡು ಕೃತ್ಯ ಎಸಗಿ, ಕೋಟ್ಯಂತರ ರೂಪಾಯಿ ವಂಚನೆ ಮಾಡಿದೆ.

ದಂಧೆಯು ರಾಮನಗರವಷ್ಟೇ ಅಲ್ಲದೆ ಬೇರೆ ಜಿಲ್ಲೆಗಳ ಕೆಲವು ಪ್ರಾದೇಶಿಕ ಸಾರಿಗೆ ಕಚೇರಿಗಳಿಗೂ (ಆರ್‌ಟಿಒ) ವ್ಯಾಪಿಸಿರುವುದು ಲೋಕಾಯುಕ್ತ ತನಿಖೆಯಿಂದ ಗೊತ್ತಾಗಿದೆ.

ಸದ್ಯ ಬಂಧನಕ್ಕೊಳಗಾಗಿರುವ ಮೂವರ ಪೈಕಿ ಆರ್‌ಟಿಒ ಏಜೆಂಟ್ 'ಟ್ರ್ಯಾಕ್ಟರ್ ಸತೀಶ್' ಮನೆಯಲ್ಲಿ ಅಕ್ರಮ ನೋಂದಣಿಗೆ ಸಂಬಂಧಿಸಿದ ಸುಮಾರು 1500 ಕಡತ ಹಾಗೂ ವಿವಿಧ ಆರ್‌ಟಿಒಗಳಲ್ಲಿ ನೋಂದಣಿಯಾಗಿರುವ ಎರಡು ಸಾವಿರಕ್ಕೂ ಅಧಿಕ ಆರ್.ಸಿ ಕಾರ್ಡ್‌ಗಳು ಸಿಕ್ಕಿವೆ.

ಸಾಲ ಪಡೆದು ಟ್ರ್ಯಾಕ್ಟರ್ ಖರೀದಿಸಿದವರು ಸಾಲವನ್ನು ಸಕಾಲದಲ್ಲಿ ಮರುಪಾವತಿಸದಿದ್ದಾಗ ಫೈನಾನ್ಸ್ ಸಂಸ್ಥೆಯವರು ಅವುಗಳನ್ನು ಜಪ್ತಿ ಮಾಡಿರುತ್ತಾರೆ. ಇಂತಹ ಜಪ್ತಿಯಾದ ಈ ಟ್ರ್ಯಾಕ್ಟರ್‌ಗಳಿಗೆ ಈ ಜಾಲವು, ನಕಲಿ ದಾಖಲೆ ಮತ್ತು ಬೋನಫೈಡ್ ಪ್ರಮಾಣಪತ್ರ ಸೃಷ್ಟಿಸಿ ಅಕ್ರಮವಾಗಿ ಹೊಸ



ಟ್ರ್ಯಾಕ್ಟರ್ ಗಳ ಅಕ್ರಮ ನೋಂದಣಿಗೆ ಸಂಬಂಧಿಸಿದಂತೆ ಆರ್.ಟಿ.ಒ ಏಜೆಂಟ್ ಸತೀಶ್ (ಕೈ ಕಟ್ಟಿ ನಿಂತಿರುವವನು) ಮನೆ ಮೇಲೆ ದಾಳಿ ನಡೆಸಿದ್ದ ಲೋಕಾಯುಕ್ತ ಪೊಲೀಸರು, ಮನೆಯಲ್ಲಿಟ್ಟಿದ್ದ ದಾಖಲೆಗಳನ್ನು ಪರಿಶೀಲನೆ ನಡೆಸಿದರು

ನೋಂದಣಿ ಮಾಡಿಕೊಡುತ್ತಿತ್ತು ಎಂದು ಲೋಕಾಯುಕ್ತ ಮೂಲಗಳು ತಿಳಿಸಿವೆ.

ದಂಧೆಗೆ ಸಂಬಂಧಿಸಿದಂತೆ ಬಂಧಿತ ಆರ್‌ಟಿಒ ಶಿವಕುಮಾರ್ ಮತ್ತು ಪ್ರಥಮ ದರ್ಜೆ ಸಹಾಯಕ ರಚಿತ್ ರಾಜ್ ಇಬ್ಬರೂ, ವಾಹನ ನೋಂದಣಿಗೆ ಸಂಬಂಧಿಸಿದಂತೆ ಇಲಾಖೆಯು ತಮಗೆ ಕೊಟ್ಟಿರುವ ಲಾಗಿನ್ ಐ.ಡಿ ಮತ್ತು ಪಾಸ್‌ವರ್ಡ್ ಅನ್ನು ಸತೀಶ್‌ಗೆ ಕೊಟ್ಟಿದ್ದರು. ಆತನೇ ಎಲ್ಲಾ ಪ್ರಕ್ರಿಯೆಗಳನ್ನು ಮುಗಿಸಿ ತನ್ನ ಬ್ಯಾಂಕ್ ಖಾತೆಯಿಂದಲೇ ಆನ್‌ಲೈನ್ ಮೂಲಕ ಶುಲ್ಕ ತುಂಬುತ್ತಿದ್ದ. ನೋಂದಣಿಗೆ ಸಂಬಂಧಿಸಿದ ಕಡತಗಳನ್ನು ಶಿವಕುಮಾರ್ ಪರಿಶೀಲಿಸದೆಯೇ ಸಹಿ ಹಾಕುವ ಮೂಲಕ ದಂಧೆಯಲ್ಲಿ ಭಾಗಿಯಾಗಿ, ಬರುತ್ತಿದ್ದ ಹಣದಲ್ಲಿ ಪಾಲು ಪಡೆಯುತ್ತಿದ್ದರು ಎಂದು ಮೂಲಗಳು ಹೇಳಿವೆ.

**ಟ್ರ್ಯಾಕ್ಟರ್ ಯಾಕೆ?:** 'ವಾಹನಗಳ ಉತ್ಪಾದನೆಗೆ ಸಂಬಂಧಿಸಿದ ಬಿಎಸ್‌–4 (ಭಾರತ್ ಸ್ಟೇಜ್) ಮತ್ತು ಬಿಎಸ್‌–6 ಟ್ರಾಕ್ಟರ್‌ಗಳಿಗೆ ಅನ್ವಯವಾಗುವುದಿಲ್ಲ. ಹಾಗಾಗಿ, ಆರ್‌ಟಿಒದಲ್ಲಿ ಈ ವಾಹನಗಳ ನೋಂದಣಿಗೆ ಸಂಬಂಧಿಸಿದಂತೆ ನಕಲಿ ದಾಖಲೆಗಳನ್ನು ಸೃಷ್ಟಿಸಿ ಅಪ್ಲೋಡ್ ಮಾಡಿದರೂ ಸಿಸ್ಟಂ ಸ್ವೀಕರಿಸುವುದರಿಂದ ನೋಂದಣಿ ಸುಲಭವಾಗುತ್ತದೆ. ಇದನ್ನೇ ಬಂಡವಾಳ ಮಾಡಿಕೊಂಡು ಅಕ್ರಮ ನೋಂದಣಿ ದಂಧೆ ನಡೆಸಲಾಗಿದೆ' ಎಂದು ನಿವೃತ್ತ ಆರ್.ಟಿ.ಒ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'ಬೇರೆ ವಾಹನಗಳನ್ನು ಈ ರೀತಿ ಅಕ್ರಮವಾಗಿ ನೋಂದಣಿ ಮಾಡಿಸಲು ಸಾಧ್ಯವಿಲ್ಲ. ಯಾಕೆಂದರೆ, ನೋಂದಣಿ ಸಂದರ್ಭದಲ್ಲಿ ಅವುಗಳನ್ನು ತಯಾರಿಸುವ ಕಂಪನಿಯಿಂದಲೇ ತಯಾರಿಕೆಗೆ ಸಂಬಂಧಿಸಿದ ದತ್ತಾಂಶವು ಆರ್‌ಟಿಒ ಕಚೇರಿಗೆ ನೇರವಾಗಿ ಸಿಗುತ್ತದೆ. ನೋಂದಣಿ ಸಂದರ್ಭದಲ್ಲಿ ಮಾಲೀಕ ಮತ್ತು ಫೈನಾನ್ಶಿಯರ್ ಹೆಸರು ಹಾಕಿ ಕೊಡುವುದಷ್ಟೇ ಡೀಲರ್ ಕೆಲಸವಾಗಿರುತ್ತದೆ' ಎಂದು ಹೇಳಿದರು.

**ಮುಖ್ಯಾಂಶಗಳು**

- 'ಟ್ರ್ಯಾಕ್ಟರ್ ಸತೀಶ್' ಮನೆಯಲ್ಲಿ ಅಕ್ರಮ ನೋಂದಣಿಯ 1500 ಕಡತ
- ಏಜೆಂಟ್‌ಗೇ ಪಾಸ್‌ವರ್ಡ್ ನೀಡಿದ್ದ ಆರ್‌ಟಿಒ
- ಟ್ರ್ಯಾಕ್ಟರ್ ರೀತಿ ಬೇರೆ ವಾಹನಗಳ ಅಕ್ರಮ ನೋಂದಣಿ ಸಾಧ್ಯವಿಲ್ಲ

## 'ಸಿಟ್ಟು ಸ್ಕ್ರಿಪ್ಟ್ ಆಗಲಿ; ಕ್ಯಾರೆಕ್ಟರ್ ಅಲ್ಲ'

ಪ್ರಜಾವಾಣಿ ವಾರ್ತೆ



ಹಂಸಲೇಖ

**ಮಂಡ್ಯ:** 'ದರ್ಶನ್ ನನ್ನ ಮಗು ಅಂತ ತಿಳಿದುಕೊಳ್ಳಿ. ಮಗು ತಪ್ಪು ಮಾಡಿದ್ರೆ ತಂದೆ ಎಷ್ಟು ನೋವು ತಿನ್ನುತ್ತಾನೋ, ನಾನೂ ಅಷ್ಟೇ ನೋವು ತಿನ್ನುತ್ತಿದ್ದೇನೆ. ಆತ ಕೊಟ್ಟಿರುವ ಕೊಡುಗೆ ಇದೆಯಲ್ಲ, ಅದರ ಬಗ್ಗೆಯೂ ನಾವು ಗಮನಕೊಡೋಣ' ಎಂದು ಸಂಗೀತ ನಿರ್ದೇಶಕ ಹಂಸಲೇಖ ಹೇಳಿದರು.

ದರ್ಶನ್ ಪ್ರಕರಣದ ಬಗ್ಗೆ ಇಲ್ಲಿ ಮಾಧ್ಯಮದವರ ಪ್ರಶ್ನೆಗೆ ಪ್ರತಿಕ್ರಿಯಿಸಿದರು.

'ಸಿನಿಮಾ ಕಲಾವಿದರಾದವರು ಸಿಟ್ಟನ್ನು ಸ್ಕ್ರಿಪ್ಟ್ ಮಾಡಬೇಕು, ದ್ವೇಷವನ್ನು ಕ್ಯಾರೆಕ್ಟರ್ ಮಾಡಬೇಕು. ನಾವು ಆ ರೀತಿ ಸಿನಿಮಾದಲ್ಲಿ ತೋರಿಸಬೇಕು, ಅಷ್ಟೆ. ನಿಜ ಜೀವನದಲ್ಲಿ ಸ್ಕ್ರಿಪ್ಟನ್ನು ತರಬಾರದು. ನಿಜ ಜೀವನದಲ್ಲಿ ಕ್ಯಾರೆಕ್ಟರ್ ಆಗಬಾರದು. ಇದು ಕಲಾವಿದರ ಕರ್ತವ್ಯ' ಎಂದರು

## ಚಿತ್ರನಗರಿ ನಿರ್ಮಾಣಕ್ಕೆ ಬದ್ಧ: ಸಿ.ಎಂ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ವರನಟ ರಾಜ್‌ಕುಮಾರ್ ಅವರ 'ಚಿತ್ರನಗರಿ' ಕನಸನ್ನು ನನಸಾಗಿಸಲು ಸರ್ಕಾರ ಬದ್ಧವಾಗಿದೆ. ಇದಕ್ಕಾಗಿ ಮೈಸೂರಿನಲ್ಲಿ ನೂರು ಎಕರೆಗೂ ಹೆಚ್ಚು ಜಮೀನು ಒದಗಿಸಿದ್ದು, ಸರ್ಕಾರಿ–ಖಾಸಗಿ ಸಹಭಾಗಿತ್ವದಲ್ಲಿ (ಪಿಪಿಪಿ) ಈ ಯೋಜನೆ ಪೂರ್ಣಗೊಳಿಸುತ್ತೇವೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಭಾನುವಾರ ನಗರದ ಗಾಂಧಿ ಭವನದ ಎದುರುನಿರ್ಮಾಪಕರ ಸಂಘದ ನೂತನ ಕಟ್ಟಡ ಉದ್ಘಾಟಿಸಿ ಅವರು ಮಾತನಾಡಿದರು.

'ಕನ್ನಡ ಚಲನಚಿತ್ರಗಳ ಬೆಳವಣಿಗೆಗೆ ಸರ್ಕಾರ ಮೊದಲಿನಿಂದಲೂ ಎಲ್ಲಾ ರೀತಿಯ ಸಹಾಯವನ್ನು ಮಾಡುತ್ತಾ ಬಂದಿದೆ. ಚಲನಚಿತ್ರ ನಿರ್ಮಾಪಕರಿಗೆ ಇಲ್ಲಿಯವರೆಗೆ ಸ್ವಂತ ಕಟ್ಟಡ ಇರಲಿಲ್ಲ. ಸ್ವಂತ ಕಟ್ಟಡ ನಿರ್ಮಾಣವಾಗಿದ್ದು, ಅದರ ಉದ್ಘಾಟನೆಯನ್ನು ನೆರವೇರಿಸಲು ಸಂತೋಷವಾಗುತ್ತಿದೆ' ಎಂದರು.



ಕರ್ನಾಟಕ ಚಲನಚಿತ್ರ ನಿರ್ಮಾಪಕರ ಸಂಘದ ನೂತನ ಕಟ್ಟಡವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು. ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಎನ್‌.ಎಂ.ಸುರೇಶ್, ಚಲನಚಿತ್ರ ಅಕಾಡೆಮಿ ಅಧ್ಯಕ್ಷ ಸಾಧು ಕೋಕಿಲ ಹಾಜರಿದ್ದರು

'ಸಂಘ ಈತನಕ ಯಾವುದೇ ಆರ್ಥಿಕ ಸಹಾಯವನ್ನು ಕೇಳಿಲ್ಲ. ಆದರೆ ಸರ್ಕಾರ ಸಂಘದ ಬೆಳವಣಿಗೆಗೆ ಅಗತ್ಯ ಆರ್ಥಿಕ ಸಹಾಯ ಮಾಡಿಯೇ ಮಾಡುತ್ತದೆ. ಸರ್ಕಾರದ ವತಿಯಿಂದ ಕನ್ನಡದಲ್ಲಿ ಒಟಿಟಿ ವೇದಿಕೆ ನಿರ್ಮಿಸಲು ಬೇಡಿಕೆಯಿದ್ದು, ಈ ಬಗ್ಗೆ ಪರಿಶೀಲಿಸಿ ಕ್ರಮ ಕೈಗೊಳ್ಳಲಿದೆ. ಕನ್ನಡ ಚಿತ್ರಗಳಿಗೆ ಸರ್ಕಾರ ಎಲ್ಲಾ ರೀತಿಯ ಸಹಾಯ ಮಾಡಲಿದೆ' ಎಂದು ಅವರು ತಿಳಿಸಿದರು.

ನಟರಾದ ಶಿವರಾಜ್‌ಕುಮಾರ್, ಜಗ್ಗೇಶ್, ಚಲನಚಿತ್ರ ಅಕಾಡೆಮಿ ಅಧ್ಯಕ್ಷ ಸಾಧು ಕೋಕಿಲ, ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಎನ್.ಎಂ.ಸುರೇಶ್, ನಿರ್ಮಾಪಕರ ಸಂಘದ ಅಧ್ಯಕ್ಷ ಉಮೇಶ್ ಬಣಕಾರ್ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## 'ಹೆಚ್ಚುವರಿ ಡಿಸಿಎಂ ಹೈಕಮಾಂಡ್‌ಗೆ ಬಿಟ್ಟದ್ದು'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಕೆಪಿಸಿಸಿ ಅಧ್ಯಕ್ಷರನ್ನು ಬದಲಿಸಬೇಕು ಎಂದು ಹೈಕಮಾಂಡ್ ನಾಯಕರಿಗೆ ಅನಿಸಿದರೆ ಬದಲಾಯಿಸುತ್ತಾರೆ' ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

ಸುದ್ದಿಗಾರರ ಜೊತೆ ಭಾನುವಾರ ಮಾತನಾಡಿದ ಅವರು, 'ಬೇರೆ ಬೇರೆ ಸಮುದಾಯದವರು ಸ್ಥಾನ ಕೇಳುವುದು ತಪ್ಪಲ್ಲ. ಆದರೆ, ನಮ್ಮ ಪರ ನಿಲ್ಲುವ ಸಮುದಾಯ ಯಾವುದು ಎಂದು ನೋಡಿ ಹೈಕಮಾಂಡ್ ನಾಯಕರು ನಿರ್ಧಾರ ತೆಗೆದುಕೊಳ್ಳುತ್ತಾರೆ. ಯಾರಿಗೆ, ಯಾವ ಸಮುದಾಯಕ್ಕೆ ಕೊಡಬೇಕೆಂದೂ ಅವರಿಗೆ ಗೊತ್ತಿದೆ' ಎಂದರು.

'ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಚರ್ಚೆ ಬಗ್ಗೆ ನನಗೆ ಗೊತ್ತಿಲ್ಲ. ಆ ರೀತಿ ಏನಾದರೂ ಇದ್ದರೆ ವೀಕ್ಷಕರನ್ನು ಕಳುಹಿಸಿ ಹೈಕಮಾಂಡ್ ಅಭಿಪ್ರಾಯ ಸಂಗ್ರಹಿಸುತ್ತದೆ. ಹೈಕಮಾಂಡ್ ಏನು ಮಾಡುತ್ತೆಂದೂ ಗೊತ್ತಿಲ್ಲ. ಶಾಸಕರು, ಮುಖಂಡರು ತಮ್ಮ ಅಭಿಪ್ರಾಯ ಹೇಳುತ್ತಿದ್ದಾರೆ. ಅವರ ಅಭಿಪ್ರಾಯಗಳೂ ಮುಖ್ಯ' ಎಂದರು.

'ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆಯವರನ್ನೂ ಭೇಟಿ ಮಾಡಿದ್ದೆವು. ರಾಜಕೀಯ ವಿಚಾರಗಳನ್ನೂ ಚರ್ಚೆ ಮಾಡಿದೆವು. ಹೆಚ್ಚುವರಿ ಉಪ ಮುಖ್ಯಮಂತ್ರಿ ಬಗ್ಗೆ ಯಾರೂ ಪ್ರಸ್ತಾಪ ಮಾಡಲಿಲ್ಲ' ಎಂದರು.

'ಹೆಚ್ಚುವರಿ ಉಪ ಮುಖ್ಯಮಂತ್ರಿ ವಿಚಾರ ಹೈಕಮಾಂಡ್‌ಗೆ ಬಿಟ್ಟಿದ್ದು. ಸ್ವಾಮೀಜಿಗಳ ಹೇಳಿಕೆ ತಪ್ಪು ಎಂದು ಹೇಳುವುದಿಲ್ಲ. ಅವರು ಅವರ ಅಭಿಪ್ರಾಯ ಹೇಳಿದ್ದಾರೆ. ಆದರೆ, ಸ್ವಾಮೀಜಿಗಳು ವೇದಿಕೆ, ಸಂದರ್ಭ ನೋಡಿ ಮಾತಾಡಿದರೆ ಒಳ್ಳೆಯದು' ಎಂದರು.

ಉಪ ಮುಖ್ಯಮಂತ್ರಿ ವಿಚಾರದಲ್ಲಿ ಕೆ.ಎನ್. ರಾಜಣ್ಣ ನೀಡಿದ ಹೇಳಿಕೆಗೆ ಪ್ರತಿಕ್ರಿಯಿಸಿದ ಪರಮೇಶ್ವರ, 'ಇದು ಪಕ್ಷದ ಅಧ್ಯಕ್ಷರಿಗೆ ಬಿಟ್ಟಿದ್ದು. ಯಾವ ರೀತಿ ನಿಭಾಯಿಸಬೇಕು ಎಂದು ಅವರಿಗೆ ಗೊತ್ತಿರುತ್ತದೆ' ಎಂದರು.

## ಎಎಪಿ ಪ್ರತಿಭಟನೆ

**ಬೆಂಗಳೂರು:** 'ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ವಿರುದ್ಧ ಇಡಿ, ಸಿಬಿಐ ತನಿಖಾ ಸಂಸ್ಥೆಗಳನ್ನು ದುರುಪಯೋಗಪಡಿಸಿಕೊಂಡು ಕೇಂದ್ರ ಸರ್ಕಾರ ನಿರಂತರ ದೌರ್ಜನ್ಯ, ದಬ್ಬಾಳಿಕೆ ನಡೆಸುತ್ತಿದೆ' ಎಂದು ಆರೋಪಿಸಿ ಆಮ್ ಆದ್ಮಿ ಪಕ್ಷದ ಕಾರ್ಯಕರ್ತರು ಶನಿವಾರ ಪ್ರತಿಭಟನೆ ನಡೆಸಿದರು.

ಎಎಪಿ ರಾಜ್ಯ ಸಂಘಟನಾ ಕಾರ್ಯದರ್ಶಿ ಮೋಹನ್ ದಾಸರಿ, 'ಕೇಂದ್ರ ಸರ್ಕಾರ ಆಮ್ ಆದ್ಮಿ ಪಕ್ಷದ (ಎಎಪಿ) ನಾಯಕರ ವಿರುದ್ಧ ಸುಳ್ಳು ಪ್ರಕರಣಗಳನ್ನು ದಾಖಲಿಸಿ ಜೈಲಿಗೆ ಕಳುಹಿಸಿದೆ. ಅಧಿಕಾರ ದುರುಪಯೋಗಪಡಿಸಿಕೊಂಡು ಎದುರಾಳಿಗಳನ್ನು ಮುಗಿಸಲು ಸಂಚು ಮಾಡುತ್ತಿದೆ ಎಂದು' ಆರೋಪಿಸಿದರು.

'ಅರವಿಂದ ಕೇಜ್ರಿವಾಲ್ ತನಿಖೆಗೆ ಎಲ್ಲಾ ರೀತಿಯ ಸಹಕಾರ ನೀಡಿದ್ದರೂ, ಎರಡು ವರ್ಷದ ಬಳಿಕ ಅವರನ್ನು ಏಕಾಏಕಿ ಬಂಧಿಸಲಾಯಿತು. ತನಿಖಾ ಸಂಸ್ಥೆಗಳು ಈ ರೀತಿ ಸರ್ಕಾರದ ಕೈಗೊಂಬೆಗಳಾಗಿ ಕೆಲಸ ಮಾಡಿದರೆ, ನೀಟ್ ರೀತಿಯ ಹಗರಣಗಳಿಗೆ ನ್ಯಾಯ ಸಿಗುತ್ತದೆಯೇ' ಎಂದು ಪ್ರಶ್ನಿಸಿದರು.

ಎಎಪಿ ರಾಜ್ಯ ಘಟಕದ ಉಪಾಧ್ಯಕ್ಷ ಸುರೇಶ್ ರಾಥೋಡ್, ರಾಜ್ಯ ಮಾಧ್ಯಮ ಸಂಚಾಲಕ ಜಗದೀಶ್ ವಿ. ಸದಂ, ಬೆಂಗಳೂರು ನಗರ ಘಟಕದ ಅಧ್ಯಕ್ಷ ಸತೀಶ್ ಕುಮಾರ್, ಅಲ್ಪ ಸಂಖ್ಯಾತರ ಘಟಕದ ಅಧ್ಯಕ್ಷ ಫರೀದ್, ಬಸವರಾಜ ಮುದಿಗೌಡರ್, ರವಿಕುಮಾರ್, ಉಷಾ ಮೋಹನ್, ಅಶೋಕ್ ಮೃತ್ಯುಂಜಯ, ಜಗದೀಶ್ ಬಾಬು ಭಾಗವಹಿಸಿದ್ದರು.

# ಅಕ್ರಮ ಸಂಬಂಧ ಆರೋಪ ಮಹಿಳೆಗೆ ಥಳಿತ, ಬಂಧನ

**ರಾಯಗಂಜ್ (ಪಿಟಿಐ):** ಅಕ್ರಮ ಸಂಬಂಧ ಹೊಂದಿದ್ದರು ಎನ್ನಲಾದ ಜೋಡಿಯ ಮೇಲೆ ಬರ್ಬರ ಹಲ್ಲೆ ಮಾಡಿರುವ ಕೃತ್ಯ ಕುರಿತ ವಿಡಿಯೊ ಜಾಲತಾಣದಲ್ಲಿ ಹರಿದಾಡಿದ ಹಿಂದೆಯೇ, ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಜೋಡಿಗೆ ವ್ಯಕ್ತಿಯೊಬ್ಬರು ಬಿದಿರಿನ ಕೋಲಿನಿಂದ ತೀವ್ರವಾಗಿ ಥಳಿಸುತ್ತಿರುವ ದೃಶ್ಯ ವಿಡಿಯೊದಲ್ಲಿದೆ. ಥಳಿಸುತ್ತಿರುವ ವ್ಯಕ್ತಿಯನ್ನು ಉತ್ತರ ದಿನಜ್‌ಪುರ್ ಜಿಲ್ಲೆಯ ಚೋಪ್ರಾದ ಸ್ಥಳೀಯ ಟಿಎಂಸಿ ನಾಯಕ ಎಂದು ಗುರುತಿಸಲಾಗಿದೆ. ವಿಡಿಯೊದ ಅಸಲೀಯತ್ತನ್ನು ಪರಿಶೀಲಿಸಲಾಗಿಲ್ಲ ಎಂದು ಸುದ್ದಿಸಂಸ್ಥೆಯು ತಿಳಿಸಿದೆ.

ಆರೋಪಿ ತಜ್ಮುಲ್ ಅಲಿಯಾಸ್ ಜೆಸಿಬಿ ಎಂಬುವನನ್ನು ಪೊಲೀಸರು ಬಂಧಿಸಿದ್ದಾರೆ.

ವಿಡಿಯೊ ಹರಿದಾಡಿದ ಬೆನ್ನಲ್ಲೇ ವಿರೋಧ ಪಕ್ಷಗಳಾದ ಬಿಜೆಪಿ, ಕಾಂಗ್ರೆಸ್, ಸಿಪಿಎಂ ಪಕ್ಷಗಳು ಮಮತಾ ಬ್ಯಾನರ್ಜಿ ನೇತೃತ್ವದ ರಾಜ್ಯ ಸರ್ಕಾರದ ವಿರುದ್ಧ ಹರಿಹಾಯ್ದಿವೆ. ಆಡಳಿತಾರೂಢ ಟಿಎಂಸಿ ಈ ಕೃತ್ಯದ ಬಗ್ಗೆ ತನಿಖೆ ನಡೆಸಲಾಗುವುದು ಎಂದು ತಿಳಿಸಿದೆ.

ವಿಡಿಯೊ ಆಧರಿಸಿ, ಮಹಿಳೆಯ ಮೇಲೆ ತೀವ್ರವಾಗಿ ಹಲ್ಲೆ ನಡೆಸಿದ ಆರೋಪಿಯನ್ನು ಗುರುತಿಸಿ, ಬಂಧಿಸಲಾಗಿದೆ ಎಂದು ಇಸ್ಲಾಂಪುರ್ ಜಿಲ್ಲಾ ಪೊಲೀಸರು ಹೇಳಿಕೆ ನೀಡಿದ್ದಾರೆ.

ಹಲ್ಲೆಗೊಳಗಾಗಿರುವ ಜೋಡಿಗೆ ರಕ್ಷಣೆ ಒದಗಿಸಲಾಗಿದೆ. ಈ ಕುರಿತು ಸ್ವಯಂಪ್ರೇರಿತ ಪ್ರಕರಣ ದಾಖಲಿಸಿದ್ದು, ತನಿಖೆ ನಡೆಸಲಾಗುತ್ತಿದೆ ಎಂದು ತಿಳಿಸಿದ್ದಾರೆ.

### ವೃತ್ತಿಪರ ಕೋರ್ಸ್ ಸೀಟು ಹಂಚಿಕೆಗಾಗಿ 3 ತಿಂಗಳು ವ್ಯವಸ್ಥೆ

# ರಜೆಯಲ್ಲೂ ಕೆಇಎ ಕಾರ್ಯನಿರ್ವಹಣೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ವೈದ್ಯಕೀಯ, ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಸೀಟು ಹಂಚಿಕೆ ಪ್ರಕ್ರಿಯೆಯನ್ನು ಕ್ಲುಪ್ತ ಸಮಯದಲ್ಲಿ ಪೂರ್ಣಗೊಳಿಸಲು ಮುಂದಾಗಿರುವ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ), ಮುಂದಿನ ಮೂರು ತಿಂಗಳು ಸರ್ಕಾರಿ ರಜಾ ದಿನಗಳಲ್ಲಿಯೂ ಕಾರ್ಯನಿರ್ವಹಿಸಲಿದೆ.

ಈ ಕುರಿತು ಎಲ್ಲ ಸಿಬ್ಬಂದಿಗೆ ಸೂಚನೆ ನೀಡಿರುವ ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್‌. ಪ್ರಸನ್ನ, ಜುಲೈ, ಆಗಸ್ಟ್ ಮತ್ತು ಸೆಪ್ಟೆಂಬರ್ ತಿಂಗಳುಗಳಲ್ಲಿ ಹಬ್ಬದ ದಿನಗಳನ್ನು ಹೊರತುಪಡಿಸಿ ಉಳಿದ ಎಲ್ಲ ದಿನಗಳಲ್ಲಿ ಕಾರ್ಯನಿರ್ವಹಿಸುವಂತೆ ಹೇಳಿದ್ದಾರೆ.



> **ಪ್ರಾಧಿಕಾರದಲ್ಲಿ ಮುಂದಿನ ಮೂರು ತಿಂಗಳು ಕಾರ್ಯಬಾಹುಳ್ಯವಿದೆ. ಈ ಕಾರಣಕ್ಕೆ ಸರ್ಕಾರಿ ರಜಾ ದಿನಗಳಲ್ಲಿಯೂ ಕೆಲಸ ಮಾಡುವಂತೆ ಸಿಬ್ಬಂದಿಗೆ ಸೂಚನೆ ನೀಡಲಾಗಿದೆ**
>
> **ಎಚ್‌. ಪ್ರಸನ್ನ,** ಕಾರ್ಯನಿರ್ವಾಹಕ ನಿರ್ದೇಶಕ, ಕೆಇಎ

'ವಿವಿಧ ಕೋರ್ಸ್‌ಗಳ ಪ್ರವೇಶಕ್ಕೆ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) ನಡೆಸುವುದರ ಜೊತೆಗೆ, ವಿವಿಧ ಇಲಾಖೆಗಳಲ್ಲಿ ಖಾಲಿ ಹುದ್ದೆಗಳಿಗೆ ನೇಮಕಾತಿಗೆ ಸ್ಪರ್ಧಾತ್ಮಕ ಪರೀಕ್ಷೆಗಳನ್ನೂ ನಡೆಸುತ್ತಿದೆ. ಸಿಇಟಿ ನಡೆಸಿ, ಅದರ ಫಲಿತಾಂಶದ ಆಧಾರದಲ್ಲಿ ವಿವಿಧ ಕೋರ್ಸ್‌ಗಳಿಗೆ ವಿದ್ಯಾರ್ಥಿಗಳಿಗೆ ಸೀಟು ಹಂಚಿಕೆ ಮಾಡುವುದು ಪ್ರಾಧಿಕಾರದ ಬಹುಮುಖ್ಯ ಜವಾಬ್ದಾರಿ. ಈ ಪ್ರಕ್ರಿಯೆ ಜುಲೈ, ಆಗಸ್ಟ್ ಮತ್ತು ಸೆಪ್ಟೆಂಬರ್‌ನಲ್ಲಿ ನಡೆಯುತ್ತದೆ. ಈ ತಿಂಗಳುಗಳಲ್ಲಿ ಸರ್ಕಾರಿ ರಜಾ ದಿನಗಳಲ್ಲಿಯೂ ಕೆಇಎ ಕಾರ್ಯನಿರ್ವಹಿಸದೇ ಇರುವುದರಿಂದ ನಿಗದಿತ ಸಮಯದಲ್ಲಿ ಎಲ್ಲ ಕಾರ್ಯಗಳನ್ನು ನಿರ್ವಹಿಸಲು ಸಾಧ್ಯವಾಗುವುದಿಲ್ಲ. ರಜಾ ದಿನಗಳಲ್ಲಿಯೂ ಕಾರ್ಯನಿರ್ವಹಿಸಿದರೆ ವಿದ್ಯಾರ್ಥಿಗಳಿಗೆ, ಪೋಷಕರಿಗೆ ಸಹಾಯವಾಗಲಿದೆ ಎಂಬ ಕಾರಣಕ್ಕೆ ಈ ತೀರ್ಮಾನ ತೆಗೆದುಕೊಳ್ಳಲಾಗಿದೆ' ಎಂದು ಪ್ರಸನ್ನ ತಿಳಿಸಿದ್ದಾರೆ.

'ಸರ್ಕಾರಿ ರಜೆಯ ದಿನ ಕೆಲಸ ಮಾಡಿದ ಸಿಬ್ಬಂದಿ, ಆ ರಜೆಯನ್ನು ಇತರೆ ದಿನ ಪಡೆಯಲು ಅವಕಾಶವಿದೆ. ಒಂದೊಮ್ಮೆ ರಜೆಯ ದಿನ ಕಾರ್ಯನಿರ್ವಹಿಸಿ, ಆ ರಜೆಯನ್ನು ಇತರ ದಿನಗಳಲ್ಲಿ ಪಡೆಯದೇ ಇದ್ದರೆ, ಅಂಥವರಿಗೆ ರಜೆ ದಿನ ಕಾರ್ಯನಿರ್ವಹಿಸಿದ್ದಕ್ಕೆ ಹೆಚ್ಚುವರಿ ವೇತನ ಪಾವತಿಸಲಾಗುವುದು. ರಜೆ ದಿನಗಳಲ್ಲಿಯೂ ತಮ್ಮ ವಿಭಾಗ ಮುಖ್ಯಸ್ಥರ ಅನುಮತಿ ಪಡೆದು ರಜೆ ಪಡೆಯಲು ಅವಕಾಶ ನೀಡಲಾಗಿದೆ' ಎಂದೂ ಅವರು ತಿಳಿಸಿದ್ದಾರೆ.

# ಚರ್ಚೆಯಲ್ಲಿ ಆಯುಕ್ತಾಲಯ ಸೃಷ್ಟಿ

## ಗ್ರಂಥಾಲಯ ಇಲಾಖೆ: ಕಾಯ್ದೆಗೆ ತಿದ್ದುಪಡಿ ಮಾಡದೇ ಸರ್ಕಾರದಿಂದ ಆದೇಶ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಸಾರ್ವಜನಿಕ ಗ್ರಂಥಾಲಯ ಇಲಾಖೆಯ ನಿರ್ದೇಶಕರ ಅಧಿಕಾರ ಮೊಟಕುಗೊಳಿಸಿ, ಹೊಸದಾಗಿ ಆಯುಕ್ತಾಲಯ ಸೃಷ್ಟಿಸಲು ರಾಜ್ಯ ಸರ್ಕಾರ ಮುಂದಾಗಿರುವುದು ಅಧಿಕಾರಿಗಳ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿದೆ.

ಇಲಾಖೆಗೆ ಆಯುಕ್ತರನ್ನು ನೇಮಿಸುವ ಸಂಬಂಧ ರಾಜ್ಯ ಸರ್ಕಾರ ಶನಿವಾರ ಆದೇಶ ಹೊರಡಿಸಿದೆ. ಆದರೆ, ಕರ್ನಾಟಕ ಸಾರ್ವಜನಿಕ ಗ್ರಂಥಾಲಯ ಕಾಯ್ದೆಗೆ ತಿದ್ದುಪಡಿ ಮಾಡದೇ ಈ ಆದೇಶ ಹೊರಡಿಸಲಾಗಿದ್ದು, ಇದು ನಿಯಮಬಾಹಿರ ಎಂದು ಗ್ರಂಥಾಲಯ ಇಲಾಖೆ ತಜ್ಞರು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

**ಸರ್ಕಾರ ನೀಡಿರುವ ಕಾರಣ:** ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಕಾರ್ಯವ್ಯಾಪ್ತಿ ದಿನದಿಂದ ದಿನಕ್ಕೆ ವಿಸ್ತಾರವಾಗುತ್ತಿದೆ. ನಿರ್ದೇಶಕರ ಹಂತದ ಹುದ್ದೆಯು ತಾಂತ್ರಿಕ ಸ್ವರೂಪದ್ದಾಗಿದೆ. ಇವರಿಂದ ಆಡಳಿತ ನಿರ್ವಹಣೆ ಕಷ್ಟ. ಆದ್ದರಿಂದ, ಇಲಾಖೆಯ ಕಾರ್ಯ ಚಟುವಟಿಕೆಯ ಗುಣಮಟ್ಟ ಹೆಚ್ಚಿಸಲು, ಸರ್ಕಾರ ಹಾಗೂ ಇಲಾಖೆ ಮಟ್ಟದಲ್ಲಿ ಸಮನ್ವಯ ಸಾಧಿಸಲು, ಆಡಳಿತದಲ್ಲಿ ಪಾರದರ್ಶಕತೆ, ಕಾರ್ಯಕ್ಷಮತೆ ವೃದ್ಧಿಸಲು ನಿರ್ದೇಶಕರ ಮೇಲೆ ಆಯುಕ್ತರ ಹುದ್ದೆ ಸೃಜಿಸುವುದು ಅಗತ್ಯ. ಐಎಎಸ್ ದರ್ಜೆಯ ಅಧಿಕಾರಿಯನ್ನೇ ಆಯುಕ್ತರ ಹುದ್ದೆಗೆ ನೇಮಿಸಲಾಗುವುದು ಎಂದು ಆದೇಶದಲ್ಲಿ ಸರ್ಕಾರ ಹೇಳಿದೆ.

ಈಗಾಗಲೇ ಗ್ರಂಥಾಲಯ ಇಲಾಖೆ ವ್ಯಾಪ್ತಿಯನ್ನು ಕುಗ್ಗಿಸಲಾಗಿದೆ. ಗ್ರಾಮಾಂತರ ಪ್ರದೇಶದ ಗ್ರಂಥಾಲಯಗಳನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸುಪರ್ದಿಗೆ ಒಪ್ಪಿಸಲಾಗಿದೆ. 1965ರಿಂದಲೂ ನಿರ್ದೇಶಕರೇ ಗ್ರಂಥಾಲಯ ಇಲಾಖೆಯ ಆಡಳಿತವನ್ನು ನೋಡಿಕೊಳ್ಳುತ್ತಿದ್ದರು. ಹಿಂದಿನ ನಿರ್ದೇಶಕರ ಅವಧಿಯಲ್ಲಿ ಒಂದಷ್ಟು ಸಮಸ್ಯೆಗಳು ಆಗಿತ್ತು. ಆ ಬಳಿಕ ಇಲಾಖೆಯ ಸ್ವಾಯತ್ತತೆಯನ್ನು ಕ್ರಮೇಣ ಕಸಿದುಕೊಳ್ಳಲಾಯಿತು. ಹಿಂದೆ ಬಹುತೇಕ ನಿರ್ಧಾರಗಳನ್ನು ಸ್ವತಂತ್ರವಾಗಿ ತೆಗೆದುಕೊಳ್ಳಲಾಗುತ್ತಿತ್ತು ಎಂದು ಮೂಲಗಳು ಹೇಳಿವೆ.

ಹಿಂದೆ ಆಯ್ಕೆ ಸಮಿತಿ ಆಯ್ಕೆ ಮಾಡುತ್ತಿದ್ದ ಪುಸ್ತಕಗಳು ಅಂತಿಮವಾಗಿರುತ್ತಿದ್ದವು. ಈಗ ಸರ್ಕಾರದ ಮಟ್ಟದಲ್ಲಿ ಹಸ್ತಕ್ಷೇಪ ನಡೆಯುತ್ತಿದೆ. ಕೆಲವು ಪುಸ್ತಕಗಳನ್ನು ಕೈಬಿಡುವ ಮತ್ತು ಸೇರಿಸುವ ನಿರ್ಧಾರ ಸಚಿವರ ಹಂತದಲ್ಲಿ ನಡೆಯುತ್ತಿದೆ ಎಂದು ಮೂಲಗಳು ತಿಳಿಸಿವೆ.

ಈ ಕುರಿತು ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿರುವ ಗ್ರಂಥಾಲಯ ಇಲಾಖೆ ಮಾಜಿ ನಿರ್ದೇಶಕ ಮಲ್ಲೇಶಪ್ಪ, ‘ಸರ್ಕಾರ ಆಯುಕ್ತರನ್ನಾಗಲಿ, ಯಾರನ್ನೇ ಆಗಲಿ ನೇಮಕ ಮಾಡುವುದರಲ್ಲಿ ತಪ್ಪಿಲ್ಲ. ಆದರೆ, ಗ್ರಂಥಾಲಯ ಇಲಾಖೆ ಕಾಯ್ದೆಗೆ ತಿದ್ದುಪಡಿ ಮಾಡದೆ ಹೇಗೆ ನೇಮಿಸಲು ಸಾಧ್ಯ? ಇದು ಸ್ಪಷ್ಟವಾಗಿ ನಿಯಮದ ಉಲ್ಲಂಘನೆ. ಇಲಾಖೆಯನ್ನು ಸೂಪರ್‌ಸೀಡ್ ಮಾಡಿದಂತಾಗುತ್ತದೆ’ ಎಂದರು.

‘ಆಯುಕ್ತರ ನೇಮಕದಿಂದ ಅನುಕೂಲ ಆಗಬಹುದು ಎಂದು ಸರ್ಕಾರ ಭಾವಿಸಿರಬಹುದು. ಅದರಲ್ಲಿ ತಪ್ಪೇನಿಲ್ಲ’ ಎಂದರು.

‘ಕನ್ನಡದ ಅರಿವು ಮತ್ತು ಸಾಹಿತ್ಯದ ಬಗ್ಗೆ ಒಲವು ಇಲ್ಲದ ಐಎಎಸ್ ಅಧಿಕಾರಿಗಳನ್ನು ಆಯುಕ್ತರನ್ನಾಗಿ ಮಾಡಿದರೆ, ಗ್ರಂಥಾಲಯ ಇಲಾಖೆಗೆ ಯಾವುದೇ ಪ್ರಯೋಜನ ಆಗದು. ಸಾಹಿತ್ಯದ ಬಗ್ಗೆ ಒಲವು ಇರುವ ಅಧಿಕಾರಿಗಳನ್ನು ನೇಮಿಸಿದರೆ ಇಲಾಖೆಗೆ ಅನುಕೂಲವಾಗುತ್ತದೆ’ ಎನ್ನುತ್ತಾರೆ ಪ್ರಕಾಶಕರ ಸಂಘದ ಪದಾಧಿಕಾರಿ ಸೃಷ್ಟಿ ನಾಗೇಶ್.

### ‘ಸಮಿತಿ ರಚಿಸಿ, ಚರ್ಚೆ ನಡೆಸಬೇಕಿತ್ತು’

‘ಆಯುಕ್ತರನ್ನು ನೇಮಿಸುವ ಆದೇಶ ಹೊರಡಿಸುವ ಮೊದಲು ಸಮಿತಿಯೊಂದನ್ನು ರಚಿಸಿ ಈ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸಿದ ವ್ಯಕ್ತಿಗಳ ಸಲಹೆ, ಸೂಚನೆಗಳನ್ನು ಪಡೆಯಬಹುದಿತ್ತು’ ಎಂದು ಗ್ರಂಥಾಲಯ ಇಲಾಖೆ ಮಾಜಿ ನಿರ್ದೇಶಕ ಕೆ.ಜಿ.ವೆಂಕಟೇಶ್ ಹೇಳುತ್ತಾರೆ.

ಗ್ರಂಥಾಲಯ ಇಲಾಖೆಯನ್ನು ಓದುಗ ಕೇಂದ್ರಿತವಾಗಿ ಅಭಿವೃದ್ಧಿಪಡಿಸುವ ದಿಸೆಯಲ್ಲಿ ಯಾರೂ ಯೋಚಿಸುತ್ತಿಲ್ಲ. ಇದು ನಿಜಕ್ಕೂ ದುರಾದೃಷ್ಟಕರ. ವಿವಿಧ ಲಾಬಿಗಳ ಕೈಗೆ ಇಲಾಖೆ ಸಿಕ್ಕಿಬಿದ್ದಿದೆ. ಬೆಂಗಳೂರು ನಗರದಲ್ಲಿ ಗ್ರಂಥಾಲಯ ಸೆಸ್ ಮೂಲಕ ನೂರಾರು ಕೋಟಿ ರೂಪಾಯಿ ಸಂಗ್ರಹ ಆಗುತ್ತಿದೆ. ಆದರೆ, ನಗರದಲ್ಲಿ ಒಂದು ಗ್ರಂಥಾಲಯವೂ ಅಭಿವೃದ್ಧಿ ಆಗಿಲ್ಲ. ಪ್ರತಿ ವಾರ್ಡ್‌ಗೊಂದು ಗ್ರಂಥಾಲಯ ಆರಂಭಿಸಬಹುದು ಎಂದು ಅವರು ಹೇಳಿದರು.

## ‘ಸಿ.ಎಂ ಬದಲಿಸಿದರೆ ಹೋರಾಟ’

**ಹುಬ್ಬಳ್ಳಿ:** ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಬದಲಾವಣೆ ಮಾಡಿದರೆ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಅಸ್ತಿತ್ವದಲ್ಲಿ ಇರುವುದಿಲ್ಲ ಎಂದು ಅಹಿಂದ ರಾಜ್ಯ ಘಟಕದ ಅಧ್ಯಕ್ಷ ಪ್ರಭುಲಿಂಗ ದೊಡ್ಡಮನಿ ಹೇಳಿದರು. ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಕೆಲವು ಸ್ವಾಮೀಜಿಗಳ ಹೇಳಿಕೆಗಳಿಂದ ಧಾರ್ಮಿಕ ವಿಚಾರಗಳಿಗೆ ಧಕ್ಕೆ ಉಂಟಾಗುತ್ತದೆ’ ಎಂದರು.



ಜಲಾವೃತ ಮಲ್ಲೇಶ್ವರದಲ್ಲಿ ಭಾನುವಾರ ನಿಂತ ಮಳೆ ನೀರಿನಲ್ಲಿ ವಾಹನ ಸವಾರರು ಸಾಗಿದರು –ಪ್ರಜಾವಾಣಿ ಚಿತ್ರ

ನಿಧನ ವಾರ್ತೆ

## ಹಂಸಾ ಮೊಯಿಲಿ



ಹಂಸಾ ಮೊಯಿಲಿ

**ಬೆಂಗಳೂರು:** ಮಾಜಿ ಮುಖ್ಯಮಂತ್ರಿ ಎಂ. ವೀರಪ್ಪ ಮೊಯಿಲಿ ಅವರ ಪುತ್ರಿ ಹಾಗೂ ಭರತನಾಟ್ಯ ಕಲಾವಿದೆ ಹಂಸಾ ಮೊಯಿಲಿ (52) ಅವರು ಇಲ್ಲಿ ಶನಿವಾರ ರಾತ್ರಿ ಮೃತಪಟ್ಟಿದ್ದಾರೆ.

ಕೆಲ ದಿನಗಳಿಂದ ಗಂಭೀರ ಅನಾರೋಗ್ಯ ಸಮಸ್ಯೆಯಿಂದ ಅವರು ಬಳಲುತ್ತಿದ್ದರು. ಅವರ ಆರೋಗ್ಯದಲ್ಲಿ ತೀವ್ರ ಏರುಪೇರಾಗಿದ್ದರಿಂದ ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದರು. ಅವರಿಗೆ ತಂದೆ, ತಾಯಿ, ಸಹೋದರ ಹಾಗೂ ಸಹೋದರಿ ಇದ್ದಾರೆ. ಅವರ ಅಂತ್ಯಸಂಸ್ಕಾರ ಇಲ್ಲಿನ ಹರಿಶ್ಚಂದ್ರಘಾಟ್‌ನಲ್ಲಿ ಸೋಮವಾರ ನಡೆಯಲಿದೆ.

ಭರತನಾಟ್ಯ ನೃತ್ಯಗಾರ್ತಿ ಹಾಗೂ ನೃತ್ಯ ಸಂಯೋಜಕಿಯಾಗಿದ್ದ ಹಂಸಾ ಮೊಯಿಲಿ,ದೇವದಾಸಿ ಯರ ಜೀವನಾಧಾರಿತ ತಮಿಳು ಚಿತ್ರ ‘ಶೃಂಗಾರಂ’ನಲ್ಲಿ ಅಭಿನಯಿಸಿದ್ದರು. ಅವರು ಸಮಾಜ ಸೇವೆಯಲ್ಲಿಯೂ ತಮ್ಮನ್ನು ತೊಡಗಿಸಿಕೊಂಡಿದ್ದರು.

# ನೀರಿನ ಟ್ಯಾಂಕ್ ಕುಸಿದು ಇಬ್ಬರ ಸಾವು



ಭಾರಿ ಮಳೆಯಿಂದಾಗಿ ನೀರಿನ ಟ್ಯಾಂಕ್ ಕುಸಿದು ಬಿದ್ದಿದೆ –ಪಿಟಿಐ ಚಿತ್ರ

**ಮಥುರಾ (ಪಿಟಿಐ):** ‘ಇಲ್ಲಿನ ಕೃಷ್ಣವಿಹಾರ್ ಕಾಲೊನಿಯಲ್ಲಿ ಉತ್ತರ ಪ್ರದೇಶದ ಜಲ ನಿಗಮವು 2021ರಲ್ಲಿ ನಿರ್ಮಿಸಿದ್ದ ನೀರಿನ ಟ್ಯಾಂಕ್‌ವೊಂದು ಭಾರಿ ಮಳೆಯ ಕಾರಣದಿಂದಾಗಿ ಭಾನುವಾರ ಸಂಜೆ ಕುಸಿದುಬಿದ್ದಿದೆ. ಘಟನೆಯಲ್ಲಿ ಇಬ್ಬರು ಮೃತಪಟ್ಟಿದ್ದು, 12 ಮಂದಿ ಗಂಭೀರವಾಗಿ ಗಾಯಗೊಂಡಿದ್ದಾರೆ’ ಎಂದು ಅಧಿಕಾರಿಗಳು ತಿಳಿಸಿದರು.

‘ಮೃತರ ಸಂಖ್ಯೆಯು ಮತ್ತಷ್ಟು ಏರಿಕೆಯಾಗುವ ಸಂಭವವಿದೆ.ಗಾಯಾಳುಗಳನ್ನು ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ. 2.5 ಲಕ್ಷ ಲೀಟರ್ ನೀರಿನ ಸಾಮರ್ಥ್ಯದ ಟ್ಯಾಂಕ್ ಇದಾಗಿದ್ದು, ಅವಶೇಷಗಳ ಅಡಿಯಲ್ಲಿ ಮಕ್ಕಳೂ ಸೇರಿದಂತೆ ಹಲವರು ಸಿಲುಕಿಕೊಂಡಿರುವ ಸಾಧ್ಯತೆ ಇದೆ. ಜೊತೆಗೆ, ಕೆಲವು ಮನೆಗಳಿಗೂ ಹಾನಿಯಾಗಿದೆ’ ಎಂದು ಹೆಚ್ಚುವರಿ ಜಿಲ್ಲಾಧಿಕಾರಿ ಮಾಹಿತಿ ನೀಡಿದರು.

ಭಾರತೀಯ ಸೇನೆಯು ರಕ್ಷಣಾ ಕಾರ್ಯದಲ್ಲಿ ತೊಡಗಿದ್ದು, ಅವಶೇಷಗಳ ತೆರವು ಕಾರ್ಯಾಚರಣೆ ನಡೆಯುತ್ತಿದೆ.

‘2021ರಲ್ಲಿ ನಿರ್ಮಿಸಲಾಗಿರುವ ಈ ನೀರಿನ ಟ್ಯಾಂಕ್ ಕೇವಲ ಮೂರೇ ವರ್ಷದಲ್ಲಿ ಕುಸಿದಿರುವುದಕ್ಕೆ ತನಿಖೆ ನಡೆಸಲಾಗುವುದು. ಗಂಗಾಜಲ ಕುಡಿಯುವ ನೀರಿನ ಯೋಜನೆಯಡಿ ₹6 ಕೋಟಿ ವೆಚ್ಚದಲ್ಲಿ ಈ ಟ್ಯಾಂಕ್ ಅನ್ನು ನಿರ್ಮಿಸಲಾಗಿದೆ’ ಎಂದು ಜಿಲ್ಲಾಧಿಕಾರಿ ತಿಳಿಸಿದರು.

## ಕುಂದು ಕೊರತೆ ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ವಾಟ್ಸ್‌ಆ್ಯಪ್ ಮಾಡಿ: 9606038256

### ‘ಸುವರ್ಣನಗರ: ಕಸ ತೆರವುಗೊಳಿಸಿ’

ಸುವರ್ಣನಗರ ಗೃಹಲಕ್ಷ್ಮಿ ಲೇಔಟ್ ಪಾರ್ಕ್‌ನ ಬಳಿ ಕಸ ಹಾಕಲಾಗುತ್ತಿದ್ದು, ಜನರು ಮೂಗು ಮುಚ್ಚಿಕೊಂಡು ಓಡಾಡಬೇಕಿದೆ. ಮನೆಯ ತ್ಯಾಜ್ಯವನ್ನು ಪ್ಲಾಸ್ಟಿಕ್ ಚೀಲಗಳಲ್ಲಿ ತುಂಬಿಕೊಂಡು ದ್ವಿಚಕ್ರ ವಾಹನಗಳಲ್ಲಿ ಬಂದು ಇಲ್ಲಿ ಎಸೆದು ಹೋಗುತ್ತಾರೆ. ಕಸ ರಾಶಿಯಾದರೂ ಬಿಬಿಎಂಪಿ ಸಿಬ್ಬಂದಿ ಅದನ್ನು ತೆರವುಗೊಳಿಸುತ್ತಿಲ್ಲ. ಸೊಳ್ಳೆಗಳು ಉತ್ಪತ್ತಿಯಾಗಿ ಡೆಂಗಿ ಹರಡುವ ಭೀತಿ ಶುರುವಾಗಿದೆ. ಕೂಡಲೇ ಇಲ್ಲಿನ ಕಸ ತೆರವುಗೊಳಿಸಬೇಕು.

**ಮಂಜುನಾಥ್,** ಸುವರ್ಣನಗರ



ಗೃಹಲಕ್ಷ್ಮಿ ಲೇಔಟ್ ಪಾರ್ಕ್‌ನ ಬಳಿ ಹಾಕಿರುವ ಕಸ



ಮೈಸೂರು ಬ್ಯಾಂಕ್ ವೃತ್ತದ ಕಾನೂನು ಕಾಲೇಜಿನ ಮುಂಭಾಗದ ರಸ್ತೆ ದುಃಸ್ಥಿತಿ

### ‘ರಸ್ತೆ ಗುಂಡಿ ಸರಿಪಡಿಸಿ’

ಮೈಸೂರು ಬ್ಯಾಂಕ್ ವೃತ್ತದ ಚೌಕದ ಗಣಪತಿ ದೇವಸ್ಥಾನದ ಪಕ್ಕದಲ್ಲಿರುವ ರಸ್ತೆಯಲ್ಲಿ ಗುಂಡಿಗಳು ಬಿದ್ದಿವೆ. ಈ ಭಾಗದಲ್ಲಿ ನ್ಯಾಯಾಲಯ ಸಂಕೀರ್ಣ, ಕಾವೇರಿ ಭವನ ಸೇರಿದಂತೆ ಸರ್ಕಾರದ ಪ್ರಮುಖ ಕಚೇರಿಗಳಿವೆ. ಈ ಮಾರ್ಗದಲ್ಲಿ ಪ್ರತಿನಿತ್ಯ ನೂರಾರು ಜನ ಓಡಾಡುತ್ತಾರೆ. ಮಳೆಗಾಲದಲ್ಲಿ ರಸ್ತೆ ಗುಂಡಿಗಳಲ್ಲಿ ನೀರು ನಿಲ್ಲುವುದರಿಂದ ರಸ್ತೆ ಯಾವುದು, ಗುಂಡಿ ಯಾವುದು ಎಂಬುದೇ ಗೊತ್ತಾಗುವುದಿಲ್ಲ. ಹೀಗಾಗಿ ದ್ವಿಚಕ್ರ ವಾಹನ ಸವಾರರು ಬಿದ್ದು ಗಾಯಗಳನ್ನು ಮಾಡಿಕೊಂಡಿದ್ದಾರೆ. ರಸ್ತೆ ಹಾಳಾಗಿರುವುದರಿಂದ ಸಂಚಾರ ದಟ್ಟಣೆಗೆ ಕಾರಣವಾಗುತ್ತಿದೆ. ಕೂಡಲೇ ಇಲ್ಲಿನ ರಸ್ತೆಯನ್ನು ದುರಸ್ತಿಗೊಳಿಸಬೇಕು.

**ಶಿವಪ್ರಸಾದ್,** ಮೈಸೂರು ಬ್ಯಾಂಕ್ ವೃತ್ತ



ಚಂದ್ರೋದಯ ಬಡಾವಣೆಗೆ ಸಂಪರ್ಕ ಕಲ್ಪಿಸುವ ರಸ್ತೆ ದುಃಸ್ಥಿತಿ

### ‘ರಸ್ತೆ ದುರಸ್ತಿಗೊಳಿಸಿ’

ಬನಶಂಕರಿ 6ನೇ ಹಂತದ 3 ಮತ್ತು 4ನೇ ಬ್ಲಾಕ್‌ನ ಚಂದ್ರೋದಯ ಬಡಾವಣೆಗೆ ಸಂಪರ್ಕ ಕಲ್ಪಿಸುವ ರಸ್ತೆ ಹದಗೆಟ್ಟು ಹೋಗಿದೆ. ಒಳಚರಂಡಿ ವ್ಯವಸ್ಥೆ ಇಲ್ಲದ ಕಾರಣ ರಸ್ತೆಯ ಮಧ್ಯದಲ್ಲಿಯೇ ನೀರು ಹರಿಯುತ್ತಿದೆ. ಮಳೆ ಬಂದರೆ ರಸ್ತೆಯೆಲ್ಲ ಕೆಸರು ಗದ್ದೆಯಾಗುತ್ತದೆ. ಮಳೆಗಾಲದಲ್ಲಿ ವಾಹನ ಸವಾರರು ಸೇರಿದಂತೆ ಬಡಾವಣೆ ನಿವಾಸಿಗಳು ರಸ್ತೆಯಲ್ಲಿ ಓಡಾಡುವುದೇ ಕಷ್ಟವಾಗಿದೆ. ಹೀಗಾಗಿ ಕ್ಯಾಬ್ ಹಾಗೂ ಆಟೊ ಚಾಲಕರು ಇಲ್ಲಿಗೆ ಬರಲು ನಿರಾಕರಿಸುತ್ತಾರೆ. ಈ ಬಗ್ಗೆ ಬಿಬಿಎಂಪಿಗೆ ಹಲವಾರು ಬಾರಿ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ.

**ಮಂಜುನಾಥ್ ಬಿ,** ಚಂದ್ರೋದಯ ಬಡಾವಣೆ

### ಗಿರಿನಗರ: ಮುಖ್ಯರಸ್ತೆಯಲ್ಲಿಯೇ ಕಸದ ರಾಶಿ

ಗಿರಿನಗರ 14ನೇ ಮುಖ್ಯರಸ್ತೆಗೆ ಹೊಂದಿಕೊಂಡಿರುವ 10ನೇ ಕ್ರಾಸ್ ಬಳಿ ಪ್ರತಿನಿತ್ಯ ಕಸ ತಂದು ಹಾಕಲಾಗುತ್ತಿದೆ. ಮನೆಯಲ್ಲಿ ಸಂಗ್ರಹವಾಗುವ ಕಸವನ್ನು ಪ್ಲಾಸ್ಟಿಕ್ ಬ್ಯಾಗ್‌ಗಳಲ್ಲಿ ತುಂಬಿಕೊಂಡು ಬಂದು ರಸ್ತೆ ಪಕ್ಕದಲ್ಲಿ ಎಸೆದು ಹೋಗುತ್ತಿದ್ದಾರೆ. ಬೀಡಾಡಿ ದನಗಳು ಹಾಗೂ ನಾಯಿಗಳು ಕಸದ ರಾಶಿಯನ್ನು ಮುಖ್ಯರಸ್ತೆಗೆ ಎಳೆದುಕೊಂಡು ಬರುತ್ತಿವೆ. ಸಾರ್ವಜನಿಕರು ಈ ರಸ್ತೆಯಲ್ಲಿ ಮೂಗು ಮುಚ್ಚಿಕೊಂಡು ಹೋಗಬೇಕಾಗಿದೆ. ಬಿಬಿಎಂಪಿ ಸಿಬ್ಬಂದಿ ಇಲ್ಲಿ ಕಸ ಹಾಕದಂತೆ ಜಾಗೃತಿ ಮೂಡಿಸುವುದರ ಜೊತೆಗೆ ಬಡಾವಣೆಯ ಸ್ವಚ್ಛತೆಗೆ ಆದ್ಯತೆ ನೀಡಬೇಕು.

**ನಿರ್ಮಲಾ ಶ್ರೀಕಾಂತ್**



ಗಿರಿನಗರ ಮುಖ್ಯರಸ್ತೆಯಲ್ಲಿ ಹಾಕಿರುವ ಕಸ

ಸರ್ಕಾರಿ ಹಾಗೂ ಅನುದಾನಿತ ಶಾಲೆ ವಿದ್ಯಾರ್ಥಿಗಳಿಗೆ ಬಿಸಿಯೂಟ ನೀಡುವುದೇ ಶಿಕ್ಷಕರಿಗೆ ಸವಾಲು

# ಪಿ.ಎಂ ಪೋಷಣ್: ತಲುಪದ ಆಹಾರ ಧಾನ್ಯ

● ರಾಮಮೂರ್ತಿ ಪಿ.

**ದಾವಣಗೆರೆ:** ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ ರಾಜ್ಯದ ಸರ್ಕಾರಿ ಹಾಗೂ ಅನುದಾನಿತ ಶಾಲೆಗಳು ಆರಂಭವಾಗಿ ತಿಂಗಳು ಕಳೆದರೂ ಪಿ.ಎಂ. ಪೋಷಣ್ ಶಕ್ತಿ ನಿರ್ಮಾಣ್ (ಮಧ್ಯಾಹ್ನದ ಉಪಹಾರ ಯೋಜನೆ) ಕಾರ್ಯಕ್ರಮದಡಿ ಆಹಾರ ಧಾನ್ಯ ಪೂರೈಕೆಯಾಗಿಲ್ಲ.

ಇದರಿಂದಾಗಿ 1ರಿಂದ 10ನೇ ತರಗತಿ ವಿದ್ಯಾರ್ಥಿಗಳಿಗೆ ನಿತ್ಯ ಮಧ್ಯಾಹ್ನದ ಬಿಸಿಯೂಟ ಸಿದ್ಧಪಡಿಸಿ ಬಡಿಸುವುದು ಶಿಕ್ಷಕರಿಗೆ ಸವಾಲಾಗಿ ಪರಿಣಮಿಸಿದೆ.

ರಾಜ್ಯದ ಬಹುತೇಕ ಸರ್ಕಾರಿ ಹಾಗೂ ಅನುದಾನಿತ ಶಾಲೆಗಳಿಗೆ ಸರ್ಕಾರ ಪೂರೈಸುವ ಅಕ್ಕಿ, ಬೇಳೆ, ಗೋಧಿ, ಅಡುಗೆ ಎಣ್ಣೆ ಖಾಲಿಯಾಗಿದೆ. ಇದರಿಂದಾಗಿ ಬಿಸಿಯೂಟ ಯೋಜನೆ ಮುಂದುವರಿಸಲು ಆಯಾ ಶಾಲೆಗಳ ಮುಖ್ಯ ಶಿಕ್ಷಕರು ಪರದಾಡುತ್ತಿದ್ದಾರೆ. ಖರ್ಚನ್ನು ತಾವೇ ಭರಿಸಿ ಆಹಾರ ಧಾನ್ಯವನ್ನು ಖರೀದಿಸಬೇಕಾದ ಅನಿವಾರ್ಯಕ್ಕೆ ಅವರು ಒಳಗಾಗಿದ್ದಾರೆ.

ಮಾರ್ಚ್ ಅಂತ್ಯದಲ್ಲಿ ಶಾಲೆಗಳಿಗೆ ಕೊನೆಯದಾಗಿ ಆಹಾರ ಧಾನ್ಯ ಪೂರೈಸಲಾಗಿದ್ದು, ಜೂನ್ ತಿಂಗಳಲ್ಲೂ ಧಾನ್ಯ ತಲುಪಿಲ್ಲ.

'ಮೇ 29ರಿಂದ ಶಾಲೆಗಳು ಶುರುವಾಗಿದ್ದು, ಸಂಗ್ರಹವಿದ್ದ ಧಾನ್ಯದಲ್ಲಿಯೇ ತಿಂಗಳ ಕಾಲ ಅಡುಗೆ ಮಾಡಿ ಬಡಿಸಲಾಗಿದೆ. ಈಗ ರೇಷನ್ ಖಾಲಿಯಾಗಿದೆ. ಅಡುಗೆ ಮಾಡಲು ಸಾಧ್ಯವೇ ಇಲ್ಲದ ಸ್ಥಿತಿ ಇದೆ. ಇನ್ನು 2-3 ದಿನಗಳಲ್ಲಿ ರೇಷನ್ ಬರದಿದ್ದರೆ, ಶಾಲೆಯಲ್ಲಿ ಅಡುಗೆ ಮಾಡುವುದನ್ನೇ ನಿಲ್ಲಿಸಬೇಕಾದ ಸ್ಥಿತಿ ಇದೆ' ಎಂದು ಚನ್ನಗಿರಿ ತಾಲ್ಲೂಕಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯೊಂದರ ಮುಖ್ಯ ಶಿಕ್ಷಕರೊಬ್ಬರು ಅಳಲು ತೋಡಿಕೊಂಡರು.

'ಜಿಲ್ಲೆಯ ಅನೇಕ ಶಾಲೆಗಳಲ್ಲಿ ಧಾನ್ಯ ಖಾಲಿಯಾಗಿರುವ ಮಾಹಿತಿ ಇದೆ. ಯಾವುದೇ ಶಾಲೆಯಲ್ಲಿ ಬಿಸಿಯೂಟ ಯೋಜನೆಯನ್ನು ನಿಲ್ಲಿಸದಂತೆ ಶಿಕ್ಷಕರಿಗೆ ಸೂಚಿಸಲಾಗಿದೆ. ಕೆಲವೆಡೆ ಅಕ್ಕಿ ಇದೆ. ಆದರೆ ಎಣ್ಣೆ, ಗೋಧಿಯ ಅಲ್ಪಸ್ವಲ್ಪ ದಾಸ್ತಾನು ಇದ್ದು, ಬೇಳೆ ಬರಬೇಕಿದೆ. ಜೂನ್ 27ರಂದು ಟೆಂಡರ್ ಆಗಿದ್ದು, ಬೇಳೆ ಪೂರೈಕೆಯಾದ ಕೂಡಲೇ ಎಲ್ಲ ಧಾನ್ಯಗಳನ್ನು ಒಟ್ಟಿಗೆ ಶಾಲೆಗಳಿಗೆ ತಲುಪಿಸಲಾಗುವುದು' ಎಂದು ಪಿಎಂ ಪೋಷಣ್ ಶಕ್ತಿ ನಿರ್ಮಾಣ್ ಯೋಜನೆಯ ಜಿಲ್ಲಾ ಶಿಕ್ಷಣ ಅಧಿಕಾರಿ ದುರುಗಪ್ಪ ಡಿ. ತಿಳಿಸಿದರು.

**ಕಡ ನೀಡುವವರೂ ಇಲ್ಲ:** ಶಾಲೆಗಳಲ್ಲಿ ಆಹಾರ ಧಾನ್ಯ ಖಾಲಿಯಾಗಿರುವ ಬಗ್ಗೆ ಇಲಾಖೆಯ ಅಧಿಕಾರಿಗಳಿಗೆ ಆಯಾ ಶಾಲೆಗಳ ಮುಖ್ಯ ಶಿಕ್ಷಕರು ವರದಿ ನೀಡಿದ್ದಾರೆ. 'ರೇಷನ್ ಶೀಘ್ರವೇ ಬರಲಿದ್ದು, ಅಲ್ಲಿಯವರೆಗೂ ನೆರೆಹೊರೆಯ ಸರ್ಕಾರಿ ಶಾಲೆಗಳಿಂದ ಆಹಾರ ಧಾನ್ಯ ಕಡ ತೆಗೆದುಕೊಳ್ಳಿ. ಇಲ್ಲವೇ ಸಮೀಪದ ನ್ಯಾಯಬೆಲೆ ಅಂಗಡಿಯಿಂದ ಪಡಿತರ ಪಡೆಯಿರಿ. ಶಾಲೆಗೆ ರೇಷನ್ ಬಂದಾಗ ಮರಳಿಸಿ' ಎಂಬ ಮೌಖಿಕ ಸೂಚನೆಯನ್ನು ಹಿರಿಯ ಅಧಿಕಾರಿಗಳು ನೀಡಿದ್ದಾರೆ.

'ಬಹುತೇಕ ಶಾಲೆಗಳಲ್ಲಿ ರೇಷನ್ ಖಾಲಿಯಾಗಿದೆ. ಕೆಲವೇ ಕೆಲವು ಶಾಲೆಗಳಲ್ಲಿ ಮಾತ್ರ ಅಲ್ಪಸ್ವಲ್ಪ ಉಳಿದಿದ್ದು, ಇತರ ಶಾಲೆಯವರು ಕೇಳಿದರೆ ಕೊಡುವಷ್ಟು ಧಾನ್ಯ ಎಲ್ಲಿಯೂ ಇಲ್ಲ. ಹೀಗಾಗಿ ಆಹಾರ ಧಾನ್ಯವನ್ನು ಕಡ ನೀಡುವಂತೆ ಕೇಳಿದರೂ, ಯಾವ ಶಾಲೆಯಿಂದಲೂ ದೊರೆಯುತ್ತಿಲ್ಲ' ಎಂದು ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ತಾಲ್ಲೂಕಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯೊಂದರ ಮುಖ್ಯ ಶಿಕ್ಷಕರು ಸಂಕಷ್ಟ ತೋಡಿಕೊಂಡರು.

'ನ್ಯಾಯಬೆಲೆ ಅಂಗಡಿಗಳಲ್ಲಿ ಕೇವಲ ಅಕ್ಕಿ ದೊರೆಯುತ್ತದೆ. ಗೋಧಿ, ಅಡುಗೆ ಎಣ್ಣೆ, ಬೇಳೆ ಹಾಗೂ ಇನ್ನಿತರ ಧಾನ್ಯಗಳ ಖರೀದಿಗೆ ನಾವೇ ವೆಚ್ಚ ಭರಿಸಬೇಕಾಗಿದೆ. ಶಾಲೆಯ ಸಿ.ಜಿ. (ತರಕಾರಿ ವೆಚ್ಚ) ಮೊತ್ತದ ಉಳಿಕೆ ಹಣವನ್ನು ಬಿಡಿಸಿಕೊಳ್ಳಲೂ ಅನುಮತಿ ನೀಡಿಲ್ಲ. ಇದರಿಂದ ಸಮಸ್ಯೆ ಮತ್ತಷ್ಟು ಹೆಚ್ಚಿದೆ' ಎಂದು ಅವರು ಹೇಳಿದರು.

ಆಹಾರ ಧಾನ್ಯ ಪೂರೈಕೆ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದ್ದು, ಕಾರ್ಯಾದೇಶ ನೀಡಲಾಗಿದೆ. ಎಲ್ಲ ಜಿಲ್ಲೆಗಳಿಗೂ ಶೀಘ್ರವೇ ಆಹಾರ ಧಾನ್ಯ ಸರಬರಾಜು ಆಗಲಿದೆ ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಪಿ.ಎಂ ಪೋಷಣ್ ಶಕ್ತಿ ನಿರ್ಮಾಣ್ ಯೋಜನೆಯ ಹಿರಿಯ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

> ಸರ್ಕಾರಿ ಶಾಲೆಗಳಲ್ಲಿ ಧಾನ್ಯದ ಕೊರತೆ ಉಂಟಾಗಿದ್ದು ಬೇಸರ ಉಂಟುಮಾಡಿದೆ. ಧಾನ್ಯ ಹೊಂದಿಸುವುದೇ ಶಿಕ್ಷಕರ ಕೆಲಸ ಆಗಬಾರದು
> **ತೇಜಸ್ವಿ ವಿ. ಪಟೇಲ್**, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ, ದಾವಣಗೆರೆ

**ಅಂಕಿ ಅಂಶಗಳು**

**53,284** ಪಿ.ಎಂ. ಪೋಷಣ್ ಶಕ್ತಿ ನಿರ್ಮಾಣ್ ಕಾರ್ಯಕ್ರಮದಡಿ ಮಧ್ಯಾಹ್ನದ ಬಿಸಿಯೂಟ ನೀಡಲಾಗುತ್ತಿರುವ ಸರ್ಕಾರಿ ಹಾಗೂ ಅನುದಾನಿತ ಶಾಲೆಗಳು

**53 ಲಕ್ಷ** ಮಧ್ಯಾಹ್ನದ ಬಿಸಿಯೂಟ ಮಾಡುತ್ತಿರುವ ಒಟ್ಟು ವಿದ್ಯಾರ್ಥಿಗಳು



ದಾವಣಗೆರೆಯ ನಿಟುವಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆಯಲ್ಲಿ ಮಧ್ಯಾಹ್ನದ ಊಟದ ಸಮಯ –ಪ್ರಜಾವಾಣಿ ಚಿತ್ರ / ಸತೀಶ್ ಬಡಿಗೇರ್

### 'ಬೇಸಿಗೆಯಲ್ಲಿ ಊಟ ನೀಡಿದ್ದರಿಂದ ಖಾಲಿ'

ಈ ಬಾರಿ ತೀವ್ರ ಬರಗಾಲದ ಹಿನ್ನೆಲೆಯಲ್ಲಿ ಬೇಸಿಗೆಯ ರಜಾ ಅವಧಿಯಲ್ಲೂ ಸರ್ಕಾರಿ ಹಾಗೂ ಅನುದಾನಿತ ಶಾಲೆಗಳ ವಿದ್ಯಾರ್ಥಿಗಳಿಗೆ ಏಪ್ರಿಲ್ 11ರಿಂದ ಮೇ 28ರವರೆಗೆ ಮಧ್ಯಾಹ್ನದ ಬಿಸಿಯೂಟ ನೀಡಲಾಗಿದೆ. ಇದಕ್ಕಾಗಿ ಪ್ರತ್ಯೇಕವಾಗಿ ಆಹಾರ ಧಾನ್ಯ ಒದಗಿಸಿರಲಿಲ್ಲ. ಮಾರ್ಚ್ ಅಂತ್ಯದಲ್ಲಿ ಶಾಲೆಗೆ ಬಂದಿದ್ದ ಆಹಾರ ಧಾನ್ಯವನ್ನೇ ಇದಕ್ಕಾಗಿ ಬಳಸಿಕೊಳ್ಳಲಾಗಿದೆ. ಅಂತೆಯೇ ಶಾಲೆಗಳಲ್ಲಿ ಈಗ ರೇಷನ್ ಖಾಲಿಯಾಗಿದೆ ಎಂದು ಅಧಿಕಾರಿಗಳು ತಿಳಿಸುತ್ತಾರೆ.

ಜಿಲ್ಲೆಯಲ್ಲಿ ಇರುವ 1,520 ಸರ್ಕಾರಿ ಹಾಗೂ ಅನುದಾನಿತ ಶಾಲೆಗಳ 1.44 ಲಕ್ಷ ವಿದ್ಯಾರ್ಥಿಗಳು ಬೇಸಿಗೆ ರಜೆಯಲ್ಲೂ ಊಟ ಮಾಡಿದ್ದಾರೆ ಎಂದು ಅವರು ಹೇಳಿದ್ದಾರೆ.

# ವಾಲ್ಮೀಕಿ ನಿಗಮದ ಅಕ್ರಮ 100 ಮಂದಿ ವಿಚಾರಣೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ವಾಲ್ಮೀಕಿ ನಿಗಮದಲ್ಲಿ ನಡೆದಿರುವ ಹಗರಣದ ತನಿಖೆಯನ್ನು ವಿಶೇಷ ತನಿಖಾ ದಳದ (ಎಸ್‌ಐಟಿ) ಪೊಲೀಸರು ತನಿಖೆ ಚುರುಕುಗೊಳಿಸಿದ್ದು, ಪ್ರಕರಣದಲ್ಲಿ 100ಕ್ಕೂ ಹೆಚ್ಚು ಮಂದಿಯನ್ನು ವಿಚಾರಣೆಗೆ ಒಳಪಡಿಸಿದ್ದಾರೆ.

'ಪ್ರಕರಣದಲ್ಲಿ ಈವರೆಗೆ ಆರೋಪಿಗಳಿಂದ ನಗದು, ಚಿನ್ನಾಭರಣ ಸೇರಿ ಒಟ್ಟು ₹28 ಕೋಟಿ ಮೌಲ್ಯದ ಆಸ್ತಿ ಜಪ್ತಿ ಮಾಡಲಾಗಿದೆ. ಆರೋಪಿಗಳು ಹಣ ಹಾಕಿದ್ದ 197 ಖಾತೆಗಳನ್ನು ಪತ್ತೆ ಮಾಡಲಾಗಿದೆ. ಅದರಲ್ಲಿ ಬಾರ್ ಮಾಲೀಕರು, ಚಿನ್ನಾಭರಣ ಅಂಗಡಿ ಹಾಗೂ ಹೋಟೆಲ್ ಮಾಲೀಕರು, ಕಾರ್ಮಿಕರು ಸೇರಿ 100 ಮಂದಿ ವಿಚಾರಣೆ ನಡೆಸಿ ಮಾಹಿತಿ ಪಡೆಯಲಾಗಿದೆ. ಕೆಲವರು ಕಮಿಷನ್ ಪಡೆದು ತಮ್ಮ ಖಾತೆಯಿಂದ ಹಣ ಡ್ರಾ ಮಾಡಿಕೊಟ್ಟಿರುವುದು ಗೊತ್ತಾಗಿದೆ. ಕಮಿಷನ್ ಪಡೆದವರನ್ನು ಪತ್ತೆ ಹಚ್ಚಿ ವಿಚಾರಣೆ ನಡೆಸಲಾಗುತ್ತಿದೆ' ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ.

ಹೈದರಾಬಾದ್‌ನ 'ಫಸ್ಟ್ ಫೈನಾನ್ಸ್ ಕ್ರೆಡಿಟ್ ಕೋ- ಆಪರೇಟಿವ್ ಸೊಸೈಟಿ'ಯ (ಎಫ್‌ಎಫ್‌ಸಿಸಿಎಸ್‌ಎಲ್) ವಿವಿಧ ಖಾತೆಗಳಿಗೆ ವಾಲ್ಮೀಕಿ ನಿಗಮದ ಖಾತೆಯಿಂದ ₹94.73 ಕೋಟಿ ಹಣ ವರ್ಗಾವಣೆ ಆಗಿತ್ತು. ಆ ಹಣವನ್ನು ಆರೋಪಿಗಳು ಆನ್‌ಲೈನ್ ಮೂಲಕ ಬೇರೆ ಖಾತೆಗಳಿಗೆ ವರ್ಗಾವಣೆ ಮಾಡಿಕೊಂಡಿದ್ದರು. ಹೈದರಾಬಾದ್, ಬೆಂಗಳೂರು ಹಾಗೂ ಮಂಗಳೂರು ಸೇರಿ ರಾಜ್ಯದ ವಿವಿಧೆಡೆ ಆರೋಪಿಗಳು ಹವಾಲಾ ಮೂಲಕ ಹಣವನ್ನು ನಗದು ಮಾಡಿಕೊಂಡಿದ್ದಾರೆ ಎಂದು ತನಿಖೆಯಿಂದ ಗೊತ್ತಾಗಿದೆ' ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ.

'ಹವಾಲಾ ದಂಧೆ ನಡೆಸುತ್ತಿದ್ದ ಕಾರ್ತಿ ಶ್ರೀನಿವಾಸ್ ಎಂಬಾತ ತಲೆಮರೆಸಿಕೊಂಡಿದ್ದಾನೆ. ಅವರ ಪತ್ತೆಗೆ ಶೋಧ ನಡೆಸಲಾಗುತ್ತಿದೆ. ಬೆಂಗಳೂರಿನ ತೇಜ ತಮ್ಮಯ್ಯ, ಹೈದರಾಬಾದ್‌ನ ಚಂದ್ರಮೋಹನ್, ಶ್ರೀನಿವಾಸ್ ಹಾಗೂ ಜಗದೀಶ್ ವಿಚಾರಣೆ ವೇಳೆ ಈ ಹವಾಲಾ ಮಾರ್ಗದಲ್ಲಿ ಹಣ ನಗದು ಮಾಡಿಕೊಂಡಿರುವುದು ಪತ್ತೆಯಾಗಿದೆ.

ಅಕ್ರಮಕ್ಕೆ ಸಹಕಾರ ನೀಡಿದ್ದವರಿಗೂ ನೋಟಿಸ್ ನೀಡಿ ವಿಚಾರಣೆ ನಡೆಸಲಾಗುತ್ತಿದೆ' ಎಂದು ತನಿಖಾಧಿಕಾರಿ ಒಬ್ಬರು ತಿಳಿಸಿದ್ದಾರೆ

**ಮುಖ್ಯಾಂಶಗಳು**

- ಎಸ್‌ಐಟಿಯಿಂದ ವಿಚಾರಣೆಗೆ ಚುರುಕು
- ಆರೋಪಿಗಳಿಂದ ನಗದು, ಒಟ್ಟು ₹28 ಕೋಟಿ ಮೌಲ್ಯದ ಆಸ್ತಿ ಜಪ್ತಿ
- ಆರೋಪಿಗಳು ಹಣ ಹಾಕಿದ್ದ 197 ಖಾತೆಗಳ ಪತ್ತೆ

ಕಲಬುರಗಿ, ಬೀದರ್‌ನ ವಿವಿಧೆಡೆಯೂ ಧಾರಾಕಾರ ಮಳೆ

# ಕೊಡಗು ಜಿಲ್ಲೆಯಲ್ಲಿ ಮತ್ತೆ ವರ್ಷಧಾರೆ

ಪ್ರಜಾವಾಣಿ ವಾರ್ತೆ

**ಮಡಿಕೇರಿ/ಕಲಬುರಗಿ:** ಕೊಡಗು ಜಿಲ್ಲೆಯಲ್ಲಿ ಒಂದೆರಡು ದಿನ ಬಿಡುವು ನೀಡಿದ್ದ ಮಳೆ ಭಾನುವಾರ ಮತ್ತೆ ಆರಂಭವಾಗಿದೆ. ಮಡಿಕೇರಿಯಲ್ಲಿ ಆಗಾಗ ದಿನವಿಡೀ ಬಿರುಸಿನ ಮಳೆ ಸುರಿಯಿತು. ವಿರಾಜಪೇಟೆಯಲ್ಲೂ ಮಧ್ಯಾಹ್ನದ ಬಳಿಕ ಉತ್ತಮ ಮಳೆಯಾಗಿದೆ.

ಭಾನುವಾರ ಬೆಳಿಗ್ಗೆ 8ಕ್ಕೆ ಕೊನೆಗೊಂಡಂತೆ 24 ಗಂಟೆಗಳಲ್ಲಿ ಭಾಗಮಂಡಲ ಹೋಬಳಿ ವ್ಯಾಪ್ತಿಯಲ್ಲಿ 5 ಸೆಂ.ಮೀನಷ್ಟು ಮಳೆಯಾಗಿದೆ.

ಮೈಸೂರು ನಗರದಲ್ಲಿ ಮಧ್ಯಾಹ್ನ ಅರ್ಧ ಗಂಟೆಗೂ ಹೆಚ್ಚು ಸಮಯ ಚದುರಿದಂತೆ ಸಾಧಾರಣ ಮಳೆ ಬಿದ್ದಿತು.

ಕಲ್ಯಾಣ ಕರ್ನಾಟಕ ಭಾಗದ ಕಲಬುರಗಿ, ಬೀದರ್ ಜಿಲ್ಲೆಗಳ ವಿವಿಧ ತಾಲ್ಲೂಕುಗಳಲ್ಲಿ ಧಾರಾಕಾರ ಮಳೆಯಾಗಿದೆ. ಯಾದಗಿರಿ ಹಾಗೂ ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲ್ಲೂಕಿನ ಹನುಮಸಾಗರದಲ್ಲಿ ತುಂತುರು ಮಳೆ ಸುರಿದಿದೆ.

ಕಲಬುರಗಿಯಲ್ಲಿ ಬೆಳಿಗ್ಗೆಯಿಂದಲೇ ಮೋಡ ಕವಿದ ವಾತಾವರಣವಿತ್ತು. ಸೆಕೆಯೂ ಹೆಚ್ಚಾಗಿತ್ತು. ಆಗಸದಲ್ಲಿ ದಟ್ಟೈಸಿದ್ದ ಮೋಡಗಳು ಮಧ್ಯಾಹ್ನ 2.45ರ ಸುಮಾರಿಗೆ ಧಾರಾಕಾರ ಮಳೆ ಸುರಿಸಿದವು. ಬಳಿಕ ಜಿಟಿ-ಜಿಟಿ ಮಳೆಯಾಯಿತು. ಸಂಜೆ 5 ಗಂಟೆ ಹೊತ್ತಿಗೆ ಮತ್ತೆ ಧಾರಾಕಾರ ಮಳೆ ಸುರಿಯಿತು. ಒಂದು ವಾರದ ಬಿಡುವಿನ ಬಳಿಕ ಸುರಿದ ಬಿರುಸಿನ ಮಳೆಗೆ ಚರಂಡಿಗಳು ತುಂಬಿ ಹರಿದವು. ಕಾವೇರಿದ್ದ ವಾತಾವರಣವೂ ತಂಪಾಯಿತು.

ಕಲಬುರಗಿ ಜಿಲ್ಲೆಯ ಚಿಂಚೋಳಿ, ಚಿತ್ತಾಪುರ, ಕಮಲಾಪುರ, ಕಾಳಗಿ, ಶಹಾಬಾದ್ ತಾಲ್ಲೂಕುಗಳಲ್ಲೂ ಉತ್ತಮ ಮಳೆಯಾಗಿದೆ. ಈ ಮಳೆಯು ರೈತರ ಮೊಗದಲ್ಲಿ ಮಂದಹಾಸ ಮೂಡಿಸಿದೆ. ಮಳೆ ಹಾಗೂ ತೇವಾಂಶ ಕೊರತೆ ಎದುರಿಸುತ್ತಿದ್ದ ಹೆಸರು, ಉದ್ದು, ತೊಗರಿ ಬೆಳೆಗಳಿಗೆ ಭಾನುವಾರದ ಮಳೆ ಪೂರಕವಾಗಿದೆ. ಕಳೆದೊಂದು ವಾರದಿಂದ ಮಳೆ ಬಾರದೆ ರೈತರು ಮುಂಗಾರು ಬೆಳೆ ತೊಗರಿ ಬಿತ್ತನೆ ಸ್ಥಗಿತಗೊಳಿಸಿದ್ದರು.

**ಬೀದರ್ ವರದಿ:** ಬೀದರ್ ಜಿಲ್ಲೆಯ ಹಲವೆಡೆ ಸತತ ಎರಡನೇ ದಿನವೂ ವರ್ಷಧಾರೆಯಾಗಿದೆ. ಭಾನುವಾರ ಸಂಜೆ ಅರ್ಧಗಂಟೆಗೂ ಹೆಚ್ಚು ಕಾಲ ಬಿರುಸಿನ ಮಳೆಯಾಗಿದೆ. ಜೋರು ಮಳೆಗೆ ಬೀದರ್‌ನ ಮೈಲೂರ್ ಬಡಾವಣೆಯಲ್ಲಿರುವ ಸರ್ಕಾರಿ ಶಾಲಾ ಕೊಠಡಿಯ ಗೋಡೆ ಕುಸಿದಿದೆ. ಜಿಲ್ಲೆಯ ಬಸವಕಲ್ಯಾಣ, ಭಾಲ್ಕಿ, ಚಿಟಗುಪ್ಪದಲ್ಲೂ ಮಳೆಯಾಗಿದೆ.

**ಮಂಗಳೂರು ವರದಿ:** ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೂ ಮಳೆ ಮುಂದುವರಿದಿದೆ. ಬೆಳಿಗ್ಗೆಯಿಂದ ಸಂಜೆವರೆಗೂ ಬಿಟ್ಟು ಬಿಟ್ಟು ಸಾಧಾರಣ ಮಳೆಯಾಯಿತು. ಪಶ್ಚಿಮ ಘಟ್ಟದ ತಪ್ಪಲಿನ ಪ್ರದೇಶಗಳಲ್ಲಿ ಮಳೆಯ ತೀವ್ರತೆ ಜಾಸ್ತಿ ಇತ್ತು.

ಜಿಲ್ಲೆಯಾದ್ಯಂತ ವಾರದಿಂದ ಈಚೆಗೆ ನಿತ್ಯವೂ ಮಳೆಯಾಗುತ್ತಿರುವುದರಿಂದ ಅಲ್ಲಲ್ಲಿ ಗುಡ್ಡ ಕುಸಿತ ಸಂಭವಿಸುತ್ತಿದೆ. ನಗರದ ಬಜಾಲ್‌ನಲ್ಲಿ ನಿರ್ಮಾಣ ಹಂತದಲ್ಲಿದ್ದ ಮನೆಯೊಂದು ಗುಡ್ಡ ಕುಸಿತದಿಂದ ಹಾನಿಗೊಳಗಾಗಿದೆ. ಪಂಜಿಮೊಗರುವಿನ ಇಳಿಜಾರು ಪ್ರದೇಶದಲ್ಲಿ ನಾಲ್ಕು ಮನೆಗಳು ಕುಸಿಯುವ ಅಪಾಯವನ್ನು ಎದುರಿಸುತ್ತಿವೆ. ಈ ಮನೆಗಳಲ್ಲಿ ವಾಸವಿದ್ದ ಕುಟುಂಬಗಳನ್ನು ಆಶ್ರಯ ಕೇಂದ್ರಕ್ಕೆ ಸ್ಥಳಾಂತರಿಸಲಾಗಿದೆ.

**ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)**

| ಜಲಾಶಯ | ಗರಿಷ್ಠ ಮಟ್ಟ (ಅಡಿಗಳಲ್ಲಿ) | ಇಂದಿನ ಮಟ್ಟ | ಒಳಹರಿವು (ಕ್ಯುಸೆಕ್‌ಗಳಲ್ಲಿ) | ಹೊರಹರಿವು (ಕ್ಯುಸೆಕ್‌ಗಳಲ್ಲಿ) |
|---|---|---|---|---|
| ಕೆಆರ್‌ಎಸ್* | 124.80 | 94.40 | 12,867 | 507 |
| ಹಾರಂಗಿ | 2,859 | 2,837.22 | 1,216 | 200 |
| ಕಬಿನಿ | 2,284 | 2,276.30 | 9,170 | 1,250 |
| ಹೇಮಾವತಿ | 2,922 | 2,888.52 | 5,569 | 250 |
| ಲಿಂಗನಮಕ್ಕಿ | 1,819 | 1,750.35 | 11,358 | 2,348 |
| ಸೂಪಾ (ಮೀ) | 564 | 525.85 | 5,096.38 | 4,035.70 |
| ಮಾಣಿ | 595 | 572.58 | 2,056 | 0 |
| ತುಂಗಭದ್ರಾ | 1,633 | 1,582.48 | 6,730 | 296 |
| ಮಲಪ್ರಭಾ | 2,079.50 | 2,041.85 | 0 | 194 |
| ಘಟಪ್ರಭಾ | 2,175 | 2,100.16 | 4,355 | 103 |
| ಭದ್ರಾ | 186 | 123.4 | 3,183 | 347 |
| ಆಲಮಟ್ಟಿ (ಮೀ) | 519.60 | 511.05 | 10,557 | 430 |
| ನಾರಾಯಣಪುರ (ಮೀ) | 492.25 | 489.20 | 141 | 30 |

* ನೆಲಮಟ್ಟದಿಂದ

# ಅಕ್ರಮ ಆಸ್ತಿ : ನಿವೃತ್ತ ಕಸ್ಟಮ್ಸ್ ಅಧಿಕಾರಿಗೆ ನಾಲ್ಕು ವರ್ಷ ಜೈಲು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿದ್ದ ಆರೋಪದಡಿ ಸಿಬಿಐ ದಾಖಲಿಸಿದ್ದ ಪ್ರಕರಣದಲ್ಲಿ ಕಸ್ಟಮ್ಸ್ ಇಲಾಖೆಯ ನಿವೃತ್ತ ಅಧೀಕ್ಷಕ ವಿ.ವಿಶ್ವೇಶ್ವರ ಭಟ್ ಅಪರಾಧಿ ಎಂದು ಸಾರಿರುವ ಸಿಬಿಐ ಪ್ರಕರಣಗಳ ವಿಶೇಷ ನ್ಯಾಯಾಲಯ, 4 ವರ್ಷ ಸಜೆ ಮತ್ತು ₹ 26.25 ಲಕ್ಷ ದಂಡ ವಿಧಿಸಿದೆ.

ಬೆಂಗಳೂರಿನ ಏರ್ ಕಸ್ಟಮ್ಸ್ ಕಮಿಷನರೇಟ್‌ನ ಏರ್ ಕಾರ್ಗೋ ಸಂಕೀರ್ಣದಲ್ಲಿ ಅಧೀಕ್ಷಕರಾಗಿದ್ದ ವಿಶ್ವೇಶ್ವರ ಭಟ್ ವಿರುದ್ಧ ಸಿಬಿಐನ ಭ್ರಷ್ಟಾಚಾರ ನಿಯಂತ್ರಣ ಘಟಕವು 2016ರ ಮಾರ್ಚ್ 31ರಂದು ಪ್ರಕರಣ ದಾಖಲಿಸಿ ತನಿಖೆ ಆರಂಭಿಸಿತ್ತು. 2010ರ ಜನವರಿ 1ರಿಂದ 2016ರ ಮಾರ್ಚ್ 16ರ ಅವಧಿಯಲ್ಲಿ ಆರೋಪಿ ₹ 39.65 ಲಕ್ಷ ಮೌಲ್ಯದ ಅಕ್ರಮ ಆಸ್ತಿ ಸಂಪಾದಿಸಿದ್ದರು ಎಂದು ಎಫ್‌ಐಆರ್ ದಾಖಲಿಸಲಾಗಿತ್ತು.

ವಿಚಾರಣೆ ಪೂರ್ಣಗೊಳಿಸಿ ಆದೇಶ ಪ್ರಕಟಿಸಿರುವ ವಿಶೇಷ ನ್ಯಾಯಾಲಯದ ನ್ಯಾಯಾಧೀಶರು, ವಿಶ್ವೇಶ್ವರ ಭಟ್ ವಿರುದ್ಧದ ಆರೋಪಗಳು ಸಾಬೀತಾಗಿವೆ ಎಂಬ ತೀರ್ಮಾನ ನೀಡಿದ್ದಾರೆ. ಅಪರಾಧಿಗೆ ಜೈಲು ಶಿಕ್ಷೆ ಮತ್ತು ದಂಡ ಎರಡನ್ನೂ ವಿಧಿಸಿ ಆದೇಶ ಹೊರಡಿಸಿದ್ದಾರೆ.

ಮುಖ್ಯಮಂತ್ರಿಗೆ ಪತ್ರ ಬರೆದ ಬಿಜೆಪಿ ಸಂಸದರು, ರಾಜ್ಯಸಭಾ ಸದಸ್ಯರು

# ವಿತ್ತೀಯ ಕೊರತೆ ಹೆಚ್ಚಳ: ಸಂಸದರ ಕಳವಳ

ಪ್ರಜಾವಾಣಿ ವಾರ್ತೆ

**ನವದೆಹಲಿ:** ಹಣಕಾಸು ವ್ಯವಸ್ಥೆಯ ಅಸಮರ್ಪಕ ನಿರ್ವಹಣೆಯಿಂದ ಕರ್ನಾಟಕದಲ್ಲಿ ಕಳೆದೊಂದು ವರ್ಷದಿಂದ ಆದಾಯ, ವಿತ್ತೀಯ ಕೊರತೆ ಹೆಚ್ಚಳವಾಗಿದೆ ಎಂದು ಕೇಂದ್ರದ ನಾಲ್ವರು ಸಚಿವರು, ಬಿಜೆಪಿ ಸಂಸದರು ಬೇಸರ ವ್ಯಕ್ತಪಡಿಸಿದ್ದಾರೆ.

ಈ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಕೇಂದ್ರ ಭಾರಿ ಕೈಗಾರಿಕೆ ಸಚಿವ ಎಚ್‌.ಡಿ.ಕುಮಾರಸ್ವಾಮಿ, ಆಹಾರ ಸಚಿವ ಪ್ರಲ್ಹಾದ ಜೋಶಿ, ರೈಲ್ವೆ ಹಾಗೂ ಜಲಶಕ್ತಿ ರಾಜ್ಯ ಸಚಿವ ವಿ.ಸೋಮಣ್ಣ, ಅತಿ ಸಣ್ಣ, ಸಣ್ಣ ಹಾಗೂ ಮಧ್ಯಮ ಕೈಗಾರಿಕಾ ಸಚಿವೆ ಶೋಭಾ ಕರಂದ್ಲಾಜೆ, ಸಂಸದರಾದ ಬಸವರಾಜ ಬೊಮ್ಮಾಯಿ, ಜಗದೀಶ ಶೆಟ್ಟರ್, ಸಂಸದರಾದ ವಿಶ್ವೇಶರ ಹೆಗಡೆ ಕಾಗೇರಿ, ಪಿ.ಸಿ.ಮೋಹನ್, ಲಹರ್ ಸಿಂಗ್ ಸಿರೋಯಾ, ಗೋವಿಂದ ಕಾರಜೋಳ, ಮಲ್ಲೇಶ್ ಬಾಬು ಐದು ಪುಟಗಳ ಪತ್ರ ಬರೆದಿದ್ದಾರೆ.

'ವ್ಯವಸ್ಥಿತ ಹಣಕಾಸಿನ ಯೋಜನೆಗಳನ್ನು ರೂಪಿಸದೆ ಹಾಗೂ ಬಜೆಟ್‌ನಲ್ಲಿ ಹಂಚಿಕೆ ಮಾಡದೆ ಗ್ಯಾರಂಟಿಗಳನ್ನು ಘೋಷಣೆ ಮಾಡಿದ್ದರಿಂದ ರಾಜ್ಯದ ಅಭಿವೃದ್ಧಿ ಚಟುವಟಿಕೆಗಳ ಮೇಲೆ ಹೊಡೆತ ಬಿದ್ದಿದೆ. ಪರಿಣಾಮವಾಗಿ, ಗ್ಯಾರಂಟಿಗಳೂ ಜನರನ್ನು ತಲುಪುತ್ತಿಲ್ಲ ಹಾಗೂ ಅಭಿವೃದ್ಧಿ ಚಟುವಟಿಕೆಗಳು ನಡೆಯುತ್ತಿಲ್ಲ. ಹಣಕಾಸಿನ ವ್ಯವಸ್ಥೆಯನ್ನು ಸಮರ್ಪಕವಾಗಿ ನಿರ್ವಹಣೆ ಮಾಡಿದ್ದರೆ ಕೇಂದ್ರ ಸರ್ಕಾರದ ಬಹುತೇಕ ಯೋಜನೆಗಳು ವಿಳಂಬವೇ ಆಗುತ್ತಿರಲಿಲ್ಲ' ಎಂದು ಅವರು ಹೇಳಿದ್ದಾರೆ.

ಹುಬ್ಬಳ್ಳಿ, ಅಂಕೋಲಾ, ತುಮಕೂರು–ಚಿತ್ರದುರ್ಗ ಹೊಸ ಮಾರ್ಗ, ಧಾರವಾಡ–ಬೆಳಗಾವಿ, ಕುಡಚಿ–ಬಾಗಲಕೋಟೆ ಮಾರ್ಗ ಸೇರಿ ಹಲವು ರೈಲು ಮಾರ್ಗಗಳ ಕಾಮಗಾರಿ ನನೆಗುದಿಗೆ ಬಿದ್ದಿವೆ. ಕೇಂದ್ರ ಸರ್ಕಾರವು ಈ ಸಲ ಬಜೆಟ್‌ನಲ್ಲಿ ರಾಜ್ಯ ರೈಲು ಯೋಜನೆಗಳ ಅನುಷ್ಠಾನಕ್ಕೆ ₹7,524 ಕೋಟಿ ಮೀಸಲಿಟ್ಟಿದೆ. ಆದರೆ, ಭೂಸ್ವಾಧೀನ ವಿಳಂಬ ಹಾಗೂ ರಾಜ್ಯದ ಪಾಲಿನ ಮೊತ್ತ ಬಿಡುಗಡೆಯಾಗದಿರುವ ಕಾರಣ ಈ ಯೋಜನೆಗಳ ಅನುಷ್ಠಾನ ವಿಳಂಬವಾಗಿದೆ' ಎಂದು ಕಿಡಿಕಾರಿದ್ದಾರೆ.

5,225 ಕಿ.ಮೀ. ಉದ್ದದ 39 ರಾಷ್ಟ್ರೀಯ ಹೆದ್ದಾರಿಗಳ ಉನ್ನತೀಕರಣಕ್ಕೆ ಕೇಂದ್ರ ಸರ್ಕಾರ ತಾತ್ವಿಕ ಅನುಮೋದನೆ ಕೊಟ್ಟಿದೆ. ಈ ಯೋಜನೆಗಳ ಸಾಮಾಜಿಕ– ಆರ್ಥಿಕ ಸ್ಥಿತಿಗತಿ, ಭೂಸ್ವಾಧೀನದ ಪ್ರಗತಿ ಸೇರಿ ಅಗತ್ಯ ವಿವರ ಒದಗಿಸಬೇಕು. ಶಿರಾಡಿ ಘಾಟ್‌ನಲ್ಲಿ ಸುರಂಗ ನಿರ್ಮಾಣದ ಪ್ರಸ್ತಾವದ ಇತ್ತೀಚಿನ ವಿವರ ನೀಡಬೇಕು. ಕೇಂದ್ರದ ಮೇಲೆ ಒತ್ತಡ ತಂದು ಈ ಯೋಜನೆಗಳ ಅನುಷ್ಠಾನಕ್ಕೆ ಸಹಕರಿಸಲಾಗುವುದು ಎಂದು ಸ್ಪಷ್ಟಪಡಿಸಿದ್ದಾರೆ.

> **ರಾಜ್ಯದ ವಿತ್ತೀಯ ಕೊರತೆ ಶೇ 3ರ ಮಿತಿಯಲ್ಲೇ ಇದೆ. ಕೇಂದ್ರ ಸರ್ಕಾರದ್ದು ವಿತ್ತೀಯ ಕೊರತೆ ಎಷ್ಟು ಇದೆ ಎಂಬುದು ಗೊತ್ತಿದೆಯಾ. ಕೇಂದ್ರ ಸಚಿವರು ಹಾಗೂ ಸಂಸದರು ಮೊದಲು ಅದನ್ನು ಪ್ರಶ್ನಿಸಲಿ**
> **ಸಿದ್ದರಾಮಯ್ಯ**, ಮುಖ್ಯಮಂತ್ರಿ

### ವಿತ್ತೀಯ ಕೊರತೆ ಶೇ 3ಕ್ಕೆ ಏರಿಕೆ

'2022–23ನೇ ಸಾಲಿನಲ್ಲಿ ವಿತ್ತೀಯ ಕೊರತೆ ಶೇ 2.1 (₹46,622 ಕೋಟಿ) ಆಗಿತ್ತು. ಅದು 2023–24ರಲ್ಲಿ ಶೇ 2.7ಕ್ಕೆ (₹68,505 ಕೋಟಿ) ಹಾಗೂ 2024–25ರಲ್ಲಿ ಶೇ 3ಕ್ಕೆ (₹82,981 ಕೋಟಿ) ಏರಿದೆ. ಆದಾಯ ಕೊರತೆಯು 2022–23ರಲ್ಲಿ ಶೇ –0.6 (–13,496 ಕೋಟಿ) ಇತ್ತು. 23–24ರಲ್ಲಿ ಶೇ 0.5 (₹13,951 ಕೋಟಿ) ಹಾಗೂ 24–25ರಲ್ಲಿ ಶೇ 1 (₹27,354) ಕೋಟಿ ಆಗಿದೆ. 22-23ಕ್ಕೆ ಹೋಲಿಸಿದರೆ ವಿತ್ತೀಯ ಕೊರತೆ 24–24ರಲ್ಲಿ ಶೇ 78ರಷ್ಟು ಹೆಚ್ಚಾಗಿದೆ. ಆದಾಯ ಹೆಚ್ಚುವರಿಯ ರಾಜ್ಯ ಎಂಬ ಹೆಗ್ಗಳಿಕೆಗೆ ಕರ್ನಾಟಕ ಪಾತ್ರವಾಗಿತ್ತು. ಈಗ ಆದಾಯ ಕೊರತೆಯ ರಾಜ್ಯವಾಗಿದೆ. ಇದು ರಾಜ್ಯದ ಆಡಳಿತ ಹಾಗೂ ಆರ್ಥಿಕ ವ್ಯವಸ್ಥೆ ದಿಕ್ಕು ತಪ್ಪಿರುವುದಕ್ಕೆ ಸಾಕ್ಷಿ' ಎಂದು ಸಂಸದರು ಪ್ರತಿಪಾದಿಸಿದ್ದಾರೆ.

'2024–25ನೇ ಸಾಲಿನ ರಾಜ್ಯ ಬಜೆಟ್‌ನಲ್ಲಿ ಒಟ್ಟಾರೆ ವೆಚ್ಚ ಶೇ 16.8 ಜಾಸ್ತಿಯಾಗಿದೆ. ಆದರೆ, ಬಂಡವಾಳ ವೆಚ್ಚವನ್ನು ಶೇ 28ರಿಂದ ಶೇ 15ಕ್ಕೆ ಕಡಿತಗೊಂಡಿದೆ.ಇತಿಹಾಸದಲ್ಲಿ ಮೊದಲಿಗೆ ವರ್ಷವೊಂದರಲ್ಲಿ ರಾಜ್ಯ ಸರ್ಕಾರ ₹1 ಲಕ್ಷ ಕೋಟಿ ಸಾಲ ಎತ್ತಿದೆ' ಎಂದು ಅವರು ಬೊಟ್ಟು ಮಾಡಿದ್ದಾರೆ.


## ಕೋಟ ಶ್ರೀನಿವಾಸ ಪೂಜಾರಿಗೆ ಮಾತೃವಿಯೋಗ



ಲಚ್ಚಿ ಪೂಜಾರಿ

**ಕೋಟ (ಬ್ರಹ್ಮಾವರ):** ಉಡುಪಿ-ಚಿಕ್ಕಮಗಳೂರು ಕ್ಷೇತ್ರದ ಸಂಸದ ಕೋಟ ಶ್ರೀನಿವಾಸ ಪೂಜಾರಿ ಅವರ ತಾಯಿ, ಕೋಟತಟ್ಟು ನಿವಾಸಿ ಲಚ್ಚಿ ಪೂಜಾರಿ (97) ಭಾನುವಾರ ನಿಧನರಾದರು.

ಅವರಿಗೆ ಪುತ್ರ ಕೋಟ ಶ್ರೀನಿವಾಸ ಪೂಜಾರಿ ಹಾಗೂ ಇಬ್ಬರು ಪುತ್ರಿಯರು ಇದ್ದಾರೆ. ಕೋಟದ ಹಿಂದೂ ರುದ್ರ ಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿತು.



**ಸುಭಾಷಿತ**

ಸುಖವನ್ನು ಸಹಿಸುವ ಶಕ್ತಿ ಒಬ್ಬನಿಗಿದ್ದರೆ, ದುಃಖವನ್ನು ಸಹಿಸುವ ಶಕ್ತಿ ನೂರಾರು ಮಂದಿಗಿರುತ್ತದೆ.

-ಥಾಮಸ್ ಕಾರ್ಲೈಲ್

# ಟಿ20 ವಿಶ್ವಕಪ್ ವಿಜಯ ಭಾರತದ ಕಿರೀಟಕ್ಕೆ ಮತ್ತೊಂದು ಗರಿ

**ಭಾರತದ** ಕೋಟ್ಯಂತರ ಕ್ರಿಕೆಟ್ ಪ್ರೇಮಿಗಳ ಕನಸು ನನಸಾಯಿತು. ರೋಹಿತ್ ಶರ್ಮಾ ನಾಯಕತ್ವದ ತಂಡವು ವೆಸ್ಟ್ ಇಂಡೀಸ್‌ನ ಬಾರ್ಬಾಡೋಸ್‌ನಲ್ಲಿ ಟ್ವೆಂಟಿ-20 ಕ್ರಿಕೆಟ್ ವಿಶ್ವಕಪ್ ಗೆದ್ದಿದೆ. ಭಾರತದ ತಂಡವು 11 ವರ್ಷಗಳಿಂದ ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಟ್ರೋಫಿ ಜಯಿಸಿರಲಿಲ್ಲ. ಈ ಗೆಲುವು ಆ ಬರ ನೀಗಿಸಿದೆ. ಚುಟುಕು ಕ್ರಿಕೆಟ್ ಮಾದರಿಯಲ್ಲಿ ಭಾರತಕ್ಕೆ ಒಲಿದ ಎರಡನೇ ಪ್ರಶಸ್ತಿ ಇದು. 2007ರಲ್ಲಿ ಮಹೇಂದ್ರಸಿಂಗ್ ಧೋನಿ ನಾಯಕತ್ವದ ತಂಡವು ಮೊದಲ ಟಿ20 ಟೂರ್ನಿಯಲ್ಲಿ ಕಿರೀಟ ಧರಿಸಿತ್ತು. ಅಲ್ಲಿಂದ ಇಲ್ಲಿಯವರೆಗೆ ಭಾರತದ ಕ್ರಿಕೆಟ್ ಕ್ಷೇತ್ರವು ಹಲವು ಏಳು-ಬೀಳುಗಳನ್ನು ಕಂಡಿದೆ. 2011ರಲ್ಲಿ ಏಕದಿನ ಕ್ರಿಕೆಟ್ ವಿಶ್ವಕಪ್ ಮತ್ತು 2013ರಲ್ಲಿ ಚಾಂಪಿಯನ್ಸ್ ಟ್ರೋಫಿ ಜಯಿಸಿದೆ. ಇದರ ನಂತರ ಎರಡು ಬಾರಿ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್‌ನ ಪ್ರಶಸ್ತಿ ಸುತ್ತು ಸೇರಿದಂತೆ ಮೂರು ಮಾದರಿಗಳ ಕ್ರಿಕೆಟ್‌ನಲ್ಲಿಯೂ ನಾಕೌಟ್ ಹಂತದಲ್ಲಿ ಎಡವಿದೆ. ಏಳು ತಿಂಗಳುಗಳ ಹಿಂದಷ್ಟೇ ಅಹಮದಾಬಾದ್‌ನಲ್ಲಿ ನಡೆದ ಏಕದಿನ ವಿಶ್ವಕಪ್ ಟೂರ್ನಿಯ ಫೈನಲ್ ಪಂದ್ಯದಲ್ಲಿ ಆಸ್ಟ್ರೇಲಿಯಾ ಎದುರು ರೋಹಿತ್ ಪಡೆಯು ಸೋತಿತ್ತು. ಕ್ರಿಕೆಟ್‌ಪ್ರಿಯರನ್ನು ಕಾಡಿದ್ದ ಆ ನೋವನ್ನು ಈ ಗೆಲುವು ಶಮನಗೊಳಿಸಿದೆ. ಸೋಲು, ಟೀಕೆಗಳಿಗೆ ಕುಗ್ಗದೇ, ಲೋಪಗಳನ್ನು ತಿದ್ದಿಕೊಂಡು ಮುನ್ನುಗ್ಗಿದರೆ ಯಶಸ್ಸು ಸಾಧ್ಯ ಎಂಬುದನ್ನು ಈ ಜಯ ತೋರಿಸಿಕೊಟ್ಟಿದೆ. ಈ ಟೂರ್ನಿಗಾಗಿ ತಂಡವನ್ನು ಆಯ್ಕೆ ಮಾಡಿದಾಗ ನಾಲ್ವರು ಸ್ಪಿನ್ನರ್‌ಗಳು ಏಕೆ ಎಂದು ಹಲವರು ಕೇಳಿದ್ದರು. ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯಲ್ಲಿ ರೋಹಿತ್ ಶರ್ಮಾ ಅಭಿಮಾನಿಗಳ ಕೆಂಗಣ್ಣಿಗೆ ಗುರಿಯಾಗಿದ್ದ ಹಾರ್ದಿಕ್ ಪಾಂಡ್ಯ ಮತ್ತು ರನ್ ಯಂತ್ರವೆಂದೇ ಕರೆಸಿಕೊಳ್ಳುವ ವಿರಾಟ್ ಕೊಹ್ಲಿ ಅವರ ಆಯ್ಕೆಯ ಬಗ್ಗೆಯೂ ಅಪಸ್ವರ ಕೇಳಿಬಂದಿತ್ತು. ವಿರಾಟ್ ಅವರು ಇಡೀ ಟೂರ್ನಿಯಲ್ಲಿ ಬ್ಯಾಟಿಂಗ್ ವೈಫಲ್ಯ ಅನುಭವಿಸಿದರೂ ಫೈನಲ್‌ನಲ್ಲಿ ಮಾತ್ರ ಚೆಂದದ ಅರ್ಧಶತಕ ಗಳಿಸಿ ಗೆಲುವಿಗೆ ಅಮೂಲ್ಯ ಕಾಣಿಕೆ ನೀಡಿದರು. ಪಾಂಡ್ಯ ತಮ್ಮ ಆಲ್‌ರೌಂಡ್ ಆಟದಿಂದ ಮಿಂಚಿದರು. ಸ್ಪಿನ್ನರ್‌ಗಳೂ ತಮ್ಮ ಹೊಣೆಯನ್ನು ಚೆನ್ನಾಗಿಯೇ ನಿಭಾಯಿಸಿದರು. ಅದರಲ್ಲೂ ಸ್ಪಿನ್ ಆಲ್‌ರೌಂಡರ್ ಅಕ್ಷರ್ ಪಟೇಲ್ ಅವರ ಅಮೋಘ ಆಟ ಬಹುಕಾಲ ನೆನಪಿನಲ್ಲಿ ಉಳಿಯುವಂತಹದ್ದು. ವೇಗಿ ಜಸ್‌ಪ್ರೀತ್ ಬೂಮ್ರಾ ಅವರಂತೂ ಎದುರಾಳಿಗಳಿಗೆ ಸಿಂಹಸ್ವಪ್ನ-ರಾದರು. ಅವರೊಂದಿಗೆ ಅರ್ಷದೀಪ್ ಸಿಂಗ್ ಕೂಡ ಮಿಂಚಿದರು. ಬ್ಯಾಟಿಂಗ್‌ನಲ್ಲಿ ಅಸ್ಥಿರತೆ ತೋರಿದ್ದ ಸೂರ್ಯಕುಮಾರ್ ಯಾದವ್ ಫೀಲ್ಡಿಂಗ್‌ನಲ್ಲಿ ನೀಡಿದ ಕಾಣಿಕೆ ಅಸಾಧಾರಣ. ವಿಕೆಟ್‌ಕೀಪರ್ ರಿಷಭ್ ಪಂತ್ ಅವರು ಭೀಕರ ರಸ್ತೆ ಅಪಘಾತದಲ್ಲಿ ತೀವ್ರವಾಗಿ ಗಾಯಗೊಂಡಿದ್ದರು. ಅದರಿಂದ ಚೇತರಿಸಿಕೊಂಡ ನಂತರ ಆಡಿದ ಮೊದಲ ಅಂತರರಾಷ್ಟ್ರೀಯ ಟೂರ್ನಿ ಇದು. ಅವರ ವಿಕೆಟ್‌ಕೀಪಿಂಗ್ ಕೌಶಲ, ಚಾಕಚಕ್ಯತೆಯು ಗಮನ ಸೆಳೆಯಿತು. ಇವರೆಲ್ಲರ ಸಂಘಟಿತ ಆಟದ ಪರಿಣಾಮವಾಗಿ ಭಾರತ ತಂಡವು ಈ ಟೂರ್ನಿಯಲ್ಲಿ ಅಜೇಯವಾಗಿ ಉಳಿಯಿತು. ಗುಂಪು ಹಂತದಲ್ಲಿ ಪಾಕಿಸ್ತಾನ, ಸೂಪರ್ ಎಂಟರ ಹಂತದಲ್ಲಿ ಆಸ್ಟ್ರೇಲಿಯಾ, ಬಾಂಗ್ಲಾದೇಶ, ಅಫ್ಗಾನಿಸ್ತಾನ ಮತ್ತು ಸೆಮಿಫೈನಲ್‌ನಲ್ಲಿ ಹೋದ ಬಾರಿಯ ಚಾಂಪಿಯನ್ ಇಂಗ್ಲೆಂಡ್ ಎದುರು ಗೆದ್ದಿದ್ದು ಗಮನಾರ್ಹ ಸಾಧನೆ. ಫೈನಲ್‌ನಲ್ಲಿ ಎದುರಾಳಿಯಾಗಿದ್ದ ಏಡನ್ ಮರ್ಕರಂ ನಾಯಕತ್ವದ ದಕ್ಷಿಣ ಆಫ್ರಿಕಾ ತಂಡವೂ ಟೂರ್ನಿಯುದ್ದಕ್ಕೂ ಅಜೇಯವಾಗಿ ಉಳಿದಿತ್ತು. ಆದ್ದರಿಂದಲೇ ಉಭಯ ತಂಡಗಳ ಫೈನಲ್ ಹಣಾಹಣಿಯು ರೋಚಕವಾಗಿತ್ತು.



ಸೋಲು, ಟೀಕೆಗಳಿಗೆ ಕುಗ್ಗದೇ ಲೋಪಗಳನ್ನು ತಿದ್ದಿಕೊಂಡು ಮುನ್ನುಗ್ಗಿದರೆ ಯಶಸ್ಸು ಸಾಧ್ಯ ಎಂಬುದನ್ನು ಈ ಜಯ ತೋರಿಸಿಕೊಟ್ಟಿದೆ

ಇದೆಲ್ಲದರಾಚೆ ಭಾರತಕ್ಕೆ ಈ ಟೂರ್ನಿಯು ಭಾವನಾತ್ಮಕವಾದುದು. ಏಕೆಂದರೆ, ತಾರಾವರ್ಚಸ್ಸಿನ ಮೂವರು ಆಟಗಾರರಾದ ರೋಹಿತ್ ಶರ್ಮಾ, ವಿರಾಟ್ ಕೊಹ್ಲಿ ಮತ್ತು ರವೀಂದ್ರ ಜಡೇಜ ಅವರು ಇದೇ ಸಂದರ್ಭದಲ್ಲಿ ಟಿ20 ಮಾದರಿಗೆ ವಿದಾಯ ಹೇಳಿದ್ದಾರೆ. ತಂಡವನ್ನು ಮುನ್ನಡೆಸಿದ ರೋಹಿತ್ ಮತ್ತು ವಿರಾಟ್ ಅವರು ಯುವ ಆಟಗಾರರಿಗೆ ಮಾದರಿಯಾಗಿದ್ದಾರೆ. ನಾಯಕರಾಗಿ ವಿರಾಟ್ ಐಸಿಸಿ ಟ್ರೋಫಿ ಜಯದ ಸಾಧನೆ ಮಾಡದಿದ್ದರೂ ಭಾರತದ ಕ್ರಿಕೆಟ್‌ನ ಬ್ರ್ಯಾಂಡ್ ಮೌಲ್ಯವನ್ನು ಉತ್ತುಂಗಕ್ಕೇರಿಸಿದವರು. ರೋಹಿತ್ ನಾಯಕರಾಗಿ ತಮ್ಮದೇ ಆದ ಛಾಪು ಮೂಡಿಸಿದವರು, ಇದೀಗ ಟಿ20 ವಿಶ್ವಕಪ್ ವಿಜೇತರೂ ಆಗಿದ್ದಾರೆ. ಇವರಲ್ಲದೇ ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಕೂಡ ತಮ್ಮ ಕಾರ್ಯಾವಧಿಯನ್ನು ಪೂರ್ಣಗೊಳಿಸಿದ್ದಾರೆ. ಬಲಿಷ್ಠ ತಂಡವನ್ನು ರೂಪಿಸುವ ಬಗೆಯನ್ನು ಹೇಳಿಕೊಟ್ಟಿದ್ದಾರೆ. ಏಳು ತಿಂಗಳುಗಳ ಹಿಂದಷ್ಟೇ ಏಕದಿನ ಕ್ರಿಕೆಟ್ ವಿಶ್ವಕಪ್ ಫೈನಲ್ ಪಂದ್ಯದಲ್ಲಿ ಸೋತಿದ್ದ ತಂಡವು ಮತ್ತೆ ಪುಟಿದೆದ್ದು ಈಗ ಪ್ರಶಸ್ತಿ ಜಯಿಸಿದ್ದರ ಹಿಂದೆ ದ್ರಾವಿಡ್ ಅವರ ಮಾರ್ಗದರ್ಶನದ ಕೊಡುಗೆ ಇದೆ ಎಂಬುದರಲ್ಲಿ ಎರಡು ಮಾತಿಲ್ಲ. ಮೂವರು ಪ್ರಮುಖ ಆಟಗಾರರ ವಿದಾಯದಿಂದ ತೆರವಾದ ಸ್ಥಾನವನ್ನು ತುಂಬುವವರು ಯಾರು ಎಂಬುದನ್ನು ಕಾದು ನೋಡಬೇಕಿದೆ. ಅಂತರರಾಷ್ಟ್ರೀಯ ಕ್ರಿಕೆಟ್ ಬೆಳವಣಿಗೆಯ ದೃಷ್ಟಿಯಿಂದಲೂ ಈ ಟೂರ್ನಿಯು ಪ್ರಮುಖವಾಗಿದೆ. ಇದೇ ಮೊದಲ ಬಾರಿಗೆ ಅಮೆರಿಕವು ವೆಸ್ಟ್ ಇಂಡೀಸ್ ಜೊತೆ ಸೇರಿ ಆತಿಥ್ಯ ವಹಿಸಿತ್ತು. ಇದರೊಂದಿಗೆ ಕ್ರಿಕೆಟ್ ಆಟಕ್ಕೆ ಹೊಸದೊಂದು ಮಾರುಕಟ್ಟೆ ತೆರೆದುಕೊಂಡಿತು. ಆದರೆ, ಇಲ್ಲಿ ಬಳಸಲಾಗಿದ್ದ ಡ್ರಾಪ್ ಇನ್ ಪಿಚ್‌ಗಳ ಗುಣಮಟ್ಟ ಮತ್ತು ವೇಳಾಪಟ್ಟಿ ರೂಪಿಸಿದ ರೀತಿ ಕುರಿತು ಟೀಕೆಗಳು ಕೇಳಿಬಂದವು. ಬಲಾಢ್ಯ ನ್ಯೂಜಿಲೆಂಡ್, ಪಾಕಿಸ್ತಾನ, ವೆಸ್ಟ್ ಇಂಡೀಸ್ ಹಾಗೂ ಆಸ್ಟ್ರೇಲಿಯಾ ತಂಡಗಳು ಬೇಗ ನಿರ್ಗಮಿಸಿದವು. ಇದೇ ಮೊದಲ ಬಾರಿಗೆ ಆಡಿದ ಅಮೆರಿಕ ತಂಡವು ಸೂಪರ್ ಎಂಟರ ಹಂತ ಪ್ರವೇಶಿಸಿತು. ಅಫ್ಗಾನಿಸ್ತಾನ ತಂಡವು ಘಟಾನುಘಟಿಗಳನ್ನು ಸೋಲಿಸಿ ಸೆಮಿಫೈನಲ್ ಪ್ರವೇಶಿಸಿತು. ಯುಗಾಂಡ, ನಮೀಬಿಯಾ, ಐರ್ಲೆಂಡ್ ತಂಡಗಳೂ ಗಮನ ಸೆಳೆದವು. ಇದರೊಂದಿಗೆ ಟಿ20 ಕ್ರಿಕೆಟ್ ಮಾದರಿಯಲ್ಲಿ ಯಾವುದೇ ಒಂದು ತಂಡದ ಪ್ರಾಬಲ್ಯ ಹೆಚ್ಚು ಕಾಲ ನಡೆಯುವುದಿಲ್ಲ ಎಂಬುದು ಮತ್ತೊಮ್ಮೆ ಸಾಬೀತಾಯಿತು.

## ದಿನದ ಟ್ವೀಟ್

### ದ್ರಾವಿಡ್ ಕೊಡುಗೆ: ಪ್ರಧಾನಿ ಪ್ರಶಂಸೆ



**ತರಬೇತುದಾರರಾಗಿ ರಾಹುಲ್ ದ್ರಾವಿಡ್ ಅವರ ವಿಸ್ಮಯಕಾರಿ ಪಯಣವು ಭಾರತದ ಕ್ರಿಕೆಟ್‌ನ ಯಶಸ್ಸಿಗೆ ಕೊಡುಗೆ ನೀಡಿದೆ. ಅಚಲವಾದ ಸಮರ್ಪಣಾಭಾವ, ಸೂಕ್ಷ್ಮನೋಟದ ಕಾರ್ಯತಂತ್ರ ಮತ್ತು ಅರ್ಹ ಪ್ರತಿಭೆಗಳನ್ನು ಪೋಷಿಸಿದ್ದು ತಂಡದ ರೂಪಾಂತರಕ್ಕೆ ಕಾರಣವಾಯಿತು. ಅವರಿತ್ತ ಕೊಡುಗೆಗಳು ಹಾಗೂ ತಲೆಮಾರುಗಳ ಮೇಲೆ ಅವರು ಬೀರಿರುವ ಪ್ರಭಾವಕ್ಕೆ ದೇಶವು ಆಭಾರಿಯಾಗಿದೆ. ಅವರು ವಿಶ್ವಕಪ್ ಎತ್ತಿಹಿಡಿದಿರುವುದನ್ನು ನೋಡಲು ನಮಗೆ ಸಂತಸವಾಗುತ್ತಿದೆ. ಅವರನ್ನು ಅಭಿನಂದಿಸಲು ಆನಂದವಾಗುತ್ತಿದೆ.**

**ನರೇಂದ್ರ ಮೋದಿ,** ಪ್ರಧಾನಮಂತ್ರಿ

## ಕಿಡಿನುಡಿ

**ಕಾಂಗ್ರೆಸ್‌ಗೆ ಹೈಕಮಾಂಡ್ ಅಲ್ಲ; ಕಮಾಂಡೇ ಇಲ್ಲ. ಪಕ್ಷದಲ್ಲಿ ಅಶಿಸ್ತು ತುಂಬಿದೆ. ಸಚಿವರು, ಶಾಸಕರನ್ನು ನಿಯಂತ್ರಿಸಲು ವರಿಷ್ಠರಿಗೆ ಆಗುತ್ತಿಲ್ಲ. ಅವರಿಗೆ ಯಾವುದೇ ಹಿಡಿತ ಇಲ್ಲ.**



**ಪ್ರಲ್ಹಾದ ಜೋಶಿ**
ಕೇಂದ್ರ ಆಹಾರ ಸಚಿವ

## 25 ವರ್ಷಗಳ ಹಿಂದೆ

ಗುರುವಾರ, 1-7-1999

• **ಅತಿಕ್ರಮಣಕಾರರಿಗೆ ತಕ್ಕ ಪಾಠ: 4 ನೆಲೆ ನಾಶ**

ನವದೆಹಲಿ, ಜೂನ್ 30– ಭಾರತೀಯ ಸೇನೆ ಮತ್ತು ವಾಯುಪಡೆಯ ಜಂಟಿ ಕಾರ್ಯಾಚರಣೆಯಲ್ಲಿ ಬಟಾಲಿಕ್ ಮತ್ತು ಡ್ರಾಸ್ ವಲಯದಲ್ಲಿ ಪಾಕಿಸ್ತಾನಿ ಸೈನಿಕರು ಮತ್ತು ಉಗ್ರಗಾಮಿಗಳನ್ನು ಸದೆಬಡಿಯಲಾಗಿದೆ ಹಾಗೂ ನಾಲ್ಕು ಪ್ರಮುಖ ನೆಲೆಗಳನ್ನು ಪುನಃ ವಶಕ್ಕೆ ಪಡೆಯಲಾಗಿದೆ.

ಪಾಕಿಸ್ತಾನದ ಕಡೆ 40 ಮಂದಿ ಸತ್ತಿದ್ದು, 30 ಮಂದಿ ಗಾಯಗೊಂಡಿದ್ದಾರೆ. ಭಾರತೀಯ ಸೇನೆಯು ಮೂವರು ಅಧಿಕಾರಿಗಳು ಸೇರಿ 23 ಯೋಧರನ್ನು ಕಳೆದುಕೊಂಡಿದೆ.

• **ಅಣ್ವಸ್ತ್ರ ಪ್ರಯೋಗ: ಪಾಕ್ ಬೆದರಿಕೆ**

ಇಸ್ಲಾಮಾಬಾದ್, ಜೂನ್ 30 (ಪಿಟಿಐ)– ಅಣ್ವಸ್ತ್ರ ಬಳಸುವುದಕ್ಕೆ ಸಹ ಹಿಂಜರಿಯುವುದಿಲ್ಲ ಎಂದು ಪಾಕಿಸ್ತಾನ ಇಂದು ಮತ್ತೊಮ್ಮೆ ಬೆದರಿಕೆ ಹಾಕಿದೆ. ಇದೇ ವೇಳೆ, ತಾನು ಕಾಶ್ಮೀರಿ ಭಯೋತ್ಪಾದಕರಿಗೆ ನೀಡುತ್ತಿರುವ ಬೆಂಬಲವನ್ನು ಮುಂದುವರಿಸುವುದಾಗಿ ಅದು ಸ್ಪಷ್ಟಪಡಿಸಿದೆ. ಕಾರ್ಗಿಲ್ ಬಿಕ್ಕಟ್ಟಿನ ಬಗ್ಗೆ ಚರ್ಚಿಸಲು ಕರೆಯಲಾಗಿದ್ದ ಸೆನೆಟ್ ಸಭೆಯ ಮುಕ್ತಾಯಕ್ಕೆ ಈ ಹೇಳಿಕೆ ಹೊರಬಿದ್ದಿದೆ.

## 50 ವರ್ಷಗಳ ಹಿಂದೆ

ಸೋಮವಾರ, 1-7-1974

• **ಮಾಜಿ ಮಹಾರಾಜರ ಪುತ್ರಿ ಗಾಯತ್ರಿ ದೇವಿ ನಿಧನ**

ಬೆಂಗಳೂರು, ಜೂನ್ 30– ಮಾಜಿ ಮಹಾರಾಜ ಶ್ರೀ ಜಯಚಾಮರಾಜ ಒಡೆಯರ್ ಪುತ್ರಿ ಶ್ರೀಮತಿ ಗಾಯತ್ರಿ ದೇವಿ ಅವರು ಇಂದು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ನಿಧನರಾದರು.


ದಿವಂಗತರಿಗೆ 28 ವರ್ಷ ವಯಸ್ಸಾಗಿತ್ತು. ಪತಿ ಶ್ರೀರಾಮಚಂದ್ರರಾಜೇ ಅರಸು, ಮೂವರು ಪುತ್ರಿಯರು ಹಾಗೂ ಒಬ್ಬ ಪುತ್ರ ಇದ್ದಾರೆ.

• **ಕಛತೀವ್ ವಾಪಸ್ ಪಡೆಯಲು ಡಿ.ಎಂ.ಕೆ. ಚಳವಳಿ?**

ಮಧುರೆ, ಜೂನ್ 30– ಭಾರತ– ಶ್ರೀಲಂಕಾ ಒಪ್ಪಂದದ ಅನ್ವಯ ಶ್ರೀಲಂಕಾಕ್ಕೆ ನೀಡಲಾಗಿರುವ ಕಛತೀವು ದ್ವೀಪವನ್ನು ಮತ್ತೆ ಪಡೆಯಲು ಚಳವಳಿ ಹೂಡುವ ಸಾಧ್ಯತೆಯನ್ನು ಡಿ.ಎಂ.ಕೆ. ಪಕ್ಷವು ಪರಿಶೀಲಿಸುವುದು ಎಂದು ತಮಿಳುನಾಡು ಮುಖ್ಯಮಂತ್ರಿ ಎಂ.ಕರುಣಾನಿಧಿ ಅವರು ಇಂದು ಇಲ್ಲಿ ತಿಳಿಸಿದರು.

### ಬೈಡನ್– ಟ್ರಂಪ್ ಸಂವಾದವು ಅಮೆರಿಕದಲ್ಲಿ ಬೇರೆಯದೇ ಚರ್ಚೆಯನ್ನು ಹುಟ್ಟುಹಾಕಿದೆ

# ಮತ್ತೆ ಅದೇ ವಾದ, ನೀರಸ ಸಂವಾದ



**ಸೀಮೋಲ್ಲಂಘನ**

**ಸುಧೀಂದ್ರ ಬುಧ್ಯ**

**ಕಳೆದ** ಗುರುವಾರ ಅಮೆರಿಕದ ಈಗಿನ ಅಧ್ಯಕ್ಷ ಜೋ ಬೈಡನ್ ಮತ್ತು ಅಮೆರಿಕದ ಈ ಹಿಂದಿನ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಸಿಎನ್‌ಎನ್ ಸುದ್ದಿ ಸಂಸ್ಥೆ ಆಯೋಜಿಸಿದ್ದ ಅಧ್ಯಕ್ಷೀಯ ಅಭ್ಯರ್ಥಿಗಳ ನಡುವಿನ ಚರ್ಚೆಯಲ್ಲಿ ಮುಖಾಮುಖಿಯಾದರು. ನಮ್ಮಲ್ಲಿ ವಿರೋಧ ಪಕ್ಷಗಳ ನಾಯಕರು ಪರಸ್ಪರ ಎದುರಾದಾಗ, ಒಂದೇ ವೇದಿಕೆಯಲ್ಲಿ ಜೊತೆಯಾದಾಗ ಸೌಜನ್ಯಕ್ಕಾದರೂ ಕೈ ಕುಲುಕುವುದು, ಕನಿಷ್ಠ ಮಂದಹಾಸ ವಿನಿಮಯ ಮಾಡಿಕೊಳ್ಳುವುದು ಸಾಮಾನ್ಯ. ಅಷ್ಟರಮಟ್ಟಿಗಿನ ಪ್ರಬುದ್ಧತೆಯನ್ನು ನಮ್ಮ ರಾಜಕಾರಣಿಗಳು ಉಳಿಸಿಕೊಂಡಿದ್ದಾರೆ. ಆದರೆ ಬೈಡನ್ ಮತ್ತು ಟ್ರಂಪ್ ಒಂದೇ ವೇದಿಕೆಯಲ್ಲಿ ನಾಲ್ಕು ಗೇಣಿನ ಅಂತರದಲ್ಲಿ ನಿಂತರೂ ಹಸ್ತಲಾಘವ ಮಾಡಲಿಲ್ಲ. ಉಭಯ ಕುಶಲೋಪರಿಯ ಮಾತನಾಡಲಿಲ್ಲ. ಒಬ್ಬರು ಮಾತನಾಡುವಾಗ ಮತ್ತೊಬ್ಬರು ಸೋಟೆ ತಿರುವಿದ್ದು ಬಿಟ್ಟರೆ ಈ ಇಬ್ಬರ ಮುಖದಲ್ಲಿ ಬೇರಾವ ಭಾವನೆಗಳೂ ವ್ಯಕ್ತವಾಗಲಿಲ್ಲ!


ಅದೇನೇ ಇರಲಿ, ಅಭ್ಯರ್ಥಿಗಳ ನಡುವಿನ ಚರ್ಚೆ ಅಮೆರಿಕದ ಅಧ್ಯಕ್ಷೀಯ ಚುನಾವಣೆಯ ಅವಿಭಾಜ್ಯ ಅಂಗ. ಈ ಬಾರಿ ಟ್ರಂಪ್ ಮತ್ತು ಬೈಡನ್ ಅವರ ನಡುವೆ ನಡೆದ ಚರ್ಚೆ, ಕೆಲವು ಕಾರಣಗಳಿಂದ ವಿಶೇಷ ಎನಿಸಿಕೊಂಡಿತು. ಮೊದಲನೆಯದು, ಈ ಚರ್ಚೆ ನಡೆದ ಸಮಯ. ಸಾಮಾನ್ಯವಾಗಿ ಅಧ್ಯಕ್ಷೀಯ ಅಭ್ಯರ್ಥಿಗಳ ನಡುವಿನ ಚರ್ಚೆ, ಚುನಾವಣೆಗೆ ಇನ್ನು ಕೆಲವು ವಾರಗಳಿವೆ ಎನ್ನುವ ಹಂತದಲ್ಲಿ ನಡೆಯುತ್ತದೆ. ಪಕ್ಷದ ರಾಷ್ಟ್ರೀಯ ಅಧಿವೇಶನದಲ್ಲಿ ಅಧಿಕೃತವಾಗಿ ಅಧ್ಯಕ್ಷೀಯ ಅಭ್ಯರ್ಥಿಯ ಘೋಷಣೆಯಾದ ಬಳಿಕವಷ್ಟೇ ಚರ್ಚೆಗೆ ವೇದಿಕೆ ಸಿದ್ಧವಾಗುತ್ತದೆ. ಈ ಬಾರಿ ರಿಪಬ್ಲಿಕನ್ ಮತ್ತು ಡೆಮಾಕ್ರಟಿಕ್ ಪಕ್ಷದ ರಾಷ್ಟ್ರೀಯ ಅಧಿವೇಶನ ಇನ್ನಷ್ಟೇ ಜರುಗಬೇಕಿದೆ. ರಿಪಬ್ಲಿಕನ್ ಪಕ್ಷ ಜುಲೈನಲ್ಲಿ ಮತ್ತು ಡೆಮಾಕ್ರಟಿಕ್ ಪಕ್ಷ ಆಗಸ್ಟ್ ತಿಂಗಳಿನಲ್ಲಿ ಅಧಿವೇಶನಕ್ಕೆ ದಿನಾಂಕ ನಿಕ್ಕಿ ಮಾಡಿವೆ.

ಎರಡನೆಯದು, ಹಿಂದೆಲ್ಲಾ ಅಧ್ಯಕ್ಷೀಯ ಚರ್ಚೆಗಳ ಆಯೋಗವು ಅಭ್ಯರ್ಥಿಗಳ ನಡುವೆ ಮೂರು ಹಂತದ ಚರ್ಚೆಯನ್ನು ಆಯೋಜಿಸುತ್ತಿತ್ತು. ಆದರೆ ಈ ಬಾರಿ ಆಯೋಗವನ್ನು ಪಕ್ಕಕ್ಕಿಟ್ಟು ಮೊದಲ ಸಂವಾದ ನಡೆದಿದೆ. ಕಾರಣ, ಸಂವಾದವನ್ನು ಆಯೋಜಿಸುವ ಆಯೋಗವು ಪಕ್ಷಪಾತಿಯಾಗಿದೆ. ರಿಪಬ್ಲಿಕನ್ ಪಕ್ಷದ ವಿರುದ್ಧ ಇದೆ ಎಂದು ಟ್ರಂಪ್ ಅವರ ತಂಡ ಈ ಹಿಂದೆ ಆರೋಪಿಸಿತ್ತು. ಒಂದೊಮ್ಮೆ ಆಯೋಗದ ಉಸ್ತುವಾರಿಯಲ್ಲಿ ಸಂವಾದ ನಡೆದರೆ ಟ್ರಂಪ್ ಅವರು ಭಾಗವಹಿಸುವುದಿಲ್ಲ ಎಂದಿತ್ತು. ಹಾಗಾಗಿ ಬೈಡನ್ ಅವರ ತಂಡವು ಟ್ರಂಪ್ ಅವರ ತಂಡದ ಜೊತೆ ಸಂವಾದದ ಕುರಿತು ನೇರವಾಗಿ ಮಾತುಕತೆ ನಡೆಸಿತು. ಪರಿಣಾಮ, ಎರಡು ಹಂತದ ಸಂವಾದ ನಿಗದಿಯಾಯಿತು. ಹಾಗೆ ನೋಡಿದರೆ, ಅಧ್ಯಕ್ಷೀಯ ಸಂವಾದದಲ್ಲಿ ಗಂಭೀರ ವಿಷಯ ಮಂಥನ ನಡೆಯುವುದಿಲ್ಲ. ಮುಖ್ಯವಾಗಿ ಪ್ರತಿಸ್ಪರ್ಧಿಗಿಂತ ತಾನು ಅಧ್ಯಕ್ಷ ಪದವಿಗೆ ಏಕೆ ಸೂಕ್ತ ಎಂದು ವಾದಿಸಲು ಮಾತ್ರ ವೇದಿಕೆ ಬಳಕೆಯಾಗುತ್ತದೆ. ಯಾವುದೇ ಪಕ್ಷದ ಪರ ಒಲವು ತೋರದ ಬೇಲಿಯ ಮೇಲೆ ಕೂತ ಮತದಾರರು ಯಾರಿಗೆ ಮತಹಾಕಬೇಕು ಎಂದು ನಿರ್ಧರಿಸಲು ಈ ಚರ್ಚೆಗಳು ಸಹಾಯಕವಾಗುತ್ತವೆ.

ಈ ಬಾರಿ ಪ್ರಾಥಮಿಕ ಹಂತದ ಚುನಾವಣಾ ಪ್ರಕ್ರಿಯೆ ಆರಂಭವಾದಾಗ ಬೈಡನ್ ಅವರು ಇದು ಪ್ರಜಾಪ್ರಭುತ್ವದ ಅಳಿವು ಮತ್ತು ಉಳಿವಿನ ಚುನಾವಣೆ ಎಂದಿದ್ದರು. ಆಗಿನ್ನೂ ರಿಪಬ್ಲಿಕನ್ ಪಕ್ಷದ ಸ್ಪರ್ಧಿಯಾಗಿ ಡೊನಾಲ್ಡ್ ಟ್ರಂಪ್ ಅವರು ಹೊರಹೊಮ್ಮಿರಲಿಲ್ಲ. ಆದರೆ ಬೈಡೆನ್ ಅವರ ಚುನಾವಣಾ ಭಾಷಣಗಳು ಟ್ರಂಪ್ ಅವರನ್ನು ಗಮನದಲ್ಲಿಟ್ಟುಕೊಂಡೇ ರೂಪಿಸಿದಂತೆ ಇರುತ್ತಿತ್ತು. ಆರ್ಥಿಕತೆ, ವಿದೇಶಾಂಗ ನೀತಿ, ಉದ್ಯೋಗ ಸೃಷ್ಟಿ, ಆರೋಗ್ಯ ಹಾಗೂ ಸಾಮಾಜಿಕ ಭದ್ರತೆಯ ವಿಷಯವಾಗಿ ತಾವು ನಾಲ್ಕು ವರ್ಷಗಳ ಅವಧಿಯಲ್ಲಿ ಕೈಗೊಂಡ ಕ್ರಮವೇನು, ಮತ್ತೊಂದು ಅವಧಿಗೆ ಅಧ್ಯಕ್ಷನಾದರೆ ಅನುಷ್ಠಾನಕ್ಕೆ ಬರಲಿರುವ ಯೋಜನೆಗಳೇನು ಎಂದು ವಿವರಿಸಲು ತೆಗೆದುಕೊಂಡ ಸಮಯಕ್ಕಿಂತ ಹೆಚ್ಚಿನ ಸಮಯವನ್ನು ಟ್ರಂಪ್ ಮತ್ತೊಮ್ಮೆ ಅಧ್ಯಕ್ಷರಾದರೆ ಆಗುವ ಅನಾಹುತಗಳನ್ನು ಬಣ್ಣಿಸಲು ಬೈಡನ್ ತೆಗೆದುಕೊಳ್ಳುತ್ತಿದ್ದರು. ಟ್ರಂಪ್ ಅವರನ್ನು ಮಣಿಸಲು ತಾನೇ ಸೂಕ್ತ ಎಂದು ತಮ್ಮ ಚುನಾವಣಾ ಪ್ರಚಾರ ಸಭೆಗಳಲ್ಲಿ ಬೈಡನ್ ಬಿಂಬಿಸಿಕೊಂಡರು.

ಟ್ರಂಪ್ ಅವರು ಕೂಡ ಭಿನ್ನ ವಿಷಯಗಳ ಬಗ್ಗೆ ಮಾತನಾಡಿದ್ದು ಕಡಿಮೆ. ಅವರ ಅಷ್ಟೂ ಚುನಾವಣಾ ಭಾಷಣವನ್ನು ಜರಡಿಯಾಡಿದರೆ ಉಳಿಯುತ್ತಿದ್ದದ್ದು ಅಕ್ರಮ ವಲಸೆ, ಉದ್ಯೋಗ ನಷ್ಟ, ರಷ್ಯಾ ಮತ್ತು ಚೀನಾಕ್ಕೆ ಸಂಬಂಧಿಸಿದ ಸಂಗತಿ, ಕೊನೆಗೆ ಬೈಡನ್ ಅಸಮರ್ಥ ಅಧ್ಯಕ್ಷ ಎಂಬ ಅಂಶಗಳು ಮಾತ್ರ.

ಈ ಸಂಗತಿಗಳೇ ಬೈಡನ್ ಮತ್ತು ಟ್ರಂಪ್ ಅವರ ನಡುವಿನ ಮೊದಲ ಚರ್ಚೆಯಲ್ಲಿ ಪುನಃ ಪ್ರಸ್ತಾಪವಾದವು. ಆಯೋಜಕರ ಮೊದಲ ಪ್ರಶ್ನೆ ಆರ್ಥಿಕತೆ ಮತ್ತು ಹಣದುಬ್ಬರದ ಕುರಿತಾಗಿತ್ತು. 'ನಾನು ಅಧಿಕಾರ ವಹಿಸಿಕೊಂಡಾಗಲೇ ಪರಿಸ್ಥಿತಿ ಹದಗೆಟ್ಟಿತ್ತು. ನನ್ನ ಅವಧಿಯಲ್ಲಿ ಉದ್ಯೋಗ ಸೃಷ್ಟಿಯಾಯಿತು, ಆರ್ಥಿಕ ಮಹಾಕುಸಿತದಿಂದ ಅಮೆರಿಕ ಪಾರಾಯಿತು' ಎಂದು ಬೈಡನ್ ತಮ್ಮ ನಡೆ ಸಮರ್ಥಿಸಿಕೊಂಡರೆ, ಟ್ರಂಪ್ ಅವರು 'ಬೈಡನ್ ನೇತೃತ್ವದ ಸರ್ಕಾರವು ಉದ್ಯೋಗ ಸೃಷ್ಟಿಸಿದ್ದು ಅಕ್ರಮ ವಲಸಿಗರಿಗೆ ಮಾತ್ರ. ನನ್ನ ನೇತೃತ್ವದ ಸರ್ಕಾರ ತೆರಿಗೆ ಮತ್ತು ನಿಯಂತ್ರಣ ಕಡಿತವನ್ನು ಜಾರಿಗೆ ತಂದಿದ್ದರಿಂದಲೇ ಉದ್ಯೋಗ ಸೃಷ್ಟಿಯಾಯಿತು, ಹಣದುಬ್ಬರ ನಿಯಂತ್ರಣದಲ್ಲಿತ್ತು' ಎಂದು ಟ್ರಂಪ್ ತಮ್ಮ ವಾದವನ್ನು ಮಂಡಿಸಿದರು.




ವಿದೇಶಾಂಗ ನೀತಿ ಮತ್ತು ಮಧ್ಯಪ್ರಾಚ್ಯದ ವಿಷಯದಲ್ಲಿ ಬೈಡನ್ ಅವರು ಹೆಚ್ಚೇನೂ ಹೇಳಲು ಸಾಧ್ಯವಾಗಲಿಲ್ಲ. ಅದನ್ನು ಬಳಸಿಕೊಂಡ ಟ್ರಂಪ್, ಇಂದು ಜಾಗತಿಕವಾಗಿ ಅಮೆರಿಕದ ಮಾತಿಗೆ ಬೆಲೆ ಇಲ್ಲದಂತಾಗಿದೆ. ಅಫ್ಗಾನಿಸ್ತಾನದ ವಿಷಯವನ್ನು ಸರಿಯಾಗಿ ನಿರ್ವಹಿಸಲು ಬೈಡನ್ ಅವರಿಗೆ ಸಾಧ್ಯವಾಗಲಿಲ್ಲ. ಅದು ಅಮೆರಿಕ ದುರ್ಬಲ ಅಧ್ಯಕ್ಷರನ್ನು ಹೊಂದಿದೆ ಎಂಬ ಸಂದೇಶ ರವಾನಿಸಿತು. ಉಕ್ರೇನ್ ಮೇಲೆ ಆಕ್ರಮಣ ಮಾಡಲು ಇದು ಸುಸಮಯ ಎಂಬ ತೀರ್ಮಾನಕ್ಕೆ ಪುಟಿನ್ ಬಂದರು. ಇರಾನ್ ಬೆಂಬಲ ಪಡೆದು ಇಸ್ರೇಲ್ ಮೇಲೆ ಹಮಾಸ್ ದಾಳಿ ಮಾಡಿತು. ಪರಿಸ್ಥಿತಿ ಹೀಗೆಯೇ ಮುಂದುವರಿದರೆ ಮೂರನೇ ವಿಶ್ವ ಯುದ್ಧವಾದರೂ ಅಚ್ಚರಿಯಿಲ್ಲ, ತನ್ನ ಅವಧಿಯಲ್ಲಿ ಇದು ಸಾಧ್ಯವಾಗುತ್ತಿರಲಿಲ್ಲ ಎಂದು ಟ್ರಂಪ್ ಭುಜ ತಟ್ಟಿಕೊಂಡರು.

2020ರ ಚುನಾವಣೆಯ ಬಳಿಕ ನಡೆದ ಅಮೆರಿಕದ ಸಂಸತ್ ಮೇಲಿನ ದಾಳಿ, ಅದಕ್ಕೆ ದೊರೆತ ಪ್ರಚೋದನೆ, ವಿವಿಧ ನ್ಯಾಯಾಲಯಗಳಲ್ಲಿ ಚಾಲ್ತಿಯಲ್ಲಿರುವ ಮೊಕದ್ದಮೆಗಳ ವಿಷಯ ಪ್ರಸ್ತಾಪವಾದಾಗ ಮಾತು ಬದಲಿಸಿದ ಟ್ರಂಪ್, ಮತ್ತೊಮ್ಮೆ ಅಕ್ರಮ ವಲಸಿಗರು, ರಷ್ಯಾ ಮತ್ತು ಚೀನಾ ಎಂಬ ವಿಷಯಗಳ ಸುತ್ತಲೇ ಗಿರಕಿ ಹೊಡೆದರು. ತಮ್ಮ ಸರ್ಕಾರದ ಸಾಧನೆಯ ಅಂಕಿ ಅಂಶಗಳನ್ನು ಮಂಡಿಸುವಾಗ ಬೈಡನ್ ತಡವರಿಸಿದರು. ಒಟ್ಟಾರೆಯಾಗಿ ಬೈಡನ್ ಅವರ ಕ್ಷೀಣ ಧ್ವನಿ ಹಾಗೂ ನೀರಸ ಪಾಲ್ಗೊಳ್ಳುವಿಕೆಯ ಎದಿರು ಟ್ರಂಪ್ ಅವರ ಗಟ್ಟಿ ಧ್ವನಿ ಮತ್ತು ಚುರುಕು ಮಾತು ಮೇಲುಗೈ ಸಾಧಿಸಿದಂತೆ ಕಂಡುಬಂತು.

ಚುನಾವಣೆಗೆ ಇನ್ನೂ ನಾಲ್ಕು ತಿಂಗಳು ಇರುವಾಗ ನಡೆದ ಈ ಸಂವಾದವು ಅಮೆರಿಕದ ರಾಜಕೀಯ ಪಡಸಾಲೆಯಲ್ಲಿ ಬೇರೆಯದೇ ಚರ್ಚೆಯನ್ನು ಇದೀಗ ಹುಟ್ಟುಹಾಕಿದೆ. ನಿಜಕ್ಕೂ ಅಮೆರಿಕದ ಬಗ್ಗೆ ಕಾಳಜಿ ಇದ್ದರೆ, ಪ್ರಜಾಪ್ರಭುತ್ವದ ಉಳಿವನ್ನು ಬಯಸುವುದಾದರೆ, ಬೈಡೆನ್ ಅವರು ಕಣದಿಂದ ಹಿಂದೆ ಸರಿಯಬೇಕು ಮತ್ತು ಪ್ರಬಲ ಅಭ್ಯರ್ಥಿಗೆ ದಾರಿ ಮಾಡಿಕೊಡಬೇಕು ಎಂಬ ಕೂಗು ಡೆಮಾಕ್ರಟಿಕ್ ಪಕ್ಷದ ಅಂಗಳದಲ್ಲಿ ವ್ಯಕ್ತವಾಗುತ್ತಿದೆ. ಆದರೆ ಬದಲಿ ಅಭ್ಯರ್ಥಿಯನ್ನು ಆರಿಸುವ ಪ್ರಕ್ರಿಯೆ ಸುಲಭವಲ್ಲ ಮತ್ತು ಸಮಯವಿಲ್ಲ. ಒಂದೊಮ್ಮೆ ಬೈಡನ್ ಅವರು ಪಕ್ಷದೊಳಗಿನ ಅಪಸ್ವರವನ್ನು ಆಲಿಸಿ, ತಮ್ಮ ವಯಸ್ಸಿನ ಮಿತಿಯನ್ನು ಗಮನಿಸಿ, ಉಮೇದುವಾರಿಕೆಯಿಂದ ಸ್ವತಃ ಹಿಂದೆ ಸರಿದರೆ, ಕಮಲಾ ಹ್ಯಾರಿಸ್ ಅವರಿಗೆ ಅವಕಾಶವಾಗಬಹುದು. ಟ್ರಂಪ್ ಅವರ ಎದಿರು ಭಾರತ ಮೂಲದ ಕಮಲಾ ಪೈಪೋಟಿಗೆ ನಿಲ್ಲಬಹುದು. ಆದರೆ ಆ ಸಾಧ್ಯತೆಗಳು ತೀರಾ ಕಡಿಮೆ. ಸೆಪ್ಟೆಂಬರ್ 10ರಂದು ನಡೆಯುವ ಎರಡನೇ ಸಂವಾದದಲ್ಲಿ ಬೈಡನ್ ಅವರು ಯಾವ ರೂಪದಲ್ಲಿ ಕಾಣಿಸಿಕೊಳ್ಳಬಹುದು ಎಂಬ ಬಗ್ಗೆಯಷ್ಟೇ ಕುತೂಹಲ ಇಟ್ಟುಕೊಳ್ಳಬಹುದು.

## ಚುರುಮುರಿ



# ಬಂಡೆವೀರರು!

• ಸುಮಂಗಲಾ

**'ಒಂದ್** ಮಳೆ ಬಂದಿದ್ದೇ ಬೆಂಗಳೂರು–ಮಂಗಳೂರು ಚತುಷ್ಪಥ ರಸ್ತೆ ಕುಸದೈತಂತೆ... ಯಾವ ಸರ್ಕಾರ ಬಂದ್ರು ರಸ್ತೆಗಳ ಹಣೇಬರಹ ಇಷ್ಟೇ' ಬೆಕ್ಕಣ್ಣ ಹಣೆ ಚಚ್ಚಿಕೊಂಡಿತು.

'ಅಯೋಧ್ಯೆವಳಗೆ ಹೊಸದಾಗಿ ಮಾಡಿದ ರಾಮಪಥನೇ ಕುಸಿದೈತಂತೆ... ಇನ್ನು ಇದೇನ್ ಮಹಾ ಬಿಡು' ಎಂದೆ.

'ನೋಡು... ನೀ ಏನರೆ ಮಾತಾಡು, ಏನರೆ ಬರಿ... ಆದರೆ, ರಾಮಪಥದ ಬಗ್ಗೆ ಚಕಾರ ಎತ್ತಬ್ಯಾಡ. ಅದನ್ನೆಲ್ಲ ನೋಡಿಕೊಳ್ಳಾಕೆ ಯೋಗಿಮಾಮಾ ಅದಾನೆ' ಎಂದು ಬೆಕ್ಕಣ್ಣ ಗುರ್ರೆಂದಿತು.

'ಹಂಗಲ್ಲ... ಅಂಥಾ ಪ್ರತಿಷ್ಠಿತ ರಸ್ತೆ ನಿರ್ಮಾಣದಲ್ಲಿಯೇ ಏನೋ ಕಮಿಷನ್ ಕಳ್ಳಾಟ ಮಾಡಿ, ರಸ್ತೆಗೆ ಸರಿಯಾಗಿ ಜಲ್ಲಿ, ಟಾರು ಹಾಕಂಗಿಲ್ಲ. ಇನ್ನು ಈ ಪಾಮರರ ರಸ್ತೆಗಳ ಪಾಡು ಕೇಳೂದೇ ಬ್ಯಾಡ ಅಂತ ನಾ ಹೇಳಿದ್ದು' ಸಮಾಧಾನಿಸಿದೆ.

'ಯೋಗಿಮಾಮಾನ ರಾಜ್ಯದ ಸುದ್ದಿ ನಿಂಗ್ಯಾಕೆ? ಇಲ್ಲಿ ಸಿಎಂ ಯಾರು ಆಗಬಕು, ಡಿಸಿಎಂ ಎಷ್ಟು ಜನ ಆಗಬಕು ಅಂತ ಗುದ್ದಾಟ ನಡದೈತಲ್ಲ ಅದ್ರ ಬಗ್ಗೆ ಮಾತಾಡಿ ಬಾಯಿ ನೋಯಿಸಿಕೋ'.

'ಹೋಗ್ಲಿಬಿಡು. ನೋಡಿಲ್ಲಿ... ಚೀನಾದವ್ರು ಚಂದ್ರನ ಮ್ಯಾಗಿಂದ ಎರಡು ಕೆ.ಜಿ. ಮಣ್ಣು ತಂದಾರಂತೆ', ನಾನು ಮಾತು ಬದಲಿಸಿದೆ.

'ಅದೇನ್ ಮಹಾ... ನಮ್ ಇಸ್ರೊದವ್ರು ಇದೇ ವರ್ಷ ಚಂದ್ರಯಾತ್ರೆ- 4 ಮಾಡ್ತಾರಂತೆ. ಮಣ್ಣಲ್ಲ, ಅಲ್ಲಿಂದ ದೊಡ್ಡ ಬಂಡೆನೆ ತರತಾರೆ' ಬೆಕ್ಕಣ್ಣ ಬಲು ಅಭಿಮಾನದಿಂದ ರಾಕ್ ಸ್ಯಾಂಪಲ್ ತರುವುದಾಗಿ ಇಸ್ರೊ ಅಧ್ಯಕ್ಷರು ಹೇಳಿದ್ದ ಹಳೆಯ ಸುದ್ದಿಯನ್ನು ತೋರಿಸಿತು.

'ಮಂಗ್ಯಾನಂಥವ್ನೇ... ಹಂಗೆಲ್ಲ ಅಲ್ಲಿಂದ ದೊಡ್ಡ ಬಂಡೇನೇ ಎತ್ತಿಕೊಂಡು ಬರಾಕೆ ಅಲ್ಲಿಗೆ ಕ್ರೇನ್ ಕಳಿಸಾಕೆ ಹತ್ತಿಲ್ಲ, ಸಣ್ಣ ಬಾಹ್ಯಾಕಾಶ ನೌಕೆ ಕಳಿಸತೀವಿ'.

'ಈಗ ನಮ್ ಟೀಂ ಇಂಡಿಯಾದವ್ರು ಟಿ-20 ವಿಶ್ವಕಪ್ ಎತ್ತಾಕಿಕೊಂಡು ಬಂದಿಲ್ವಾ... ಹಂಗೆ ಎತ್ತಾಕಿಕೊಂಡು ಬರದು! ಆಗಲಿಲ್ಲ ಅಂದ್ರೆ ಇಲ್ಲಿಂದ ಕಳಿಸಿರೋ ರೋವರ್ ಚಂದ್ರದಲ್ಲಿರೋ ಬಂಡೆಯನ್ನ ಸರಿಯಾಗಿ ಭೂಮಿ ಮ್ಯಾಗೆ ಬೀಳೂ ಹಂಗೆ ಜೋರಾಗಿ ಈಥರಾ ನೂಕತೈತಿ...' ಬೆಕ್ಕಣ್ಣ ಹಾವಭಾವದೊಡನೆ ತೋರಿಸಿತು!

## ಸಂಗತ

# ಚುನಾಯಿತ ಪ್ರತಿನಿಧಿಗಳು ಸುಶಿಕ್ಷಿತರಾಗಿರಬೇಕೇ?

**ಜನಪ್ರತಿನಿಧಿಗಳಿಗೆ ಕನಿಷ್ಠ ವಿದ್ಯಾರ್ಹತೆಯನ್ನು ನಿಗದಿಪಡಿಸಬೇಕು ಎಂಬ ವಾದ ಇದೆ. ಇದರ ಸಾಧಕ–ಬಾಧಕ ಕುರಿತು ಚರ್ಚೆ ಆಗಬೇಕು**

• ಪ್ರೊ.ಎಂ.ಅಬ್ದುಲ್ ರೆಹಮಾನ್ ಪಾಷ

**ಎನ್‌ಡಿಎ** ಸರ್ಕಾರದ ಹೊಸ ಮಂತ್ರಿಮಂಡಲದಲ್ಲಿ ಸಾವಿತ್ರಿ ಠಾಕೂರ್ ಅವರು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಖಾತೆಯ ರಾಜ್ಯ ಸಚಿವರಾಗಿದ್ದಾರೆ. ಇದೇ ಜೂನ್ 18ರಂದು, 'ಸ್ಕೂಲ್ ಚಲೋ ಅಭಿಯಾನ್' ಅಂಗವಾಗಿ ಅವರು ಮಧ್ಯಪ್ರದೇಶದ ಧಾರ್ ಜಿಲ್ಲೆಯ ಒಂದು ಸರ್ಕಾರಿ ಶಾಲೆಯ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಅದರ ಅಂಗವಾಗಿ ಅವರು ಒಂದು ಫಲಕದ ಮೇಲೆ ಕೇಂದ್ರ ಸರ್ಕಾರದ ಮಹತ್ವದ ಘೋಷಣೆಯಾದ, 'ಬೇಟಿ ಬಚಾವೋ, ಬೇಟಿ ಪಢಾವೋ' ಅನ್ನು ಹಿಂದಿ ಭಾಷೆಯಲ್ಲಿ ಬರೆಯಬೇಕಾಗಿತ್ತು. ಆದರೆ, ಅದನ್ನು ಅವರು ತಪ್ಪುತಪ್ಪಾಗಿ ಬರೆದು ಅಪಹಾಸ್ಯಕ್ಕೆ ಈಡಾದರು.

ಸಂಸದರಾಗಿ ಆಯ್ಕೆಯಾಗುವವರಲ್ಲಿ ಸಾಕ್ಷರತೆ ಇರಲೇಬೇಕೇ? ಇಲ್ಲ. ಸಂವಿಧಾನದ 84ನೇ ವಿಧಿ ಪ್ರಕಾರ, ಸಂಸದರಾಗಲು ಅಗತ್ಯವಾದ ಅರ್ಹತೆ ಎಂದರೆ ಭಾರತೀಯ ನಾಗರಿಕರಾಗಿರಬೇಕು, ವಯಸ್ಸು ಕನಿಷ್ಠ 25 ವರ್ಷ ಆಗಿರಬೇಕು, ಘೋಷಿತ ಕ್ರಿಮಿನಲ್ ಆಗಿರಬಾರದು ಎಂದಿದೆ. ಇಲ್ಲಿ ಶಿಕ್ಷಿತರಾಗಿರಬೇಕು ಎಂದೇನೂ ಇಲ್ಲ. ಎಂದರೆ, ಅವರಿಗೆ ಸರಿಯಾಗಿ ಬರೆಯಲು ಬಾರದೇ ಇದ್ದರೂ ಸಾವಿತ್ರಿ ಠಾಕೂರ್ ಅವರಿಗೆ ಸಂಸದೆ, ಸಚಿವೆ ಆಗುವ ಎಲ್ಲಾ ಹಕ್ಕಿದೆ ಎಂದಾಯಿತು. ಆದರೆ, ಈ ವಿಧಿಯನ್ನು ರೂಪಿಸಿದ್ದು ಸಂವಿಧಾನದ ಜಾರಿಯ ಆರಂಭದಲ್ಲಿ. ಆಗ ದೇಶವು ಅದೇ ತಾನೆ ವಸಾಹತುಶಾಹಿಯಿಂದ ಮುಕ್ತಿ ಪಡೆದಿತ್ತು.

1947ರಲ್ಲಿ ದೇಶದ ಸಾಕ್ಷರತಾ ಪ್ರಮಾಣ ಬರೀ ಶೇಕಡ 12ರಷ್ಟು ಇತ್ತು. ಮಹಿಳಾ ಸಾಕ್ಷರತೆ ಪ್ರಮಾಣ ಇನ್ನೂ ಕಡಿಮೆ, ಸುಮಾರು ಶೇ 9ರಷ್ಟು ಇತ್ತು. ಇನ್ನು ದಲಿತರು, ಆದಿವಾಸಿಗಳು, ಹಿಂದುಳಿದ ವರ್ಗಗಳಲ್ಲಿ ಅನಕ್ಷರರ ಪ್ರಮಾಣವೇ ಹೆಚ್ಚಾಗಿತ್ತು. ಹೀಗಾಗಿ, ಶಾಸಕರು, ಸಂಸದರಾಗಿ ಆಯ್ಕೆಯಾಗುವುದಕ್ಕೆ ಶಿಕ್ಷಣದ ಮಟ್ಟವನ್ನು ನಿಗದಿ ಮಾಡಿಬಿಟ್ಟರೆ, ದೇಶದ ಬಹುತೇಕ ಜನರನ್ನು ಇದರಿಂದ ವಂಚಿತರನ್ನಾಗಿ ಮಾಡಿದಂತಾಗುತ್ತದೆ. ಎಲ್ಲರನ್ನೊಳಗೊಳ್ಳುವ ಜನತಂತ್ರದ ಆಶಯಕ್ಕೆ ಧಕ್ಕೆ ಬರುತ್ತದೆ ಎಂಬುದು ಸಂವಿಧಾನ ರಚನೆಕಾರರ ಕಳವಳವಾಗಿತ್ತು.

ಆ ಹೊತ್ತಿಗೆ ಇದು ಅತ್ಯಂತ ಸಮಂಜಸವಾದ ತೀರ್ಮಾನವಾಗಿತ್ತು. ಆದರೆ, ಸ್ವಾತಂತ್ರ್ಯಾನಂತರ ಪಂಚವಾರ್ಷಿಕ ಯೋಜನೆಗಳಲ್ಲಿ ಒಟ್ಟಾರೆ ಶಿಕ್ಷಣ, ಅದರಲ್ಲೂ ಮುಖ್ಯವಾಗಿ ಸಾಕ್ಷರತೆ, ವಯಸ್ಕರ ಶಿಕ್ಷಣ, ತೆರೆದ ಶಾಲೆಗಳು ಇತ್ಯಾದಿ ಯೋಜನೆಗಳ ಫಲವಾಗಿ ಸಾಕ್ಷರತೆ ಪ್ರಮಾಣವು ಕ್ರಮೇಣ ಏರುತ್ತಾ ಬಂತು. ಈಗ ಸಾಕ್ಷರತೆ ಪ್ರಮಾಣವು ಪುರುಷರಲ್ಲಿ ಶೇ 85ರಷ್ಟು ಇದೆ, ಮಹಿಳೆಯರಲ್ಲಿ ಶೇ 72ಕ್ಕೆ ತಲುಪಿದೆ. ಈಗಲೂ ಜನಪ್ರತಿನಿಧಿಗಳಿಗೆ ಸಾಕ್ಷರತೆ, ಶಿಕ್ಷಣ ಇಲ್ಲದಿದ್ದರೂ ನಡೆಯುತ್ತದೆ ಎಂದು ಹೇಳುವುದು ಸರಿಯೇ? ಹಾಗೆ ನೋಡಿದರೆ, 46 ವರ್ಷದ, ಧಾರ್‌ನಿಂದ ಎರಡು ಬಾರಿ ಸಂಸದರಾಗಿ ಆಯ್ಕೆಯಾಗಿರುವ ಸಾವಿತ್ರಿ ಠಾಕೂರ್ ಅವರು 2024ರ ಚುನಾವಣೆಗಾಗಿ ನಾಮಪತ್ರ ಸಲ್ಲಿಸುವಾಗ ತಾವು, 2018ರಲ್ಲಿ ಉರ್ದು ಎಜುಕೇಷನ್ ಬೋರ್ಡಿನ 12ನೇ ತರಗತಿಯನ್ನು ಪಾಸು ಮಾಡಿರುವುದಾಗಿ ದಾಖಲಿಸಿದ್ದಾರೆ. ನಮ್ಮಲ್ಲಿ ಕೆಲವು ಪ್ರಮುಖ ಸಚಿವರನ್ನೂ ಒಳಗೊಂಡ ಹಾಗೆ ಹಲವು ಜನಪ್ರತಿನಿಧಿಗಳು ತಾವು ಹೊಂದಿರುವುದಾಗಿ ಹೇಳಿಕೊಂಡಿರುವ ಶೈಕ್ಷಣಿಕ ಅರ್ಹತೆಗಳು ಅನೇಕ ವಿವಾದಗಳನ್ನು ಹುಟ್ಟುಹಾಕಿರುವುದೂ ಇದೆ.

ಹಿಂದುಳಿದ ವರ್ಗಗಳಿಗೆ, ಮಹಿಳೆಯರಿಗೆ ಹೆಚ್ಚಿನ ಪ್ರಾತಿನಿಧ್ಯ ಸಿಗಬೇಕು ಎನ್ನುವುದನ್ನು ಒಪ್ಪುವುದಾದರೂ ಅವರು ವಹಿಸಬೇಕಾಗಿರುವ ಜವಾಬ್ದಾರಿಯ ಕುರಿತೂ ಲಕ್ಷ್ಯ ಇರಬೇಕಾಗುತ್ತದೆ. ಸಾವಿತ್ರಿ ಠಾಕೂರ್ ಅವರು ಒಂದು ಉದಾಹರಣೆಯಷ್ಟೆ. ಈಗ ಇವರು ತಮ್ಮ ಸಚಿವೆ ಸ್ಥಾನದಿಂದ ಸುಮಾರು ₹36 ಸಾವಿರ ಕೋಟಿ ಮೊತ್ತದ ಬಜೆಟ್ಟನ್ನು ನಿರ್ವಹಿಸಬೇಕಾಗುತ್ತದೆ. ನಿತ್ಯ ಹತ್ತಾರು ಕಡತಗಳನ್ನು ಓದಿ, ತೀರ್ಮಾನಗಳನ್ನು ತೆಗೆದುಕೊಳ್ಳಬೇಕಾಗುತ್ತದೆ, ಘಟಾನುಘಟಿ ಐಎಎಸ್ ಅಧಿಕಾರಿಗಳನ್ನು ನಿಭಾಯಿಸಬೇಕಾಗುತ್ತದೆ. ದೇಶದ ಕೋಟ್ಯಂತರ ಮಕ್ಕಳ ಮತ್ತು ಮಹಿಳೆಯರ, ಶೋಷಿತರ, ಹಿಂದುಳಿದವರ ಧ್ವನಿಯಾಗಬೇಕಾಗುತ್ತದೆ. ಇಂಥ ಒಬ್ಬ ವ್ಯಕ್ತಿ ತಮ್ಮ ಖಾತೆಯ ವ್ಯಾಪ್ತಿಗೊಳಪಡುವ ಅದರಲ್ಲೂ ಭಾರಿ ಪ್ರಚಾರ ಪಡೆದಿರುವ ಒಂದು ಘೋಷಣೆಯನ್ನೂ ಸರಿಯಾಗಿ ಬರೆಯಲು ಸಾಧ್ಯವಾಗದಿದ್ದರೆ ಹೇಗೆ ಎಂದು ವಿರೋಧ ಪಕ್ಷಗಳ ಪ್ರತಿನಿಧಿಗಳು ತೀವ್ರವಾಗಿ ಟೀಕಿಸಿದ್ದಾರೆ.



ಈ ಹಿನ್ನೆಲೆಯಲ್ಲಿ ಸಂವಿಧಾನದ ವಿಧಿ 84ರ ತಿದ್ದುಪಡಿಯಾಗಬೇಕು, ಎಲ್ಲ ಹಂತಗಳಲ್ಲಿ ಆಯ್ಕೆಯಾಗುವ ಜನಪ್ರತಿನಿಧಿಗಳಿಗೆ ಕನಿಷ್ಠ ವಿದ್ಯಾರ್ಹತೆಯನ್ನು ನಿಗದಿಪಡಿಸಬೇಕು ಎಂಬುದೂ ಕೆಲವರ ವಾದವಾಗಿದೆ. ಶಿಕ್ಷಣವು ಚುನಾಯಿತ ಪ್ರತಿನಿಧಿಗಳಲ್ಲಿ ನಿರ್ದಿಷ್ಟ ಮಟ್ಟದ ಸಾಮರ್ಥ್ಯ, ತಿಳಿವಳಿಕೆ ಮತ್ತು ವಿಶ್ಲೇಷಣೆಯ ಕೌಶಲವನ್ನು ನೀಡುತ್ತದೆ. ವಸ್ತುನಿಷ್ಠ ಮಾಹಿತಿಯನ್ನು ಆಧರಿಸಿಯೇ ನಿರ್ಧಾರಗಳನ್ನು ತೆಗೆದುಕೊಳ್ಳುವ ಕ್ಷಮತೆಯು ದಕ್ಷ ಆಡಳಿತದಲ್ಲಿ ದೀರ್ಘಕಾಲೀನ ಪರಿಣಾಮಗಳನ್ನು ಬೀರುತ್ತದೆ ಎನ್ನುವುದು ಇದರ ಪ್ರತಿಪಾದಕರ ವಾದ. ಇವತ್ತಿನ ಶಿಕ್ಷಣದ ಸ್ಥಿತಿಗತಿಗಳನ್ನು ನೋಡಿದಾಗ, ಔಪಚಾರಿಕ ವ್ಯವಸ್ಥೆಯಲ್ಲಿ ಸಿಗುವ ಭಾಷೆ ಮತ್ತು ಸಂವಹನ ಕೌಶಲಗಳು, ಆಡಳಿತ, ನ್ಯಾಯಾಂಗ, ವಾಣಿಜ್ಯ, ವ್ಯವಹಾರ, ಮಾಧ್ಯಮ ಇತ್ಯಾದಿ ಯಾವುದೇ ಕ್ಷೇತ್ರಕ್ಕೆ ಅಗತ್ಯವಾದ ಸಾಮರ್ಥ್ಯವನ್ನು ನೀಡುವುದಿಲ್ಲ, ಜನತಂತ್ರದ ಜೀವಾಳವಾದ ವೈಚಾರಿಕತೆ, ವೈಜ್ಞಾನಿಕ ಮನೋವೃತ್ತಿ, ಪ್ರಶ್ನೆ ಕೇಳುವ ಸ್ವಭಾವ... ಇಂಥವುಗಳನ್ನು ಬೆಳೆಸುವುದಿಲ್ಲ. ಶಿಕ್ಷಣದ ಸುಧಾರಣೆಯಾಗಬೇಕು, ಅದು ಸಶಕ್ತ ನಾಗರಿಕರನ್ನು ಸೃಜಿಸುವಲ್ಲಿ ಸಫಲವಾಗಬೇಕು ಎನ್ನುವ ಮಾತನ್ನು ಒಪ್ಪಿಕೊಳ್ಳುತ್ತಲೇ, ಇರುವ ಹಾಗೆಯೇ ಶಿಕ್ಷಣವು ವ್ಯಕ್ತಿತ್ವದ ಒಂದು ಗುಣವಾಗಿದೆ. ಭಾರತದ 18ನೇ ಲೋಕಸಭೆ ಇದರ ಸಾಧಕಬಾಧಕಗಳನ್ನು ಚರ್ಚಿಸಲಿ.

## ವಾಚಕರ ವಾಣಿ

### ಸೇತುವೆ ಕುಸಿತ: ಯಾರು ಹೊಣೆ?

ಈಚೆಗೆ ಒಂಬತ್ತು ದಿನಗಳಲ್ಲಿ ಬಿಹಾರದಲ್ಲಿ ಐದು ಸೇತುವೆಗಳು ಕುಸಿದುಬಿದ್ದಿವೆ. ಜಬಲ್‌ಪುರ ಮತ್ತು ದೆಹಲಿ ವಿಮಾನ ನಿಲ್ದಾಣಗಳಲ್ಲಿ ಚಾವಣಿ ಕುಸಿದಿದೆ. ಮುಂಬೈನ ಅಟಲ್ ಸೇತುವಿನಲ್ಲಿ ಬಿರುಕು, ದೆಹಲಿ ಪ್ರತಿಷ್ಠಿತ ಪ್ರಗತಿ ಮೈದಾನದ ಸುರಂಗ ಕುಸಿತ, ಮೋರ್ಬಿ ಸೇತುವೆ ಕುಸಿತ. ದೇಶದಲ್ಲಿ ಈಗ ಕುಸಿತದ ಪರ್ವ ನಡೆದಂತೆ ಕಾಣುತ್ತದೆ. ಈ ಕುಸಿತದ ಹಿಂದೆ ಯಾರೇ ಇರಲಿ, ಯಾವ ರಾಜಕೀಯ ಪಕ್ಷವೇ ಇರಲಿ, ಕೋಟ್ಯಂತರ ರೂಪಾಯಿ ವೆಚ್ಚದ ಈ ಯೋಜನೆಗಳಲ್ಲಿ ಪೋಲಾಗುತ್ತಿರುವುದು ಬಡಬೋರೇಗೌಡನ ತೆರಿಗೆ ಹಣ. ಹಣದುಬ್ಬರದಿಂದ ಹೈರಾಣಾಗಿರುವ ಮಧ್ಯಮ ಮತ್ತು ಬಡ ವರ್ಗದವರಿಗೆ 'ಗ್ಯಾರಂಟಿಗಳ' ಮೂಲಕ ನಾಲ್ಕುಕಾಸು ನೀಡಿದರೆ ದೇಶದ ಅರ್ಥಿಕತೆಯ ಪತನವಾಗುತ್ತದೆ ಎಂದು ಬೊಬ್ಬೆ ಹೊಡೆಯುವವರು ಈ 'ಕುಸಿತ'ಗಳು ದೇಶದ ಬೊಕ್ಕಸಕ್ಕೆ ಮಾಡುವ ಹಾನಿಯ ಬಗೆಗೆ ಏನು ಹೇಳುತ್ತಾರೆ?

**ರಮಾನಂದ ಶರ್ಮಾ,** ಬೆಂಗಳೂರು

### ಕೇಂದ್ರ ಸರ್ಕಾರ ಸಂವೇದನಾಶೀಲತೆ ತೋರಲಿ

ಪಶ್ಚಿಮ ಬಂಗಾಳದ ರಾಜ್ಯಪಾಲರು ಅಲ್ಲಿನ ಮುಖ್ಯಮಂತ್ರಿ ವಿರುದ್ಧ ಮಾನನಷ್ಟ ಮೊಕದ್ದಮೆ ಹೂಡಿದ್ದಾರೆ ಎಂಬ ಸುದ್ದಿ ಓದಿ ಆಶ್ಚರ್ಯ ಆಯಿತು. ರಾಜ್ಯಪಾಲರ ವಿರುದ್ಧ ಗುತ್ತಿಗೆ ಕಾರ್ಮಿಕರೊಬ್ಬರು ದೂರು ನೀಡಿದ ಕಾರಣ ಈ ಸಂಬಂಧ ಪೊಲೀಸ್ ತನಿಖೆ ಆರಂಭವಾಗಿದೆ.

ಉನ್ನತ ಸಾಂವಿಧಾನಿಕ ಹುದ್ದೆಯಲ್ಲಿರುವ ಇವರು ಆರೋಪ, ಪ್ರತ್ಯಾರೋಪಗಳಲ್ಲಿ ತೊಡಗಿರುವುದು ಸರಿಯಲ್ಲ. ದೆಹಲಿ, ತಮಿಳುನಾಡಿನಲ್ಲಿ ಈ ಬಗೆಯ ಸಂಘರ್ಷ ಕಾಣಿಸಿಕೊಂಡಿದ್ದನ್ನು ನೆನಪಿಸಿಕೊಳ್ಳಬೇಕಾಗಿದೆ. ರಾಜ್ಯಪಾಲರನ್ನು ನೇಮಿಸುವ ಕೇಂದ್ರ ಸರ್ಕಾರ, ರಾಷ್ಟ್ರಪತಿ ಈ ಬಗ್ಗೆ ಮೌನ ತಾಳಿದ್ದಾರೆ. ಮಮತಾ ಬ್ಯಾನರ್ಜಿಯವರು ಯಾವಾಗಲೂ ಸರಿಯಾಗಿ ವರ್ತಿಸುತ್ತಾರೆ ಎಂದೇನೂ ಅಲ್ಲ. ಆದರೆ, ರಾಜ್ಯಪಾಲರು ರಾಜಭವನದಲ್ಲಿನ ಆಗುಹೋಗುಗಳಿಗೆ ಜವಾಬ್ದಾರಿ ಹೊರಬೇಕಾಗುತ್ತದೆ. ಸಾರ್ವಜನಿಕವಾಗಿ ವಿವರಣೆ ನೀಡಲು ಸಾಧ್ಯವಿಲ್ಲದಿದ್ದರೆ ತನಿಖೆ ಮಾಡುತ್ತಿರುವವರಿಗೆ ಮಾಹಿತಿ ನೀಡಬಹುದು. ಇದು ಮಹಿಳೆಗೆ ಸಂಬಂಧಪಟ್ಟ ವಿಷಯವಾದ್ದರಿಂದ ಕೇಂದ್ರ ಸರ್ಕಾರವೂ ಸಂವೇದನಾಶೀಲತೆ ತೋರಬೇಕು.

ರಾಜ್ಯಪಾಲ ಹುದ್ದೆಗೆ ವರ್ಗಾವಣೆ ಇದೆ. ರಜೆ ತೆಗೆದುಕೊಳ್ಳಲೂ ಸೂಚಿಸಬಹುದು- ತನಿಖೆ ಸರಿಯಾಗಿ ನಡೆಯಲು. ಈ ವಿವಾದದಿಂದ ಆ ರಾಜ್ಯದ ಘನತೆಗೆ ಕುಂದುಂಟಾಗುತ್ತದೆ. 'ಅಲ್ಲಿಗೆ ಅವರೇ ಸರಿ' ಎಂದು ಕೇಂದ್ರವು ರಾಜ್ಯಪಾಲರನ್ನು ನೇಮಿಸುತ್ತದೆ. ಆದರೆ, ಕೆಲವರು ತಪ್ಪು ಎಸಗಿದಾಗ ಸೂಕ್ತ ಕ್ರಮ ಕೈಗೊಳ್ಳಲು ಹಿಂದೆಮುಂದೆ ನೋಡಬಾರದು.

**ಎಚ್.ಎಸ್. ಮಂಜುನಾಥ,** ಗೌರಿಬಿದನೂರು

### ನೀಟ್: ಹಗರಣದ ಇನ್ನೊಂದು ಮುಖ

ನೀಟ್ ಪರೀಕ್ಷಾ ಅಕ್ರಮದ ತನಿಖೆ ದಿನದಿಂದ ದಿನಕ್ಕೆ ತಿರುವು ಪಡೆಯುತ್ತಿದೆ. ದಿನ ಕಳೆದಂತೆ ಈ ಅಕ್ರಮದಲ್ಲಿ ಭಾಗಿಯಾದವರ ಮುಖಗಳು ಬೆಳಕಿಗೆ ಬರುತ್ತಿವೆ. ಇವುಗಳ ಮಧ್ಯೆ ನಾವು ಒಮ್ಮೆ ಗಂಭೀರವಾಗಿ ಯೋಚಿಸಬೇಕಾದ ವಿಷಯವೆಂದರೆ, ಅರ್ಹತೆ ಇಲ್ಲದ ಅಭ್ಯರ್ಥಿಗಳು ಅಕ್ರಮ ಮಾರ್ಗದ ಮೂಲಕ ಉತ್ತೀರ್ಣ ಹೊಂದಿ ಕೋಟ್ಯಂತರ ರೂಪಾಯಿ ಖರ್ಚು ಮಾಡಿ ವೈದ್ಯಕೀಯ ಪದವಿ ಪಡೆದು ವೈದ್ಯರಾಗಿ ಹೊರಹೊಮ್ಮುತ್ತಿರುವ ಸಂಗತಿ. ಇಂತಹ ವೈದ್ಯರಿಂದ ಸಮಾಜಕ್ಕೆ ಯಾವ ರೀತಿಯ ಸೇವೆಯನ್ನು ನಿರೀಕ್ಷಿಸಲು ಸಾಧ್ಯ? ಆರೋಗ್ಯ ಕ್ಷೇತ್ರದಲ್ಲಿ ಇಂತಹ ವೈದ್ಯರ ಸಂಖ್ಯೆ ದಿನೇ ದಿನೇ ಹೆಚ್ಚಲು ಪರೋಕ್ಷವಾಗಿ ನಮ್ಮ ಪರೀಕ್ಷಾ ವ್ಯವಸ್ಥೆಯೇ ಕಾರಣವೆಂಬುದನ್ನು ಈ ನೀಟ್ ಹಗರಣದಿಂದ ಮನವರಿಕೆಯಾಗಿದೆ. ಪದವಿ ಶಿಕ್ಷಣಕ್ಕೆ ಪ್ರವೇಶ ಗಿಟ್ಟಿಸಲು ಅಕ್ರಮ ಮಾರ್ಗ ಅನುಸರಿಸುವ ಮತ್ತು ಅದಕ್ಕಾಗಿ ಲಕ್ಷಾಂತರ ರೂಪಾಯಿ ಖರ್ಚು ಮಾಡುವ ಇಂತಹ ಅಭ್ಯರ್ಥಿಗಳು ಹಾಗೂ ಪಾಲಕರು, ವೈದ್ಯರಾದ ಬಳಿಕ ತಾವು ಹಾಕಿದ ಬಂಡವಾಳವನ್ನು ಮರಳಿ ಪಡೆಯಲು ಜನಸಾಮಾನ್ಯರ ಜೇಬಿಗೆ ಕತ್ತರಿ ಹಾಕುತ್ತಾರೆ, ಬೇಡದ ಪರೀಕ್ಷೆಗಳಿಗೆ ಮತ್ತು ಶಸ್ತ್ರಚಿಕಿತ್ಸೆಗಳಿಗೆ ರೋಗಿಗಳನ್ನು ದೂಡುತ್ತಾರೆ. ಈ ಬಗೆಯ ಅಕ್ರಮಗಳಿಗೆ ಕಡಿವಾಣ ಬೀಳಬೇಕು. ತಪ್ಪಿತಸ್ಥರನ್ನು ಕಠಿಣ ಶಿಕ್ಷೆಗೆ ಒಳಪಡಿಸಬೇಕು.

**ಸುರೇಂದ್ರ ಪೈ,** ಭಟ್ಕಳ

### ಬಾಧಿಸಿದ ಉಷ್ಣತೆ-ನಿಸರ್ಗದ ಎಚ್ಚರಿಕೆ ಗಂಟೆ

'ಜಾಗತಿಕವಾಗಿ 500 ಕೋಟಿ ಜನ ಜೂನ್ ತಿಂಗಳ 9 ದಿನ ಹವಾಮಾನ ಬದಲಾವಣೆಯಿಂದ ಉಂಟಾದ ತೀವ್ರ ಶಾಖವನ್ನು ಅನುಭವಿಸಿದ್ದಾರೆ' ಎಂದು ವಿಜ್ಞಾನಿಗಳ ತಂಡ ನಡೆಸಿದ ಅಧ್ಯಯನದಿಂದ ತಿಳಿದುಬಂದಿದೆ ಎಂದು ವರದಿಯಾಗಿದೆ (ಪ್ರ.ವಾ., ಜೂನ್ 29). ಇದು ನಿಸರ್ಗದ ಎಚ್ಚರಿಕೆ ಗಂಟೆ. ಈಗಲೂ ಎಚ್ಚೆತ್ತುಕೊಳ್ಳದಿದ್ದರೆ ಸಂಪೂರ್ಣ ವಿನಾಶ ಖಂಡಿತ. ವಾತಾವರಣದಲ್ಲಿ ಇಂಗಾಲದ ಪ್ರಮಾಣ ಏರಲು ಪಳೆಯುಳಿಕೆ ಇಂಧನ ಬಳಕೆ ಹೆಚ್ಚಾಗುತ್ತಿರುವುದು, ಅರಣ್ಯ ನಾಶ ಇವೆಲ್ಲ ಕಾರಣ. ಪರಿಸರಸ್ನೇಹಿ ಸೌರ, ಪವನ ಇಂಧನಕ್ಕೆ ಹೆಚ್ಚು ಒತ್ತು ನೀಡಬೇಕಾದುದು ಇವತ್ತಿನ ತುರ್ತು. ಅರಣ್ಯ ಬೆಳೆಸುವ, ಸಂರಕ್ಷಿಸುವ ಕ್ರಮಗಳು ಪರಿಣಾಮಕಾರಿಯಾಗಿ ನಡೆಯಬೇಕು.

**ಎಚ್.ಆರ್.ಪ್ರಕಾಶ್,** ಕೆ.ಬಿ.ದೊಡ್ಡಿ, ಮಂಡ್ಯ

### ನಾಗರಿಕ ಪ್ರಜ್ಞೆ ರೂಢಿಸಿಕೊಳ್ಳೋಣ

ಸಮಾಜದ ಬಗೆಗಿನ ಕಳಕಳಿ ನಮಲ್ಲಿ ದಿನೇ ದಿನೇ ಕಡಿಮೆಯಾಗುತ್ತಿದೆ. ನಾವು ಬರೀ ಗಿಳಿ ಪಾಠದ ಸಾಕ್ಷರರಾಗುತ್ತಿದ್ದೇವೆ ಎನ್ನುವ ಅನುಮಾನ ಕಾಡಲಾರಂಭಿಸಿದೆ. ಹೊರದೇಶಕ್ಕೆ ಹೋದಾಗ ನೀತಿ–ನಿಯಮಗಳನ್ನು ಚಾಚೂ ತಪ್ಪದೆ ಪಾಲಿಸುತ್ತೇವೆ. ಭಾರತಕ್ಕೆ ಮರಳಿ ಬರುತ್ತಲೇ ಅವನ್ನೆಲ್ಲ ಮರೆಯುತ್ತೇವೆ. ನಾಗರಿಕ ಪ್ರಜ್ಞೆ ಎಂಬುದೇ ಕಾಣಸಿಗುವುದಿಲ್ಲ. ಕಸ ವಿಲೇವಾರಿಯಿಂದ ಸಂಚಾರ ನಿಯಮ ಪಾಲನೆವರೆಗೂ ಈ ಮಾತು ಅನ್ವಯಿಸುತ್ತದೆ. ದಂಡದ ಕಾರಣಕ್ಕೆ ಚೂರುಪಾರು ಅನುಸರಿಸುತ್ತೇವೆ ಅಷ್ಟೆ.


ಕಂಡಕಂಡಲ್ಲಿ ಕಸ ಸುರಿಯುತ್ತೇವೆ. ಎಲ್ಲೆಂದರಲ್ಲಿ ಮಲ, ಮೂತ್ರ ವಿಸರ್ಜನೆ ಮಾಡುತ್ತೇವೆ. ಸುಶಿಕ್ಷಿತ ಹಿರಿಯರೇ ಈ ಕೆಲಸ ಮಾಡಿದರೆ ಮಕ್ಕಳಿಗೆ ಮಾದರಿ ಆಗುವವರು ಯಾರು? ಅವು ಕಲಿಯುವುದಾದರೂ ಹೇಗೆ? ಶಿಕ್ಷಣ ಇಂತಹ ಮೂಲಭೂತ ಪಾಠಗಳನ್ನೂ ನಮ್ಮಲ್ಲಿ ರೂಢಿಸದಿದ್ದರೆ ಅದರಿಂದ ಪ್ರಯೋಜನವಾದರೂ ಏನು?

**ಸೌಮ್ಯಾ ಕಾಗಲ,** ಬಾಗಲಕೋಟೆ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. 

# ಬ್ರಿಟನ್ ಚುನಾವಣೆ ಬದಲಾವಣೆ ಸನ್ನಿಹಿತ?





ಬ್ರಿಟನ್‌ನ ಸಂಸತ್ತಿಗೆ (ಹೌಸ್ ಆಫ್ ಕಾಮನ್ಸ್) ಜುಲೈ 4ರಂದು ಚುನಾವಣೆ ನಡೆಯಲಿದೆ. ಕನ್ಸರ್ವೇಟಿವ್ ಪಾರ್ಟಿಯ ನೇತೃತ್ವ ವಹಿಸಿರುವ ಬ್ರಿಟನ್ ಪ್ರಧಾನಿ, ಭಾರತ ಮೂಲದ ರಿಷಿ ಸುನಕ್ ಅವರು ಅವಧಿಗೂ ಮೊದಲೇ ಚುನಾವಣೆ ಘೋಷಿಸಿ ಎಲ್ಲರನ್ನೂ ಅಚ್ಚರಿಗೆ ಕೆಡವಿದ್ದಾರೆ. 14 ವರ್ಷಗಳಿಂದ ವಿರೋಧ ಪಕ್ಷದ ಸ್ಥಾನದಲ್ಲಿರುವ ಲೇಬರ್ ಪಾರ್ಟಿ ಈ ಬಾರಿ ಗೆಲುವಿನ ವಿಶ್ವಾಸದಲ್ಲಿದೆ. ಚುನಾವಣಾ ಪೂರ್ವ ಸಮೀಕ್ಷೆಗಳು ಲೇಬರ್ ಪಾರ್ಟಿ ಅಧಿಕಾರಕ್ಕೇರಲಿದೆ ಎಂದು ಭವಿಷ್ಯ ನುಡಿದಿವೆ. ಜಾಗತಿಕ ಸಮುದಾಯದ ಗಮನ ಸೆಳೆದಿರುವ ಈ ಚುನಾವಣೆ ಮೇಲಿನ ನೋಟ ಇಲ್ಲಿದೆ...

## ಕೀರ್ ಸ್ಟಾರ್ಮರ್ ಮುಂದಿನ ಪ್ರಧಾನಿ?

**ಬ್ರಿಟನ್‌ನಲ್ಲಿ** ನಡೆದ ಉಪಚುನಾವಣೆಗಳು ಮತ್ತು ಸ್ಥಳೀಯ ಚುನಾವಣೆಗಳಲ್ಲಿ ಲೇಬರ್ ಪಕ್ಷ ಮುನ್ನಡೆ ಸಾಧಿಸಿತ್ತು. ಈ ಬಗ್ಗೆ ಮೇ ತಿಂಗಳಲ್ಲಿ ಪ್ರತಿಕ್ರಿಯಿಸಿದ್ದ ಪ್ರಧಾನಿ ರಿಷಿ ಸುನಕ್, 'ಸಾರ್ವತ್ರಿಕ ಚುನಾವಣೆಯಲ್ಲಿ ಯಾವ ಪಕ್ಷವೂ ಬಹುಮತ ಪಡೆಯದೇ ಇರಬಹುದು' ಎಂದು ಸೂಚ್ಯವಾಗಿ ಹೇಳಿದ್ದರು.

ರಿಷಿ ಸುನಕ್ ಅವರ ಪ್ರಧಾನಿ ಅವಧಿ ಹಾಗೂ 14 ವರ್ಷಗಳ ಕನ್ಸರ್ವೇಟಿವ್ ಪಕ್ಷದ ಆಡಳಿತ ಈ ಚುನಾವಣೆಯೊಂದಿಗೆ ಅಂತ್ಯವಾಗಲಿವೆ ಎಂದು ಬಹುತೇಕ ಸಮೀಕ್ಷೆಗಳು ಭವಿಷ್ಯ ನುಡಿದಿವೆ. ಲೇಬರ್ ಪಕ್ಷದ ನಾಯಕ ಕೀರ್ ಸ್ಟಾರ್ಮರ್ ಬ್ರಿಟನ್‌ನ ಮುಂದಿನ ಪ್ರಧಾನಿ ಆಗುವುದು ಬಹುತೇಕ ನಿಶ್ಚಿತ ಎನ್ನಲಾಗುತ್ತಿದೆ.

ಕೀರ್ ಸ್ಟಾರ್ಮರ್, ವಕೀಲರು. ಆರ್ಥಿಕ ಮತ್ತು ರಾಜಕೀಯ ಸ್ಥಿರತೆಗಾಗಿ ಲೇಬರ್ ಪಕ್ಷಕ್ಕೆ ಮತ ನೀಡಿ ಎಂದು ಪ್ರಚಾರ ಮಾಡಿ ಜನರನ್ನು ಸೆಳೆಯುತ್ತಿದ್ದಾರೆ. 2008 ಮತ್ತು 2013ರ ನಡುವೆ ಇಂಗ್ಲೆಂಡ್ ಮತ್ತು ವೇಲ್ಸ್‌ನ ಚೀಫ್ ಪ್ರಾಸಿಕ್ಯೂಟರ್ ಆಗಿದ್ದರು. ಜನರಿಂದ ದೂರ ಇರುತ್ತಾರೆ ಎನ್ನುವುದನ್ನು ಸೂಚಿಸಲು ಅವರ ವಿರೋಧಿಗಳು 'ಸರ್ ಕೀರ್ ಸ್ಟಾರ್ಮರ್' ಎಂದು ವ್ಯಂಗ್ಯ ಮಾಡುವುದುಂಟು. ಸಮೀಕ್ಷೆಗಳು ನಿಜವಾದರೆ, ದೀರ್ಘ ಕಾಲದ ನಂತರ, ಲೇಬರ್ ಪಕ್ಷದ ಪ್ರಧಾನಿ ಆಗಿ 61 ವರ್ಷದ ಸ್ಟಾರ್ಮರ್ ಆಡಳಿತ ನಡೆಸಲಿದ್ದಾರೆ.

**650**
ಬ್ರಿಟನ್ ಸಂಸತ್ತಿನಲ್ಲಿರುವ ಒಟ್ಟು ಸ್ಥಾನಗಳು

**326**
ಬಹುಮತಕ್ಕೆ ಬೇಕಾಗಿರುವ ಸ್ಥಾನಗಳು

ಪ್ರಜಾವಾಣಿ ವಾರ್ತೆ

**ಈ ಬಾರಿಯ** ಬ್ರಿಟನ್ ಸಾರ್ವತ್ರಿಕ ಚುನಾವಣೆ ಕುತೂಹಲ ಕೆರಳಿಸಿದೆ. ಐದು ವರ್ಷಗಳಿಗೊಮ್ಮೆ ನಡೆಯುವ ಚುನಾವಣೆ ಈ ಬಾರಿ ಆರು ತಿಂಗಳು ಮೊದಲೇ ನಡೆಯುತ್ತಿದೆ. ಈ ವರ್ಷದ ಡಿಸೆಂಬರ್ ಅಂತ್ಯಕ್ಕೆ ಚುನಾವಣೆ ನಡೆಯಬೇಕಿತ್ತು. ಆದರೆ, ಪ್ರಧಾನಿ, ಕನ್ಸರ್ವೇಟಿವ್ ಪಕ್ಷದ ರಿಷಿ ಸುನಕ್ ಅವರು ಜುಲೈ 4ರಂದು ಚುನಾವಣೆ ನಡೆಯಲಿದೆ ಎಂದು ಮೇ 22ರಂದು ಘೋಷಿಸಿದ್ದರು. ಮೇ 30ಕ್ಕೆ ಸಂಸತ್ತನ್ನು ವಿಸರ್ಜಿಸಲಾಗಿದೆ.

ಬಹು ಪಕ್ಷೀಯ ವ್ಯವಸ್ಥೆ ಇರುವ ಬ್ರಿಟನ್‌ನಲ್ಲಿ 12ಕ್ಕೂ ಹೆಚ್ಚು ರಾಜಕೀಯ ಪಕ್ಷಗಳಿವೆ. ಭಾರತದಲ್ಲಿ ಇರುವಂತೆ ಅಲ್ಲೂ ಸಂಸತ್ತಿನಲ್ಲಿ ಕೆಳಮನೆ (ಹೌಸ್ ಆಫ್ ಕಾಮನ್ಸ್), ಮೇಲ್ಮನೆ (ಹೌಸ್ ಆಫ್ ಲಾರ್ಡ್ಸ್) ಇವೆ. 650 ಸದಸ್ಯ ಬಲದ ಕೆಳಮನೆ ಸದಸ್ಯರನ್ನು ಜನರೇ ನೇರವಾಗಿ ಆರಿಸುತ್ತಾರೆ. ಪ್ರತಿ ಚುನಾವಣೆಯಲ್ಲೂ ಇಲ್ಲಿ ಕನ್ಸರ್ವೇಟಿವ್ ಪಾರ್ಟಿ ಮತ್ತು ಲೇಬರ್ ಪಾರ್ಟಿ ನಡುವೆ ಪೈಪೋಟಿ ನಡೆಯುತ್ತದೆ. ಈ ಬಾರಿಯೂ ಎರಡೂ ಪಕ್ಷಗಳ ನಡುವೆ ಪೈಪೋಟಿ ಏರ್ಪಟ್ಟಿದೆ.

2010ರಿಂದ ಆಡಳಿತದಲ್ಲಿರುವ ಕನ್ಸರ್ವೇಟಿವ್ ಪಕ್ಷ ಈ ಬಾರಿ, ರಿಷಿ ಸುನಕ್ ನಾಯಕತ್ವದಲ್ಲಿ ಅಧಿಕಾರಕ್ಕೆ ಏರಲು ಇನ್ನಿಲ್ಲದ ಕಸರತ್ತು ನಡೆಸುತ್ತಿದೆ. ಐದು ವರ್ಷಗಳಲ್ಲಿ ನಡೆದ ಹಲವು ಹಗರಣಗಳು, ಇಬ್ಬರು ಪ್ರಧಾನಿಗಳ ರಾಜೀನಾಮೆ, ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಎದುರಾಗಿರುವ ಸೋಲು ಸುನಕ್ ಪಕ್ಷಕ್ಕೆ ಹಿನ್ನಡೆ ತಂದಿದೆ.

ಮೂರು ಚುನಾವಣೆಗಳಿಂದ ವಿರೋಧ ಪಕ್ಷದ ಸ್ಥಾನದಲ್ಲಿ ಕುಳಿತಿರುವ ಲೇಬರ್ ಪಾರ್ಟಿ ಕೀರ್ ಸ್ಟಾರ್ಮರ್ ನೇತೃತ್ವದಲ್ಲಿ ಅಧಿಕಾರಕ್ಕೆ ಏರುವ ಲೆಕ್ಕಾಚಾರದಲ್ಲಿದೆ. ಚುನಾವಣಾ ಪೂರ್ವ ಸಮೀಕ್ಷೆಗಳು ಲೇಬರ್ ಪಾರ್ಟಿ ಗೆಲುವು ಸಾಧಿಸಲಿವೆ ಎಂದು ಹೇಳಿರುವುದು ಅದರ ವಿಶ್ವಾಸವನ್ನು ಹೆಚ್ಚಿಸಿದೆ. ಸಮೀಕ್ಷೆಗಳಲ್ಲಿ ಲೇಬರ್ ಪಾರ್ಟಿ ಶೇ 20ರಷ್ಟು ಅಂಶಗಳಿಂದ ಮುನ್ನಡೆಯಲ್ಲಿದೆ.

### ಚುನಾವಣಾ ವಿಷಯಗಳು...

**ಐರೋಪ್ಯ** ಒಕ್ಕೂಟದಿಂದ ಬ್ರಿಟನ್ ಹೊರ ಬಂದ ನಂತರ ನಡೆಯುತ್ತಿರುವ ಮೊದಲ ಚುನಾವಣೆ ಇದು. 2019ರ ಸಾರ್ವತ್ರಿಕ ಚುನಾವಣೆಯಲ್ಲಿ ಇದು ಪ್ರಮುಖ ವಿಚಾರವಾಗಿತ್ತು. ಏರುತ್ತಿರುವ ಹಣದುಬ್ಬರ, ಆರ್ಥಿಕ ಪ್ರಗತಿ ನಿಧಾನವಾಗಿರುವುದು, ಜೀವನ ವೆಚ್ಚ ಹೆಚ್ಚಳ, ವಲಸೆ ಸಮಸ್ಯೆ, ವಿದೇಶಾಂಗ ನೀತಿ, ಆರೋಗ್ಯ ಸೇವೆ ಈ ಬಾರಿಯ ಚುನಾವಣಾ ವಿಚಾರಗಳಾಗಿವೆ. ಪಕ್ಷಗಳು ಇದೇ ವಿಚಾರಗಳನ್ನು ಇಟ್ಟುಕೊಂಡು ತಮ್ಮ ಚುನಾವಣಾ ಪ್ರಣಾಳಿಕೆಗಳನ್ನು ರೂಪಿಸಿವೆ.



### ಸಿದ್ಧವಾಯಿತು 'ಹಿಂದೂ ಪ್ರಣಾಳಿಕೆ'

**2021ರ** ಜನಗಣತಿಯ ಪ್ರಕಾರ, ಬ್ರಿಟನ್‌ನಲ್ಲಿ ಸುಮಾರು 10 ಲಕ್ಷ ಹಿಂದೂಗಳಿದ್ದು, ಮತದಾರರ ಪೈಕಿ ಗಮನಾರ್ಹ ಸಂಖ್ಯೆಯೆನಿಸಿಕೊಂಡಿದ್ದಾರೆ. ಇದೇ ಸೂಕ್ತ ಸಮಯ ಎಂದು ಅರಿತಿರುವ ಹಿಂದೂ ಸಮುದಾಯ ಕೂಡ ರಾಜಕೀಯ ಪಕ್ಷಗಳನ್ನು ಉತ್ತರದಾಯಿಗಳನ್ನಾಗಿಸಲು ಹೊಸ ತಂತ್ರ ಹೂಡಿದೆ. ಸಾರ್ವತ್ರಿಕ ಚುನಾವಣೆಯ ಕಾರಣಕ್ಕೆ ಬ್ರಿಟಿಷ್ ಹಿಂದೂ ಸಂಘಟನೆಗಳು ಮೊದಲ ಬಾರಿಗೆ 'ಹಿಂದೂ ಪ್ರಣಾಳಿಕೆ' ಸಿದ್ಧಪಡಿಸಿದ್ದು, ಚುನಾಯಿತ ಪ್ರತಿನಿಧಿಗಳು ಹಿಂದೂಗಳ ಧಾರ್ಮಿಕ ಕೇಂದ್ರಗಳನ್ನು ರಕ್ಷಿಸಬೇಕು ಮತ್ತು ಹಿಂದೂ ದ್ವೇಷವನ್ನು ಶಮನ ಮಾಡಬೇಕು ಎಂದು ಬೇಡಿಕೆ ಇಟ್ಟಿವೆ.

### ದೇವಸ್ಥಾನಗಳಲ್ಲಿ ಪ್ರಚಾರ

ಬ್ರಿಟನ್‌ನಲ್ಲಿರುವ ಹಿಂದೂಗಳ ಮತಗಳನ್ನು ಸೆಳೆಯಲು ಪ್ರಮುಖ ಪಕ್ಷಗಳು ನಾನಾ ಕಸರತ್ತು ಮಾಡುತ್ತಿವೆ. ಕೆಲವು ಮುಖಂಡರಂತೂ ಹಿಂದೂಗಳನ್ನು ಆಕರ್ಷಿಸಲು ದೇವಸ್ಥಾನಗಳಿಗೇ ತೆರಳಿ ಮತಯಾಚನೆ ಮಾಡುತ್ತಿದ್ದಾರೆ. ಈ ವಿಚಾರದಲ್ಲಿ ರಿಷಿ ಸುನಕ್ ಮತ್ತು ಕೀರ್ ಸ್ಟಾರ್ಮರ್ ಪೈಪೋಟಿಗೆ ಬಿದ್ದಿದ್ದಾರೆ.

ರಿಷಿ ಸುನಕ್ ಪತ್ನಿ ಅಕ್ಷತಾ ಮೂರ್ತಿ ಅವರೊಂದಿಗೆ ಬಿಎಪಿಎಸ್ ಸ್ವಾಮಿನಾರಾಯಣ ಮಂದಿರಕ್ಕೆ ಭೇಟಿ ಪೂಜೆ ಸಲ್ಲಿಸಿದ್ದಾರೆ. ಹಿಂದೂಗಳ ಮೌಲ್ಯಗಳು ಹಾಗೂ ಕನ್ಸರ್ವೇಟಿವ್ ಪಕ್ಷದ ಮೌಲ್ಯಗಳು ಒಂದೇ ಎಂದು ಒತ್ತಿ ಹೇಳಿದ್ದಾರೆ. ತಮ್ಮ ಹಿಂದೂ ಹಿನ್ನೆಲೆ, ತಮ್ಮ ಕುಟುಂಬದ ಸದಸ್ಯರು ಮಾಡುತ್ತಿರುವ ಸೇವಾ ಕಾರ್ಯಗಳ ಬಗ್ಗೆ ವಿವರಿಸುತ್ತಿದ್ದಾರೆ.

ತಾನೊಬ್ಬ ಹಿಂದೂ ಎಂಬುದನ್ನು ನೆನಪಿಸಿರುವ ಸುನಕ್, ಸಾರ್ವಜನಿಕ ಸೇವೆಗೆ ತನಗೆ ಧರ್ಮವೇ ಮಾರ್ಗದರ್ಶನ ನೀಡುತ್ತಿದೆ ಎಂದಿದ್ದಾರೆ. ತಮ್ಮ ತಂದೆ, ತಾಯಿಯ ಜತೆಗೆ ಅತ್ತೆ ಸುಧಾ ಮೂರ್ತಿ ಮಾಡುತ್ತಿರುವ ಸಾಮಾಜಿಕ ಸೇವಾ ಕೆಲಸಗಳನ್ನೂ ಉಲ್ಲೇಖಿಸಿದ್ದಾರೆ. ತಾನು ಭಗವದ್ಗೀತೆ ಮೇಲೆ ಪ್ರಮಾಣ ವಚನ ಸ್ವೀಕರಿಸಿದ್ದನ್ನು ನೆನಪಿಸಿದ್ದಾರೆ. ಹೀಗೆ ಹಿಂದೂಗಳ ಮನ ಗೆಲ್ಲಲು ತೀವ್ರ ಪ್ರಯತ್ನ ಮಾಡುತ್ತಿದ್ದಾರೆ.

ಲೇಬರ್ ಪಾರ್ಟಿಯ ಕೀರ್ ಸ್ಟಾರ್ಮರ್ ಕೂಡ ಕಿಂಗ್ಸ್‌ಬರಿಯ ಸ್ವಾಮಿನಾರಾಯಣ ಆಲಯಕ್ಕೆ ಭೇಟಿ ಕೊಟ್ಟು, ದೇವರ ದರ್ಶನ ಪಡೆದಿದ್ದಾರೆ. ಭಾರತದೊಂದಿಗೆ ಉತ್ತಮ ಸಂಬಂಧ ರೂಪಿಸುವ ಭರವಸೆ ನೀಡಿದ್ದಾರೆ. 'ಬ್ರಿಟನ್‌ನಲ್ಲಿ ಹಿಂದೂಫೋಬಿಯಾಗೆ ಅವಕಾಶ ನೀಡುವುದಿಲ್ಲ' ಎಂದು ಹೇಳುವ ಮೂಲಕ ಹಿಂದೂಗಳ ಮನವೊಲಿಕೆಗೆ ಯತ್ನಿಸಿದ್ದಾರೆ.

### ರಾಜೀನಾಮೆ ಪರ್ವ ತಂದ ಸಂಕಷ್ಟ

**ಚುನಾವಣೆ** ಘೋಷಣೆಯಾದ ಬಳಿಕ 135 ಸಂಸದರು ತಮ್ಮ ಸ್ಥಾನಗಳಿಗೆ ರಾಜೀನಾಮೆ ಸಲ್ಲಿಸಿರುವುದಷ್ಟೇ ಅಲ್ಲದೇ, ಚುನಾವಣಾ ಕಣದಿಂದಲೂ ದೂರ ಸರಿದಿದ್ದಾರೆ. ಅವರಲ್ಲಿ 78 ಮಂದಿ ಕನ್ಸರ್ವೇಟಿವ್ ಪಕ್ಷದವರಾಗಿದ್ದು, ರಿಷಿ ಸುನಕ್ ಸಂಪುಟದ ಸಚಿವರು ಹಾಗೂ ಸಂಸದರಾಗಿದ್ದಾರೆ.

ಪ್ರತಿ ಚುನಾವಣೆ ಸಮಯದಲ್ಲಿಯೂ ಒಂದಷ್ಟು ಮಂದಿ ಕಣದಿಂದ ದೂರ ಸರಿಯುವ ಪರಂಪರೆ ಬ್ರಿಟನ್‌ನಲ್ಲಿ ಹಿಂದಿನಿಂದಲೂ ಇದೆ.

2010ರಲ್ಲಿ 149 ಸಂಸದರು ಕಣದಿಂದ ನಿವೃತ್ತರಾಗಿದ್ದರು. 2015ರಲ್ಲಿ 90, 2017ರಲ್ಲಿ 31 ಮತ್ತು 2019ರಲ್ಲಿ 74 ಮಂದಿ ನಿವೃತ್ತರಾಗಿದ್ದರು.

ಕಣದಿಂದ ನಿವೃತ್ತರಾಗುತ್ತಿರುವುದಕ್ಕೆ ಒಬ್ಬೊಬ್ಬ ಸಂಸದ ಒಂದೊಂದು ಕಾರಣ ನೀಡಿದ್ದಾರೆ. ಆದರೆ, ಅವೆಲ್ಲವೂ ನೆಪಗಳಾಗಿದ್ದು, ಈ ಬಾರಿ ಕನ್ಸರ್ವೇಟಿವ್ ಪಕ್ಷ ಸೋಲುತ್ತದೆ ಎಂದು ಮನಗಂಡೇ ಹೆಚ್ಚಿನವರು ಕಣದಿಂದ ದೂರ ಉಳಿಯುತ್ತಿದ್ದಾರೆ ಎನ್ನಲಾಗುತ್ತಿದೆ.

**ಆಧಾರ:** ಪಿಟಿಐ, ಬಿಬಿಸಿ, ಯುಕೆ ಪಾರ್ಲಿಮೆಂಟ್ ವೆಬ್‌ಸೈಟ್, ಅಲ್‌ಜಝೀರಾ

### ಪ್ರಮುಖ ರಾಜಕೀಯ ಪಕ್ಷಗಳು, ಅವುಗಳ ಮುಖ್ಯಸ್ಥರು, 2019ರಲ್ಲಿ ಪಡೆದ ಸ್ಥಾನಗಳು



ಎಡಪಂಥೀಯ

| ಪಕ್ಷ | ಮುಖ್ಯಸ್ಥರು | ಸ್ಥಾನಗಳು |
|---|---|---|
| ಲೇಬರ್ ಪಾರ್ಟಿ | ಕೀರ್ ಸ್ಟಾರ್ಮರ್ | 205 |
| ಎಸ್‌ಎನ್‌ಪಿ | ಜಾನ್ ಸ್ವಿನ್ನಿ | 43 |
| ಲಿಬರಲ್ ಡೆಮಾಕ್ರಟಿಕ್ ಪಾರ್ಟಿ | ಎಡ್ ಡೇವಿ | 15 |
| ಶಿನ್ ಫಿನ್ | ಮೇರಿ ಮೆಕ್‌ಡೊನಾಲ್ಡ್ | 7 |
| ಎಸ್‌ಡಿಎಲ್‌ಪಿ | ಕಲಂ ಈಸ್ಟ್‌ವುಡ್ | 2 |
| ಪ್ಲೈಡ್ ಕುಮ್ರೀ | ರುನ್ ಅಪ್ ಯುವಸ್ | 1 |
| ಗ್ರೀನ್ ಪಾರ್ಟಿ | ಆಡ್ರಿಯನ್ ರಮ್ಸೆ | 1 |

ಬಲಪಂಥೀಯ

| ಪಕ್ಷ | ಮುಖ್ಯಸ್ಥರು | ಸ್ಥಾನಗಳು |
|---|---|---|
| ಕನ್ಸರ್ವೇಟಿವ್ ಪಾರ್ಟಿ | ರಿಷಿ ಸುನಕ್ | 344 |
| ಡಿಯುಪಿ | ಗೇವಿನ್ ರಾಬಿನ್‌ಸನ್ | 17 |
| ರಿಫಾರ್ಮ್ ಪಾರ್ಟಿ | ನೈಜೆಲ್ ಫೆರಾಜ್ | 1 |

## ಸಿನಿ ಬಿಟ್ಸ್

### 'ಫೈರ್‌ಫ್ಲೈ'ನಲ್ಲಿ ಸುಧಾರಾಣಿ



**ನಟಿ ಸುಧಾರಾಣಿ** ಅವರು ನಿವೇದಿತಾ ಶಿವರಾಜ್‌ಕುಮಾರ್ ನಿರ್ಮಾಣದ 'ಫೈರ್‌ಫ್ಲೈ' ತಂಡ ಸೇರಿಕೊಂಡಿದ್ದಾರೆ. ವಂಶಿ ಈ ಚಿತ್ರದ ನಿರ್ದೇಶನದ ಜೊತೆಗೆ ನಾಯಕನಾಗಿಯೂ ಕಾಣಿಸಿಕೊಂಡಿದ್ದಾರೆ.

ಇತ್ತೀಚೆಗಷ್ಟೇ ನಟಿ ಹಾಗೂ ನಿರ್ದೇಶಕಿಯಾಗಿರುವ ಶೀತಲ್ ಶೆಟ್ಟಿ, ಹಿರಿಯ ಕಲಾವಿದ ಮೂಗು ಸುರೇಶ್ ಅವರು ಈ ತಂಡ ಸೇರಿಕೊಂಡಿದ್ದರು.

ಸುಧಾರಾಣಿ ನಾಯಕನ ತಾಯಿಯಾಗಿ ಪದ್ಮಾ ಪಾತ್ರದಲ್ಲಿ ನಟಿಸುತ್ತಿದ್ದಾರೆ. 'ಅಪ್ಪಾಜಿಯವರ ಮನೆಯಿಂದ ಯಾರು ಏನೇ ಮಾಡಿದರೂ ಬೆಂಬಲವಿರುತ್ತದೆ. ಅದು ನನ್ನ ತವರು ಮನೆ. ಹಾಗಾಗಿ ಇವತ್ತಿಗೂ ಆ ನಿರ್ಮಾಣ ಸಂಸ್ಥೆಯಿಂದ ಚಿಕ್ಕ ಪಾತ್ರ ನೀಡಿದರೂ ಮಾಡುತ್ತೇನೆ. ಇಡೀ ಕುಟುಂಬ ಕುಳಿತುಕೊಂಡು ನೋಡಿ, ಇಷ್ಟಪಡುವ ಸಿನಿಮಾವಿದು' ಎಂದಿದ್ದಾರೆ ಸುಧಾರಾಣಿ.

ಅಭಿಲಾಷ್ ಕಲ್ಲಟ್ಟಿ ಛಾಯಾಚಿತ್ರಗ್ರಹಣ, ಚರಣ್ ರಾಜ್ ಸಂಗೀತ ಚಿತ್ರಕ್ಕಿದೆ. ರಘು ನಿಡುವಳ್ಳಿ ಸಂಭಾಷಣೆಯಿದೆ. ಈಗಾಗಲೇ ಬಹುತೇಕ ಚಿತ್ರೀಕರಣ ಮುಗಿಸಿರುವ ಚಿತ್ರತಂಡ ಒಂದು ಹಾಡಿನ ಶೂಟಿಂಗ್ ಬಾಕಿ ಉಳಿಸಿಕೊಂಡಿದೆ. ದೀಪಾವಳಿ ವೇಳೆಗೆ ಚಿತ್ರವನ್ನು ತೆರೆಗೆ ತರುವುದಾಗಿ ಚಿತ್ರತಂಡ ಹೇಳಿದೆ.



ಲಾವಣ್ಯ ಸಾಹುಕಾರ
ಆದಿತ್ಯ ಶಶಿಕುಮಾರ್

### ಜುಲೈನಲ್ಲಿ 'ಕಾದಾಡಿ' ತೆರೆಗೆ

**ನಟ ಶಶಿಕುಮಾರ್** ಪುತ್ರ ಆದಿತ್ಯ ಶಶಿಕುಮಾರ್ ನಾಯಕನಾಗಿ ನಟಿಸಿರುವ 'ಕಾದಾಡಿ' ಚಿತ್ರ ತೆರೆಗೆ ಬರಲು ಸಿದ್ಧವಾಗಿದೆ. ಸತೀಶ್ ಮಾಲೆಂಪಾಟಿ ನಿರ್ದೇಶಿಸಿರುವ ಚಿತ್ರವನ್ನು ಅರುಣಂ ಫಿಲ್ಮ್ ನಿರ್ಮಾಣ ಮಾಡಿದೆ. ಚಿತ್ರದ ನಾಲ್ಕು ಹಾಡುಗಳು ಹಾಗೂ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿತು.

'ಕನ್ನಡ, ತೆಲುಗು, ತಮಿಳು ಭಾಷೆಗಳಲ್ಲಿ ಚಿತ್ರ ತೆರೆಗೆ ಬರಲಿದೆ. ಕನ್ನಡದಲ್ಲಿ ಜುಲೈನಲ್ಲಿ ಬಿಡುಗಡೆಗೊಂಡು, ಆಗಸ್ಟ್‌ನಲ್ಲಿ ತೆಲುಗು, ತಮಿಳಿನಲ್ಲಿ ರಿಲೀಸ್ ಮಾಡುವ ಯೋಜನೆಯಿದೆ. ಜೀವನದಲ್ಲಿನ ತ್ಯಾಗ ಮತ್ತು ಕಾದಾಟದ ಕುರಿತ ಕಥೆ ಇದೆ. ಥ್ರಿಲ್ಲರ್ ಜಾನರ್‌ನ ಸಿನಿಮಾವಿದು' ಎಂದರು ನಿರ್ದೇಶಕರು.

ಲಾವಣ್ಯ ಸಾಹುಕಾರ, ಚಾಂದಿನಿ ತಮಿಳರಸನ್ ನಾಯಕಿಯರು. ಉಳಿದಂತೆ ಪೋಸಾನಿ, ರವಿಕಾಳೆ, ಮಾರಿಮುತ್ತು, ಪ್ರೇಮ್‌ಮನೋಹರ್ ಮುಂತಾದವರು ನಟಿಸಿದ್ದಾರೆ. ಆರು ಹಾಡುಗಳಿಗೆ ಭೀಮ್ಸ್ ಸಿಸಿರಿಲಿಯೋ ಸಂಗೀತ ಸಂಯೋಜಿಸಿದ್ದಾರೆ. ಛಾಯಾಚಿತ್ರಗ್ರಹಣ ಡಿ.ಯೋಗಿಪ್ರಸಾದ್ ಅವರದ್ದು. ಪ್ರಕಾಶ್‌ತೋಟ ಸಂಕಲನವಿದೆ. ಗೋವಾ, ಚಿಕ್ಕಮಗಳೂರು, ಹೈದರಬಾದ್, ಚೆನ್ನೈ ಮೊದಲಾದೆಡೆ ಚಿತ್ರೀಕರಣಗೊಂಡಿದೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

## ಪಿವಿ ಫ್ಯಾಕ್ಟ್ ಚೆಕ್


ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

**ವಿಕಾಸ್ ಪಾಠಕ್** ಎನ್ನುವ ವ್ಯಕ್ತಿ, ಮೂರು ವರ್ಷದ ಹಿಂದೆ ತನ್ನ ತಂದೆ ಅಪಘಾತವೊಂದರಲ್ಲಿ ಸಾವಿಗೀಡಾದ ನಂತರ ತಾಯಿ ಜ್ಯೋತಿ ಪಾಠಕ್ ಅವರನ್ನು ಮದುವೆಯಾಗಿದ್ದಾರೆ ಎಂದು ಪ್ರತಿಪಾದಿಸುವ ವಿಡಿಯೊ ಒಂದು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ. ಕೆಲವರು ಅದನ್ನು ಧರ್ಮದ ಆಧಾರದಲ್ಲಿ ಟೀಕಿಸುತ್ತಿದ್ದು, ವ್ಯಾಪಕವಾಗಿ ಹಂಚಿಕೊಳ್ಳುತ್ತಿದ್ದಾರೆ. ಲಕ್ಷಾಂತರ ಮಂದಿ ಈ ವಿಡಿಯೊ ವೀಕ್ಷಿಸಿದ್ದು, ಸಾವಿರಾರು ಮಂದಿ ರೀಟ್ವೀಟ್ ಮಾಡಿದ್ದಾರೆ. ಆದರೆ ಇದು ಸುಳ್ಳು ಸುದ್ದಿ.



**ವಿಡಿಯೊ ಅನ್ನು** ಸೂಕ್ಷ್ಮವಾಗಿ ಪರಿಶೀಲಿಸಿದಾಗ, ಅದರಲ್ಲಿ ಒಂದು ಚಿತ್ರವಿರುವುದು ಕಂಡು ಬರುತ್ತದೆ. ಅದನ್ನು ರಿವರ್ಸ್ ಇಮೇಜ್ ಸರ್ಚ್‌ಗೆ ಒಳಪಡಿಸಿದಾಗ, ಅದು 'ಔಟ್‌ಲುಕ್ ಇಂಡಿಯಾ' ಪತ್ರಿಕೆಯಲ್ಲಿ 2022ರ ಫೆಬ್ರುವರಿಯಲ್ಲಿ ಪ್ರಕಟವಾದ ಲೇಖನಕ್ಕೆ ಸಂಬಂಧಿಸಿದ ಚಿತ್ರ ಎನ್ನುವುದು ಕಂಡುಬಂತು. ಚಿತ್ರದಲ್ಲಿರುವುದು ವಿಜಯಕುಮಾರಿ ಮತ್ತು ಆಕೆಯ ಮಗ ಕನ್ಹಯ್ಯ ಎನ್ನುವುದು ತಿಳಿದುಬಂತು. ವಿಜಯಕುಮಾರಿ 1993ರಲ್ಲಿ ಕಾನ್ಪುರದಲ್ಲಿ ನಡೆದಿದ್ದ ಕೊಲೆಯೊಂದರ ಆರೋಪದ ಮೇಲೆ ಜೈಲು ಸೇರಿ 20 ವರ್ಷ ಶಿಕ್ಷೆ ಅನುಭವಿಸಿದ್ದರು. 2013ರಲ್ಲಿ ಆಕೆಯ ಮಗ ಕನ್ಹಯ್ಯ ಜಾಮೀನು ಮೊತ್ತ ಸಲ್ಲಿಸಿ ತಾಯಿಯ ಬಿಡುಗಡೆಗೆ ಕಾರಣರಾಗಿದ್ದರು. ಆಗ ತೆಗೆದ ಚಿತ್ರವನ್ನು ಮದುವೆಯ ಚಿತ್ರ ಎಂದು ತಪ್ಪಾಗಿ ಹಂಚಿಕೊಳ್ಳಲಾಗುತ್ತಿದೆ ಎಂದು 'ಆಲ್ಟ್ ನ್ಯೂಸ್' ಫ್ಯಾಕ್ಟ್ ಚೆಕ್ ತಿಳಿಸಿದೆ.

## ಗುಂಡಣ್ಣ




## ನುಡಿ ಬೆಳಗು

### ಬೆನ್ನ ಹಿಂದೆ ಬಿದ್ದಿದೆ, ಸ್ಪರ್ಧೆ ಎಂಬ ಹೆಬ್ಬುಲಿ



ಎಚ್.ಎಸ್.ನವೀನಕುಮಾರ್, ಹೊಸದುರ್ಗ

**ರಾಮ ಹಾಗೂ ಶ್ಯಾಮ** ಎಂಬ ಇಬ್ಬರು ಗೆಳೆಯರು ದಟ್ಟವಾದ ಕಾಡೊಂದಕ್ಕೆ ಚಾರಣ ಹೋಗಿದ್ದರು. ಆಗ ಅವರನ್ನು ಭಾರಿ ಗಾತ್ರದ ಹುಲಿಯೊಂದು ಅಟ್ಟಿಸಿಕೊಂಡು ಬಂದಿತು. ಇಬ್ಬರೂ ತಮ್ಮ ಜೀವ ಉಳಿಸಿಕೊಳ್ಳಲು ವೇಗವಾಗಿ ಓಡಲಾರಂಭಿಸಿದರು. ಸ್ವಲ್ಪ ದೂರ ಓಡಿದ ನಂತರ, ರಾಮ ಥಟ್ಟೆಂದು ನಿಂತ ಹಾಗೂ ತನ್ನ ಬೆನ್ನಿಗೆ ಸಿಕ್ಕಿಸಿಕೊಂಡಿದ್ದ ಬ್ಯಾಗಿನಿಂದ, ವೇಗವಾಗಿ ಓಡಲು ಬಳಸುವ ಬೂಟನ್ನು ತೆಗೆದು ಅದನ್ನು ಕಟ್ಟಿಕೊಳ್ಳಲಾರಂಭಿಸಿದ. ಇದನ್ನು ಕಂಡ ಶ್ಯಾಮನಿಗೆ ನಿಜಕ್ಕೂ ಅಚ್ಚರಿಯಾಯಿತು ಹಾಗೂ ಇವನಿಗೆಲ್ಲೋ ಖಂಡಿತಾ ತಲೆ ಕೆಟ್ಟಿರಬೇಕು ಎಂದೆನಿಸಿತು. ಆತ ರಾಮನನ್ನು 'ಅಲ್ಲಯ್ಯಾ ರಾಮ, ಈ ಬೂಟು ಹಾಕಿಕೊಂಡ ಮಾತ್ರಕ್ಕೆ ನೀನು ಹುಲಿಗಿಂತ ವೇಗವಾಗಿ ಓಡಬಲ್ಲೆಯಾ' ಎಂದು ಪ್ರಶ್ನಿಸಿದ. ಆಗ ರಾಮ ಹೇಳಿದ, 'ಇಲ್ಲ ಮಿತ್ರ, ಖಂಡಿತ ನಾನು ಹುಲಿಗಿಂತ ವೇಗವಾಗಿ ಓಡಲಾರೆ. ಆದರೆ ನಿನಗಿಂತ ಎರಡು ಹೆಜ್ಜೆ ವೇಗವಾಗಿ ಓಡಬಲ್ಲೆ. ಆಗ ಮೊದಲು ಸಿಕ್ಕುವ ನಿನ್ನನ್ನು ಹುಲಿ ಹಿಡಿದು ತಿನ್ನುತ್ತದೆ, ನಾನು ಬಚಾವಾಗುತ್ತೇನೆ'.

ಇಂದಿನ ಈ ತೀವ್ರವಾದ ಸ್ಪರ್ಧಾತ್ಮಕ ಜಗತ್ತಿನಲ್ಲಿ ಸ್ಪರ್ಧೆ ಎಂಬ ಹುಲಿ ಎಲ್ಲರ ಬೆನ್ನ ಹಿಂದೆ ಬಿದ್ದಿದೆ. ನಾವು ಎಷ್ಟರಮಟ್ಟಿಗೆ ಇನ್ನೊಬ್ಬರಿಗಿಂತ ವೇಗವಾಗಿ ಓಡಬಲ್ಲೆವು ಎಂಬುದೇ ಈ ಜಗತ್ತಿನಲ್ಲಿ ಉಳಿವಿನ ಮುಖ್ಯ ಅಗತ್ಯ. Survival of the fittest ಅಂದರೆ ಸಮರ್ಥರಿಗೆ ಮಾತ್ರ ಉಳಿವು ಎಂಬುದು ಡಾರ್ವಿನ್ನನ ವಿಕಾಸವಾದದ ನಿಯಮ. ಈ ಜಗತ್ತು ಸಹಾ ಅದೇ ಪ್ರಕಾರವಾಗಿ ವಿಕಾಸವಾಗುತ್ತಾ ಬಂದಿದೆ. ಹೀಗಾಗಿ ಇಂದಿನ ಈ ತೀವ್ರ ಸ್ಪರ್ಧಾತ್ಮಕ ಯುಗದಲ್ಲಿ ಬದುಕುಳಿಯಬೇಕಾದರೆ ನಮ್ಮಲ್ಲಿ ಬರಿ ವಿದ್ಯೆ, ಶಕ್ತಿಗಳಿದ್ದರೆ ಸಾಲದು, ಅವುಗಳನ್ನು ಸೂಕ್ತ ಸಮಯಕ್ಕೆ ಬಳಸುವ ಯುಕ್ತಿ ಹಾಗೂ ವಿಶೇಷ ಕೌಶಲಗಳೂ ಅತ್ಯಗತ್ಯ.

ಇಲ್ಲಿ ರಾಮ ತನ್ನ ಕಾಲಿಗೆ ಕಟ್ಟಿಕೊಂಡ, ವೇಗವಾಗಿ ಓಡಲು ಬಳಸುವ ಬೂಟು, ನಾವು ಕಲಿತ ವಿದ್ಯೆಯ ಜೊತೆಗೆ ಹೆಚ್ಚುವರಿಯಾಗಿ ಅಳವಡಿಸಿಕೊಳ್ಳಬೇಕಾದ ಕೌಶಲವನ್ನು ಪ್ರತಿನಿಧಿಸುತ್ತದೆ. ವಿದ್ಯೆಯೊಂದಿಗೆ ಅದಕ್ಕೆ ಪೂರಕವಾದ ಕೌಶಲವನ್ನು ರೂಢಿಸಿಕೊಂಡಾಗ ಮಾತ್ರ ನಾವು ಈ ಸ್ಪರ್ಧಾತ್ಮಕ ಜಗತ್ತಿನಲ್ಲಿ ಯಶಸ್ವಿಯಾಗಬಹುದು. ಕೌಶಲ ಎಂಬುದು ಅನುಭವ ಹಾಗೂ ಜ್ಞಾನದ ಮಿಶ್ರಣ. ಇದು ಪ್ರತಿಯೊಂದು ಕ್ಷೇತ್ರದಲ್ಲೂ ಯಶಸ್ಸಿನ ಮೂಲಭೂತ ಅಗತ್ಯ. ಇದನ್ನು ವೃದ್ಧಿಪಡಿಸಿಕೊಂಡಾಗ ಮಾತ್ರ ನಾವು ಯಾವುದೇ ಕೆಲಸವನ್ನಾಗಲಿ ಪರಿಣಾಮಕಾರಿಯಾಗಿ ಮಾಡಲು ಸಾಧ್ಯ. ಹಾಗೆಯೇ ಸಮಯಕ್ಕೆ ತಕ್ಕಂತೆ ಬದಲಾಗುವ, ಮನೋಧರ್ಮದಿಂದ ನಮ್ಮನ್ನು ನಾವು ಸದಾ update ಮಾಡಿಕೊಳ್ಳಬೇಕು. 'ಜಗತ್ತು ಎಷ್ಟೇ ಬದಲಾಗಲಿ, ನಾನು ಮಾತ್ರ ಹೀಗೆಯೇ ಇರುತ್ತೇನೆ' ಎಂದು ಕೈಕಟ್ಟಿ ಕುಳಿತರೆ ಖಂಡಿತವಾಗಿಯೂ ಬೆನ್ನ ಹಿಂದೆ ಬಿದ್ದಿರುವ ಸ್ಪರ್ಧೆ ಎಂಬ ಹುಲಿ ನಮ್ಮನ್ನು ಇಲ್ಲವಾಗಿಸಿ ಬಿಡುತ್ತದೆ.

## ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಸೋಮವಾರ ಜುಲೈ 1, 2024

**ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ:** ಜ್ಯೇಷ್ಠ ಕೃಷ್ಣ ದಶಮಿ ಗಂ. 10-27 ನಕ್ಷತ್ರ: ಅಶ್ವಿನಿ ಗಂ. 06-26 ಯೋಗ: ಸುಕರ್ಮ ಗಂ. 13-42 ಕರಣ: ವಿಷ್ಟಿ ಗಂ. 10-27, ಮಿಥುನ ಮಾಸದ 17 ನೇ ದಿನ, ಮಳೆನಕ್ಷತ್ರ: ಆರ್ದ್ರಾ 3.
**ರಾಹುಕಾಲ :** ಬೆಳಗ್ಗೆ 07-30 – 09-00
**ಸೂರ್ಯೋದಯ :** 06-11 **ಸೂರ್ಯಾಸ್ತ :** 06-58
**ಮುಸ್ಲಿಂ ದಿನಾಂಕ :** 25 ಜುಲ್‌ಹಿಜಾ
**ಅದೃಷ್ಟ ಸಂಖ್ಯೆ :** 4, 10

**ಮೇಷ:** ಕಾರ್ಯ ಸಾಧನೆಗೆ ಅಧಿಕ ತಿರುಗಾಟದಿಂದ ಆಯಾಸ ಮತ್ತು ಆಹಾರದಲ್ಲಿ ವಿಷದ ಅಂಶವು ಸೇರಿ ಆರೋಗ್ಯ ಹದಗೆಡುವ ಸಾಧ್ಯತೆ. ಪ್ರಾರಂಭಿಸಿದ ಕೆಲಸ ನಾಳೆಗೆ ಎನ್ನದೆ ವೃತ್ತಿಯಲ್ಲಿ ಪಾದರಸದಂತೆ ಇರಲು ಪ್ರಯತ್ನಿಸಿ.

**ವೃಷಭ:** ದಿನವು ಮಾಡುವ ಕೆಲಸಗಳನ್ನೇ ಅಧಿಕಾರಿಗಳ ಕಣ್ಣೆದುರಿಗೆ ಮಾಡಬೇಕಾದ ಸಂದರ್ಭ ಬಂದಾಗ ಗುಣಮಟ್ಟದ ಬದಲಾವಣೆಯಾಗುವುದು. ಮಕ್ಕಳಿಗಾಗಿ ಇಷ್ಟದ ವಿಚಾರಗಳನ್ನು ತ್ಯಾಗ ಮಾಡಬೇಕಾಗಿ ಬರುತ್ತದೆ.

**ಮಿಥುನ:** ಅತಿ ಪುತ್ರವ್ಯಾಮೋಹವು ತಪ್ಪು ಹೆಜ್ಜೆ ಇಡುವಂತೆ ಮಾಡಬಹುದು. ಸಣ್ಣ ವಿದ್ಯುತ್ ಉಪಕರಣಗಳ ಮಾರಾಟವು ಲಾಭದಾಯಕ. ಮನೆಯಲ್ಲಿನ ಗೋಸಂಪತ್ತಿನಲ್ಲಿ ತೊಂದರೆಗಳು ಉಂಟಾಗಬಹುದು.

**ಕರ್ಕಾಟಕ:** ಯಶಸ್ಸಿಗೆ ಏಕಾಗ್ರತೆ ಮತ್ತು ಪ್ರಯತ್ನ ಬಹಳ ಮುಖ್ಯವಾಗಿ ಬೇಕಾಗುತ್ತದೆ. ಅದರಿಂದಾಗಿ ಎಲ್ಲ ಸವಾಲುಗಳನ್ನು ಎದುರಿಸುವ ಆತ್ಮಸ್ಥೈರ್ಯ ಬರುವುದು. ವಿದ್ಯಾರ್ಥಿಗಳಿಗೆ ಪರಿಶ್ರಮಕ್ಕೆ ತಕ್ಕ ಫಲಗಳು ಪ್ರಾಪ್ತಿ.

**ಸಿಂಹ:** ಹಿರಿಯ ಅಧಿಕಾರಿಗಳು ಪರಿಶ್ರಮ ಹಾಗೂ ಜವಾಬ್ದಾರಿಯುತ ನಡವಳಿಕೆಗಳನ್ನು ಗಮನಿಸಿ ಆರ್ಥಿಕ ಮಟ್ಟವನ್ನು ಮೇಲಕ್ಕೆತ್ತುವರು. ಹಿಂದಿನ ದಿನಗಳಿಗೆ ಹೋಲಿಸಿದರೆ ಈ ದಿನ ಸಂಸಾರ ನಿರ್ವಹಣೆ ಸುಲಭವೆನಿಸುವುದು.

**ಕನ್ಯಾ:** ಹಿತ ಶತ್ರುಗಳು ನಾವಿದ್ದೇವೆ ಎಂದು ಹೇಳುವುದು ಅನುಭವಕ್ಕೆ ಬರಲಿದೆ. ಹಳೆಯ ತಪ್ಪುಗಳು ಪುನರಾವರ್ತನೆಯಾಗದಂತೆ ಎಚ್ಚರ ವಹಿಸುವಿರಿ. ಮಗನಿಗೆ ಉದ್ಯೋಗ ದೊರೆತು ಸಂತೋಷವಾಗುತ್ತದೆ.

**ತುಲಾ:** ನಿವೃತ್ತ ಜೀವನವನ್ನು ಮೊಮ್ಮಕ್ಕಳ ಜೊತೆ ಸಂತೋಷದಿಂದ ಕಳೆಯುವ ಕನಸು ಅಕ್ಷರಶಃ ಸತ್ಯವಾಗುತ್ತದೆ. ನೌಕರಿಯಲ್ಲಿ ಅಭಿಪ್ರಾಯಕ್ಕೆ ಸಹೋದ್ಯೋಗಿಗಳ ಸಂಪೂರ್ಣ ಬೆಂಬಲ ಸಿಗುವುದು.

**ವೃಶ್ಚಿಕ:** ಎಲ್ಲಾ ಕಾರ್ಯಗಳು ಅಂದುಕೊಂಡ ರೀತಿಯಲ್ಲೇ ಆಗಲು ಸಾಧ್ಯವಾಗದಿರಬಹುದು. ವೃತ್ತಿಗೆ ನೀವು ನೀಡುವಷ್ಟೇ ಪ್ರಾಶಸ್ತ್ಯವನ್ನು ಸಾಂಸಾರಿಕ ಜೀವನಕ್ಕೂ ನೀಡಿ.

**ಧನು:** ಇಂದಿನ ಬದುಕಲ್ಲಿ ನಡೆಯುವ ಕೆಲವು ವಿಷಯಗಳು ಬೇಸರ ಹುಟ್ಟಿಸಬಹುದು. ಅಪಾಯಕಾರಿ ಸ್ಥಳಗಳಲ್ಲಿ ಕೆಲಸ ಮಾಡುವವರು ಯಾವುದೇ ಕಾರಣಕ್ಕೂ ರಕ್ಷಾಕವಚವನ್ನು ಮರೆಯದಿರಿ. ಸಂಗೀತ ಕೇಳಿ.

**ಮಕರ:** ಅಧಿಕಾರಿ ವರ್ಗದವರಲ್ಲಿ ಹಾಗೂ ಸಹಚರರಲ್ಲಿ ವೈಮನಸ್ಸನ್ನು ದೂರಪಡಿಸಿಕೊಂಡು ಉತ್ತಮ ಕೆಲಸಗಳನ್ನು ನಿರ್ವಹಿಸುವುದರಲ್ಲಿ ತಲೆತಗ್ಗಿಸುವಂತಾಗಬಹುದು. ಮಕ್ಕಳ ಒತ್ತಾಯಕ್ಕೆ ಮಣಿದು ಪ್ರವಾಸ ಒಪ್ಪಿಕೊಳ್ಳುವಿರಿ.

**ಕುಂಭ:** ಸಹೋದರರ ನಡವಳಿಕೆ ಅನೇಕ ಬಗೆಯ ಚಿಂತೆಗೆ, ಅನುಮಾನಗಳಿಗೆ ಕಾರಣವಾದೀತು. ನೆಂಟರಿಷ್ಟರ ಸಲಹೆ-ಸೂಚನೆಗಳನ್ನು ಆಲಿಸಿ ನಂತರದಲ್ಲಿ ಸನ್ಮಾರ್ಗದಲ್ಲಿ ನಡೆಯಿರಿ. ಸಂಸಾರದ ಜವಾಬ್ದಾರಿ ಹೆಚ್ಚಲಿದೆ.


**ಮೀನ:** ವ್ಯಸನಕ್ಕೆ ತುತ್ತಾಗಿರುವವರಿಂದ ತೊಂದರೆಯನ್ನು ಅನುಭವಿಸಬೇಕಾದೀತು. ಸ್ವಂತ ಪ್ರಯತ್ನದಿಂದ ಆಸ್ತಿ ಸಂಪಾದನೆ ಮಾಡಬಹುದು. ಒಂಟಿತನ ಹೋಗಲಾಡಿಸಿಕೊಳ್ಳಲು ಕೆಲಸಗಳತ್ತ ಮನಸ್ಸು ಹರಿಸುವಿರಿ.

## ಪದಬಂಧ 5728

– ವಿದ್ಯಾ ವಿನಯ್

**ಎಡದಿಂದ ಬಲಕ್ಕೆ**
1.ರಾರಾಜಮಾನವಾಗಿರುವ ಚಕ್ರವರ್ತಿ (4)
3.ಅತಿ ಘೋರವಾದ ವಿಷ (4)
5.ನಲಿಯುತ್ತಿರುವ ಕೇಕಿ (3)
7.ಹಸುವಿನ ಮರಿಗೆ ತೋರಿರುವ ದಯೆ (3)
9.ರಾಜಸಭೆಯಿದು (3)
11.ಮುಂದಾಗುವ ಕಾಲ (3)
12.ಮನೆಯ ಎರಡು ತೊಲೆಗಳ ನಡುವಿನ ಪ್ರದೇಶ (3)
13.ತಾಟಕಿ ತೆರೆದಿರುವ ವಾತಾಯನ (3)
15.ನಸುಕಿನಲ್ಲಿ ಬಿದ್ದ ಸ್ವಪ್ನ (3)
17.ಬೆಲೆಯುಳ್ಳ ಮಣಿಗಳನ್ನು ಅಡಗಿಸಿಕೊಂಡಿರುವಸಮುದ್ರ (4)
18.ತಟಾಕದಲ್ಲಿ ವಟಗುಟ್ಟುವನು ಮಾಡಿದ ಮೋಸ (4)

**ಮೇಲಿಂದ ಕೆಳಕ್ಕೆ**
1.ದಶಕದಿಂದಲೂ ಕಾಡುತ್ತಿರುವ ಸೊಳ್ಳೆ (3)
2.ಜನನಿ ಹತ್ತಿರ ನೆರೆದಿರುವ ಮಂದಿ (2)
3.ಭೂಲೋಕದ ಅಮೃತ (2)
4.ಬೆಳ್ಳುಳ್ಳಿ ಇಲ್ಲಿದೆ (3)
6.ಡೈವೋರ್ಸ್ ಅನ್ನು ಕನ್ನಡೀಕರಿಸಿ (7)
8.ದುಃಖಾಂತವಾದ ಪ್ರಹಸನ (5)
10.ಸ್ಥಳಾಂತರವಾಗುವುದು (5)
12.ಬರ ಬಂದಾಗ ದಿಟ್ಟಿಸಿ ನೋಡಿದ ಆಕಾಶ (3)
14.ಕಿಟಕಿಯ ಬಳಿ ಕಾಣಿಸಿದ ಜಗಳ (3)
15.ಪರಿಕರ ಹಿಡಿದಿರುವ ಕೈ (2)
16.ಹರಸುತಲಿದ್ದಾಗ ಕಾಣಿಸಿದ ಮಗ (2)



### 5727ನೇ ಪದಬಂಧದ ಉತ್ತರ

**ಎಡದಿಂದ ಬಲಕ್ಕೆ:**
1.ಉದಕ 3.ಜನಕ 5.ಹರಿ 6.ನರ 8.ಕತ್ತರಿ 9.ಮುಂಗೋಪ 11.ರವ 13.ರುಳಿ 14.ನೆರಳು 15.ಕದನ

**ಮೇಲಿಂದ ಕೆಳಕ್ಕೆ:**
1.ಉದ್ಧರಿ 2.ಕನ್ನಡಕ 3.ಜವಾಬ್ದಾರಿ 4.ಕವನ 5.ಹಲಾಲುಕೋರ 7.ರತ್ನಗಂಬಳಿ 9.ಮುಂಗುರುಳು 10.ಪರಿಷೇಕ 12.ವರ್ತನೆ 13.ರುಜಿನ

## ಸುಡೊಕು 6113

| | | | | | | | | |
|---|---|---|---|---|---|---|---|---|
| 8 | | 6 | | 4 | | 3 | | 5 |
| | 3 | | 5 | | | | | |
| | 9 | | | 3 | | 7 | | 1 |
| 2 | 1 | | 9 | | 3 | 6 | | |
| | | | | 1 | | | 5 | 3 |
| 3 | 8 | | | 5 | | | 7 | |
| 9 | | 8 | | | | | | 7 |
| | | | | 9 | | | 3 | |
| 4 | | 3 | | | 1 | 2 | | 6 |

### ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

### 6112 ಸುಡೊಕು

| | | | | | | | | |
|---|---|---|---|---|---|---|---|---|
| 2 | 4 | 8 | 1 | 6 | 3 | 5 | 9 | 7 |
| 7 | 5 | 6 | 4 | 9 | 8 | 2 | 3 | 1 |
| 1 | 3 | 9 | 2 | 5 | 7 | 4 | 8 | 6 |
| 6 | 1 | 5 | 9 | 7 | 4 | 8 | 2 | 3 |
| 3 | 9 | 7 | 8 | 1 | 2 | 6 | 5 | 4 |
| 8 | 2 | 4 | 6 | 3 | 5 | 7 | 1 | 9 |
| 5 | 6 | 3 | 7 | 2 | 1 | 9 | 4 | 8 |
| 9 | 8 | 2 | 3 | 4 | 6 | 1 | 7 | 5 |
| 4 | 7 | 1 | 5 | 8 | 9 | 3 | 6 | 2 |

# ‘ಸಿ.ಎಂ ಸ್ಥಾನ: ಹೈಕಮಾಂಡ್ ನಿರ್ಧರಿಸಲಿ’

‘ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿ ಅಧಿಕಾರ ಅನುಭವಿಸಿದ್ದಾರೆ. ಇನ್ನು ಮುಂದೆ ಡಿ.ಕೆ.ಶಿವಕುಮಾರ್ ಅವರಿಗೆ ಅಧಿಕಾರ ಬಿಟ್ಟುಕೊಟ್ಟು, ಒಳ್ಳೆಯದಾಗಲೆಂದು ಹರಸಬೇಕು’ ಎಂದು ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಚಂದ್ರಶೇಖರನಾಥ ಸ್ವಾಮೀಜಿ ಈಚೆಗೆ ನೀಡಿದ್ದ ಹೇಳಿಕೆ ಹಾಗೂ ಮೂವರು ಡಿಸಿಎಂಗಳ ನೇಮಕ ಕುರಿತ ಚರ್ಚೆ ಭಾನುವಾರವೂ ಮುಂದುವರಿದಿದೆ. ಹೇಳಿಕೆ ಪರ ಕೆಲವರು, ವಿರುದ್ಧವಾಗಿ ಹಲವರು ಪ್ರತಿಪಾದನೆ ಮಾಡಿದ್ದಾರೆ.

ಪ್ರಜಾವಾಣಿ ವಾರ್ತೆ



ಜಿ.ಟಿ. ದೇವೇಗೌಡ

**ಮೈಸೂರು:** ‘ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಬೇಕೆಂದು ಕುರುಬ ಸಮುದಾಯದ ಸ್ವಾಮೀಜಿ ದೊಡ್ಡ ಗರ್ಜನೆ ಮಾಡಿರಲಿಲ್ಲವೇ?’ ಜೆಡಿಎಸ್ ಪ್ರಮುಖ ಸಮಿತಿಯ ಅಧ್ಯಕ್ಷ ಜಿ.ಟಿ. ದೇವೇಗೌಡ ಕೇಳಿದರು.

‘ಕಾಂಗ್ರೆಸ್ ಹೈಕಮಾಂಡ್ ಮನಸ್ಸು ಮಾಡಿದರೆ ಶಿವಕುಮಾರ್ ಮುಖ್ಯಮಂತ್ರಿ ಆಗುತ್ತಾರೆ. ಈ ಹಿಂದೆ ಕಾಂಗ್ರೆಸ್ ವೀಕ್ ಆಗಿದ್ದಾಗ ಸಿದ್ದರಾಮಯ್ಯ ಸ್ಟ್ರಾಂಗ್ ಆಗಿದ್ದರು. ಸದ್ಯ ಕಾಂಗ್ರೆಸ್ ಹೈಕಮಾಂಡ್ ಶಕ್ತವಾಗಿದ್ದು ಡಿಕೆಶಿ ಬಗ್ಗೆ ನಿರ್ಧಾರ ಕೈಗೊಳ್ಳಬೇಕು’ ಎಂದರು.

‘ಮುಖ್ಯಮಂತ್ರಿ ಬದಲಾವಣೆ ಬಗ್ಗೆ ಕಾಂಗ್ರೆಸ್ ಹೈಕಮಾಂಡ್ ಅಥವಾ ಅವರ ಶಾಸಕರಾರೂ ಹೇಳಿಲ್ಲ. ಶಿವಕುಮಾರ್ ಅವರಿಗೆ ಅವಕಾಶ ನೀಡುವಂತೆ ಒಕ್ಕಲಿಗ ಸ್ವಾಮೀಜಿ ಅಭಿಮಾನದಿಂದ ಮನವಿ ಮಾಡಿದ್ದಾರೆ. ಅಧಿಕಾರ ಹಂಚಿಕೆ ಬಗ್ಗೆ ಮಾಧ್ಯಮದಲ್ಲಿ ಬರುತ್ತಲೇ ಇರುತ್ತದೆ. ಅದರ ಆಧಾರದ ಮೇಲೆ ಸ್ವಾಮೀಜಿ ಹೇಳಿಕೆ ನೀಡಿದ್ದಾರೆ. ಅದು ದೊಡ್ಡ ಅಪರಾಧವಲ್ಲ’ ಎಂದು ಹೇಳಿದರು.

‘ಅಧಿಕಾರವನ್ನು ಹೇಗೆ ಉಳಿಸಿ-ಕೊಳ್ಳಬೇಕು ಎನ್ನುವುದು ಸುದೀರ್ಘ ರಾಜಕಾರಣ ಮಾಡಿರುವ ಸಿದ್ದರಾಮಯ್ಯ ಅವರಿಗೆ ಚೆನ್ನಾಗಿಯೇ ಕರಗತವಾಗಿದೆ. ಅಧಿಕಾರವನ್ನು ತಕ್ಷಣವೇ ಬಿಟ್ಟು ಬಿಡುತ್ತಾರೆ ಎಂದು ನಾನು ಹೇಳುವುದಿಲ್ಲ. ಬಹುಮತವಿರುವ ಈ ಸರ್ಕಾರವನ್ನು ನಾವು ಬೀಳಿಸುವ ಪ್ರಶ್ನೆಯೇ ಇಲ್ಲ. ಅವರ ಪಕ್ಷದಲ್ಲೇ ಆಂತರಿಕ ಕಚ್ಚಾಟ, ಭಿನ್ನಾಭಿಪ್ರಾಯ ಬಂದರೆ ಸರ್ಕಾರ ಬೀಳಬಹುದು’ ಎಂದರು.

**‘ಉತ್ತಮ ಹೊಂದಾಣಿಕೆ ಇದೆ’ (ಚಿತ್ರದುರ್ಗ ವರದಿ):** ‘ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನಡುವೆ ಉತ್ತಮ ಹೊಂದಾಣಿಕೆ ಇದೆ. ಈ ಸಂದರ್ಭದಲ್ಲಿ ಮುಖ್ಯಮಂತ್ರಿ ಬದಲಾವಣೆ ವಿಚಾರ ಅಪ್ರಸ್ತುತ’ ಎಂದು ಹರಿಹರ ಪಂಚಮಸಾಲಿ ಪೀಠದ ವಚನಾನಂದ ಸ್ವಾಮೀಜಿ ಭಾನುವಾರ ಹೇಳಿದರು.

‘ತತ್ವ, ಸಿದ್ಧಾಂತದ ಆಧಾರದಲ್ಲಿ ಕಾಂಗ್ರೆಸ್ ಪಕ್ಷದಲ್ಲಿ ಸಾಮಾಜಿಕ ನ್ಯಾಯ ಇದೆ. ಮುಖ್ಯಮಂತ್ರಿ ಬದಲಾವಣೆ ವಿಚಾರದ ಬಗ್ಗೆ ಮಾತನಾಡಬಾರದು ಎಂದು ಡಿ.ಕೆ.ಶಿವಕುಮಾರ್ ಅವರೇ ಸೂಚಿಸಿದ್ದಾರೆ. ಹೀಗಾಗಿ ಈ ವಿಚಾರದ ಚರ್ಚೆ ಅನಗತ್ಯ’ ಎಂದು ಸುದ್ದಿಗಾರರಿಗೆ ತಿಳಿಸಿದರು.

‘ಮುಖ್ಯಮಂತ್ರಿ ಬದಲಾವಣೆ ಕುರಿತು ಚಿಂತಿಸಬೇಕಿರುವುದು ಕಾಂಗ್ರೆಸ್ ಹೈಕಮಾಂಡ್. ಇದು ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ, ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ನಡುವಣ ವಿಚಾರ. ಸ್ವಾಮೀಜಿಗಳು ಹೇಳಿದ ತಕ್ಷಣ ಮುಖ್ಯಮಂತ್ರಿ ಬದಲಾವಣೆ ಆಗುವುದಿಲ್ಲ. ಈಗ ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಿದ್ದಾರೆ, ಮುಂದೆ ಡಿಕೆಶಿ ಅವರಿಗೂ ಅವಕಾಶ ಇದೆ’ ಎಂದರು.

‘ಈ ಹಿಂದೆ ಅನೇಕ ಲಿಂಗಾಯತ ಮುಖಂಡರು ಮುಖ್ಯಮಂತ್ರಿ ಆಗಿದ್ದಾರೆ. ದಲಿತರು ಮುಖ್ಯಮಂತ್ರಿ ಆಗಬೇಕೆಂಬ ಮಾತುಗಳನ್ನೂ ನಾವು ಕೇಳುತ್ತಿದ್ದೇವೆ. ಜಿ.ಪರಮೇಶ್ವರ, ಸತೀಶ್ ಜಾರಕಿಹೊಳಿ ಅವರಿಗೂ ಅವಕಾಶಗಳಿವೆ’ ಎಂದು ತಿಳಿಸಿದರು.

**ಜೋಶಿ ಆರೋಪ–(ಹುಬ್ಬಳ್ಳಿ ವರದಿ):** ‘ಹೆಚ್ಚುವರಿ ಉಪಮುಖ್ಯಮಂತ್ರಿ ಹುದ್ದೆ ಬಗ್ಗೆ ಬಹಿರಂಗ ಹೇಳಿಕೆ ನೀಡಬಾರದು ಎಂದು ಡಿ.ಕೆ.ಶಿವಕುಮಾರ್ ಹೇಳಿದ್ದಾರೆ. ಆದರೆ, ಮುಖ್ಯಮಂತ್ರಿ ಮಾತ್ರ ಮೌನ ವಹಿಸಿದ್ದಾರೆ. ಈ ಎಲ್ಲದರ ಹಿಂದೆ ಸಿದ್ದರಾಮಯ್ಯ ಅವರ ಪಾತ್ರ ಇದೆ’ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಆರೋಪಿಸಿದರು.

ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಮುಖ್ಯಮಂ-ತ್ರಿಯನ್ನು ಬದಲಾವಣೆ ಮಾಡುವುದು, ಬಿಡುವುದು ಆ ಪಕ್ಷದ ಆಂತರಿಕ ವಿಷಯ. ಆದರೆ, ಇದನ್ನು ಬಹಿರಂಗವಾಗಿ ಚರ್ಚೆ ಮಾಡುತ್ತಿರುವುದರಿಂದ ಆಡಳಿತ ವ್ಯವಸ್ಥೆ ಮೇಲೆ ಪರಿಣಾಮ ಬೀರುತ್ತಿದೆ’ ಎಂದರು.

‘ಮುಖ್ಯಮಂತ್ರಿ ಬದಲಾವಣೆ ವಿಷಯದಲ್ಲಿ ಬಿಜೆಪಿಯವರ ಕೈವಾಡ ಇದೆ ಎಂಬ ಕಾಂಗ್ರೆಸ್ ಶಾಸಕರ ಆರೋಪ ಬಾಲಿಶವಾಗಿದೆ. ಕಾಂಗ್ರೆಸ್ ಎಡೆಯಲ್ಲಿ ಕತ್ತೆ ಸತ್ತು ಬಿದ್ದರೆ ಬಿಜೆಪಿ ಮೇಲೆ ಗೂಬೆ ಕೂರಿಸುವುದು ಸರಿಯಲ್ಲ’ ಎಂದು ಕಿಡಿಕಾರಿದರು.

## ‘ಸಿ.ಎಂ ಹುದ್ದೆ ಈಗ ಖಾಲಿ ಇಲ್ಲ’

**ಬೆಳಗಾವಿ:** ‘ರಾಜ್ಯದಲ್ಲಿ ಮುಖ್ಯಮಂತ್ರಿ ಹುದ್ದೆ ಈಗ ಖಾಲಿ ಇಲ್ಲ. ಹೊಸ ಮುಖ್ಯಮಂತ್ರಿ ನೇಮಕದ ಚರ್ಚೆಯೇ ಈಗ ಅನವಶ್ಯಕ’ ಎಂದು ಸಮಾಜ ಕಲ್ಯಾಣ ಸಚಿವ ಎಚ್.ಸಿ.ಮಹದೇವಪ್ಪ ಹೇಳಿದರು.

ಮುಖ್ಯಮಂತ್ರಿ ಸ್ಥಾನವನ್ನು ಡಿ.ಕೆ.ಶಿವಕುಮಾರ್ ಅವರಿಗೆ ಬಿಟ್ಟುಕೊಡುವ ಕುರಿತು ವಿವಿಧ ಸ್ವಾಮೀಜಿಗಳು ನೀಡಿದ ಹೇಳಿಕೆ ವಿಚಾರವಾಗಿ, ಇಲ್ಲಿ ಭಾನುವಾರ ಸುದ್ದಿಗಾರರಿಗೆ ಅವರು ಹೀಗೆ ಪ್ರತಿಕ್ರಿಯಿಸಿದರು.

‘ಐದು ವರ್ಷ ಅಧಿಕಾರ ನಡೆಸುವಂತೆ ಕಾಂಗ್ರೆಸ್‌ಗೆ ಜನರು ಅಧಿಕಾರ ನೀಡಿದ್ದಾರೆ. ಪಕ್ಷದ ಹೈಕಮಾಂಡ್‌ನವರು ವೀಕ್ಷಕರನ್ನು ಕಳುಹಿಸಿ, ಎಲ್ಲ ಶಾಸಕರ ಅಭಿಪ್ರಾಯ ಆಧರಿಸಿಯೇ ಸಿದ್ದರಾಮಯ್ಯ ಅವರನ್ನು ಮುಖ್ಯಮಂತ್ರಿ ಮಾಡಿದ್ದಾರೆ. ಸಿ.ಎಂ ನೇಮಕದ ಸಂದರ್ಭ ಪಕ್ಷದ ವರಿಷ್ಠರು ಏನೇನು ಚರ್ಚಿಸಿದ್ದರು ಎಂಬುದನ್ನು ಬಹಿರಂಗಪಡಿಸಲಾಗದು’ ಎಂದರು.

‘ಲೋಕಸಭಾ ಚುನಾವಣೆ ಸಂದರ್ಭ ಜಾತಿವಾರು ಉಪಮುಖ್ಯಮಂತ್ರಿ ಹುದ್ದೆಗಳ ಸೃಷ್ಟಿ ಕುರಿತು ಚರ್ಚೆ ನಡೆದಿತ್ತು. ಅದನ್ನು ಪಕ್ಷದ ಹೈಕಮಾಂಡ್ ತೀರ್ಮಾನಿಸುತ್ತದೆ. ಪಕ್ಷದ ಹಿತದೃಷ್ಟಿಯಿಂದ ಇದು ಆಂತರಿಕವಾಗಿ ಚರ್ಚೆಯಾಗಬೇಕು’ ಎಂದ ಅವರು, ‘ದೆಹಲಿಯಲ್ಲಿ ಪಕ್ಷದ ಹೈಕಮಾಂಡ್ ಎದುರು ಸಿ.ಎಂ ಹಾಗೂ ಡಿಸಿಎಂ ಹುದ್ದೆಗಳ ಸೃಷ್ಟಿ ವಿಚಾರ ಚರ್ಚೆ ಆಗಿಲ್ಲ. ಅಭಿವೃದ್ಧಿ, ಪಕ್ಷ ಸಂಘಟನೆ ವಿಚಾರವಾಗಿ ಚರ್ಚೆ ನಡೆದಿದೆ’ ಎಂದು ಹೇಳಿದರು.

> ಡಿಸಿಎಂ ವಿಚಾರವಾಗಿ ಹೊಸ ವ್ಯಾಖ್ಯಾನ ಮಾಡುವುದು ಕಾಂಗ್ರೆಸ್‌ನಲ್ಲಿ ನಡೆದಿದೆ. ಆದರೆ, ಅಸಲಿ ರಾಜಕಾರಣ ಬೇರೆಯೇ ಇದೆ. ಎಷ್ಟು ಜನರಿಗೆ ಡಿಸಿಎಂ ಮಾಡುತ್ತಾರೆ ಎಂದು ಕಾದು ನೋಡೋಣ.
> **ಬಸವರಾಜ ಬೊಮ್ಮಾಯಿ,** ಸಂಸದ

> ಕೊಹ್ಲಿ–ರೋಹಿತ್ ಶರ್ಮಾ ಸೇರಿ ಟಿ–20 ಕ್ರಿಕೆಟ್ ವಿಶ್ವಕಪ್ ಕಿರೀಟ ಗೆದ್ದುಕೊಟ್ಟಿದ್ದಾರೆ. ಡಿಕೆಶಿ ಮತ್ತು ಸಿದ್ದರಾಮಯ್ಯ ಕರ್ನಾಟಕಕ್ಕೆ ಕೊಹ್ಲಿ–ರೋಹಿತ್ ಜೋಡಿ ಇದ್ದಂತೆ
> **ವಚನಾನಂದ ಸ್ವಾಮೀಜಿ,** ಹರಿಹರ ಪಂಚಮಸಾಲಿ ಪೀಠ

> ಸಿದ್ದರಾಮಯ್ಯ ಜನ ಮೆಚ್ಚಿದ ಮುಖ್ಯಮಂತ್ರಿಗಳಾಗಿದ್ದು, ಉತ್ತಮವಾಗಿ ಕೆಲಸ ಮಾಡುವುದರಿಂದಲೇ ಹೈಕಮಾಂಡ್ ಅವರನ್ನೇ ಮುಖ್ಯಮಂತ್ರಿಯನ್ನಾಗಿ ಮಾಡಿದೆ.
> **ಡಾ.ಅಜಯ್‌ಸಿಂಗ್** ಕೆಕೆಆರ್‌ಡಿಬಿ ಅಧ್ಯಕ್ಷ

> ಮುಖ್ಯಮಂತ್ರಿ ಸ್ಥಾನ ಖಾಲಿ ಇಲ್ಲ. ಒಕ್ಕಲಿಗರು, ದಲಿತರು, ಲಿಂಗಾಯತರು, ಸಿಎಂ ಸ್ಥಾನ ಕೊಡಿ ಎಂದು ಕೇಳುವುದರಲ್ಲಿ ತಪ್ಪೇನಿದೆ. ಹೈಕಮಾಂಡ್ ತೀರ್ಮಾನಿಸುತ್ತದೆ
> **ಜಮೀರ್ ಅಹಮದ್ ಖಾನ್** ಅಲ್ಪಸಂಖ್ಯಾತರ ಕಲ್ಯಾಣ ಸಚಿವ

## ಸುದ್ದಿ 2 ನಿಮಿಷ

### ಸೂರಜ್ ಸಿಐಡಿ ಕಸ್ಟಡಿ ಅಂತ್ಯ ಇಂದು

**ಬೆಂಗಳೂರು:** ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ ಬಂಧಿತ ಆರೋಪಿ, ವಿಧಾನ ಪರಿಷತ್‌ನ ಜೆಡಿಎಸ್ ಸದಸ್ಯ ಸೂರಜ್ ರೇವಣ್ಣ ಅವರ ಸಿಐಡಿ ಕಸ್ಟಡಿ ಜುಲೈ 1ಕ್ಕೆ ಅಂತ್ಯವಾಗಲಿದ್ದು, ಹೆಚ್ಚಿನ ವಿಚಾರಣೆಗಾಗಿ ಮತ್ತೆ ಕಸ್ಟಡಿಗೆ ಪಡೆಯುವ ಸಾಧ್ಯತೆಯಿದೆ.

ಯುವಕರೊಬ್ಬರ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ್ದ ಆರೋಪದಡಿ ಸೂರಜ್ ಅವರನ್ನು ಹೊಳೆನರಸೀಪುರ ಗ್ರಾಮಾಂತರ ಠಾಣೆ ಪೊಲೀಸರು ಜೂನ್ 22ರಂದು ಬಂಧಿಸಿದ್ದರು. ನಂತರ, ಪ್ರಕರಣವನ್ನು ಸರ್ಕಾರ ಸಿಐಡಿಗೆ ವಹಿಸಿತ್ತು.

ಸಿಐಡಿ ಪೊಲೀಸರು ಜೂನ್ 23ರಂದು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ನ್ಯಾಯಾಧೀಶರ ಎದುರು ಆರೋಪಿಯನ್ನು ಹಾಜರು ಪಡಿಸಿ ಕಸ್ಟಡಿಗೆ ಪಡೆದಿದ್ದರು. ಇದಾದ ಮೇಲೆ ಮತ್ತೊಬ್ಬ ಸಂತ್ರಸ್ತ, ಸೂರಜ್ ವಿರುದ್ಧ ದೂರು ನೀಡಿದ್ದು, ಆ ಪ್ರಕರಣ-ವನ್ನೂ ಸಿಐಡಿಗೆ ಒಪ್ಪಿಸಲಾಗಿದೆ. ಆರೋಪಿಯನ್ನು ಸೋಮವಾರ ಕೋರ್ಟ್‌ಗೆ ಹಾಜರು ಪಡಿಸಿ ಹೆಚ್ಚಿನ ವಿಚಾರಣೆಗಾಗಿ ಕಸ್ಟಡಿಗೆ ಕೇಳಲಾಗುವುದು ಎಂದು ಮೂಲಗಳು ತಿಳಿಸಿವೆ.

**ಸಾಕ್ಷ್ಯ ಮುಂದಿಟ್ಟು ವಿಚಾರಣೆ:** ‘ಸಿಐಡಿ ಕಚೇರಿಯಲ್ಲಿ ಸೂರಜ್ ಅವರ ವಿಚಾರಣೆ ನಡೆಸಲಾಗಿದೆ. ಕೆಲವು ಸಾಕ್ಷ್ಯ ಮುಂದಿಟ್ಟು ಪ್ರಶ್ನಿಸಲಾಗಿದೆ. ಸಂತ್ರಸ್ತನ ದೂರಿನಲ್ಲಿರುವ ಅಂಶಗಳು, ಸಂತ್ರಸ್ತನ ಜತೆಗೆ ಸೂರಜ್ ಮಾತನಾಡಿದ್ದಾರೆ ಎನ್ನಲಾದ ಸಂಭಾಷಣೆ ಸೇರಿ ತಾಂತ್ರಿಕ ಸಾಕ್ಷ್ಯಗಳನ್ನು ಆಧರಿಸಿ ಪ್ರಶ್ನೆ ಕೇಳಲಾಗಿದೆ. ಸೂರಜ್ ಅವರು ಕೆಲ ಗೊಂದಲದ ಹೇಳಿಕೆ ನೀಡುತ್ತಿದ್ದಾರೆ’ ಎಂದು ತನಿಖಾಧಿಕಾರಿ ತಿಳಿಸಿದ್ದಾರೆ.



### ಸಾಹಿತ್ಯ ಪರೀಕ್ಷೆಗಳಿಗೆ ಅರ್ಜಿ ಆಹ್ವಾನ

**ಬೆಂಗಳೂರು:** ಕನ್ನಡ ಸಾಹಿತ್ಯ ಪರಿಷತ್ತು 2024-25ನೇ ಸಾಲಿನ ಕನ್ನಡ ಪ್ರವೇಶ, ಕಾವ, ಜಾಣ ಹಾಗೂ ರತ್ನ ಪರೀಕ್ಷೆಗಳಿಗೆ ಅರ್ಜಿಗಳನ್ನು ಆಹ್ವಾನಿಸಿದೆ. 2024ರ ಡಿಸೆಂಬರ್ ಕೊನೆಯ ವಾರದಲ್ಲಿ ಪರೀಕ್ಷೆಗಳು ನಡೆಯಲಿವೆ.

ಅರ್ಜಿ ಸಲ್ಲಿಸಲು ಆಗಸ್ಟ್ 31 ಕೊನೆಯ ದಿನಾಂಕ. ಬಳಿಕ ಸೆ.15 ರ ವರೆಗೆ ₹50 ದಂಡ ಶುಲ್ಕದೊಂದಿಗೆ ಅರ್ಜಿ ಸಲ್ಲಿಸಬಹುದು. ಪರಿಷತ್ತಿನ ಮಾರಾಟ ಮಳಿಗೆಯಲ್ಲಿ ₹ 25 ಪಾವತಿಸಿ, ಪರೀಕ್ಷಾ ನಿಯಮಾವಳಿ ಹಾಗೂ ಅರ್ಜಿ ನಮೂನೆಯನ್ನು ಜುಲೈ 1ರಿಂದ ಪಡೆಯಬಹುದು. ಪರಿಷತ್ತಿನ ಹೆಸರಿಗೆ ₹ 30 ಮನಿಯಾರ್ಡರ್ ಮಾಡಿದರೆ ಅರ್ಜಿ ನಮೂನೆಯನ್ನು ಅಂಚೆ ಮೂಲಕ ಕಳುಹಿಸಲಾಗುತ್ತದೆ.

ಕಸಾಪ ವೆಬ್‌ಸೈಟ್ ಮೂಲಕವು (www.kasapa.in) ಅರ್ಜಿ ಪಡೆಯಬಹುದು. ಪರೀಕ್ಷಾ ಶುಲ್ಕದೊಂದಿಗೆ ₹ 25 ಅರ್ಜಿ ಶುಲ್ಕವನ್ನು ಪ್ರತ್ಯೇಕವಾಗಿ ಪಾವತಿಸಬೇಕು ಎಂದು ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ತಿಳಿಸಿದ್ದಾರೆ. ಸಂಪರ್ಕಕ್ಕೆ: 080 26623584 ಅಥವಾ 26612991

## 4ರಂದು ಬಿಜೆಪಿ ಕಾರ್ಯಕಾರಿಣಿ ಸಭೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸಮಿತಿ ಸಭೆ, ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರ ಅಧ್ಯಕ್ಷತೆಯಲ್ಲಿ ಜುಲೈ 4 ರಂದು ಅರಮನೆ ಮೈದಾನದ ವೈಟ್ ಪೆಟಲ್ಸ್ ಸಭಾಂಗಣದಲ್ಲಿ ನಡೆಯಲಿದೆ.

ಸಭೆಯನ್ನು ಕೇಂದ್ರ ಸಚಿವ ನಿತಿನ್ ಗಡ್ಕರಿ ಉದ್ಘಾಟಿಸುವರು. ವಿರೋಧಪಕ್ಷದ ನಾಯಕ ಆರ್.ಅಶೋಕ. ಕೇಂದ್ರ ಸಚಿವರು, ಸಂಸದರು ಮತ್ತು ಶಾಸಕರು ಭಾಗವಹಿಸಲಿದ್ದಾರೆ ಎಂದು ವಿಧಾನಪರಿಷತ್ ಸದಸ್ಯ ಎನ್.ರವಿಕುಮಾರ್ ತಿಳಿಸಿದರು.

ಕೇಂದ್ರದಲ್ಲಿ ಎನ್‌ಡಿಎ ಮೂರನೇ ಬಾರಿಗೆ ಅಧಿಕಾರಕ್ಕೆ ಬಂದಿದೆ. ಪ್ರಧಾನಿಯವರನ್ನು ಇದೇ ವೇಳೆ ಅಭಿನಂದನೆ ಸಲ್ಲಿಸಲಾಗುವುದು. ರಾಜ್ಯ ಸರ್ಕಾರದ ವೈಫಲ್ಯವನ್ನು, ಭ್ರಷ್ಟಾಚಾರ, ದರ ಏರಿಕೆಯನ್ನು ಖಂಡಿಸುವ ಇನ್ನೊಂದು ನಿರ್ಣಯವನ್ನೂ ಅಂಗೀಕರಿಸುತ್ತೇವೆ. ಪಕ್ಷ ಸಂಘಟನೆ ಕುರಿತು ಚರ್ಚಿಸಲಿದ್ದೇವೆ ಎಂದು ವಿವರಿಸಿದರು.

## ಹೆಚ್ಚುವರಿ ಡಿಸಿಎಂ: ಖರ್ಗೆ– ಡಿಕೆಶಿ ಚರ್ಚೆ?

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಹೆಚ್ಚುವರಿ ಉಪ ಮುಖ್ಯಮಂತ್ರಿ ಹುದ್ದೆ ಸೃಷ್ಟಿ, ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಕುರಿತು ರಾಜ್ಯ ಕಾಂಗ್ರೆಸ್‌ನಲ್ಲಿ ಹೇಳಿಕೆಗಳು ತಾರಕ್ಕೇರಿರುವ ನಡುವೆ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ದೆಹಲಿಯಲ್ಲಿ ಭಾನುವಾರ ಭೇಟಿ ಮಾಡಿ ಸುದೀರ್ಘವಾಗಿ ಮಾತುಕತೆ ನಡೆಸಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಜೊತೆ ಪ್ರಧಾನಿ ನರೇಂದ್ರ ಮೋದಿ ಅವರನ್ನು ಶನಿವಾರ ಭೇಟಿ ಮಾಡಿದ್ದ ಡಿ.ಕೆ.ಶಿವಕುಮಾರ್ ದೆಹಲಿಯಲ್ಲಿಯೇ ಉಳಿದಿದ್ದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಖರ್ಗೆಯವರ-ನ್ನು ಶುಕ್ರವಾರವೇ ಭೇಟಿ ಮಾಡಿದ್ದರು. ಇಬ್ಬರು ನಾಯಕರೂ ಖರ್ಗೆ ಜೊತೆ ರಾಜ್ಯ ರಾಜಕೀಯದಲ್ಲಿನ ಇತ್ತೀಚಿನ ಬೆಳವಣಿಗೆಗಳ ಕುರಿತು ಚರ್ಚಿಸಿದ್ದಾರೆ. ಆ ಮೂಲಕ, ಹೆಚ್ಚುವರಿ ಉಪ ಮುಖ್ಯಮಂತ್ರಿ ನೇಮಕ, ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ವಿಚಾರ ‘ಕೈ’ ವರಿಷ್ಠರ ಅಂಗಳ ತಲುಪಿದೆ.



ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ದೆಹಲಿಯಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಭಾನುವಾರ ಭೇಟಿ ಮಾಡಿ ಮಾತುಕತೆ ನಡೆಸಿದರು

ಸಿದ್ದರಾಮಯ್ಯ ಆಪ್ತ ಬಣದಲ್ಲಿರುವ ಸಚಿವರು ಹೆಚ್ಚುವರಿ ಉಪ ಮುಖ್ಯಮಂತ್ರಿ ವಿಚಾರದಲ್ಲಿ ಆಗಾಗ ಪ್ರಸ್ತಾಪಿಸುತ್ತಿ-ದ್ದಾರೆ. ನೋಟಿಸ್ ಕೊಟ್ಟು ಶಿಸ್ತು ಕ್ರಮ ಕೈಗೊಳ್ಳುವುದಾಗಿ ಎಚ್ಚರಿಕೆ ನೀಡಿದ ನಂತರವೂ ಸಚಿವ ಕೆ.ಎನ್.ರಾಜಣ್ಣ ಮಾತನಾಡುತ್ತಿದ್ದಾರೆ. ಇದರಿಂದ ಪಕ್ಷದಲ್ಲಿ ಗೊಂದಲ ಉಂಟಾಗುತ್ತಿದೆ. ಪಕ್ಷ ಸಂಘಟನೆಯ ಹಿತದೃಷ್ಟಿಯಿಂದ ಈ ಬೆಳವಣಿಗೆ ಒಳ್ಳೆಯದಲ್ಲ. ಹೀಗಾಗಿ, ಹೆಚ್ಚುವರಿ ಉಪಮುಖ್ಯಮಂತ್ರಿ ಹುದ್ದೆ ಸೃಷ್ಟಿ ಕುರಿತು ನಡೆಯುತ್ತಿರುವ ಚರ್ಚೆಗಳಿಗೆ ಕಡಿವಾಣ ಹಾಕುವಂತೆ ಖರ್ಗೆ ಬಳಿ ಡಿ.ಕೆ.ಶಿವಕುಮಾರ್ ಮನವಿ ಮಾಡಿದ್ದಾರೆ ಎಂದೂ ಗೊತ್ತಾಗಿದೆ.

ವಿಧಾನಸಭೆ ಚುನಾವಣೆಯ ಬಳಿಕ ಸರ್ಕಾರ ರಚನೆ ವೇಳೆ ಹೈಕಮಾಂಡ್ ನಾಯಕರ ಮಧ್ಯಸ್ಥಿಕೆಯಲ್ಲಿ ಚರ್ಚೆ ನಡೆದು, ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿಯ ನೇಮಕವಾಗಿದೆ. ಗೊಂದಲಗಳಿಲ್ಲದೆ ಲೋಕಸಭೆ ಚುನಾವಣೆ ಎದುರಿಸಲಾಗಿದೆ. ಈಗ ಕೆಲವು ನಾಯಕರು ಹೆಚ್ಚುವರಿ ಡಿಸಿಎಂ ಹುದ್ದೆಗಳ ಸೃಷ್ಟಿಯ ಬಗ್ಗೆ ಹೇಳಿಕೆ ನೀಡಿ ಪಕ್ಷಕ್ಕೆ ಮುಜುಗರ ಉಂಟು ಮಾಡುತ್ತಿದ್ದಾರೆ. ಇದರಿಂದ ಪಕ್ಷದಲ್ಲಿ ಭಿನ್ನಮತ ಹಾಗೂ ಗುಂಪುಗಾರಿಕೆ ತಲೆದೋರುವಂತಾಗಿದೆ ಎಂದೂ ಶಿವಕುಮಾರ್ ಹೇಳಿದ್ದಾರೆ ಎನ್ನಲಾಗಿದೆ.

ರಾಜ್ಯದಲ್ಲಿ ಮೂರು ಕ್ಷೇತ್ರಗಳು (ಶಿಗ್ಗಾವಿ, ಸಂಡೂರು, ಚನ್ನಪಟ್ಟಣ) ಮತ್ತು ದಕ್ಷಿಣಕನ್ನಡ– ಉಡುಪಿ ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್‌ನ ಒಂದು ಸ್ಥಾನಕ್ಕೆ ಶೀಘ್ರದಲ್ಲಿ ಉಪ ಚುನಾವಣೆ ನಡೆಯಲಿದ್ದು, ಅಭ್ಯರ್ಥಿಗಳ ಆಯ್ಕೆ ಕುರಿತು ಚರ್ಚಿಸಿದರು ಎಂದೂ ಮೂಲಗಳು ತಿಳಿಸಿವೆ.

ಬಿಬಿಎಂಪಿ, ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಚುನಾವಣೆ ಹಿನ್ನೆಲೆಯಲ್ಲಿ ಕೆಪಿಸಿಸಿ ಅಧ್ಯಕ್ಷರನ್ನು ಬದಲಿಸಬೇಕೆಂಬ ಮಾತು ಕೇಳಿಬರುತ್ತಿದೆ. ಆದರೆ, ಈ ಚುನಾವಣೆಗಳು ಮುಗಿಯುವವರೆಗೆ ಅಧ್ಯಕ್ಷರ ಬದಲಾವಣೆ ಬೇಡ ಎಂದು ಡಿ.ಕೆ.ಶಿವಕುಮಾರ್ ಅವರು ಮಲ್ಲಿಕಾರ್ಜುನ ಖರ್ಗೆಯವರಿಗೆ ಮನವರಿಕೆ ಮಾಡಿ ಕೊಟ್ಟಿದ್ದಾರೆ ಎಂಬ ಮಾಹಿತಿಯೂ ಇದೆ.

### ಪದಾಧಿಕಾರಿಗಳ ಸಭೆ ಇಂದು

**ಬೆಂಗಳೂರು:** ರಾಜ್ಯ ಕಾಂಗ್ರೆಸ್ ಅಧ್ಯಕ್ಷರನ್ನು ಬದಲಾಯಿಸಬೇಕೆಂಬ ಕೂಗು ಜೋರಾಗುತ್ತಿದ್ದಂತೆ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಸೋಮವಾರ (ಜುಲೈ 1) ಕೆಪಿಸಿಸಿ ಪದಾಧಿಕಾರಿಗಳ ಸಭೆ ಕರೆದಿದ್ದಾರೆ.

ಕೆಪಿಸಿಸಿ ಕಚೇರಿಯಲ್ಲಿ ಬೆಳಿಗ್ಗೆ 11 ಗಂಟೆಗೆ ನಿಗದಿಯಾಗಿರುವ ಸಭೆಗೆ ಎಲ್ಲ 190 ಪದಾಧಿಕಾರಿಗಳಿಗೂ ಆಹ್ವಾನ ನೀಡಲಾಗಿದೆ. ಡಿ.ಕೆ. ಶಿವಕುಮಾರ್ ಅಧ್ಯಕ್ಷ ಸ್ಥಾನ ವಹಿಸಿಕೊಂಡ ಬಳಿಕ ಪಕ್ಷ ಕಟ್ಟಿರುವ ಬಗ್ಗೆ ಸಭೆಯಲ್ಲಿ ಚರ್ಚೆ ನಡೆಯುವ ಸಾಧ್ಯತೆಯಿದೆ. ಅಲ್ಲದೆ, ಅವರ ಸಾಧನೆಯ ಕುರಿತು ಕಿರುಚಿತ್ರ ಪ್ರದರ್ಶನವೂ ನಡೆಯಲಿದೆ ಎಂದು ಕಾಂಗ್ರೆಸ್ ಮೂಲಗಳು ಹೇಳಿವೆ.

### ಟಿಇಟಿ– 2024 ಸುಗಮ

**ಬೆಂಗಳೂರು:** ರಾಜ್ಯದ ವಿವಿಧ ಕೇಂದ್ರಗಳಲ್ಲಿ ಕರ್ನಾಟಕ ಶಿಕ್ಷಕರ ಅರ್ಹತಾ ಪರೀಕ್ಷೆ (ಟಿಇಟಿ)– 2024 ಭಾನುವಾರ ಸುಗಮವಾಗಿ ನಡೆಯಿತು. ಬೆಳಿಗ್ಗೆ ಮತ್ತು ಮಧ್ಯಾಹ್ನ ಪರೀಕ್ಷೆ ನಡೆದವು.

ಬೆಳಿಗ್ಗೆ 381 ಕೇಂದ್ರಗಳಲ್ಲಿ ನಡೆದ ಪರೀಕ್ಷೆ– 1ಕ್ಕೆ 1,02,282 ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದು, 90,299 (ಶೇ 88) ಮಂದಿ ಹಾಜರಾದರು. 11,983 ಗೈರಾದರು.

ಮಧ್ಯಾಹ್ನ ನಂತರ 625 ಕೇಂದ್ರಗಳಲ್ಲಿ ನಡೆದ ಪರೀಕ್ಷೆ– 2ಕ್ಕೆ ಅರ್ಜಿ ಸಲ್ಲಿಸಿದ್ದ 1,68,233 ಅಭ್ಯರ್ಥಿಗಳ ಪೈಕಿ, 1,55,167 (ಶೇ 92) ಮಂದಿ ಪರೀಕ್ಷೆಗೆ ಹಾಜರಾದರು. 13,066 ಮಂದಿ ಗೈರಾದರು ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ತಿಳಿಸಿದೆ.

ಭದ್ರಾವತಿಗೆ ಭೇಟಿ ನೀಡಿದ ಕೇಂದ್ರ ಸಚಿವ ಎಚ್‌.ಡಿ.ಕುಮಾರಸ್ವಾಮಿ

## ವಿಐಎಸ್‌ಎಲ್ ಪುನಶ್ಚೇತನ; ಶೀಘ್ರ ನಿರ್ಧಾರ

ಪ್ರಜಾವಾಣಿ ವಾರ್ತೆ

**ಶಿವಮೊಗ್ಗ:** ‘ಭದ್ರಾವತಿಯ ವಿಶ್ವೇಶ್ವರಾಯ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆಯ (ವಿಐಎಸ್‌ಎಲ್) ಪುನಶ್ಚೇತನದ ವಿಚಾರವಾಗಿ ಕಾರ್ಖಾನೆಗೆ ಭೇಟಿ ನೀಡಿ ಸಾಧಕ–ಬಾಧಕಗಳನ್ನು ಪರಿಶೀಲಿಸಿರುವೆ. ಅಧಿಕಾರಿಗಳಿಂದ ಮಾಹಿತಿಯನ್ನೂ ಕಲೆಹಾಕಿದ್ದೇನೆ. ಮುಂದಿನ ದಿನಗಳಲ್ಲಿ ಈ ಕುರಿತು ಸೂಕ್ತ ನಿರ್ಧಾರ ಕೈಗೊಳ್ಳ-ಲಾಗುವುದು’ ಎಂದು ಕೇಂದ್ರದ ಬೃಹತ್ ಕೈಗಾರಿಕೆ ಮತ್ತು ಉಕ್ಕು ಸಚಿವ ಎಚ್. ಡಿ.ಕುಮಾರಸ್ವಾಮಿ ಹೇಳಿದರು.

ವಿಐಎಸ್‌ಎಲ್‌ಗೆ ಭಾನುವಾರ ಭೇಟಿ ನೀಡಿ ಮೂರು ಗಂಟೆಗಳ ಕಾಲ ಕಾರ್ಖಾನೆಯ ಅಧಿಕಾರಿ ವರ್ಗ, ಕಾಯಂ ಹಾಗೂ ಗುತ್ತಿಗೆ ಕಾರ್ಮಿಕರೊಂದಿಗೆ ಸಭೆ ನಡೆಸಿದ ಅವರು, ಶಿವಮೊಗ್ಗ ವಿಮಾನ ನಿಲ್ದಾಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದರು.

‘ಏಳು ಬೀಳುಗಳ ನಡುವೆಯೂ ಕಾರ್ಖಾನೆ ಇನ್ನೂ ಸ್ವಲ್ಪ ಉಸಿರು ಇಟ್ಟುಕೊಂಡಿದೆ. ವಿಶ್ವೇಶ್ವರಯ್ಯ ಅವರ ಹೆಸರಿನಲ್ಲಿ ಇರುವ ಅದನ್ನು ಉಳಿಸಲು ಏನು ಮಾಡಬಹುದು ಎಂಬುದರ ಬಗ್ಗೆ ಅಧಿಕಾರಿಗಳಿಂದ ಸಂಪೂರ್ಣ ಮಾಹಿತಿ ಪಡೆದಿದ್ದೇನೆ’ ಎಂದರು.

> ಕಾರ್ಖಾನೆಗೆ ಕಚ್ಚಾವಸ್ತು ಒದಗಿಸಲು ರಮಣದುರ್ಗದಲ್ಲಿ ಗಣಿಗಾರಿಕೆ ನಡೆಸುವುದೂ ಸೇರಿ ಇತರ ವಿಚಾರಗಳ ಕುರಿತು ಅಧಿಕಾರಿಗಳೊಂದಿಗೆ ಚರ್ಚಿಸಿರುವೆ
> **ಎಚ್.ಡಿ.ಕುಮಾರಸ್ವಾಮಿ** ಭಾರಿ ಕೈಗಾರಿಕೆ ಹಾಗೂ ಉಕ್ಕು ಸಚಿವ

‘ಕಾರ್ಖಾನೆಗೆ ಬಜೆಟ್‌ನಲ್ಲಿ ನೆರವು ಕೊಡುವಂತಹದ್ದು ಏನೂ ಇಲ್ಲ. ಭಾರತೀಯ ಉಕ್ಕು ಪ್ರಾಧಿಕಾರ (ಎಸ್‌ಎಐಎಲ್) 2030ರ ವೇಳೆಗೆ ದೇಶದಲ್ಲಿ 300 ಮಿಲಿಯನ್ ಟನ್ ಉಕ್ಕು ಉತ್ಪಾದಿಸುವ ಗುರಿ ಹೊಂದಿದೆ. ಆ ಗುರಿ ಮುಟ್ಟಲು ನಡೆಸಿರುವ ಸಿದ್ಧತೆಯಲ್ಲಿ ಈ ಕಾರ್ಖಾನೆಯ ಹಿತವೂ ಅಡಗಿದೆ. ಈಗ ಲೋಕಸಭಾ ಅಧಿವೇಶನ ನಡೆಯುತ್ತಿ-ರುವುದರಿಂದ ವಿಐಎಸ್‌ಎಲ್‌ನ ಭವಿಷ್ಯ ಒಳಗೊಂಡಂತೆ ಕೆಲವು ನಿರ್ಧಾರಗಳನ್ನು ಬಹಿರಂಗವಾಗಿ ಹೇಳಲು ಆಗುವುದಿಲ್ಲ’ ಎಂದು ತಿಳಿಸಿದರು.

ಕಾರ್ಮಿಕರೊಂದಿಗೆ ಸಭೆ ನಡೆಸುವ ಮುನ್ನ ಕಾರ್ಖಾನೆಯ ಬೇರೆ ಬೇರೆ ಉತ್ಪಾದನಾ ಘಟಕಗಳಿಗೆ (ಪ್ಲಾಂಟ್) ಭೇಟಿ ನೀಡಿದ ಕುಮಾರಸ್ವಾಮಿ, ಅಧಿಕಾರಿಗಳಿಂದ ಮಾಹಿತಿ ಪಡೆದರು. ಈ ವೇಳೆ ಭಾರತೀಯ ಉಕ್ಕು ಪ್ರಾಧಿಕಾರದ ಅಧ್ಯಕ್ಷ ಅಮರೇಂದು ಪ್ರಕಾಶ್, ಶಾಸಕರಾದ ಬಿ.ಕೆ.ಸಂಗಮೇಶ್ವರ, ಶಾರದಾ ಪೂರ್ಯಾನಾಯ್ಕ, ಸಂಸದ ಬಿ.ವೈ.ರಾಘವೇಂದ್ರ, ವಿಧಾನಪರಿಷತ್ ಸದಸ್ಯ ಎಸ್.ಎಲ್.ಭೋಜೇಗೌಡ ಜೊತೆಗಿದ್ದರು.

ವಿಐಎಸ್‌ಎಲ್‌ನಿಂದ ಭದ್ರಾವತಿ ತಾಲ್ಲೂಕಿನ ಎಮ್ಮೆಹಟ್ಟಿಗೆ ತೆರಳಿದ ಎಚ್.ಡಿ.ಕುಮಾರಸ್ವಾಮಿ, ಹಾವೇರಿ ಬಳಿ ಶುಕ್ರವಾರ ನಡೆದಿದ್ದ ಅಪಘಾತದಲ್ಲಿ ಮೃತಪಟ್ಟವರ ಕುಟುಂಬದವರನ್ನು ಭೇಟಿಯಾಗಿ ಸಾಂತ್ವನ ಹೇಳಿದರು.



ಭದ್ರಾವತಿಯ ವಿಐಎಸ್‌ಎಲ್ ಕಾರ್ಖಾನೆಗೆ ಭಾನುವಾರ ಭೇಟಿ ನೀಡಿದ್ದ ಕೇಂದ್ರ ಸಚಿವ ಎಚ್‌.ಡಿ.ಕುಮಾರಸ್ವಾಮಿ, ಭಾರತೀಯ ಉಕ್ಕು ಪ್ರಾಧಿಕಾರದ ಅಧ್ಯಕ್ಷ ಅಮರೇಂದು ಪ್ರಕಾಶ್ ಅವರಿಂದ ಮಾಹಿತಿ ಪಡೆದರು

## ‘ಹೆದ್ದಾರಿ ಯೋಜನೆ ₹1 ಲಕ್ಷ ಕೋಟಿ ಭರವಸೆ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜ್ಯದಲ್ಲಿ ವಿವಿಧ ಹೆದ್ದಾರಿ, ಸಂಪರ್ಕ ಜಾಲ ವೃದ್ಧಿ ಯೋಜನೆಗಳಿಗೆ ₹1 ಲಕ್ಷ ಕೋಟಿ ಅನುದಾನ ನೀಡುವುದಾಗಿ ಕೇಂದ್ರ ಹೆದ್ದಾರಿ ಮತ್ತು ಭೂಸಾರಿಗೆ ಸಚಿವ ನಿತಿನ್ ಗಡ್ಕರಿ ಭರವಸೆ ನೀಡಿದ್ದಾರೆ’ ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

ಮುಖ್ಯಮಂತ್ರಿ ನೇತೃತ್ವದ ರಾಜ್ಯ ಸಚಿವರ ನಿಯೋಗ ಕೈಗೊಂಡಿದ್ದ ದೆಹಲಿ ಪ್ರವಾಸದ ಬಗ್ಗೆ ಭಾನುವಾರ ಪ್ರತಿಕ್ರಿಯಿ-ಸಿದ ಅವರು, ‘ರಾಜ್ಯದ ಹೆದ್ದಾರಿ ಯೋಜನೆಗಳನ್ನು ತ್ವರಿತವಾಗಿ ಪೂರ್ಣಗೊಳಿಸಲು ಸಹಕರಿಸುವಂತೆ ವಿನಂತಿಸಲಾಯಿತು. ಇದಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿದ ಕೇಂದ್ರ ಸಚಿವರು, ಹೆಚ್ಚು ಅನುದಾನ ನೀಡುವ ಭರವಸೆ ನೀಡಿದರು’ ಎಂದರು.

‘ರಾಜ್ಯದ ಸಂಸದರೊಂದಿಗೆ ದೆಹಲಿಯಲ್ಲಿ ನಡೆಸಿದ ಸಭೆಯಲ್ಲಿ ರಾಜ್ಯದ ಸಮಸ್ಯೆಗಳ ಬಗ್ಗೆ ಕೇಂದ್ರದ ಗಮನ ಸೆಳೆಯಲಾಗಿದೆ. ಈ ಹೊಸ ಸಂಪ್ರದಾಯ ಮುಂದುವರಿಯಬೇಕು. ಪ್ರತಿ ಅಧಿವೇಶನ ನಡೆದಾಗಲೂ ಈ ರೀತಿಯ ಸಭೆ ನಡೆಸುವಂತೆ ಸಂಸದರು ತಿಳಿಸಿದ್ದಾರೆ’ ಎಂದರು.

ಕರಡು ಮಸೂದೆ ಪ್ರಕಟಿಸಿದ ಕಾರ್ಮಿಕ ಇಲಾಖೆ

## ಗಿಗ್ ಕಾರ್ಮಿಕರ ರಕ್ಷಣೆಗೆ ಮಂಡಳಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಗಿಗ್ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಮತ್ತು ಆರ್ಥಿಕ ನೆರವು ಒದಗಿಸಲು ಪ್ರತ್ಯೇಕ ಗಿಗ್ ಕಾರ್ಮಿಕರ ಕಲ್ಯಾಣ ಮಂಡಳಿ ರಚಿಸಲು ಮುಂದಾಗಿರುವ ಕಾರ್ಮಿಕ ಇಲಾಖೆ, ಅದಕ್ಕೆ ಪೂರಕವಾಗಿ ಗಿಗ್ ಕಾರ್ಮಿಕರ (ಸಾಮಾಜಿಕ ಭದ್ರತೆ ಮತ್ತು ಕಲ್ಯಾಣ) ಮಸೂದೆಯನ್ನು ರೂಪಿಸಿದೆ.



ಗಿಗ್ ಕಾರ್ಮಿಕರ (ಸಾಮಾಜಿಕ ಭದ್ರತೆ ಮತ್ತು ಕಲ್ಯಾಣ) ಮಸೂದೆ–2024ರ ಕರಡನ್ನು ಕಾರ್ಮಿಕ ಇಲಾಖೆಯ ವೆಬ್‌ಸೈಟ್‌ನಲ್ಲಿ ಶನಿವಾರ ಪ್ರಕಟಿಸಿದ್ದು, ಸಲಹೆ ಮತ್ತು ಆಕ್ಷೇಪಣೆಗಳನ್ನು ಸಲ್ಲಿಸಲು ಹತ್ತು ದಿನಗಳ ಕಾಲಾವಕಾಶ ನೀಡಲಾಗಿದೆ. ವಿಧಾನಮಂಡಲದ ಮುಂಗಾರು ಅಧಿವೇಶ-ನದಲ್ಲಿ ಮಸೂದೆಗೆ ಅಂಗೀಕಾರ ಪಡೆಯುವ ಸಾಧ್ಯತೆ ಇದೆ.

ಮಸೂದೆಯ ಪ್ರಕಾರ, ಕಾರ್ಮಿಕರ ಸಚಿವರ ಅಧ್ಯಕ್ಷತೆಯಲ್ಲೇ ಗಿಗ್ ಕಾರ್ಮಿಕರ ಕಲ್ಯಾಣ ಮಂಡಳಿ ಅಸ್ತಿತ್ವಕ್ಕೆ ಬರಲಿದೆ. ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ದರ್ಜೆಯ ಇಬ್ಬರು ಅಧಿಕಾರಿಗಳು, ಕಾರ್ಮಿಕ ಆಯುಕ್ತರು, ಗಿಗ್ ಕಾರ್ಮಿಕರ ಇಬ್ಬರು ಪ್ರತಿನಿಧಿಗಳು, ಸೇವೆ ಬಳಸಿಕೊಳ್ಳುವ ಕಂಪನಿಗಳ ಇಬ್ಬರು ಪ್ರತಿನಿಧಿಗಳು, ಕಾರ್ಮಿಕ ಸಂಬಂಧಿ ವಿಷಯಗಳಲ್ಲಿ ಪರಿಣತಿ ಹೊಂದಿರುವ ಒಬ್ಬರು ಮಂಡಳಿಯ ಸದಸ್ಯರಾಗಿರುತ್ತಾರೆ.

ಗಿಗ್ ಕಾರ್ಮಿಕರನ್ನು ಮಂಡಳಿಯಲ್ಲಿ ನೋಂದಾಯಿಸಿ ಅವರಿಗೆ ಪ್ರತ್ಯೇಕ ನಿಧಿ ಸ್ಥಾಪಿಸುವ ಪ್ರಸ್ತಾವ ಮಸೂದೆಯಲ್ಲಿದೆ. ಇದಕ್ಕಾಗಿ ಗಿಗ್ ಕಾರ್ಮಿಕರ ಕೆಲಸಕ್ಕೆ ವಿಧಿಸುವ ಶುಲ್ಕಕ್ಕೆ ಅನುಸಾರವಾಗಿ ಪ್ರತ್ಯೇಕ ಸೆಸ್ ಸಂಗ್ರಹಿಸುವ ಪ್ರಸ್ತಾವವೂ ಇದೆ. ನೋಂದಣಿ ಶುಲ್ಕವೂ ಸೇರಿದಂತೆ ಸಂಗ್ರಹವಾಗುವ ಎಲ್ಲ ಮೊತ್ತವನ್ನು ಗಿಗ್ ಕಾರ್ಮಿಕರ ಕಲ್ಯಾಣ ನಿಧಿಯಲ್ಲಿ ಬಳಸಲಾಗುತ್ತದೆ.

ಗಿಗ್ ಕಾರ್ಮಿಕರನ್ನು ಕೆಲಸಕ್ಕೆ ನೇಮಿಸಿಕೊಳ್ಳುವ ಕಂಪನಿಯು ಎಲ್ಲ ಕಾರ್ಮಿಕರ ಮಾಹಿತಿಯನ್ನು ಮಂಡಳಿ ಜತೆ ಹಂಚಿಕೊಳ್ಳಬೇಕು. ಸೇವಾದಾರ ಕಂಪನಿಯೂ ಮಂಡಳಿಯಲ್ಲಿ ನೋಂದಣಿ ಮಾಡಿಸಿಕೊಳ್ಳಬೇಕಾಗುತ್ತ-ದೆ. ಈ ಮಸೂದೆಯ ಪ್ರಕಾರ, ನಿರ್ದಿಷ್ಟ ಕಾರಣಗಳಲ್ಲದೇ ಗಿಗ್ ಕಾರ್ಮಿಕರನ್ನು ಕೆಲಸದಿಂದ ಕೈಬಿಡುವಂತಿಲ್ಲ. ಅವರಿಗೆ ಪಾವತಿಸಬೇಕಾದ ಮೊತ್ತದಲ್ಲಿ ಕಡಿತ ಮಾಡುವಂತಿಲ್ಲ.

ಈ ಕಾರ್ಮಿಕರ ಕುಂದು ಕೊರತೆಗಳನ್ನು ಪರಿಹರಿಸುವ ಅಧಿಕಾರವೂ ಮಂಡಳಿಗೆ ಇರುತ್ತದೆ. ಕಾಯ್ದೆಯನ್ನು ಉಲ್ಲಂ-ಘಿಸುವವರಿಗೆ ₹ 1 ಲಕ್ಷದವರೆಗೆ ದಂಡ ವಿಧಿಸುವುದಕ್ಕೂ ಅವಕಾಶ ಇರಲಿದೆ. ಗಿಗ್ ಕಾರ್ಮಿಕರ ಸೇವೆ ಬಳಸಿಕೊಳ್ಳುವ ಕಂಪನಿಗಳಲ್ಲಿ ತಪಾಸಣೆ ನಡೆಸುವ ಅಧಿಕಾರವನ್ನೂ ಮಸೂದೆಯು ಕಾರ್ಮಿಕ ಇಲಾಖೆಗೆ ನೀಡಲಿದೆ.

## ಶೇ 15 ಎನ್‌ಆರ್‌ಐ ಕೋಟಾ ಎನ್‌ಎಂಸಿಗೆ ರಾಜ್ಯ ಸರ್ಕಾರ ಪತ್ರ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ 2025-26ನೇ ಶೈಕ್ಷಣಿಕ ವರ್ಷದಿಂದ ಅನಿವಾಸಿ ಭಾರತೀಯ (ಎನ್‌ಆರ್‌ಐ) ಕೋಟಾ ಆರಂಭಿಸಲು ಸೂಪರ್ ನ್ಯೂಮರರಿ ಎಂಬಿಬಿಎಸ್ ಸೀಟುಗಳನ್ನು ಮಂಜೂರು ಮಾಡಬೇಕು ಎಂದು ಕೇಂದ್ರ ಸರ್ಕಾರಕ್ಕೆ ವೈದ್ಯಕೀಯ ಶಿಕ್ಷಣ ಇಲಾಖೆ ಪತ್ರ ಬರೆದಿದೆ.

ರಾಷ್ಟ್ರೀಯ ವೈದ್ಯಕೀಯ ಆಯೋಗದ (ಎನ್‌ಎಂಸಿ) ಅಧ್ಯಕ್ಷರಿಗೆ ಪತ್ರ ಬರೆದಿರುವ ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ್ ಪಾಟೀಲ, ರಾಜ್ಯದಲ್ಲಿರುವ 22 ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಪ್ರವೇಶಕ್ಕಾಗಿ 508 ಹೆಚ್ಚುವರಿ ಸೂಪರ್ ನ್ಯೂಮರರಿ ಎಂಬಿಬಿಎಸ್ ಸೀಟುಗಳನ್ನು ಸೃಷ್ಟಿಸುವ ಮೂಲಕ ಶೇ 15ರಷ್ಟು ಎನ್‌ಆರ್‌ಐ ಕೋಟಾ ಮಂಜೂರು ಮಾಡಬೇಕೆಂದು ಮನವಿ ಮಾಡಿದ್ದಾರೆ.

ಪ್ರಸಕ್ತ 22 ಸರ್ಕಾರಿ ವೈದ್ಯಕೀಯ ಕಾಲೇಜುಗಳು 2023-24 ನೇ ಸಾಲಿನಲ್ಲಿ 3,450 ಸೀಟುಗಳ ಸಾಮರ್ಥ್ಯ ಹೊಂದಿವೆ. ಅದರಲ್ಲಿ 2,929 (ಶೇ 85) ಸೀಟುಗಳು ಕರ್ನಾಟಕ ಕೋಟಾ ಮತ್ತು 521 (ಶೇ 15) ಅಖಿಲ ಭಾರತ ಕೋಟಾ ಆಗಿದೆ.

ಈಗಾಗಲೇ ರಾಜಸ್ಥಾನ, ಹರಿಯಾಣ, ಪಂಜಾಬ್, ಹಿಮಾಚಲ ಪ್ರದೇಶ ಮತ್ತು ಪುದುಚೇರಿಯಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಶೇ 7 ರಿಂದ 15ರಷ್ಟು ಎನ್‌ಆರ್‌ಐ ಕೋಟಾ ನೀಡಿರುವ, ನಿದರ್ಶನಗಳನ್ನು ಮತ್ತು ಈ ರಾಜ್ಯಗಳು ಎನ್‌ಆರ್‌ಐ ವಿದ್ಯಾರ್ಥಿಗಳಿಗೆ ವಾರ್ಷಿಕ 75 ಸಾವಿರ ಡಾಲರ್‌ದಿಂದ 1 ಲಕ್ಷ ಡಾಲರ್‌ಗೂ ಹೆಚ್ಚು ಶುಲ್ಕ ವಿಧಿಸುತ್ತಿವೆ ಎಂದು ಪತ್ರದಲ್ಲಿ ಅವರು ಉಲ್ಲೇಖಿಸಿದ್ದಾರೆ.

ಕರ್ನಾಟಕದಲ್ಲಿ ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿ ಎನ್‌ಆರ್‌ಐ ಕೋಟಾಕ್ಕೆ ಅನುಮತಿಯಿದ್ದು, ಪ್ರತಿ ವಿದ್ಯಾರ್ಥಿ ವಾರ್ಷಿಕ ₹1 ಕೋಟಿಯಿಂದ ₹2.5 ಕೋಟಿ ಕೋರ್ಸ್ ಶುಲ್ಕ ಪಾವತಿಸ-ಬೇಕಾಗುತ್ತದೆ. ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಎನ್‌ಆರ್‌ಐ ಕೋಟಾ ಜಾರಿಯಾದರೆ ವಿದ್ಯಾರ್ಥಿಗೆ ವಾರ್ಷಿಕ ₹25 ಲಕ್ಷ ಶುಲ್ಕ ನಿಗದಿಪ-ಡಿಸಬಹುದು. ಇದರಿಂದ ವೈದ್ಯಕೀಯ ಶಿಕ್ಷಣ ಇಲಾಖೆಗೆ ಮೊದಲ ವರ್ಷ ₹127 ಕೋಟಿ ಮತ್ತು 5ನೇ ವರ್ಷಕ್ಕೆ ಒಟ್ಟು ₹571.5 ಕೋಟಿ ಸಂದಾಯವಾಗಬಹುದು ಎಂದೂ ಸಚಿವರು ಉಲ್ಲೇಖಿಸಿದ್ದಾರೆ.

ಲಭ್ಯವಿರುವ ಸೀಟುಗಳ ಒಳಗೆ ಎನ್‌ಆರ್‌ಐ ಕೋಟಾ ರಚಿಸುವುದು ಕಾರ್ಯಸಾಧ್ಯವಲ್ಲ. ಹಾಗೆ ಮಾಡಿದರೆ ಬಡವರು ಮತ್ತು ಹಿಂದುಳಿದ ವಿದ್ಯಾರ್ಥಿಗಳಿಗೆ ಕಡಿಮೆ ಸೀಟು ಸೃಷ್ಟಿಯಾಗುತ್ತವೆ. ಅಲ್ಲದೆ, ವಿದ್ಯಾರ್ಥಿಗಳು ಮತ್ತು ಪೋಷಕರಿಂದ ವಿರೋಧ ಎದುರಿ-ಸಬೇಕಾಗುತ್ತದೆ ಎಂದು ಆತಂಕ ವ್ಯಕ್ತಪಡಿಸಿರುವ ಸಚಿವರು, ರಾಜ್ಯದಲ್ಲಿ-ರುವ ಸರ್ಕಾರಿ ಪಶು ವೈದ್ಯಕೀಯ, ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯಗಳು ಶೇ 15ರಷ್ಟು ಎನ್‌ಆರ್‌ಐ ಕೋಟಾ ಹೊಂದಿರುವುದನ್ನು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

## ಶವರ್ಮಾ ಮಾದರಿಯಲ್ಲಿ ಬ್ಯಾಕ್ಟೀರಿಯಾ ಪತ್ತೆ

**ಬೆಂಗಳೂರು:** ಆಹಾರ ಮತ್ತು ಗುಣಮಟ್ಟ ಇಲಾಖೆಯು ರಾಜ್ಯದ ವಿವಿಧೆಡೆ ಶವರ್ಮಾ ಮಾದರಿಗಳನ್ನು ವಿಶ್ಲೇಷಣೆಗೆ ಒಳಪಡಿಸಿದ್ದು, ಕೆಲ ಮಾದರಿಗಳಲ್ಲಿ ಬ್ಯಾಕ್ಟೀರಿಯಾಗಳು ಪತ್ತೆಯಾಗಿವೆ.

ಶವರ್ಮಾ ಆಹಾರ ಪದಾರ್ಥ ಸೇವನೆಯಿಂದ ಅನಾರೋಗ್ಯಕ್ಕೆ ಒಳಗಾದ ಬಗ್ಗೆ ಮಾಧ್ಯಮಗಳಲ್ಲಿ ವರದಿಯಾಗಿತ್ತು. ಈ ಹಿನ್ನೆಲೆಯಲ್ಲಿ ಬಿಬಿಎಂಪಿಯ ವಿವಿಧ ವಲಯಗಳು, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಗ್ರಾಮಾಂತರ, ಮೈಸೂರು, ತುಮಕೂರು, ಹುಬ್ಬಳ್ಳಿ, ಧಾರವಾಡ, ಮಂಗಳೂರು, ಬಳ್ಳಾರಿ ಮತ್ತು ಬೆಳಗಾವಿಯಲ್ಲಿ ಶವರ್ಮಾದ ಮಾದರಿಗಳನ್ನು ವಿಶ್ಲೇಷಣೆಗೆ ಒಳಪಡಿ-ಸಲಾಗಿದೆ. ಒಟ್ಟು 17 ಮಾದರಿಗಳಲ್ಲಿ 9 ಮಾದರಿಗಳು ಸುರಕ್ಷಿತವೆಂದು ವರದಿ ಆದರೆ, 8 ಮಾದರಿಗಳಲ್ಲಿ ಬ್ಯಾಕ್ಟೀರಿಯಾ ಕಂಡುಬಂದಿದೆ. ಅಸುರಕ್ಷಿತ ಆಹಾರ ತಯಾರಕರ ವಿರುದ್ಧ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ 2006, ನಿಯಮಗಳು 2011ರ ಅನ್ವಯ ಕಾನೂನು ಕ್ರಮವಹಿಸಲಾಗುತ್ತಿದೆ ಎಂದು ಇಲಾಖೆ ಆಯುಕ್ತರು ತಿಳಿಸಿದ್ದಾರೆ.

ಅಂಕಿತ ಪುಸ್ತಕದ ‘ವರ್ಷದ ಲೇಖಕಿ’ ದತ್ತಿನಿಧಿ ಪ್ರಶಸ್ತಿ ಪ್ರದಾನ

## ‘ಸಿದ್ಧಾಂತಗಳು ಬದುಕಿಗೆ ಪ್ರೇರಕ ಶಕ್ತಿ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಸಿದ್ಧಾಂತಗಳು ಬದುಕನ್ನು ಅರ್ಥಮಾಡಿಕೊಳ್ಳಲು ಇರುವ ಪ್ರೇರಕ ಶಕ್ತಿ. ಪಂಪ, ವಚನಕಾರರು, ಹರಿದಾಸರು, ಕುಮಾರವ್ಯಾಸನಿಗೂ ಸಿದ್ಧಾಂತವಿತ್ತು. ಆದರೆ, ಅವರು ಘೋಷಿಸಿಕೊಂಡಿರಲಿಲ್ಲ’ ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ತಿಳಿಸಿದರು.

ಕರ್ನಾಟಕ ಲೇಖಕಿಯರ ಸಂಘ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಅಂಕಿತ ಪುಸ್ತಕದ ‘ವರ್ಷದ ಲೇಖಕಿ’ ದತ್ತಿನಿಧಿ ಪ್ರಶಸ್ತಿಯನ್ನು ಲೇಖಕಿಯರಾದ ಬಾನು ಮುಷ್ತಾಕ್, ಎಚ್.ಎಸ್. ಅನುಪಮಾ ಹಾಗೂ ಪ್ರತಿಭಾ ನಂದಕುಮಾರ್ ಅವರಿಗೆ ಪ್ರದಾನ ಮಾಡಿ, ಮಾತನಾಡಿದರು. ಈ ಪ್ರಶಸ್ತಿಯು ತಲಾ ₹ 35 ಸಾವಿರ ನಗದು ಒಳಗೊಂಡಿದೆ.

‘ನಮ್ಮಲ್ಲಿ ಸಿದ್ಧಾಂತವಿದ್ದರೆ ಸೃಜನಶೀಲತೆಗೆ ಧಕ್ಕೆಯಾಗುತ್ತದೆ ಎಂಬ ವಾದವಿದೆ. ಇದಕ್ಕೆ ಪೂರ್ವಾಗ್ರಹ ಮನಸ್ಥಿತಿಯೇ ಕಾರಣ. ಯಾವುದೇ ಸಿದ್ಧಾಂತವನ್ನು ಸೆರೆಮನೆ ಸಿದ್ಧಾಂತ ಸೆರೆಮನೆಯಲ್ಲ. ಆದ್ದರಿಂದ ಅಂದುಕೊಳ್ಳುವುದು, ವಿಮರ್ಶಕರು ಬರವಣಿಗೆಯಲ್ಲಿ ತೊಡಗಿರುವವರು ಬರಹಗಾರರು ಸೆರೆಮನೆಯಲ್ಲಿದ್ದಾರೆ ಎಂದು ಭಾವಿಸುವುದು ತಪ್ಪು. ಸಿದ್ಧಾಂತದ ಬಗ್ಗೆ ಬದ್ಧತೆ ಇರಬೇಕು. ಬದ್ಧತೆಯು ಪ್ರಾಮಾಣಿಕತೆ ಮತ್ತು ನೈತಿಕತೆಯ ಪ್ರತೀಕ. ಸಿದ್ಧಾಂತವನ್ನು ಕಲೆಯ ಕುಲುಮೆಯಲ್ಲಿ ಕರಗಿಸಿ, ಆಕಾರ ನೀಡಬೇಕು’ ಎಂದು ಹೇಳಿದರು.



ಕಾರ್ಯಕ್ರಮದಲ್ಲಿ (ಕುಳಿತವರು ಎಡದಿಂದ) ಪ್ರತಿಭಾ ನಂದಕುಮಾರ್, ಬಾನು ಮುಷ್ತಾಕ್ ಮತ್ತು ಎಚ್‌.ಎಸ್‌. ಅನುಪಮಾ ಅವರಿಗೆ ವರ್ಷದ ಲೇಖಕಿ ‘ಅಂಕಿತ ಪುಸ್ತಕ ಪುರಸ್ಕಾರ’ ನೀಡಿ ಗೌರವಿಸಲಾಯಿತು. (ನಿಂತವರು) ಕರ್ನಾಟಕ ಲೇಖಕಿಯರ ಸಂಘದ ಪದಾಧಿಕಾರಿಗಳಾದ ಸುಮಾ ಸತೀಶ್, ಮಂಜುಳಾ ಶಿವಾನಂದ, ಅಧ್ಯಕ್ಷೆ ಎಚ್‌.ಎಲ್‌. ಪುಷ್ಪ, ಬರಗೂರು ರಾಮಚಂದ್ರಪ್ಪ, ಅಂಕಿತ ಪುಸ್ತಕದ ಪ್ರಕಾಶ್ ಕಂಬತ್ತಳ್ಳಿ, ಸಂಘದ ಕಾರ್ಯದರ್ಶಿ ಭಾರತಿ ಹೆಗಡೆ ಮತ್ತು ಪ್ರಭಾ ಕಂಬತ್ತಳ್ಳಿ ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರ

ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಎಚ್.ಎಲ್.ಪುಷ್ಪ, ‘ಪುರುಷ ಪ್ರಧಾನ ಪ್ರಪಂಚದಲ್ಲಿ ಈಗಲೂ ಮಹಿಳೆಯರ ಸ್ಥಿತಿ ಬದಲಾಗಿಲ್ಲ. ಭ್ರೂಣ ಹತ್ಯೆ ಪ್ರಕರಣಗಳು ನಡೆಯುತ್ತಿವೆ. ಅದನ್ನು ಎದುರಿಸುವುದು ಹೇಗೆ ಎಂಬ ಪ್ರಶ್ನೆ ಕಾಡುತ್ತಿದೆ. ಪೋಕ್ಸೊ ಪ್ರಕರಣ, ಲೈಂಗಿಕ ದೌರ್ಜನ್ಯ, ಹಾದಿ ಬೀದಿಗಳಲ್ಲಿ ‘ಪೆನ್‌ಡ್ರೈವ್’ ಸೇರಿ ವಿವಿಧ ಪ್ರಕರಣಗಳಿಂದ ಕರ್ನಾಟಕವು ಹಿಂದಿಗಿಂತಲೂ ಹೆಚ್ಚು ಪ್ರಕಾಶಿಸುತ್ತಿದೆ’ ಎಂದು ಬೇಸರ ವ್ಯಕ್ತಪಡಿಸಿದರು.

ಲೇಖಕಿ ಸಂಧ್ಯಾ ಹೆಗಡೆ ದೊಡ್ಡಹೊಂಡ ಅವರು ಪ್ರಶಸ್ತಿ ಪುರಸ್ಕೃತರ ಬಗ್ಗೆ ಅಭಿನಂದನಾ ನುಡಿಗಳನ್ನಾಡಿದರು.

### ಸಂಸತ್ ಅಧಿವೇಶನ: 'ಅಗ್ನಿಪಥ್' ಯೋಜನೆ, ಹಣದುಬ್ಬರ ಸಮಸ್ಯೆ ಕುರಿತು ಚರ್ಚೆ ಸಾಧ್ಯತೆ

# 'ನೀಟ್' ಪ್ರಸ್ತಾಪ, ವಾಕ್ಸಮರ ನಿರೀಕ್ಷೆ

ನವದೆಹಲಿ (ಪಿಟಿಐ): ಸಂಸತ್ತಿನ ಕಲಾಪ ಸೋಮವಾರ ಪುನರಾರಂಭವಾಗಲಿದ್ದು, 'ನೀಟ್' ಅಕ್ರಮವನ್ನು ಪ್ರಸ್ತಾಪಿಸಿ ಸರ್ಕಾರದ ವಿರುದ್ಧ ವಾಗ್ಯುದ್ಧ ನಡೆಸಲು ವಿರೋಧಪಕ್ಷಗಳು ಸಿದ್ಧತೆ ನಡೆಸಿದ್ದು, ಉಭಯ ಸದನಗಳು ವಾಕ್ಸಮರಕ್ಕೆ ವೇದಿಕೆಯಾಗುವ ಸಾಧ್ಯತೆಗಳಿವೆ.

ನೀಟ್ ಅವ್ಯವಹಾರದ ಜೊತೆಗೆ, ಸೇನೆಗೆ ಯುವಜನರ ನೇಮಕಾತಿಯ 'ಅಗ್ನಿಪಥ್' ಯೋಜನೆ, ಹಣದುಬ್ಬರ ಸಮಸ್ಯೆ ಹಾಗೂ ಯುವಜನರನ್ನು ಕಾಡುತ್ತಿರುವ ನಿರುದ್ಯೋಗದ ಸಮಸ್ಯೆಗಳ ಕುರಿತೂ ವಿರೋಧಪಕ್ಷಗಳು ಪ್ರಮುಖವಾಗಿ ಗಮನಸೆಳೆಯುವ ಸಾಧ್ಯತೆಗಳು ಇವೆ.

ಲೋಕಸಭೆಯಲ್ಲಿ ಬಿಜೆಪಿ ಸಂಸದ, ಮಾಜಿ ಕೇಂದ್ರ ಸಚಿವ ಅನುರಾಗ್ ಠಾಕೂರ್ ಅವರು, ರಾಷ್ಟ್ರಪತಿಗಳ ಭಾಷಣಕ್ಕೆ ವಂದನೆ ಸಲ್ಲಿಸುವ ನಿರ್ಣಯದ ಮೇಲೆ ಚರ್ಚೆ ಆರಂಭಿಸಲಿದ್ದು, ನಿರ್ಣಯವನ್ನು ಬಿಜೆಪಿ ಸಂಸದೆ ಬಾನ್ಸುರಿ ಸ್ವರಾಜ್ ಅವರು ಅನುಮೋದಿಸುವರು.



ವಂದನಾ ನಿರ್ಣಯದ ಮೇಲಿನ ಚರ್ಚೆಗೆ ಲೋಕಸಭೆಯಲ್ಲಿ ಒಟ್ಟು 16 ಗಂಟೆ ಸಮಯ ನಿಗದಿಪಡಿಸಲಾಗಿದೆ. ಕೊನೆಯಲ್ಲಿ ಬಹುತೇಕ ಮಂಗಳವಾರ ಪ್ರಧಾನಿ ನರೇಂದ್ರ ಮೋದಿ ಅವರು ಉತ್ತರ ನೀಡಲಿದ್ದಾರೆ.

ವಂದನಾ ನಿರ್ಣಯದ ಮೇಲಿನ ಚರ್ಚೆಗೆ ರಾಜ್ಯಸಭೆಯಲ್ಲಿ 21 ಗಂಟೆ ನಿಗದಿಪಡಿಸಿದ್ದು, ಅಲ್ಲಿ ಬುಧವಾರದಂದು ಪ್ರಧಾನಿ ಉತ್ತರ ನೀಡಲಿದ್ದಾರೆ. ನೀಟ್ ಪರೀಕ್ಷೆಯ ಗೊಂದಲ ವಿರೋಧಿಸಿ ಈಗಾಗಲೇ ಸಂಸತ್ತಿನಲ್ಲಿ ಪ್ರತಿಭಟನೆ ನಡೆಸಿದ್ದು, ಕೋಲಾಹಲಕ್ಕೂ ಕಾರಣವಾಗಿದೆ.

ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ (ಎನ್‌ಟಿಎ) ಆಯೋಜಿಸಿದ್ದ ನೀಟ್–ಯುಜಿ ಪರೀಕ್ಷೆ ತೀವ್ರ ಗೊಂದಲಕ್ಕೆ ಕಾರಣವಾಗಿದೆ. ಬಿಹಾರದಲ್ಲಿ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿದ್ದು, ಇತರೆಡೆಯೂ ಅಕ್ರಮಗಳು ನಡೆದಿವೆ. ಮೇ 5ರಂದು ನಡೆದಿದ್ದ ಪರೀಕ್ಷೆಗೆ 24 ಲಕ್ಷ ಅಭ್ಯರ್ಥಿಗಳು ಹಾಜರಾಗಿದ್ದರು.

ರಾಜ್ಯಸಭೆಯಲ್ಲಿ ವಂದನಾ ನಿರ್ಣಯದ ಮೇಲೆ ಚರ್ಚೆ ಆರಂಭಿಸಿದ್ದ ಬಿಜೆಪಿ ಸದಸ್ಯ ಸುಧಾಂಶು ತ್ರಿವೇದಿ, 'ಮೋದಿ ಅವರಿಗೆ ಸರಿಸಾಟಿಯೇ ಇಲ್ಲ' ಎಂದು ಬಣ್ಣಿಸಿದ್ದರು. ಬಿಜೆಪಿಯ ಕವಿತಾ ಪಾಟಿದಾರ್ ನಿರ್ಣಯ ಅನುಮೋದಿಸಿದ್ದರು. ಚರ್ಚೆಯಲ್ಲಿ ಇತರೆ 9 ಸದಸ್ಯರು ಭಾಗಿಯಾಗಿದ್ದರು.

ವಂದನಾ ನಿರ್ಣಯಕ್ಕೂ ಮೊದಲು ನೀಟ್ ವಿಷಯ ಕುರಿತು ಚರ್ಚೆ ನಡೆಯಬೇಕು ಎಂದು ಒತ್ತಾಯಿಸಿ ವಿರೋಧಪಕ್ಷಗಳು ರಾಜ್ಯಸಭೆಯಲ್ಲಿ ನಿಲುವಳಿ ಸೂಚನೆ ಮಂಡಿಸಿವೆ. ಚರ್ಚೆಗೆ ಆಗ್ರಹಿಸಿ ವಿರೋಧಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅಧ್ಯಕ್ಷರ ಪೀಠದ ಎದುರಿಗೂ ಧಾವಿಸಿದ್ದರು.

## ನೀಟ್, ಎನ್‌ಟಿಎ ಕುರಿತ 13 ತಿದ್ದುಪಡಿ

ಆರ್‌ಎಸ್‌ಪಿ ಸಂಸದ ಎನ್.ಕೆ.ಪ್ರೇಮಚಂದ್ರನ್ ಅವರು ನೀಟ್‌ಗೆ ಸಂಬಂಧಿಸಿದಂತೆ ಮುಂದಿಟ್ಟಿರುವ ತಿದ್ದುಪಡಿಯು ರಾಷ್ಟ್ರಪತಿಯವರ ಭಾಷಣದ ಮೇಲಿನ ವಂದನಾ ನಿರ್ಣಯದ ವೇಳೆ ಮೊದಲನೆಯದಾಗಿ ಚರ್ಚೆಗೆ ಬರಲಿದೆ.

ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ (ಎನ್‌ಟಿಎ), ನೀಟ್ ಮತ್ತು ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಒಟ್ಟು 13 ತಿದ್ದುಪಡಿಗಳನ್ನು ವಿರೋಧ ಪಕ್ಷಗಳ ಸಂಸದರು ಸಲ್ಲಿಸಿದ್ದಾರೆ. ಇದರಲ್ಲಿ 9 ತಿದ್ದುಪಡಿಗಳು ಲೋಕಸಭೆಯಲ್ಲಿ ಚರ್ಚೆಗೆ ಬರಲಿವೆ. ಸಂಸದರಾದ ಕೆ.ಸಿ.ವೇಣುಗೋಪಾಲ್, ಗೌರವ್ ಗೊಗೊಯ್, ಡಿ.ವೈಕೊ, ಶಾಫಿ ಪರಂಬಿಲ್ ಮತ್ತು ಜಾನ್ ಬ್ರಿಟ್ಟಾಸ್ ಅವರು ತಿದ್ದುಪಡಿಗಳನ್ನು ಸಲ್ಲಿಸಿದವರಲ್ಲಿ ಸೇರಿದ್ದಾರೆ.

ಒಟ್ಟಾರೆಯಾಗಿ 50 ಸಂಸದರು 323 ತಿದ್ದುಪಡಿಗಳನ್ನು (ಲೋಕಸಭೆಯಲ್ಲಿ 215 ಮತ್ತು ರಾಜ್ಯಸಭೆಯಲ್ಲಿ 108) ಸಲ್ಲಿಸಿದ್ದಾರೆ. ಬೆಲೆಯೇರಿಕೆ, ನಿರುದ್ಯೋಗ, ಕೇಂದ್ರ ಸರ್ಕಾರದ ಖಾಲಿ ಹುದ್ದೆಗಳ ಭರ್ತಿ, ಖಾಸಗಿ ವಲಯದ ಕೋಟಾ, ರೈತರ ಸಮಸ್ಯೆಗಳು ಮತ್ತು ಮಣಿಪುರ ಹಿಂಸಾಚಾರಕ್ಕೆ ಸಂಬಂಧಿಸಿದ ತಿದ್ದುಪಡಿಗಳು ಇದರಲ್ಲಿ ಸೇರಿವೆ.

# ನೀಟ್ ಅಕ್ರಮ: ಶಾಲಾ ಮಾಲೀಕನ ಬಂಧನ

ಗೋಧ್ರಾ (ಪಿಟಿಐ): 'ನೀಟ್-ಯುಜಿ' ಪರೀಕ್ಷಾ ಅಕ್ರಮ ಕುರಿತು ತನಿಖೆ ನಡೆಸುತ್ತಿರುವ ಸಿಬಿಐ ಭಾನುವಾರ ಗೋಧ್ರಾ ಬಳಿಯಿರುವ ಜಯ ಬಲರಾಮ್ ಶಾಲೆಯ ಮಾಲೀಕ ದೀಕ್ಷಿತ್ ಪಟೇಲ್ ಎಂಬುವರನ್ನು ಬಂಧಿಸಿದೆ.

ಈ ಮೂಲಕ ಪ್ರಕರಣದಲ್ಲಿ ಬಂಧಿತರಾದವರ ಸಂಖ್ಯೆ ಆರಕ್ಕೆ ಏರಿದೆ. ಮೇ 5ರಂದು ನಡೆದ ನೀಟ್ ಪರೀಕ್ಷೆಗೆ ನಿಗದಿಮಾಡಿದ್ದ ಕೇಂದ್ರಗಳಲ್ಲಿ ಜಯ ಬಲರಾಮ್ ಶಾಲೆಯೂ ಒಂದಾಗಿತ್ತು.

ಪಟೇಲ್ ಅವರನ್ನು ಪಂಚಮಹಲ್ ಜಿಲ್ಲೆಯಲ್ಲಿನ ಅವರ ನಿವಾಸದಿಂದ ಬಂಧಿಸಲಾಯಿತು. ಆ ಬಳಿಕ ಅವರನ್ನು ಅಹಮದಾಬಾದ್‌ನ ನ್ಯಾಯಾಲಯಕ್ಕೆ ಹಾಜರುಪಡಿಸಲಾಯಿತು ಎಂದು ಪಬ್ಲಿಕ್ ಪ್ರಾಸಿಕ್ಯೂಟರ್ ತಿಳಿಸಿದ್ದಾರೆ.

ಈ ಪ್ರಕರಣದಲ್ಲಿ ಬಂಧಿತರಾಗಿರುವ ಆರೋಪಿಗಳು, ಅಭ್ಯರ್ಥಿಗಳಿಗೆ ನೀಟ್ ಪರೀಕ್ಷೆಯಲ್ಲಿ ತೇರ್ಗಡೆಯಾಗಲು ನೆರವು ಮಾಡಲು ತಲಾ ಕನಿಷ್ಠ ₹10 ಲಕ್ಷದಿಂದ ₹ 27 ಲಕ್ಷ ಪಡೆಯುತ್ತಿದ್ದರು ಎಂಬ ಆರೋಪ ಇದೆ.




ಭೌತವಿಜ್ಞಾನ ಶಿಕ್ಷಕ ತುಷಾರ್ ಭಟ್, ಜಯ ಜಲರಾಮ್ ಶಾಲೆಯ ಪ್ರಾಂಶುಪಾಲ ಪುರುಷೋತ್ತಮ್ ಶರ್ಮಾ, ಮಧ್ಯವರ್ತಿಗಳಾದ ವಿಭೋರ್ ಆನಂದ್ ಮತ್ತು ಆರಿಫ್ ವೋಹ್ರಾ ಹಾಗೂ ವಡೋದರಾ ಮೂಲದ ಶಿಕ್ಷಣ ಸಲಹೆಗಾರ ಪರಶುರಾಮ್ ರಾಯ್ ಅವರನ್ನು ಈ ಪ್ರಕರಣದಲ್ಲಿ ಗೋಧ್ರಾ ಪೊಲೀಸರು ಈ ಮೊದಲು ಬಂಧಿಸಿದ್ದರು.

ಈ ಪೈಕಿ ಮೊದಲ ನಾಲ್ವರನ್ನು ವಿಚಾರಣೆ ಸಲುವಾಗಿ ಜುಲೈ 2ರವರೆಗೆ ಸಿಬಿಐ ಕಸ್ಟಡಿಗೆ ಪಡೆದಿದೆ. ಅಲ್ಲದೆ ಶನಿವಾರ ಹಿಂದಿ ಪತ್ರಿಕೆಯೊಂದರ ಪತ್ರಕರ್ತ ಜಮಾಲುದ್ದೀನ್ ಅನ್ಸಾರಿ ಅವರನ್ನು ಸಿಬಿಐ ಬಂಧಿಸಿತ್ತು.

## 'ಎಸ್‌ಎಸ್‌ಎಲ್‌ಸಿ ಪಾಸಾದವರಿಗೆ ಓದಲೂ, ಬರೆಯಲೂ ಬರಲ್ಲ'



ಸಾಜಿ ಚೆರಿಯನ್

ಆಳಪ್ಪುಳ (ಪಿಟಿಐ): ಕೇರಳದಲ್ಲಿನ ಶಿಕ್ಷಣ ವ್ಯವಸ್ಥೆಯ ಕುರಿತು ಮೀನುಗಾರಿಕೆ ಸಚಿವ ಸಾಜಿ ಚೆರಿಯನ್ ತೀಕ್ಷ್ಣ ಟೀಕೆ ಮಾಡಿದ್ದಾರೆ.

2023–24ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಫಲಿತಾಂಶವು ಕಳೆದ ತಿಂಗಳು ಪ್ರಕಟಗೊಂಡಿದ್ದು, ಶೇ 99.69ರಷ್ಟು ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ್ದರು.

ಈ ಬಗ್ಗೆ ಶನಿವಾರ ನಡೆದ ಕಾರ್ಯಕ್ರಮವೊಂದರಲ್ಲಿ ಪ್ರತಿಕ್ರಿಯಿಸಿರುವ ಸಚಿವ ಚೆರಿಯನ್, 'ಎಸ್‌ಎಸ್‌ಎಲ್‌ಸಿ ಪರೀಕ್ಷೆಯನ್ನು ಪಾಸು ಮಾಡುವ ಎಷ್ಟೋ ವಿದ್ಯಾರ್ಥಿಗಳಿಗೆ ಕನಿಷ್ಠ ಓದುವ, ಬರೆಯುವ ಕೌಶಲವೂ ಇರುವುದಿಲ್ಲ. ಹಿಂದೆಲ್ಲಾ 210 ಅಂಕ ಪಡೆದು, ಪಾಸಾಗುವುದಕ್ಕೂ ಕಷ್ಟವಿತ್ತು. ಆದರೆ, ಈಗ ಎಲ್ಲರೂ ಸುಲಭವಾಗಿ ಪಾಸಾಗುತ್ತಿದ್ದಾರೆ' ಎಂದು ತಿಳಿಸಿದರು.

## ಮಹಾರಾಷ್ಟ್ರಕ್ಕೆ ಮೊದಲ ಮಹಿಳಾ ಸಿ.ಎಸ್

ಪ್ರಜಾವಾಣಿ ವಾರ್ತೆ



ಸುಜಾತಾ ಸೌನಿಕ್

ಮುಂಬೈ: ಮಹಾರಾಷ್ಟ್ರದಲ್ಲಿ ಇದೇ ಮೊದಲ ಬಾರಿಗೆ ಮಹಿಳೆಯೊಬ್ಬರು ಮುಖ್ಯ ಕಾರ್ಯದರ್ಶಿ ಹುದ್ದೆ ಅಲಂಕರಿಸಿದ್ದಾರೆ.

ನೇರ ಹಾಗೂ ಸಂವೇದನಾಶೀಲ ವ್ಯಕ್ತಿತ್ವದ ಐಎಎಸ್ ಅಧಿಕಾರಿ ಸುಜಾತಾ ಸೌನಿಕ್ ಅವರು ಮಹಾರಾಷ್ಟ್ರದ 45ನೇ ಮುಖ್ಯ ಕಾರ್ಯದರ್ಶಿಯಾಗಿ ನೇಮಕವಾಗಿದ್ದಾರೆ.

ಸುಜಾತಾ ಅವರು 1987ನೇ ಬ್ಯಾಚ್‌ನ ಅಧಿಕಾರಿ. ನಿತಿನ್ ಕರೀರ್ ಅವರು ಈ ಹಿಂದೆ ಮುಖ್ಯ ಕಾರ್ಯದರ್ಶಿಯಾಗಿದ್ದರು. ಇವರ ನಿವೃತ್ತಿಯ ಬಳಿಕ ಸುಜಾತಾ ಅವರ ನೇಮಕವಾಗಿದೆ. ಮುಖ್ಯ ಕಾರ್ಯದರ್ಶಿ ಹುದ್ದೆಗೆ ನೇಮಕವಾಗುವ ಮೊದಲು ಸುಜಾತಾ ಅವರು ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಿದ್ದರು.

# ಕೇದಾರನಾಥ ಧಾಮ: ಹಿಮಕುಸಿತ

ರುದ್ರಪ್ರಯಾಗ್ (ಪಿಟಿಐ): ಕೇದಾರನಾಥ ಧಾಮದಿಂದ ನಾಲ್ಕು ಕಿ.ಮೀ ಎತ್ತರದಲ್ಲಿರುವ ಗಾಂಧಿ ಸರೋವರಕ್ಕೆ ಭಾನುವಾರ ಮುಂಜಾನೆ ಭಾರಿ ಹಿಮಕುಸಿತ ಅಪ್ಪಳಿಸಿದೆ. ಚೋರಬರಿ ಹಿಮನದಿ ಬಳಿ ಇದು ಸಂಭವಿಸಿದ್ದು, ಯಾವುದೇ ಹಾನಿಯಾಗಿಲ್ಲ ಎಂದು ಅಧಿಕಾರಿಗಳು ಹೇಳಿದ್ದಾರೆ.

ಭಾನುವಾರ ಬೆಳಗಿನ ಜಾವ 5 ಗಂಟೆ ಸುಮಾರಿಗೆ ಈ ನೈಸರ್ಗಿಕ ವಿದ್ಯಮಾನ ಸಂಭವಿಸಿದೆ. ಕೇದಾರನಾಥ ದೇಗುಲಕ್ಕೆ ಭೇಟಿ ನೀಡಿದ್ದ ಭಕ್ತರು ಈ ವಿದ್ಯಮಾನವನ್ನು ತಮ್ಮ ಮೊಬೈಲ್‌ನಲ್ಲಿ ಸೆರೆಹಿಡಿದಿದ್ದಾರೆ.

ಭಾರಿ ಗಾತ್ರದ ಹಿಮ ವೇಗವಾಗಿ ಜಾರಿ, ಆಳವಾದ ಕಂದಕಕ್ಕೆ ಬಿದ್ದಿದೆ. ಕೇದಾರನಾಥ ಕಣಿವೆಗೆ ಯಾವುದೇ ಹಾನಿಯಾಗಿಲ್ಲ, ಇಡೀ ಪ್ರದೇಶ ಸುರಕ್ಷಿತವಾಗಿದೆ ಎಂದು ರುದ್ರಪ್ರಯಾಗದ ಜಿಲ್ಲಾ ವಿಪತ್ತು ನಿರ್ವಹಣಾ ಅಧಿಕಾರಿ ನಂದನ್ ಸಿಂಗ್ ರಾಜ್ವರ್ ಮಾಹಿತಿ ನೀಡಿದ್ದಾರೆ.

ಸುಮಾರು ಐದು ನಿಮಿಷ ನಡೆದ ಈ ನೈಸರ್ಗಿಕ ವಿದ್ಯಮಾನವನ್ನು ಭಕ್ತರು ಆತಂಕ ಮತ್ತು ಕುತೂಹಲದಿಂದ ವೀಕ್ಷಿಸಿದರು. ಜೂನ್ 8ರಂದು ಚೋರಬರಿ ಹಿಮನದಿಯಲ್ಲಿ ಇಂಥದ್ದೇ ಹಿಮಕುಸಿತ ಸಂಭವಿಸಿತ್ತು ಎಂದು ಗರ್ವಾಲ್ ಮಂಡಲ್ ಅಭಿವೃದ್ಧಿ ನಿಗಮದ ಸಿಬ್ಬಂದಿ ಗೋಪಾಲ್ ಸಿಂಗ್ ರೌಥನ್ ಪ್ರತಿಕ್ರಿಯಿಸಿದ್ದಾರೆ.



ಕೇದಾರನಾಥ ಧಾಮದ ಸಮೀಪ ಭಾನುವಾರ ಬೆಳಿಗ್ಗೆ ಸಂಭವಿಸಿದ ಭಾರಿ ಹಿಮಕುಸಿತವನ್ನು ಭಕ್ತರು ಕುತೂಹಲದಿಂದ ವೀಕ್ಷಿಸಿದರು –ಪಿಟಿಐ ಚಿತ್ರ

2022ರ ಸೆಪ್ಟೆಂಬರ್ ಮತ್ತು ಅಕ್ಟೋಬರ್‌ನಲ್ಲಿ ಈ ಪ್ರದೇಶದಲ್ಲಿ ಮೂರು ಬಾರಿ ಹಿಮಕುಸಿತ ಸಂಭವಿಸಿತ್ತು. 2023ರ ಮೇ ಮತ್ತು ಜೂನ್‌ನಲ್ಲಿ ಐದು ಬಾರಿ ಹಿಮಕುಸಿತ ಸಂಭವಿಸಿದ ವರದಿಗಳಾಗಿವೆ. ಆ ಬಳಿಕ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ರಿಮೋಟ್ ಸೆನ್ಸಿಂಗ್ ಮತ್ತು ವಾಡಿಯಾ ಇನ್‌ಸ್ಟಿಟ್ಯೂಟ್‌ನ ವಿಜ್ಞಾನಿಗಳ ತಂಡ ಈ ಪ್ರದೇಶದ ಭೂ ಮತ್ತು ವೈಮಾನಿಕ ಸಮೀಕ್ಷೆ ನಡೆಸಿತ್ತು.

ವಿಜ್ಞಾನಿಗಳ ತಂಡದ ಪ್ರಕಾರ ಹಿಮಾಲಯ ಪ್ರದೇಶದಲ್ಲಿ ಈ ರೀತಿಯ ಘಟನೆ ಸಾಮಾನ್ಯ. ಆದರೆ ಕೇದಾರನಾಥ ಧಾಮದಲ್ಲಿ ಸುರಕ್ಷತೆ ಮತ್ತು ಭದ್ರತೆಯನ್ನು ಇನ್ನಷ್ಟು ಸುಧಾರಿಸಬೇಕಿದೆ ಎಂದು ತಂಡ ತಿಳಿಸಿತ್ತು.

# ವಿದ್ಯುತ್ ಬಿಲ್ ಪಾವತಿಗೆ ₹5,257 ಕೋಟಿ ಸಾಲ

ಒಂದನೇ ಪುಟದಿಂದ...

ಅಲ್ಲದೆ, ಹೀಗೆ ಪಾವತಿಸಿದ ಮೊತ್ತವನ್ನು ಗ್ರಾಮ ಪಂಚಾಯಿತಿಗಳ ವಾರ್ಷಿಕ ಅನುದಾನದಲ್ಲಿ ಅಥವಾ ಇಂತಹ ಅಗತ್ಯಗಳಿಗಾಗಿ ಸ್ಥಾಪಿಸಲಾದ ಗ್ಯಾರಂಟಿ ವಿಮೋಚನಾ ನಿಧಿಯಿಂದ ಹೊಂದಿಸಲು ಆರ್ಥಿಕ ಇಲಾಖೆ ಸಹಮತಿ ನೀಡಿದೆ.

ಬ್ಯಾಂಕ್ ಅಥವಾ ಇತರ ಹಣಕಾಸು ಸಂಸ್ಥೆಗಳಿಂದ ₹5,257.70 ಕೋಟಿ ಸಾಲ ಪಡೆಯಲು ಪವರ್ ಕಂಪನಿ ಆಫ್ ಕರ್ನಾಟಕ ಲಿಮಿಟೆಡ್ (ಪಿಸಿಕೆಎಲ್) ಸಂಸ್ಥೆಯನ್ನು ನೋಡಲ್ ಏಜೆನ್ಸಿಯಾಗಿ ಸರ್ಕಾರ ನೇಮಿಸಿತ್ತು. ಸಾಲ ಮರುಪಾವತಿವರೆಗೆ ವಾರ್ಷಿಕವಾಗಿ ಕಟ್ಟಬೇಕಾದ ಅಸಲು ಮತ್ತು ಬಡ್ಡಿ ಮೊತ್ತವನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಬಜೆಟ್‌ನಲ್ಲಿಯೇ ಒದಗಿಸಬೇಕು ಎಂದೂ ಆದೇಶಿಸಿದೆ.

ಬಿಡ್ ಪ್ರಕ್ರಿಯೆ ಅಂತಿಮಗೊಂಡ ಬಳಿಕ ಹುಡ್ಕೊದಿಂದ ದೀರ್ಘಾವಧಿಗೆ ಸಾಲ ಪಡೆಯಲು ಪಿಸಿಕೆಎಲ್‌ಗೆ ಸರ್ಕಾರ ಅನುಮತಿ ನೀಡಿತ್ತು. ಈ ಸಂಬಂಧ ಎಲ್ಲ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿ ಮೇ 28ರಂದು ಸಾಲ ಮಂಜೂರಾತಿ ಪತ್ರ ನೀಡಿದ್ದ ಹುಡ್ಕೊ, ಜೂನ್ 19ರಂದು ಪಿಸಿಕೆಎಲ್ ಖಾತೆಗೆ ಹಣ ಜಮೆ ಮಾಡಿದೆ.

'ವಿದ್ಯುತ್ ಪೂರೈಕೆ ಕಂಪನಿ ಮತ್ತು ನಿಗಮಗಳು ಸರ್ಕಾರಕ್ಕೆ ಸಲ್ಲಿಸಿದ ಬಾಕಿ ಮೊತ್ತದ ಮಾಹಿತಿಗೆ ಅನುಗುಣವಾಗಿ, ಆಯಾ ಕಂಪನಿಗಳ ಹಳೆ ಸಾಲದ ಮರು ಪಾವತಿಗೆ ಹುಡ್ಕೊದಿಂದ ಪಡೆದ ಸಾಲವನ್ನು ಬಳಸಿಕೊಳ್ಳಬೇಕು. ಈ ಬಗ್ಗೆ ಸರ್ಕಾರಕ್ಕೆ ವರದಿ ಸಲ್ಲಿಸಬೇಕು' ಎಂಬ ಷರತ್ತು ವಿಧಿಸಿ ಜೂನ್ 21ರಂದು ಪ್ರಸ್ತಾವಕ್ಕೆ ಇಂಧನ ಸಚಿವ ಕೆ.ಜೆ.ಜಾರ್ಜ್ ಅವರು ಅನುಮೋದನೆ ನೀಡಿದ್ದಾರೆ.

**ಬಿಡ್‌ನಲ್ಲಿ ಮೂರು ಹಣಕಾಸು ಸಂಸ್ಥೆಗಳು ಭಾಗಿ:** ರಾಜ್ಯ ಸರ್ಕಾರದ ನಿರ್ದೇಶನದಂತೆ ₹5,257.70 ಕೋಟಿ ಸಾಲ ಪಡೆಯಲು ಬ್ಯಾಂಕುಗಳು ಮತ್ತು ಹಣಕಾಸು ಸಂಸ್ಥೆಗಳ ಪ್ರತಿನಿಧಿಗಳ ಜೊತೆ ಪಿಸಿಕೆಎಲ್ ಸಭೆ ನಡೆಸಿತ್ತು. ಅಲ್ಲದೆ, ಎಲ್ಲ ಎಸ್ಕಾಂಗಳಿಗೆ ಪತ್ರ ಬರೆದು 2023ರ ಮಾರ್ಚ್ 31ರವರೆಗೆ ಗ್ರಾಮ ಪಂಚಾಯಿತಿವಾರು ವಿದ್ಯುತ್ ಬಿಲ್ ಬಾಕಿಯ ಮಾಹಿತಿ ನೀಡುವಂತೆ ಕೂಡಾ ತಿಳಿಸಿತ್ತು.

ಸಾಲ ಪಡೆಯಲು ಆಹ್ವಾನಿಸಿದ್ದ ಬಿಡ್‌ನಲ್ಲಿ ಯುಕೊ ಬ್ಯಾಂಕ್, ಹುಡ್ಕೊ ಮತ್ತು ಆರ್‌ಇಸಿ (ರೂರಲ್ ಎಲೆಕ್ಟ್ರಿಫಿಕೇಶನ್ ಕಾರ್ಪೊರೇಷನ್) ಭಾಗವಹಿಸಿದ್ದವು. ಯುಕೊ ಬ್ಯಾಂಕ್ ₹500 ಕೋಟಿ ಸಾಲವನ್ನು ವಾರ್ಷಿಕ ಶೇ 8.85 ಬಡ್ಡಿ ದರದಲ್ಲಿ ನೀಡುವುದಾಗಿ ಭರವಸೆ ನೀಡಿದರೆ, ₹5,257.70 ಕೋಟಿ ಸಾಲವನ್ನು ಹುಡ್ಕೊ ಶೇ 8.99 ಬಡ್ಡಿ ದರದಲ್ಲಿ ಮತ್ತು ಆರ್‌ಇಸಿ ಶೇ 9.15 ಬಡ್ಡಿ ದರದಲ್ಲಿ ನೀಡಲು ಮುಂದೆ ಬಂದಿತ್ತು. ಯುಕೊ ಮತ್ತು ಹುಡ್ಕೊ ಎಲ್ಲ ಶುಲ್ಕಗಳನ್ನು (ಅರ್ಜಿ ಶುಲ್ಕ, ಸಂಸ್ಕರಣಾ ಶುಲ್ಕ, ಸೇವಾ ಶುಲ್ಕ, ಸ್ಟ್ಯಾಂಪ್ ಡ್ಯೂಟಿ, ವಾರ್ಷಿಕ ಪರಿಶೀಲನಾ ಶುಲ್ಕ ಇತ್ಯಾದಿ) ಮನ್ನಾ ಮಾಡುವುದಾಗಿಯೂ ತಿಳಿಸಿತ್ತು.

'ಬಡ್ಡಿಯನ್ನು ಕಡಿಮೆ ಮಾಡುವ ಕುರಿತಂತೆ ಈ ಮೂರೂ ಬಿಡ್‌ದಾರರ ಜೊತೆ ಇಂಧನ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯ ನೇತೃತ್ವದಲ್ಲಿ ನಡೆದ ಮಾತುಕತೆಯ ಬಳಿಕ ಶೇ 8.75 (ವಾರ್ಷಿಕ) ಬಡ್ಡಿ ದರದಲ್ಲಿ ಸಾಲ ನೀಡಲು ಹುಡ್ಕೊ ಒಪ್ಪಿತ್ತು. ಹೀಗಾಗಿ, ಹುಡ್ಕೊದಿಂದ ಸಾಲ ಪಡೆಯಲಾಗಿದೆ. ಈ ಸಾಲವನ್ನು ವಿದ್ಯುತ್ ಸರಬರಾಜು ಕಂಪನಿಗಳ ಬಾಕಿ ಹಣವನ್ನು ಪಾವತಿಸಲು ವರ್ಗಾವಣೆ ಮಾಡಲಾಗುವುದು' ಎಂದು ಇಂಧನ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಈ ಬಗ್ಗೆ ಪ್ರತಿಕ್ರಿಯೆ ಪಡೆಯಲು ಇಂಧನ ಸಚಿವ ಕೆ.ಜೆ. ಜಾರ್ಜ್ ಅವರಿಗೆ ಕರೆ ಮಾಡಿದರೂ, ಅವರು ಸಂಪರ್ಕಕ್ಕೆ ಲಭ್ಯರಾಗಲಿಲ್ಲ.

### ಹುಡ್ಕೊ ಷರತ್ತುಗಳೇನು?

- ಸಾಲಗಳಿಗೆ ಹುಡ್ಕೊ ಸದ್ಯ ಶೇ 10.45 ಬಡ್ಡಿ ದರ ವಿಧಿಸುತ್ತಿದೆ. ರಾಜ್ಯ ಸರ್ಕಾರಕ್ಕೆ ಶೇ 1.45ರಷ್ಟು ಕಡಿತಗೊಳಿಸಿ ಮತ್ತು ಸಾಲಕ್ಕೆ ಸರ್ಕಾರವೇ ಖಾತ್ರಿ ಕಾರಣಕ್ಕೆ ಶೇ 0.25ರಷ್ಟು ರಿಯಾಯಿತಿ ನೀಡಿ ಶೇ 8.75 ಬಡ್ಡಿ ದರದಲ್ಲಿ ಸಾಲ ನೀಡಲಾಗುತ್ತದೆ.
- ಸಾಲದ ಮೇಲಿನ ಬಡ್ಡಿಯನ್ನು ಪ್ರತಿ ತಿಂಗಳು, ಅಸಲು ಮೊತ್ತವನ್ನು ಮೂರು ತಿಂಗಳಿಗೊಮ್ಮೆ ಪಾವತಿಸಬೇಕು
- ಸಾಲ ಮರುಪಾವತಿ ಅವಧಿ 10 ವರ್ಷ (2 ವರ್ಷ ಮೊರಟೋರಿಯಂ, 8 ವರ್ಷ ಮರುಪಾವತಿ ಅವಧಿ)
- ಸಾಲದ ಭದ್ರತೆಗೆ ರಾಜ್ಯ ಸರ್ಕಾರದಿಂದ ಖಾತ್ರಿ

# 'ಮಹಾರಾಷ್ಟ್ರ: ವಿರೋಧ ಪಕ್ಷಗಳ ಜಂಟಿ ಸ್ಪರ್ಧೆ'

ಪುಣೆ (ಪಿಟಿಐ): ಪ್ರಸಕ್ತ ಸಾಲಿನ ಅಕ್ಟೋಬರ್‌ನಲ್ಲಿ ನಡೆಯಲಿರುವ ಮಹಾರಾಷ್ಟ್ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್, ಉದ್ಧವ್ ಠಾಕ್ರೆ ನೇತೃತ್ವದ ಶಿವಸೇನಾ (ಯುಬಿಟಿ) ಮತ್ತು ತಮ್ಮ ಪಕ್ಷ ಜಂಟಿಯಾಗಿ ಸ್ಪರ್ಧಿಸಲಿವೆ ಎಂದು ಎನ್‌ಸಿಪಿ (ಎಸ್‌ಪಿ) ಮುಖ್ಯಸ್ಥ ಶರದ್ ಪವಾರ್ ಭಾನುವಾರ ಹೇಳಿದರು.

'2024ರ ಲೋಕಸಭಾ ಚುನಾವಣೆಯಲ್ಲಿ ನಮ್ಮ ಮೈತ್ರಿಕೂಟದ ಭಾಗವಾಗಿದ್ದ ಸಣ್ಣ ಮಿತ್ರ ಪಕ್ಷಗಳ ಹಿತಾಸಕ್ತಿಗಳನ್ನು ವಿಧಾನಸಭಾ ಚುನಾವಣೆಯಲ್ಲಿ ಕಾಪಾಡುವುದು ನಮ್ಮ ನೈತಿಕ ಜವಾಬ್ದಾರಿಯಾಗಿದೆ' ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

ರಾಜ್ಯದಲ್ಲಿ ಬದಲಾವಣೆಯ ಅಗತ್ಯವಿದ್ದು, ಅದನ್ನು ನಿಭಾಯಿಸುವುದು ವಿರೋಧ ಪಕ್ಷಗಳ ಒಕ್ಕೂಟದ ನೈತಿಕ ಹೊಣೆಯಾಗಿದೆ ಎಂದು ಅವರು ಹೇಳಿದರು.



ಶರದ್ ಪವಾರ್

'ಅರ್ಜುನನ ಗುರಿ (ಮಹಾಭಾರತ ಮಹಾಕಾವ್ಯದಲ್ಲಿ) ಹೇಗೆ ಮೀನಿನ ಒಂದು ಕಣ್ಣಿನ ಮೇಲಿತ್ತೋ, ಹಾಗೆ ನಮ್ಮ ಕಣ್ಣುಗಳು ಮಹಾರಾಷ್ಟ್ರದ ವಿಧಾನಸಭಾ ಚುನಾವಣೆಯತ್ತ ನೆಟ್ಟಿವೆ. ಕಾಂಗ್ರೆಸ್, ಎನ್‌ಸಿಪಿ (ಎಸ್‌ಪಿ) ಮತ್ತು ಉದ್ಧವ್ ಠಾಕ್ರೆ ಅವರ ಶಿವಸೇನಾ (ಯುಬಿಟಿ) ಜಂಟಿಯಾಗಿ ಈ ಚುನಾವಣೆಯಲ್ಲಿ ಸ್ಪರ್ಧೆ ಮಾಡಲಿವೆ' ಎಂದು ಅವರು ಪ್ರತಿಕ್ರಿಯಿಸಿದರು.

ಸೀಟು ಹಂಚಿಕೆ ಕುರಿತು ಇನ್ನೂ ಮಾತುಕತೆಗೆ ಚಾಲನೆ ದೊರೆತಿಲ್ಲ. ಶೀಘ್ರದಲ್ಲಿಯೇ ಅದು ಆರಂಭವಾಗುತ್ತದೆ. 2024ರ ಲೋಕಸಭಾ ಚುನಾವಣೆಯಲ್ಲಿ ರಾಜ್ಯದ ಜನರು ನಮ್ಮ ಮೈತ್ರಿಕೂಟಕ್ಕೆ ಬೆಂಬಲ ನೀಡಿದ್ದಾರೆ. ಈ ಮೂರು ಪಕ್ಷಗಳ ಜತೆ ಎಡಪಕ್ಷಗಳು, ರೈತರು ಮತ್ತು ಕಾರ್ಮಿಕ ಪಕ್ಷ (ಪಿಡಬ್ಲ್ಯುಪಿ) ಸಹ ಒಕ್ಕೂಟದ ಭಾಗವಾಗಿದ್ದವು. ಅವರಿಗೆ ಲೋಕಸಭಾ ಚುನಾವಣೆಯಲ್ಲಿ ಸ್ಥಾನಗಳನ್ನು ನೀಡಲು ಸಾಧ್ಯವಾಗಿರಲಿಲ್ಲ. ಈ ಬಾರಿ ಅವುಗಳ ಹಿತಾಸಕ್ತಿಯನ್ನು ಕಾಪಾಡಬೇಕಿದೆ ಎಂದು ಅವರು ಉತ್ತರಿಸಿದರು.

## ಸ್ವಚ್ಛ ವಾರ್ಡ್‌ಗೆ ₹1 ಕೋಟಿ ಬಹುಮಾನ

ಗುರುಗ್ರಾಮ (ಪಿಟಿಐ): 'ನಿಮ್ಮ ವಾರ್ಡ್ ಸ್ವಚ್ಛವಾಗಿದೆಯೇ?' ಹಾಗಾದರೆ, ಆ ವಾರ್ಡ್ ಅಭಿವೃದ್ಧಿಗಾಗಿ ₹1 ಕೋಟಿ ಸಿಗಲಿದೆ. ನಗರದ ಸ್ವಚ್ಛತೆಗೆ ಆದ್ಯತೆ ನೀಡುವ ಸಲುವಾಗಿ ಬಹುಮಾನ ನೀಡುವ ಕ್ರಮವನ್ನು ಇಲ್ಲಿನ ವಿಭಾಗೀಯ ಆಯುಕ್ತ ಆರ್.ಸಿ. ವಿಧಾನ್ ಅವರು ಕೈಗೊಂಡಿದ್ದಾರೆ. ಸತತವಾಗಿ ಎರಡು ತಿಂಗಳು ಸ್ವಚ್ಛತೆ ಕಾಪಾಡಿಕೊಳ್ಳುವ ವಾರ್ಡ್‌ವೊಂದಕ್ಕೆ ತಿಂಗಳಿಗೆ ₹1 ಕೋಟಿ ನೀಡುವುದಾಗಿ ವಿಧಾನ್ ಘೋಷಿಸಿದ್ದಾರೆ.

'ತಿಂಗಳಮಟ್ಟಿಗೆ ವಾರ್ಡ್‌ವೊಂದು ಸ್ವಚ್ಛತೆ ಕಾಪಾಡಿಕೊಂಡಿದ್ದರೆ ಅಂಥ ವಾರ್ಡ್‌ಗೆ ₹50 ಲಕ್ಷ ನೀಡಲಾಗುವುದು. ಸ್ವಚ್ಛತೆಯ ಪರಿಶೀಲನೆಯನ್ನು ಸರ್ಕಾರದ ಅಡಿಯಲ್ಲಿ ಬರದ, ಸ್ವತಂತ್ರ ಸಂಸ್ಥೆಯೊಂದು ನಡೆಸಲಿದೆ' ಎಂದು ವಿಧಾನ್ ಹೇಳಿದ್ದಾರೆ. ನಗರದ ಸ್ವಚ್ಛತೆ ಕುರಿತು ಪರಿಶೀಲನಾ ಸಭೆ ನಡೆಸುತ್ತಿದ್ದ ವೇಳೆ ಈ ಘೋಷಣೆ ಮಾಡಿದ್ದಾರೆ.

'ಕಸ ಸಂಗ್ರಹದ ಕುರಿತು ಅಧಿಕಾರಿಗಳು ಕಾಲಕಾಲಕ್ಕೆ ಮನೆ ಮನೆಗೆ ತೆರಳಿ ನಿಗಾ ಇರಿಸಬೇಕು' ಎಂದೂ ನಿರ್ದೇಶನ ನೀಡಿದರು.



**ಸೇತುವೆ ಕುಸಿತ...** ಜಾರ್ಖಂಡ್‌ನ ಗಿರಿಡೀಹ್ ಜಿಲ್ಲೆಯಲ್ಲಿ ನಿರ್ಮಾಣ ಹಂತದಲ್ಲಿದ್ದ ಸೇತುವೆಯೊಂದು ಭಾನುವಾರ ಕುಸಿದಿದೆ –ಪಿಟಿಐ ಚಿತ್ರ

## 'ದೇಶದಲ್ಲಿ ವಿಶ್ವದ ಅತಿ ದೊಡ್ಡ ವಸ್ತುಸಂಗ್ರಹಾಲಯ'

ಜೋಧಪುರ (ಪಿಟಿಐ): 'ಭಾರತದ 5 ಸಾವಿರ ವರ್ಷಗಳ ಇತಿಹಾಸವನ್ನು ಸಾರುವ ವಿಶ್ವದ ಅತಿ ದೊಡ್ಡ ವಸ್ತುಸಂಗ್ರಹಾಲಯವನ್ನು 2025ರ ಒಳಗೆ ನಿರ್ಮಿಸಲಾಗುವುದು. ಈ ಬಗ್ಗೆ ಭಾರತ ಹಾಗೂ ಫ್ರಾನ್ಸ್ ನಡುವೆ ಒಪ್ಪಂದ ಏರ್ಪಟ್ಟಿದೆ' ಎಂದು ಪ್ರವಾಸೋದ್ಯಮ ಹಾಗೂ ಸಂಸ್ಕೃತಿ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಅವರು ಭಾನುವಾರ ಹೇಳಿದರು.

'ಫ್ರಾನ್ಸ್‌ನಲ್ಲಿರುವ ಲೂವರ್ ವಸ್ತುಸಂಗ್ರಹಾಲಯವು ವಿಶ್ವದ ಅತಿ ದೊಡ್ಡ ವಸ್ತುಸಂಗ್ರಹಾಲಯವಾಗಿದೆ. ಇದಕ್ಕೂ ಎರಡು ಪಟ್ಟು ವಿಸ್ತಾರವಾದುದ್ದನ್ನು ಭಾರತದಲ್ಲಿ ನಿರ್ಮಿಸಲಾಗುವುದು. ಸೆಂಟ್ರಲ್‌ವಿಸ್ತಾ ಮರುಅಭಿವೃದ್ಧಿ ಕಾರ್ಯವು ಮುಕ್ತಾಯಗೊಂಡ ಬಳಿಕ, ದೆಹಲಿಯ ರಯಸೀನಾ ಹಿಲ್ಸ್‌ನಲ್ಲಿರುವ ಉತ್ತರ ಹಾಗೂ ದಕ್ಷಿಣ ಬ್ಲಾಕ್‌ಗಳನ್ನು ವಸ್ತುಸಂಗ್ರಹಾಲಯವನ್ನಾಗಿ ನಿರ್ಮಿಸಲಾಗುವುದು' ಎಂದು ಸಚಿವ ಶೇಖಾವತ್ ತಿಳಿಸಿದರು.

# ಬಿಜೆಪಿ ಮುಖಂಡನ ಬೆದರಿಕೆ ಹಾಸ್ಯ ಕಾರ್ಯಕ್ರಮ ರದ್ದು

ಹೈದರಾಬಾದ್ (ಪಿಟಿಐ): ಬಿಜೆಪಿಯ ಶಾಸಕ ರಾಜಾ ಸಿಂಗ್ ಅವರ ಬೆದರಿಕೆಯ ಕಾರಣದಿಂದಾಗಿ ಶನಿವಾರ ಇಲ್ಲಿ ನಿಗದಿಯಾಗಿದ್ದ ಡೇನಿಯಲ್ ಫರ್ನಾಂಡೀಸ್ ಅವರ 'ಸ್ಟಾಂಡ್ ಅಪ್ ಕಾಮಿಡಿ' ಕಾರ್ಯಕ್ರಮ ರದ್ದುಗೊಂಡಿದೆ.



ರಾಜಾ ಸಿಂಗ್

ಈ ಹಿಂದೆ ಹಾಸ್ಯ ಕಾರ್ಯಕ್ರಮ ನಡೆಸಿಕೊಟ್ಟಿದ್ದ ಫರ್ನಾಂಡೀಸ್, ಜೈನ ಸಮುದಾಯದ ಕುರಿತು ಅಪಹಾಸ್ಯ ಮಾಡಿದ್ದಾರೆ ಎಂದು ಆರೋಪಿಸಿದ್ದ ಬಿಜೆಪಿ ಶಾಸಕ ರಾಜಾ ಸಿಂಗ್, ಈ ಹಾಸ್ಯ ಕಾರ್ಯಕ್ರಮ ರದ್ದುಗೊಳಿಸಬೇಕು. ಇಲ್ಲದಿದ್ದರೆ, ಪರಿಣಾಮ ಎದುರಿಸಬೇಕಾಗುತ್ತದೆ ಎಂದು ಎಚ್ಚರಿಸಿದ್ದರು.

ಈ ಕುರಿತು ಸಾಮಾಜಿಕ ಮಾಧ್ಯಮಗಳಲ್ಲಿ ವಿಡಿಯೊ ಸಂದೇಶ ನೀಡಿರುವ ಕಲಾವಿದ ಫರ್ನಾಂಡೀಸ್, 'ನನ್ನ ಹಿಂದಿನ ಕಾರ್ಯಕ್ರಮದಲ್ಲಿ ನೀಡಿದ ಹೇಳಿಕೆಯು ಅಶಾಂತಿ ಸೃಷ್ಟಿಸಿದೆ. ಹೀಗಾಗಿ ಹೈದರಾಬಾದ್‌ನಲ್ಲಿ ನಡೆಯಬೇಕಿದ್ದ ಕಾರ್ಯಕ್ರಮವನ್ನು ರದ್ದುಗೊಳಿಸಲಾಗಿದೆ. ಕಾರ್ಯಕ್ರಮ ಮರು ನಿಗದಿ ಮಾಡಲಾಗುವುದು' ಎಂದು ತಿಳಿಸಿದ್ದಾರೆ.

'ನಾನು ನೀಡಿದ್ದ ಅವಹೇಳನಕಾರಿ ಹೇಳಿಕೆ ಇದ್ದ ವಿಡಿಯೊವನ್ನು ತೆಗೆದುಹಾಕಲಾಗಿದೆ. ಜೊತೆಗೆ ಈ ಕುರಿತು ಕ್ಷಮಾಪಣೆಯನ್ನೂ ಕೇಳಿದ್ದೇನೆ. ಆದರೆ, ನಮಗೆ ಈಗಲೂ ಬೆದರಿಕೆ ಕರೆಗಳು, ಇ-ಮೇಲ್ ಮತ್ತು ಸಂದೇಶಗಳು ಬರುತ್ತಿವೆ. ಯಾರು ಸಹ ನನ್ನ ಪ್ರೇಕ್ಷಕರಿಗೆ ಭದ್ರತೆ ಖಾತ್ರಿ ಒದಗಿಸಲು ಸಿದ್ಧರಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

ಈ ಕುರಿತು ಹೇಳಿಕೆ ನೀಡಿದ್ದ ಬಿಜೆಪಿ ಮುಖಂಡ ರಾಜಾ ಸಿಂಗ್, 'ಡೇನಿಯಲ್ ಫರ್ನಾಂಡೀಸ್ ತಮ್ಮ ಕಾರ್ಯಕ್ರಮ ರದ್ದುಗೊಳಿಸಬೇಕು. ಇಲ್ಲದಿದ್ದರೆ, ಕಾರ್ಯಕರ್ತರ ಆಕ್ರೋಶಕ್ಕೆ ಗುರಿಯಾಗಬೇಕಾಗುತ್ತದೆ. ಆಕ್ರೋಶ ಹೇಗಿರಲಿದೆ ಎಂದರೆ, ಹೈದರಾಬಾದ್ ಮತ್ತು ತೆಲಂಗಾಣಕ್ಕೆ ಹೆಜ್ಜೆ ಇಡಲು 50 ಬಾರಿ ಯೋಚಿಸಬೇಕಾಗಬಹುದು. ಹೀಗಾಗಿ, ಈ ಕಾರ್ಯಕ್ರಮವನ್ನು ಪೊಲೀಸ್ ಆಯುಕ್ತರು ರದ್ದುಪಡಿಸಬೇಕು. ಇಲ್ಲದಿದ್ದರೆ, ಜೈನ ಸಮುದಾಯ ಅಥವಾ ಹಿಂದೂ ಧರ್ಮದ ಬಗ್ಗೆ ತಮಾಷೆ ಮಾಡುವವರಿಗೆ ನಾವೇನು ಮಾಡುತ್ತೇವೆ ಎಂಬುದನ್ನು ಇತಿಹಾಸ ನೆನಪಿಡಲಿದೆ' ಎಂದಿದ್ದರು.

### ಮುಖ್ಯಾಂಶಗಳು

- ಜೈನ ಧರ್ಮದ ಕುರಿತು ಅಪಹಾಸ್ಯ ಮಾಡಿದ ಹಾಸ್ಯ ಕಲಾವಿದ ಫರ್ನಾಂಡಿಸ್
- ಬಿಜೆಪಿ ಶಾಸಕನಿಂದ ಬೆದರಿಕೆ ಹಿನ್ನೆಲೆ: ಕಾರ್ಯಕ್ರಮ ರದ್ದು

# ಮದ್ಯದ ದರ ಇಳಿಕೆಗೆ ತಾತ್ಕಾಲಿಕ ತಡೆ

ಒಂದನೇ ಪುಟದಿಂದ....

ವಿವಿಧ ರಾಜ್ಯಗಳಿಗೆ ಕಡಿಮೆ ಮೊತ್ತದ ಘೋಷಿತ ದರ ನಿಗದಿಪಡಿಸುವ ಮದ್ಯ ಉತ್ಪಾದನಾ ಕಂಪನಿಗಳು, ಕರ್ನಾಟಕದಲ್ಲಿ ಹೆಚ್ಚಿನ ಮೊತ್ತದ ಘೋಷಿತ ದರ ನಿಗದಿಪಡಿಸುತ್ತಿವೆ. ಇದಕ್ಕೆ ಕಡಿವಾಣ ಹಾಕಲು ಲೆಕ್ಕಪರಿಶೋಧಕರು ಮತ್ತು ವೆಚ್ಚ ಪರಿಶೋಧಕರ ಪ್ರಮಾಣಪತ್ರಗಳೊಂದಿಗೆ ಪ್ರತಿ ಬ್ರಾಂಡ್ ಮದ್ಯದ ಉತ್ಪಾದನಾ ವೆಚ್ಚಕ್ಕೆ ಸಂಬಂಧಿಸಿದ ಮಾಹಿತಿ ಹಂಚಿಕೊಳ್ಳುವುದನ್ನು ಕಡ್ಡಾಯಗೊಳಿಸಲು ಇಲಾಖೆ ಮುಂದಾಗಿತ್ತು.

'ಹೆಚ್ಚುವರಿ ಅಬಕಾರಿ ತೆರಿಗೆ ಇಳಿಸುವುದು ಸರ್ಕಾರದ ನಿರ್ಧಾರ. ಆದರೆ, ಉತ್ಪಾದನಾ ವೆಚ್ಚದ ಮಾಹಿತಿ ಹಂಚಿಕೊಳ್ಳಲಾಗದು ಎಂದು ಹಲವು ಉತ್ಪಾದಕರು ಆಕ್ಷೇಪಣೆ ಸಲ್ಲಿಸಿದ್ದಾರೆ. ಇದರಿಂದ ಭವಿಷ್ಯದಲ್ಲಿ ಕಾನೂನು ತೊಡಕುಂಟಾಗುವ ಸಾಧ್ಯತೆ ಇದೆ. ಆ ಬಗ್ಗೆ ಮತ್ತಷ್ಟು ಪರಿಶೀಲಿಸಲು ದರ ಇಳಿಕೆಯ ನಿರ್ಧಾರವನ್ನು ತಾತ್ಕಾಲಿಕವಾಗಿ ತಡೆ ಹಿಡಿಯಲಾಗಿದೆ' ಎಂದು ಹಣಕಾಸು ಇಲಾಖೆ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

ನೆರೆಯ ರಾಜ್ಯಗಳಲ್ಲಿನ ಮದ್ಯದ ದರಗಳಿಗೆ ಸಮಾನವಾಗಿ ರಾಜ್ಯದಲ್ಲೂ ಮದ್ಯದ ದರ ಇಳಿಸುವುದಾಗಿ ಬಜೆಟ್‌ನಲ್ಲಿ ಘೋಷಿಸಲಾಗಿತ್ತು. ಈಗ ಎದುರಾಗಿರುವ ತೊಡಕುಗಳ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ಚರ್ಚಿಸಿದ ಬಳಿಕ ಅಂತಿಮ ನಿರ್ಧಾರಕ್ಕೆ ಬರಲಾಗುವುದು ಎಂದು ಹಣಕಾಸು ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಘೋಷಿತ ದರ ನಿಗದಿಗೆ ಸಂಬಂಧಿಸಿದಂತೆ ಎಲ್ಲ ಮದ್ಯ ಉತ್ಪಾದನಾ ಕಂಪನಿಗಳ ಜತೆ ಮಾತುಕತೆ ನಡೆಸಲಾಗುವುದು. ಆ ಬಳಿಕ ಮದ್ಯದ ದರ ಇಳಿಕೆಯ ಕುರಿತು ಸ್ಪಷ್ಟ ನಿರ್ಧಾರ ಕೈಗೊಳ್ಳಲಾಗುವುದು ಎಂದು ಹೇಳಿದ್ದಾರೆ..

# ಇಂದಿನಿಂದ ಹೊಸ ಕಾನೂನು ಜಾರಿ

ಒಂದನೇ ಪುಟದಿಂದ..

ಇದೇ ವೇಳೆ, ಸಂವಿಧಾನದಲ್ಲಿ ಪ್ರತಿಪಾದಿಸಿರುವ ಆದರ್ಶಗಳನ್ನು ಗಮನದಲ್ಲಿಟ್ಟುಕೊಳ್ಳಲಾಗಿದೆ ಎಂದು ಮೂಲಗಳು ತಿಳಿಸಿವೆ.

ಜೀರೋ ಎಫ್‌ಐಆರ್, ಆನ್‌ಲೈನ್ ಮೂಲಕ ದೂರು ಸಲ್ಲಿಕೆಗೆ ಅವಕಾಶ, ಎಸ್‌ಎಂಎಸ್ ಮೂಲಕ ಸಮನ್ಸ್ ಕಳುಹಿಸುವುದು ಮತ್ತು ಹೇಯ ಅಪರಾಧ ನಡೆದಾಗ ಆ ಸ್ಥಳದ ವಿಡಿಯೊ ಚಿತ್ರೀಕರಣವನ್ನು ಕಡ್ಡಾಯಗೊಳಿಸಿರುವಂತಹ ನಿಬಂಧನೆಗಳನ್ನು ಒಳಗೊಂಡಿರುವ ಹೊಸ ಕಾನೂನುಗಳು ಆಧುನಿಕ ನ್ಯಾಯ ವ್ಯವಸ್ಥೆಯನ್ನು ಜಾರಿಗೆ ತರಲಿದೆ ಎಂದು ವಿಶ್ಲೇಷಿಸಲಾಗಿದೆ.

ಜುಲೈ 1ರ ಹಾಗೂ ಆ ಬಳಿಕದ ಎಲ್ಲ ಎಫ್‌ಐಆರ್‌ಗಳನ್ನು ಸಿಆರ್‌ಪಿಸಿಯ 154ನೇ ಸೆಕ್ಷನ್ ಬದಲು, ಭಾರತೀಯ ನಾಗರಿಕ ಸುರಕ್ಷಾ ಸಂಹಿತೆಯ 173ನೇ ಸೆಕ್ಷನ್ ಅಡಿಯಲ್ಲಿ ದಾಖಲಿಸಿಕೊಳ್ಳಲಾಗುತ್ತದೆ.

### ಸಂಕಷ್ಟಕ್ಕೆ ಸಿಲುಕಿದ್ದ 100ಕ್ಕೂ ಹೆಚ್ಚು ಸಿಬ್ಬಂದಿ • ಸಂಘಟನೆಗಳು, ಪಕ್ಷಗಳ ಖಂಡನೆ

# ಟಿಐಎಸ್‌ಎಸ್: ಸಿಬ್ಬಂದಿ ವಜಾ ಆದೇಶ ವಾಪಸು

ಮುಂಬೈ (ಪಿಟಿಐ): ಹಣಕಾಸು ಕೊರತೆ ಹಿನ್ನೆಲೆಯಲ್ಲಿ 100ಕ್ಕೂ ಹೆಚ್ಚು ಬೋಧಕ, ಬೋಧಕೇತರ ಸಿಬ್ಬಂದಿಯನ್ನು ಕೆಲಸದಿಂದ ತೆಗೆಯುವುಕ್ಕೆ ಸಂಬಂಧಿಸಿದ ಸುತ್ತೋಲೆಯನ್ನು ಟಾಟಾ ಇನ್‌ಸ್ಟಿಟ್ಯೂಟ್ ಆಫ್ ಸೋಷಿಯಲ್ ಸೈನ್ಸಸ್ (ಟಿಐಎಸ್‌ಎಸ್) ಸಂಸ್ಥೆಯು ಭಾನುವಾರ ತಡರಾತ್ರಿ ಹಿಂಪಡೆದಿದೆ.

ಒಟ್ಟು 115 ಸಿಬ್ಬಂದಿ ನೇಮಕಾತಿ ಗುತ್ತಿಗೆ ಒಪ್ಪಂದ ನವೀಕರಿಸಲಾಗದು ಎಂದು ಸಂಸ್ಥೆಯು ಜೂನ್ 28ರಂದು ನೋಟಿಸ್ ನೀಡಿತ್ತು. ಸಂಸ್ಥೆಯ ಈ ಕ್ರಮವನ್ನು ಬೋಧಕ ಮತ್ತು ವಿದ್ಯಾರ್ಥಿ ಸಂಘಟನೆಗಳು ತೀವ್ರವಾಗಿ ಖಂಡಿಸಿದ್ದವು. ಇದು ರಾಜಕೀಯ ವಿವಾದವಾಗಿಯೂ ಮಾರ್ಪಟ್ಟಿತ್ತು.

ವರದಿಯ ಪ್ರಕಾರ, ಸಂಸ್ಥೆಯ ಮುಂಬೈ, ತುಳಜಾಪುರ, ಗುವಾಹಟಿ ಮತ್ತು ಹೈದರಾಬಾದ್ ಕ್ಯಾಂಪಸ್‌ಗಳಲ್ಲಿನ 55 ಅಧ್ಯಾಪಕರು ಮತ್ತು 60 ಬೋಧಕೇತರ ಸಿಬ್ಬಂದಿ ಇದರಿಂದ ಸಂಕಷ್ಟಕ್ಕೆ ಸಿಲುಕಿದ್ದರು.

'ಟಾಟಾ ಎಜುಕೇಷನ್ ಟ್ರಸ್ಟ್ (ಟಿಇಟಿ) ಆರ್ಥಿಕ ನೆರವಿನ ಕಾರ್ಯಕ್ರಮದಡಿ ವಿವಿಧ ಕೋರ್ಸ್‌ಗಳಿಗೆ ಸಂಬಂಧಿಸಿದಂತೆ ಗುತ್ತಿಗೆ ಆಧಾರದಲ್ಲಿ ಈ ಸಿಬ್ಬಂದಿಯನ್ನು ನೇಮಕ ಮಾಡಲಾಗಿತ್ತು. ಇವರ ನೇಮಕಾತಿ ಅವಧಿಯು ಜೂನ್ 30ಕ್ಕೆ ಅಂತ್ಯಗೊಳ್ಳಲಿದೆ' ಎಂದು ನೋಟಿಸ್‌ನಲ್ಲಿ ತಿಳಿಸಲಾಗಿತ್ತು.

'ನಂತರದ ಬೆಳವಣಿಗೆಯಲ್ಲಿ ಟಾಟಾ ಎಜುಕೇಷನ್ ಟ್ರಸ್ಟ್ ಜೊತೆಗೆ ನಡೆದ ಚರ್ಚೆ ಫಲಪ್ರದವಾಗಿದೆ. ಸಮಸ್ಯೆಯನ್ನು ಬಗೆಹರಿಸುವ ಕ್ರಮವಾಗಿ ಆರ್ಥಿಕ ನೆರವು ನೀಡುವ ಭರವಸೆಯನ್ನು ಟ್ರಸ್ಟ್ ನೀಡಿದೆ. ಟಿಇಟಿ ಈ ಸಿಬ್ಬಂದಿಯ ವೇತನಕ್ಕಾಗಿ ಹಣ ಬಿಡುಗಡೆಗೆ ಬದ್ಧವಾಗಿದೆ' ಎಂದು ತಿಳಿಸಿತು.

'ಟಿಇಟಿ ಸಿಬ್ಬಂದಿಯನ್ನು ಉದ್ದೇಶಿಸಿ ಜೂನ್ 28ರಂದು ಬರೆದಿದ್ದ ಪತ್ರವನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಿಂಪಡೆಯಲಾಗಿದೆ. ಈ ಎಲ್ಲ ಸಿಬ್ಬಂದಿಗೆ ಸೇವೆಯಲ್ಲಿ ಮುಂದುವರಿಯಲು ಕೋರಲಾಗಿದೆ. ಅವರ ವೇತನವನ್ನು ಸಂಸ್ಥೆಯಿಂದ ಅನುದಾನ ಬಿಡುಗಡೆಯಾದ ಕೂಡಲೇ ಬಿಡುಗಡೆ ಮಾಡಲಾಗುತ್ತದೆ' ಟಿಐಎಸ್‌ಎಸ್ ಸಂಸ್ಥೆ ರಾತ್ರಿ ಹೊರಡಿಸಿದ ಸುತ್ತೋಲೆಯಲ್ಲಿ ತಿಳಿಸಲಾಗಿದೆ.

ಗುತ್ತಿಗೆಯ ಅವಧಿಯನ್ನು ನವೀಕರಿಸದ ಸಂಸ್ಥೆಯ ಮೊದಲಿನ ನಡೆಗೆ ತೀವ್ರ ವಿರೋಧ ವ್ಯಕ್ತವಾಗಿತ್ತು. ಸಿಬ್ಬಂದಿಯೊಬ್ಬರು, ವಿವಿಧ ಕೋರ್ಸ್‌ಗಳಿಗೆ ಕಳೆದ 10–15 ವರ್ಷಗಳಿಂದ ಅನುದಾನ ಬಿಡುಗಡೆ ಆಗುತ್ತಿತ್ತು. ಅದನ್ನು ನವೀಕರಿಸಬೇಕಿತ್ತು ಎಂದು ಅಭಿಪ್ರಾಯಪಟ್ಟರು.

'ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದಡಿ ಟಿಐಎಸ್‌ಎಸ್‌ನ ನೂರಾರು ಬೋಧಕ, ಬೋಧಕೇತರ ಸಿಬ್ಬಂದಿಯ ವಜಾ ಕಾರ್ಯವನ್ನು ಖಂಡಿಸುತ್ತೇವೆ' ಎಂದು ಪ್ರಗತಿಪರ ವಿದ್ಯಾರ್ಥಿ ಸಂಘಟನೆ ಹೇಳಿದೆ. ಶಿಕ್ಷಕರು, ಸಿಬ್ಬಂದಿ ಜತೆಗೆ ಸಂಘಟನೆ ನಿಲ್ಲಲಿದೆ ಎಂದು ಜಾಲತಾಣದಲ್ಲಿ ಪೋಸ್ಟ್ ಮಾಡಿದೆ.

ಟಿಐಎಸ್‌ಎಸ್‌ನಲ್ಲಿ ಹಲವು ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದ ಸಿಬ್ಬಂದಿಗೆ ಕೇವಲ 48 ಗಂಟೆಗೂ ಮುನ್ನ ತಲುಪಿದ್ದ ನೋಟಿಸ್ ಆಘಾತ ಉಂಟು ಮಾಡಿತ್ತು. ಇದು ಕೇಂದ್ರ ಸರ್ಕಾರ ಮತ್ತು ಟಿಐಎಸ್‌ಎಸ್ ಆಡಳಿತದ ನಾಯಕತ್ವದ ವೈಫಲ್ಯವಾಗಿದೆ ಎಂದು ವಿದ್ಯಾರ್ಥಿ ಸಂಘಟನೆ ದೂರಿದೆ.

ಸಿಬ್ಬಂದಿಯನ್ನು ವಜಾಗೊಳಿಸುವ ನಡೆಯನ್ನು ಸಿಪಿಐ, ಆರ್‌ಜೆಡಿ ಪಕ್ಷಗಳು ಖಂಡಿಸಿದ್ದವು. ಉನ್ನತ ಶಿಕ್ಷಣ ವ್ಯವಸ್ಥೆಯನ್ನು ಕಿತ್ತುಹಾಕುವ 'ಅಮೃತ ಕಾಲ' ಇದಾಗಿದೆ ಎಂದು ಸಿಪಿಐ ಖಂಡಿಸಿದ್ದರೆ, 'ಇದರಿಂದ ಆಘಾತವಾಗಿದೆ ಆದರೆ ಆಶ್ಚರ್ಯವಾಗಿಲ್ಲ' ಎಂದು ಆರ್‌ಜೆಡಿ ಪ್ರತಿಕ್ರಿಯಿಸಿದೆ.

### ಮುಖ್ಯಾಂಶಗಳು

- ಸಂಕಷ್ಟಕ್ಕೆ ಸಿಲುಕಿದ್ದ 55 ಬೋಧಕ, 60 ಬೋಧಕೇತರ ಸಿಬ್ಬಂದಿ
- ಮಾತುಕತೆ ಯಶಸ್ವಿ, ತಡರಾತ್ರಿ ಆದೇಶ ವಾಪಸು

## ಹೊಸ ಕಾನೂನು ಮಿಶ್ರ ಪ್ರತಿಕ್ರಿಯೆ

ಒಂದನೇ ಪುಟದಿಂದ..

ಹೊಸ ಕಾನೂನುಗಳ ಜಾರಿಯ ಕುರಿತು ವಕೀಲರ ವಲಯದಲ್ಲಿ ಚರ್ಚೆ ಜೋರಾಗಿದೆ. ಕಾನೂನು ತಜ್ಞರ ಪ್ರಕಾರ, ಕ್ರಿಮಿನಲ್ ಅಪರಾಧ ಪ್ರಕ್ರಿಯೆಗೆ ಸಂಬಂಧಿಸಿದಂತೆ ಅನುಷ್ಠಾನಕ್ಕೆ ತಂದಿರುವ ಹೊಸ ಕಾನೂನುಗಳ ತಕ್ಷಣಕ್ಕೆ ಜನಸಾಮಾನ್ಯರ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ.

'ನನ್ನ ಪ್ರಕಾರ, ಸಾಮಾನ್ಯ ಜನರ ಮೇಲೆ ಹೊಸ ಕಾನೂನುಗಳಿಂದ ಯಾವ ಪರಿಣಾಮವೂ ಆಗದು. ಅಪರಾಧ ಕೃತ್ಯದಲ್ಲಿ ಭಾಗಿಯಾದ ಆರೋಪದ ಮೇಲೆ ತನಿಖೆ ಅಥವಾ ವಿಚಾರಣೆ ಎದುರಿಸುವ ವ್ಯಕ್ತಿ ಮಾತ್ರ ವಿಚಾರಣೆ ಹಾಗೂ ಶಿಕ್ಷೆಯ ಕುರಿತು ಚಿಂತಿಸಬೇಕಾಗುತ್ತದೆ. ವಿಚಾರಣಾ ಪ್ರಕ್ರಿಯೆಯಲ್ಲಿನ ಬದಲಾವಣೆಗಳ ಕುರಿತು ಸಂತ್ರಸ್ತ ಅಥವಾ ಆರೋಪಿ ಚಿಂತಿಸಬೇಕಾಗಿಲ್ಲ. ತನಿಖಾ ಸಂಸ್ಥೆಯ ಪರವಾಗಿ ವಾದಿಸುವ ಪ್ರಾಸಿಕ್ಯೂಟರ್ ಹಾಗೂ ಆರೋಪಿಯ ಪರ ವಕೀಲರಿಗೆ ಮಾತ್ರ ಇಂತಹ ಸಂಕೀರ್ಣ ಸಂದರ್ಭವು ಸವಾಲಿನ ಸಮಯವಾಗಲಿದೆ' ಎನ್ನುತ್ತಾರೆ ಹೈಕೋರ್ಟ್ ವಕೀಲ ಎಸ್.ಎಸ್. ಶ್ರೀನಿವಾಸ ರಾವ್.

ಹೊಸ ಕಾನೂನುಗಳ ಕುರಿತು ಬೆಂಗಳೂರು ವಕೀಲರ ಸಂಘವು ತನ್ನ ಸದಸ್ಯರಿಗಾಗಿ ಒಂದು ತಿಂಗಳ ಕಾರ್ಯಾಗಾರಗಳನ್ನು ನಡೆಸಿದೆ. ಮ್ಯಾಜಿಸ್ಟ್ರೇಟ್ ಮತ್ತು ಸೆಷನ್ಸ್ ನ್ಯಾಯಾಲಯಗಳ ನ್ಯಾಯಾಧೀಶರಿಗಾಗಿಯೂ ತರಬೇತಿ ಉಪನ್ಯಾಸಗಳನ್ನು ಹಮ್ಮಿಕೊಳ್ಳಲಾಗಿತ್ತು. ಆದರೆ, ಈ ಕಾನೂನುಗಳನ್ನು ಅರಿತುಕೊಳ್ಳಲು ಇಂತಹ ತರಬೇತಿ, ಕಾರ್ಯಾಗಾರಗಳಿಂದಷ್ಟೇ ಸಾಧ್ಯವಿಲ್ಲ ಎಂದು ಅವರು ಹೇಳುತ್ತಾರೆ.

ಶ್ರೀನಿವಾಸ ರಾವ್, ಛತ್ತೀಸಗಢ ಮತ್ತು ಮಹಾರಾಷ್ಟ್ರದ ಐಪಿಎಸ್ ಅಧಿಕಾರಿಗಳು ಹಾಗೂ ನ್ಯಾಯಾಂಗದ ಅಧಿಕಾರಿಗಳಿಗೆ ಹೊಸ ಕಾನೂನುಗಳ ಕುರಿತು ಕಾರ್ಯಾಗಾರ ನಡೆಸಿದ್ದರು. ಅವರ ಪ್ರಕಾರ, ಕ್ರಿಮಿನಲ್ ಪ್ರಕರಣಗಳ ವಿಚಾರಣಾ ವ್ಯವಸ್ಥೆಯಲ್ಲಿ ವಿಡಿಯೊ ಕಾನ್ಫರೆನ್ಸಿಂಗ್ ಮೂಲಕ ವಿಚಾರಣೆ ನಡೆಸುವುದು ಈವರೆಗೂ ಅಸ್ತಿತ್ವದಲ್ಲೇ ಇಲ್ಲದಂತಹ ಪದ್ಧತಿ.

'ಕೋವಿಡ್–19 ಅವಧಿಯಲ್ಲಿ ತರಗತಿಗಳನ್ನು ಹೇಗೆ ನಡೆಸಲಾಯಿತು? ವಿದ್ಯಾರ್ಥಿಗಳ ಮೇಲೆ ಅದರ ಪರಿಣಾಮ ಏನಾಯಿತು? ಎಂಬುದನ್ನು ನಾವು ನೋಡಿದ್ದೇವೆ. ವಿಡಿಯೊ ಕಾನ್ಫರೆನ್ಸಿಂಗ್ ಮೂಲಕ ವಿದ್ಯಾರ್ಥಿಗಳು ಪರಿಣಾಮಕಾರಿಯಾಗಿ ಕಲಿಯಲು ಅಸಾಧ್ಯ ಎನ್ನುವುದಾದರೆ, ನ್ಯಾಯಾಲಯಗಳು ವಿಡಿಯೊ ಕಾನ್ಫರೆನ್ಸಿಂಗ್ ಮೂಲಕ ವಿಚಾರಣೆ ನಡೆಸಿ ಆರೋಪಿಯ ಭವಿಷ್ಯ ನಿರ್ಧರಿಸುವುದನ್ನು ನಿರೀಕ್ಷಿಸುತ್ತೀರಾ? ಜಾಮೀನು, ಕಸ್ಟಡಿ, ಮಹಜರು ಪ್ರಕ್ರಿಯೆಗೆ ಸಂಬಂಧಿಸಿದಂತೆಯೂ ಅಂತಹ ವಿಷಯಗಳು ಹೊಸ ಕಾನೂನುಗಳಲ್ಲಿವೆ' ಎಂದು ಶ್ರೀನಿವಾಸ ರಾವ್ ಹೇಳುತ್ತಾರೆ.

'ಹೊಸ ಕಾನೂನುಗಳ ಜಾರಿಯಿಂದ ವಕೀಲರಿಗಿಂತಲೂ ಹೆಚ್ಚು ಸವಾಲು ಎದುರಾಗುವುದು ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಗೆ. ನನ್ನ ಪ್ರಕಾರ, ಪೊಲೀಸರಿಗೆ ಹೆಚ್ಚು ಸಮಯ ಮತ್ತು ಹೆಚ್ಚಿನ ತರಬೇತಿ ಬೇಕಾಗುತ್ತದೆ' ಎಂಬುದು ಹಿರಿಯ ವಕೀಲ ಉದಯ್ ಹೊಳ್ಳ ಅವರ ಅಭಿಪ್ರಾಯ.

'ಸಂಪೂರ್ಣವಾಗಿ ಹೊಸ ಕಾನೂನುಗಳನ್ನು ಬಳಸಿ ನ್ಯಾಯದಾನ ಪ್ರಕ್ರಿಯೆ ನಡೆಸುವ ಅನುಭವ ವಕೀಲರು ಮತ್ತು ನ್ಯಾಯಾಧೀಶರಿಗೆ ಇದೆ. ಉದಾಹರಣೆಗೆ ಕಂಪನಿ ಕಾಯ್ದೆ 1953 ಅನ್ನು ಬದಲಿಸಿ 2013ರಲ್ಲಿ ಹೊಸ ಕಾನೂನು ಜಾರಿಗೊಳಿಸಲಾಯಿತು. ದಿನಗಳು ಕಳೆದಂತೆ ಹೊಸ ಕಾನೂನಿನಲ್ಲಿರುವ ಅಂಶಗಳ ಕುರಿತು ಮೇಲಿನ ನ್ಯಾಯಾಲಯಗಳು ವ್ಯಾಖ್ಯಾನ ನೀಡಿದವು. ವಕೀಲರೂ ಹೊಸ ಕಾಯ್ದೆಯನ್ನು ಬಳಸಲಾರಂಭಿಸಿದರು. ಎಲ್ಲಕ್ಕಿಂತಲೂ ಹೆಚ್ಚಾಗಿ ಅಪರಾಧಕ್ಕೆ ಸಂಬಂಧಿಸಿದ ಹೊಸ ಕಾನೂನುಗಳಲ್ಲಿ ನ್ಯಾಯಾಧೀಶರು ಪ್ರಕರಣವನ್ನು ಸರಿಯಾಗಿ ಅರಿಯಲು ಪ್ರಾಸಿಕ್ಯೂಷನ್ ಮತ್ತು ಆರೋಪಿ ಪರ ವಕೀಲರು ಇಬ್ಬರಿಂದಲೂ ಮಾಹಿತಿ ಪಡೆಯುವ ಅವಕಾಶವಿದೆ' ಎಂದು ಅವರು ಹೇಳುತ್ತಾರೆ.

### ಜಿಎಸ್‌ಟಿ ಜಾರಿಯಾಗಿ ಇಂದಿಗೆ ಏಳು ವರ್ಷ ಭರ್ತಿ

# ನಕಲಿ ಇನ್‌ವಾಯ್ಸ್ ಸವಾಲು

ನವದೆಹಲಿ (ಪಿಟಿಐ): ದೇಶದಲ್ಲಿ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಜಾರಿಗೆ ಬಂದು ಸೋಮವಾರಕ್ಕೆ ಏಳು ವರ್ಷ ತುಂಬಲಿದೆ. ಆದರೂ, ನಕಲಿ ಇನ್‌ವಾಯ್ಸ್ ಸೃಷ್ಟಿಸಿ ಜಿಎಸ್‌ಟಿ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ (ಐಟಿಸಿ) ವಂಚನೆ ಎಸಗುವ ಪ್ರಕರಣಗಳಿಗೆ ಕಡಿವಾಣ ಹಾಕುವುದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಸವಾಲಾಗಿ ಪರಿಣಮಿಸಿದೆ.

ಜಿಎಸ್‌ಟಿ ಮಂಡಳಿಯು ದರ ಸರಳೀಕರಣಕ್ಕೆ ಸಮಿತಿ ರಚಿಸಿದೆ. ಮತ್ತೊಂದೆಡೆ ತೆರಿಗೆ ಸಂಗ್ರಹದಲ್ಲಿ ನಿರೀಕ್ಷೆ ಮೀರಿ ಸುಧಾರಣೆಯಾಗಿದೆ. ರಾಜ್ಯಗಳ ಬೊಕ್ಕಸದ ಆದಾಯವೂ ಏರಿಕೆಯಾಗುತ್ತಿದೆ. ಆದರೆ, ವಂಚನೆ ತಡೆಯುವುದು ಕಷ್ಟಕರವಾಗಿದೆ ಎಂದು ಆರ್ಥಿಕ ತಜ್ಞರು ಹೇಳಿದ್ದಾರೆ.

ಪರೋಕ್ಷ ತೆರಿಗೆ ವ್ಯವಸ್ಥೆಯನ್ನು ವ್ಯಾಪಾರ ಸ್ನೇಹಿಯಾಗಿಸಲು 2017ರ ಜುಲೈ 1ರಂದು ದೇಶದಾದ್ಯಂತ ಏಕ ಕಾಲಕ್ಕೆ ಜಿಎಸ್‌ಟಿ ಜಾರಿಗೊಳಿಸಲಾಯಿತು. ಇದರ ಜಾರಿಗೂ ಮೊದಲು ದೇಶದಲ್ಲಿ 17ಕ್ಕಿಂತಲೂ ಹೆಚ್ಚು ವಿವಿಧ ಬಗೆಯ ಪರೋಕ್ಷ ತೆರಿಗೆ ಮತ್ತು ಸುಂಕಗಳಿದ್ದವು.

2017ರಲ್ಲಿ 65 ಲಕ್ಷವಿದ್ದ ತೆರಿಗೆದಾರರ ಸಂಖ್ಯೆ ಈಗ 1.46 ಕೋಟಿಗೆ ಏರಿಕೆಯಾಗಿದೆ. 2017–18ರಲ್ಲಿ ಮಾಸಿಕ ಸರಾಸರಿ ₹90 ಸಾವಿರ ಕೋಟಿ ಇದ್ದ ಜಿಎಸ್‌ಟಿ ವರಮಾನವು, 2024–25ನೇ ಸಾಲಿನಲ್ಲಿ ₹1.90 ಲಕ್ಷ ಕೋಟಿ ದಾಟಿದೆ. ಜಿಎಸ್‌ಟಿ ಅಡಿಯಲ್ಲಿ ಜೀವರಕ್ಷಕ ಔಷಧಗಳು, ಶಿಕ್ಷಣ, ಸಾರ್ವಜನಿಕ ಸಾರಿಗೆ ಸೇರಿ ಹಲವು ಸೇವೆಗಳಿಗೆ ರಿಯಾಯಿತಿಯೂ ಸಿಕ್ಕಿದೆ.

ತೆರಿಗೆ ಸಂಗ್ರಹದಲ್ಲಿ ಶೇ 0.72ರಿಂದ (ಜಿಎಸ್‌ಟಿ ಪೂರ್ವ) ಶೇ 1.22ರಷ್ಟಕ್ಕೆ ಏರಿಕೆಯಾಗಿದೆ. ಜಿಎಸ್‌ಟಿ ಪರಿಹಾರ ಮೊತ್ತದ ಹೊರತಾಗಿ ರಾಜ್ಯಗಳ ಆದಾಯದಲ್ಲಿ ಶೇ 1.15ರಷ್ಟು ಹೆಚ್ಚಳವಾಗಿದೆ ಎಂದು ಕೇಂದ್ರ ಸರ್ಕಾರದ ಅಂಕಿ–ಅಂಶ ಹೇಳಿವೆ.

## ₹1.98 ಲಕ್ಷ ಕೋಟಿ ತೆರಿಗೆ ವಂಚನೆ




2023ರಲ್ಲಿ ಜಿಎಸ್‌ಟಿ ಗುಪ್ತಚರ ಮಹಾನಿರ್ದೇಶನಾಲಯವು (ಡಿಜಿಜಿಐ) ₹1.98 ಲಕ್ಷ ಕೋಟಿ ತೆರಿಗೆ ವಂಚನೆ ಪತ್ತೆ ಹಚ್ಚಿದ್ದು, ಕೃತ್ಯದಲ್ಲಿ ಭಾಗಿಯಾದ 140 ಮಂದಿಯನ್ನು ಬಂಧಿಸಿದೆ.

ಪ್ರಮುಖವಾಗಿ ಆನ್‌ಲೈನ್ ಗೇಮಿಂಗ್, ಕ್ಯಾಸಿನೊ, ವಿಮೆ ಮತ್ತು ಮಾನವ ಸಂಪನ್ಮೂಲ ಸೇವೆ ಒದಗಿಸುವ ಕಂಪನಿಗಳಲ್ಲಿ ಅತಿಹೆಚ್ಚು ತೆರಿಗೆ ವಂಚನೆ ನಡೆದಿದೆ ಎಂದು ಸರ್ಕಾರದ ಅಂಕಿಅಂಶ ಹೇಳಿವೆ.

ವ್ಯಾಜ್ಯಗಳ ತ್ವರಿತ ವಿಲೇವಾರಿಗಾಗಿ ಜಿಎಸ್‌ಟಿ ಮೇಲ್ಮನವಿ ನ್ಯಾಯ ಮಂಡಳಿಯ ಪ್ರಧಾನ ಪೀಠ ಹಾಗೂ ರಾಜ್ಯಗಳ ಮಟ್ಟದಲ್ಲಿ ನ್ಯಾಯಮಂಡಳಿಯ ಪೀಠಗಳ ರಚನೆಗೆ ಜಿಎಸ್‌ಟಿ ಮಂಡಳಿಯು ಶಿಫಾರಸು ಮಾಡಿದೆ. ಆದರೆ, ಇನ್ನೂ ಪೀಠಗಳು ಕಾರ್ಯರೂಪಕ್ಕೆ ಬಂದಿಲ್ಲ.

‘ನೇರ ತೆರಿಗೆ ಸಂಗ್ರಹದಲ್ಲಿ ದಕ್ಷತೆ ಹೆಚ್ಚಿಸುವ ಜೊತೆಗೆ ಪಾರದರ್ಶಕತೆ ಕಾಯ್ದುಕೊಳ್ಳಲು ಸಂಸ್ಥೆಯಿಂದ ವಿವಿಧ ಇಲಾಖೆಯ 6,800 ನೌಕರರಿಗೆ ತರಬೇತಿ ನೀಡಲಾಗಿದೆ’ ಎಂದು ಭಾರತೀಯ ಲೆಕ್ಕ ಪರಿಶೋಧಕ ಸಂಸ್ಥೆಯ (ಐಸಿಎಐ) ಅಧ್ಯಕ್ಷ ರಂಜೀತ್ ಕುಮಾರ್ ಅಗರ್ವಾಲ್ ತಿಳಿಸಿದ್ದಾರೆ.




ಸಂಭ್ರಮ ಮುಂಬೈನ ಶಿವಾಜಿ ಉದ್ಯಾನದಲ್ಲಿ ಅಳವಡಿಸಿರುವ ಪ್ಯಾರಿಸ್ ಒಲಿಂಪಿಕ್ಸ್ ಲೋಗೊದ ಬಳಿ ಭಾನುವಾರ ಯುವಕ–ಯುವತಿಯರು ಫೋಟೊ ತೆಗೆಸಿಕೊಂಡು ಸಂಭ್ರಮಿಸಿದರು –ಪಿಟಿಐ ಚಿತ್ರ

# ಇಂಡೆಕ್ಸ್ ಫಂಡ್: ಯಾವುದು ಹಿತ?



ಬಂಡವಾಳ ಮಾರುಕಟ್ಟೆ

ಕಾವ್ಯ ಡಿ.

**ಮ್ಯೂಚುವಲ್ ಫಂಡ್ ಹೌಸ್‌ಗಳ** ಫಂಡ್ ಮ್ಯಾನೇಜರ್‌ಗಳು ನಿರ್ವಹಿಸುವ ಶೇ 88ರಷ್ಟು ಲಾರ್ಜ್ ಕ್ಯಾಪ್ ಮ್ಯೂಚುವಲ್ ಫಂಡ್‌ಗಳು, ನಿಫ್ಟಿ 50 ಮತ್ತು ಸೆನ್ಸೆಕ್ಸ್ ಸೂಚ್ಯಂಕಗಳ ಗಳಿಕೆಗಿಂತ ಕಡಿಮೆ ಲಾಭ ಕೊಟ್ಟಿವೆ. ಈ ಕಾರಣದಿಂದಾಗಿ ನಿಫ್ಟಿ 50 ಮತ್ತು ಸೆನ್ಸೆಕ್ಸ್ ಸೂಚ್ಯಂಕಗಳ ಆಧಾರಿತವಾಗಿರುವ ಇಂಡೆಕ್ಸ್ ಮ್ಯೂಚುವಲ್ ಫಂಡ್‌ಗಳು ಜನಪ್ರಿಯತೆ ಪಡೆದುಕೊಳ್ಳುತ್ತಿವೆ.

ಆದರೆ, ಇಂಡೆಕ್ಸ್ ಫಂಡ್‌ಗಳನ್ನು ಆಯ್ಕೆ ಮಾಡಿಕೊಳ್ಳುವಾಗ ನಿಫ್ಟಿ 50 ಕೇಂದ್ರಿತ ಮ್ಯೂಚುವಲ್ ಫಂಡ್‌ಗಳನ್ನು ಆಯ್ಕೆ ಮಾಡಿಕೊಳ್ಳಬೇಕೇ ಅಥವಾ ಸೆನ್ಸೆಕ್ಸ್ ಕೇಂದ್ರಿತ ಇಂಡೆಕ್ಸ್ ಮ್ಯೂಚುವಲ್ ಫಂಡ್‌ಗಳನ್ನು ಪರಿಗಣಿಸಬೇಕೇ ಎನ್ನುವ ಗೊಂದಲ ಎದುರಾಗುತ್ತದೆ. ಯಾವ ಸೂಚ್ಯಂಕವನ್ನು ಆಯ್ಕೆ ಮಾಡಿಕೊಂಡು ಹೂಡಿಕೆ ಮಾಡಿದರೆ ಲಾಭ ಜಾಸ್ತಿ ಎನ್ನುವ ಪ್ರಶ್ನೆಯೂ ಬರುತ್ತದೆ. ಇವೆಲ್ಲದಕ್ಕೂ ಈ ಲೇಖನದಲ್ಲಿ ಉತ್ತರ ಹುಡುಕೋಣ.

**ಏನಿದು ಇಂಡೆಕ್ಸ್ ಫಂಡ್?:** ಭಾರತದಲ್ಲಿ ಪ್ರಮುಖವಾಗಿ ಎರಡು ಸೂಚ್ಯಂಕಗಳಿವೆ (ಇಂಡೆಕ್ಸ್). ಮುಂಬೈ ಷೇರುಪೇಟೆ ಪ್ರತಿನಿಧಿಸುವ ಸೆನ್ಸೆಕ್ಸ್ ಮತ್ತು ರಾಷ್ಟ್ರೀಯ ಷೇರುಪೇಟೆ ಪ್ರತಿನಿಧಿಸುವ ನಿಫ್ಟಿ. ಈ ಸೂಚ್ಯಂಕಗಳನ್ನು ಯಥಾವತ್ತಾಗಿ ಅನುಕರಿಸಿ ಕೆಲ ಮ್ಯೂಚುವಲ್ ಫಂಡ್‌ಗಳು ರೂಪುಗೊಂಡಿವೆ. ಷೇರು ಮಾರುಕಟ್ಟೆಯ ಭಾಷೆಯಲ್ಲಿ ಈ ರೀತಿಯ ಫಂಡ್‌ಗಳನ್ನು ‘ಇಂಡೆಕ್ಸ್ ಮ್ಯೂಚುವಲ್ ಫಂಡ್’ ಎಂದು ಕರೆಯುತ್ತಾರೆ.

**ಬಿಎಸ್‌ಇ ಇಂಡೆಕ್ಸ್ ಫಂಡ್ v/s ನಿಫ್ಟಿ ಇಂಡೆಕ್ಸ್ ಫಂಡ್:** ಬಿಎಸ್‌ಇ ಸೆನ್ಸೆಕ್ಸ್ 1986ರಲ್ಲಿ ಪ್ರಾರಂಭವಾಗಿದ್ದು, ಇದು ಭಾರತದ ಅತ್ಯಂತ ಹಳೆಯ ಷೇರು ಸೂಚ್ಯಂಕವಾಗಿದೆ. ಈ ಸೂಚ್ಯಂಕವು ಆರ್ಥಿಕವಾಗಿ ಸಬಲವಾಗಿರುವ 30 ಬೃಹತ್ ಕಂಪನಿಗಳ ಷೇರುಗಳ ಏರಿಳಿತವನ್ನು ದಾಖಲಿಸುತ್ತದೆ. ಮಹೀಂದ್ರ ಆ್ಯಂಡ್ ಮಹೀಂದ್ರ, ಎಚ್‌ಡಿಎಫ್‌ಸಿ, ಹಿಂದುಸ್ತಾನ್ ಯೂನಿಲಿವರ್, ಐಸಿಐಸಿಐ, ಐಟಿಸಿ, ಇನ್ಫೊಸಿಸ್, ಎಲ್ ಆ್ಯಂಡ್ ಟಿ ಹೀಗೆ ವಿವಿಧ ವಲಯಗಳ ಪ್ರಮುಖ ಕಂಪನಿಗಳನ್ನು ಈ ಸೂಚ್ಯಂಕ ಒಳಗೊಂಡಿರುತ್ತದೆ. ಇದೇ ಬಿಎಸ್‌ಇ ಸೂಚ್ಯಂಕವನ್ನು ಅನುಕರಿಸಿ ಹೂಡಿಕೆ ಮಾಡಿದರೆ ಅದು ಬಿಎಸ್‌ಇ ಆಧಾರಿತ ಇಂಡೆಕ್ಸ್ ಮ್ಯೂಚುಯಲ್ ಫಂಡ್ ಆಗುತ್ತದೆ.

ಇನ್ನು ನಿಫ್ಟಿ 50 ಸೂಚ್ಯಂಕವು 1996ರಲ್ಲಿ ಪ್ರಾರಂಭವಾಗಿದ್ದು, 50 ದೈತ್ಯ ಕಂಪನಿಗಳನ್ನು ಈ ಸೂಚ್ಯಂಕ ಒಳಗೊಂಡಿದೆ. ನಿಫ್ಟಿ ಸೂಚ್ಯಂಕದಲ್ಲಿ ರಿಲಯನ್ಸ್, ಎಚ್‌ಡಿಎಫ್‌ಸಿ ಬ್ಯಾಂಕ್, ಇನ್ಫೊಸಿಸ್, ಹಿಂದುಸ್ತಾನ್ ಯೂನಿಲಿವರ್, ಐಸಿಐಸಿಐ ಬ್ಯಾಂಕ್ ಸೇರಿ ವಿವಿಧ ವಲಯಗಳ ಪ್ರಮುಖ 50 ಪ್ರಾತಿನಿಧಿಕ ಕಂಪನಿಗಳಿವೆ. ಈ ಸೂಚ್ಯಂಕದಲ್ಲಿರುವ ಎಲ್ಲಾ 50 ಕಂಪನಿಗಳನ್ನು ಯಥಾವತ್ತಾಗಿ ಒಳಗೊಂಡು ಒಂದು ಮ್ಯೂಚುವಲ್ ಫಂಡ್ ರೂಪಿಸಿ ಹೂಡಿಕೆ ಮಾಡಿದರೆ ಅದು ನಿಫ್ಟಿ 50 ಇಂಡೆಕ್ಸ್ ಮ್ಯೂಚುವಲ್ ಫಂಡ್ ಎನಿಸಿಕೊಳ್ಳುತ್ತದೆ.

**ಇಂಡೆಕ್ಸ್ ಫಂಡ್, ಪ್ಯಾಸಿವ್ ಫಂಡ್ ವರ್ಗಕ್ಕೆ ಸೇರುವುದು ಏಕೆ:** ಪ್ಯಾಸಿವ್ ಫಂಡ್‌ಗಳಲ್ಲಿ ಯಾವ ಷೇರಿನಲ್ಲಿ ಹೂಡಿಕೆ ಮಾಡಬೇಕು, ಯಾವುದರಲ್ಲಿ ಹೂಡಿಕೆ ಮಾಡಬಾರದು ಎನ್ನುವ ನಿರ್ಧಾರವನ್ನು ಫಂಡ್ ಮ್ಯಾನೇಜರ್ ತೆಗೆದುಕೊಳ್ಳುವುದಿಲ್ಲ. ಬಿಎಸ್‌ಇ ಅಥವಾ ನಿಫ್ಟಿ 50 ಸೂಚ್ಯಂಕದ ಭಾಗವಾಗಿರುವ ಷೇರುಗಳೇ ಇಂಡೆಕ್ಸ್ ಫಂಡ್‌ನಲ್ಲೂ ಇರುತ್ತವೆ. ಈ ಕಾರಣದಿಂದ ಇಂಡೆಕ್ಸ್ ಫಂಡ್ ಪ್ಯಾಸಿವ್ ಫಂಡ್ ಎನಿಸಿಕೊಳ್ಳುತ್ತದೆ.

ಇನ್ನು ಆಕ್ಟಿವ್ ಫಂಡ್‌ನಲ್ಲಿ ಯಾವ ಷೇರಿನಲ್ಲಿ ಹೂಡಿಕೆ ಮಾಡಬೇಕು, ಯಾವುದರಲ್ಲಿ ಹೂಡಿಕೆ ಮಾಡಬಾರದು ಎನ್ನುವ ನಿರ್ಧಾರವನ್ನು ಫಂಡ್ ಮ್ಯಾನೇಜರ್ ತೆಗೆದುಕೊಳ್ಳುತ್ತಾರೆ. ಈಕ್ವಿಟಿ, ಡೆಟ್ ಮತ್ತು ಹೈಬ್ರೀಡ್ ಮ್ಯೂಚುವಲ್ ಫಂಡ್ ಆಕ್ಟಿವ್ ಫಂಡ್‌ಗೆ ಉತ್ತಮ ಉದಾಹರಣೆ. ಇಂಡೆಕ್ಸ್ ಫಂಡ್‌ನಲ್ಲಿ ಫಂಡ್ ಮ್ಯಾನೇಜರ್ ಇಲ್ಲದ ಕಾರಣ ವೆಚ್ಚ ಅನುಪಾತ ಅಂದರೆ, ಕಮಿಷನ್ ಕಡಿಮೆ.

ಲಾರ್ಜ್ ಕ್ಯಾಪ್ ಮ್ಯೂಚುವಲ್ ಫಂಡ್‌ಗಳ ವೆಚ್ಚ ಅನುಪಾತ ಶೇ 1.5ರಷ್ಟಿದ್ದರೆ ಇಂಡೆಕ್ಸ್ ಫಂಡ್‌ಗಳ ವೆಚ್ಚ ಅನುಪಾತ ಶೇ 0.2ರಷ್ಟಿದೆ. ವೆಚ್ಚ ಅನುಪಾತ ಶುಲ್ಕ ಕಡಿಮೆ ಇರುವುದರಿಂದ ಇಲ್ಲಿ ಹೂಡಿಕೆದಾರನಿಗೆ ಹೆಚ್ಚು ಉಳಿತಾಯ ಸಾಧ್ಯವಾಗುತ್ತದೆ. ಷೇರು ಮಾರುಕಟ್ಟೆ ಎಷ್ಟು ಪ್ರಮಾಣದಲ್ಲಿ ಏರಿಕೆ ಕಾಣುವುದೋ ಅಷ್ಟು ಲಾಭ ಸಿಕ್ಕರೆ ಸಾಕು, ಹೆಚ್ಚು ರಿಸ್ಕ್ ತೆಗೆದುಕೊಳ್ಳುವುದಿಲ್ಲ ಎನ್ನುವವರಿಗೆ ಇಂಡೆಕ್ಸ್ ಫಂಡ್ ಒಳ್ಳೆಯ ಆಯ್ಕೆ.

**ನಿಫ್ಟಿ 50 ಇಂಡೆಕ್ಸ್ ಫಂಡ್ ಉತ್ತಮವೋ ಅಥವಾ ಸೆನ್ಸೆಕ್ಸ್ ಇಂಡೆಕ್ಸ್ ಫಂಡ್ ಉತ್ತಮವೋ?:** ನಿಫ್ಟಿ 50 ಸೂಚ್ಯಂಕದಲ್ಲಿ ಒಟ್ಟು 50 ಕಂಪನಿಗಳಿವೆ. ಈ ಕಂಪನಿಗಳ ಪೈಕಿ 30 ಅಗ್ರಮಾನ್ಯ ಕಂಪನಿಗಳು ಬಿಎಸ್‌ಇ ಸೆನ್ಸೆಕ್ಸ್ ಸೂಚ್ಯಂಕದ ಭಾಗವೂ ಆಗಿವೆ. ಇನ್ನುಳಿದ 20 ಕಂಪನಿಗಳ ಷೇರುಗಳು ಮಾತ್ರ ಹೆಚ್ಚುವರಿಯಾಗಿ ನಿಫ್ಟಿ 50 ಸೂಚ್ಯಂಕದಲ್ಲಿ ಇರುತ್ತವೆ. ವಾಸ್ತವದಲ್ಲಿ ಶೇ 86ರಷ್ಟು ಒಂದೇ ತರಹದ ಕಂಪನಿಗಳ ಷೇರುಗಳು ನಿಫ್ಟಿ ಮತ್ತು ಸೆನ್ಸೆಕ್ಸ್ ಸೂಚ್ಯಂಕಗಳಲ್ಲಿ ಇವೆ.

ನಿಫ್ಟಿ ಸೂಚ್ಯಂಕದಲ್ಲಿ ಶೇ 14ರಷ್ಟು ಮಾತ್ರ ಬೇರೆಯ ಕಂಪನಿಗಳ ಷೇರುಗಳು ಸೇರಿರುತ್ತವೆ. ಹಾಗಾಗಿ, ಎರಡು ಸೂಚ್ಯಂಕಗಳಲ್ಲಿ ಬಹಳಷ್ಟು ವ್ಯತ್ಯಾಸವೇನೂ ಕಂಡು ಬರುವುದಿಲ್ಲ. ಇನ್ನು ನಿಫ್ಟಿ 50 ಸೂಚ್ಯಂಕದ 5 ವರ್ಷಗಳ ಸರಾಸರಿ ವಾರ್ಷಿಕ ಗಳಿಕೆ ನೋಡಿದಾಗ ಶೇ 12.52ರಷ್ಟು ಗಳಿಕೆ ಕೊಟ್ಟಿರುವುದು ತಿಳಿಯುತ್ತದೆ.

ಅದೇ ಅವಧಿಯಲ್ಲಿ ಸೆನ್ಸೆಕ್ಸ್ ಸೂಚ್ಯಂಕ ಶೇ 12.85ರಷ್ಟು ಅಂದರೆ ಅಲ್ಪ ಮೊತ್ತದ ಗಳಿಗೆ ಹೆಚ್ಚಿಗೆ ಕೊಟ್ಟಿದೆ. ಆದರೆ, 7 ವರ್ಷದ ಅವಧಿಗೆ ಸರಾಸರಿ ವಾರ್ಷಿಕ ಗಳಿಕೆ ನೋಡಿದಾಗ ನಿಫ್ಟಿ ಶೇ 13.78ರಷ್ಟು ಗಳಿಕೆ ತಂದುಕೊಟ್ಟಿದ್ದರೆ, ಸೆನ್ಸೆಕ್ಸ್ ಶೇ 12.80ರಷ್ಟು ಗಳಿಕೆ ಕೊಟ್ಟಿದೆ. ಹೀಗೆ ಕೆಲ ವರ್ಷಗಳಲ್ಲಿ ನಿಫ್ಟಿ ಕೊಂಚ ಹೆಚ್ಚು ಗಳಿಕೆ ಕೊಟ್ಟಿದ್ದರೆ ಕೆಲ ವರ್ಷಗಳಲ್ಲಿ ಸೆನ್ಸೆಕ್ಸ್ ಕೊಂಚ ಹೆಚ್ಚು ಲಾಭ ಕೊಟ್ಟಿದೆ.

ಒಟ್ಟಾರೆ ಲೆಕ್ಕಾಚಾರದಲ್ಲಿ ನೋಡಿದಾಗ ನಿಫ್ಟಿ ಸೂಚ್ಯಂಕದಲ್ಲಿ 50 ಕಂಪನಿಗಳ ಷೇರುಗಳಿದ್ದರೂ ಮತ್ತು ಸೆನ್ಸೆಕ್ಸ್ ಸೂಚ್ಯಂಕದಲ್ಲಿ 30 ಕಂಪನಿಗಳ ಷೇರುಗಳಿದ್ದರೂ ಹೂಡಿಕೆ ಮಾಡಿದಾಗ ಎರಡರ ಗಳಿಕೆಯಲ್ಲಿ ಹೆಚ್ಚು ವ್ಯತ್ಯಾಸ ಕಂಡು ಬರುವುದಿಲ್ಲ. ಹಾಗಾಗಿ, ಯಾವುದೇ ಉತ್ತಮ ಗಳಿಕೆ ಕೊಟ್ಟಿರುವ ಇಂಡೆಕ್ಸ್ ಫಂಡ್ ಅನ್ನು ನೀವು ಹೂಡಿಕೆಗೆ ಆಯ್ಕೆ ಮಾಡಿಕೊಳ್ಳಬಹುದು.

(ಲೇಖಕಿ: ಚಾರ್ಟರ್ಡ್ ಅಕೌಂಟೆಂಟ್)

## ಸತತ 4 ವಾರಗಳಿಂದ ಗೂಳಿ ಓಟ

ಷೇರುಪೇಟೆ

**ಸತತ ನಾಲ್ಕು** ವಾರಗಳಿಂದ ಷೇರುಪೇಟೆ ಸೂಚ್ಯಂಕಗಳು ಗಳಿಕೆಯ ಹಾದಿಯಲ್ಲಿವೆ. ಜೂನ್ ತಿಂಗಳಲ್ಲಿ ಸೆನ್ಸೆಕ್ಸ್ ಮತ್ತು ನಿಫ್ಟಿ ಸೂಚ್ಯಂಕಗಳು ಅತ್ಯುತ್ತಮ ಗಳಿಕೆ ದಾಖಲಿಸಿವೆ.

79,032 ಅಂಶಗಳಲ್ಲಿ ವಹಿವಾಟು ಮುಗಿಸಿದ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 2.36ರಷ್ಟು ಜಿಗಿದಿದೆ. 24,010 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ನಿಫ್ಟಿ ಶೇ 2.17ರಷ್ಟು ಹೆಚ್ಚಳ ಕಂಡಿದೆ.

ಲೋಕಸಭಾ ಚುನಾವಣೆ ಫಲಿತಾಂಶದ ಬಳಿಕ ಷೇರುಪೇಟೆ ಸ್ಥಿರವಾಗಿ ಮೇಲೆ ಸಾಗುತ್ತಿದೆ. ಆರ್ಥಿಕ ಪ್ರಗತಿಗೆ ಸರ್ಕಾರ ಉತ್ತೇಜನ ನೀಡಲಿದೆ ಎಂಬ ಭರವಸೆ, ಉತ್ಪಾದನಾ ವಲಯಕ್ಕೆ ಮುಂಬರುವ ಬಜೆಟ್‌ನಲ್ಲಿ ಬಂಪರ್ ಕೊಡುಗೆ ಸಿಗಲಿದೆ ಎಂಬ ನಿರೀಕ್ಷೆ ಸೇರಿ ಹಲವು ಅಂಶಗಳು ಮಾರುಕಟ್ಟೆ ಪುಟಿದೇಳಲು ಕಾರಣವಾಗಿವೆ.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ಎನರ್ಜಿ ಶೇ 3.33, ಅನಿಲ ಮತ್ತು ತೈಲ ಶೇ 3.02, ಮಾಹಿತಿ ತಂತ್ರಜ್ಞಾನ ಶೇ 2.72, ಫೈನಾನ್ಸ್ ಶೇ 1.85, ಎಫ್‌ಎಂಸಿಜಿ ಶೇ 1.29, ಬ್ಯಾಂಕ್ ಶೇ 1.28, ಫಾರ್ಮಾ ಶೇ 1.09 ಮತ್ತು ನಿಫ್ಟಿ ಆಟೊ ಸೂಚ್ಯಂಕ ಶೇ 0.42ರಷ್ಟು ಜಿಗಿದಿದೆ. ರಿಯಲ್ ಎಸ್ಟೇಟ್ ಸೂಚ್ಯಂಕ ಶೇ 2.64, ಮಾಧ್ಯಮ ಸೂಚ್ಯಂಕ ಶೇ 2.14, ಲೋಹ ಸೂಚ್ಯಂಕ ಶೇ 1.65 ಮತ್ತು ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಸೂಚ್ಯಂಕ ಶೇ 0.29ರಷ್ಟು ಕುಸಿದಿದೆ.

**ಏರಿಕೆ – ಇಳಿಕೆ:** ನಿಫ್ಟಿಯಲ್ಲಿ ಅಲ್ಟ್ರಾ ಟೆಕ್ ಸಿಮೆಂಟ್ ಶೇ 9.36, ಗ್ರಾಸಿಮ್ ಇಂಡಸ್ಟ್ರೀಸ್ ಶೇ 8.18, ರಿಲಯನ್ಸ್ ಇಂಡಸ್ಟ್ರೀಸ್ ಶೇ 7.74, ಡಾ.ರೆಡ್ಡೀಸ್ ಲ್ಯಾಬ್ಸ್ ಶೇ 6.61, ಎನ್‌ಟಿಪಿಸಿ ಶೇ 5.18, ಎಲ್‌ಟಿಐ ಮೈಂಡ್ ಟ್ರೀ ಶೇ 4.97, ವಿಪ್ರೊ ಶೇ 4.96, ಸನ್ ಫಾರ್ಮಾ ಶೇ 3.82, ಐಸಿಐಸಿಐ ಬ್ಯಾಂಕ್ ಶೇ 3.61 ಮತ್ತು ಶ್ರೀರಾಮ್ ಫೈನಾನ್ಸ್ ಶೇ 3.18ರಷ್ಟು ಜಿಗಿದಿದೆ.

ಇಂಡಸ್ ಇಂಡ್ ಬ್ಯಾಂಕ್ ಶೇ 4.13, ಐಷರ್ ಮೋಟರ್ಸ್ ಶೇ 3.85, ಸಿಪ್ಲಾ ಶೇ 3.83, ಟಾಟಾ ಸ್ಟೀಲ್ ಶೇ 3.25, ಕೋಲ್ ಇಂಡಿಯಾ ಶೇ 1.44, ಮಾರುತಿ ಸುಜುಕಿ ಶೇ 1.38, ಬಿಪಿಸಿಎಲ್ ಶೇ 1.23, ಬಜಾಜ್ ಆಟೊ ಶೇ 1.14, ಅದಾನಿ ಪೋರ್ಟ್ಸ್ ಶೇ 0.54 ಮತ್ತು ಜೆಎಸ್‌ಡಬ್ಲ್ಯು ಸ್ಟೀಲ್ ಶೇ 0.46ರಷ್ಟು ಕುಸಿದಿವೆ.

**ಮುನ್ನೋಟ:** ಸದ್ಯದ ಪರಿಸ್ಥಿತಿಯಲ್ಲಿ ಷೇರುಪೇಟೆಯಲ್ಲಿ ಏರಿಳಿತದ ಪರಿಸ್ಥಿತಿ ಮುಂದುವರಿಯಲಿದೆ. ಮುಂಬರುವ ಬಜೆಟ್ ಮತ್ತು ಕಂಪನಿಗಳ ತ್ರೈಮಾಸಿಕ ಫಲಿತಾಂಶದ ಮೇಲೆ ಹೂಡಿಕೆದಾರರು ಕಣ್ಣಿಟ್ಟಿದ್ದಾರೆ. ಉಳಿದಂತೆ ಜಾಗತಿಕ ವಿದ್ಯಮಾನಗಳು ಹಾಗೂ ದೇಶೀಯ ಬೆಳವಣಿಗೆಗಳು ಷೇರುಪೇಟೆಯ ಮೇಲೆ ಪರಿಣಾಮ ಬೀರಲಿವೆ.





ಸಂಕ್ಷಿಪ್ತ ಸುದ್ದಿ

### ಇಪಿಎಫ್‌ಒ: ಹೊಸ ಸದಸ್ಯರ ಸೇರ್ಪಡೆ ಶೇ 4ರಷ್ಟು ಇಳಿಕೆ

ನವದೆಹಲಿ (ಪಿಟಿಐ): ನೌಕರರ ಭವಿಷ್ಯ ನಿಧಿ ಸಂಘಟನೆಗೆ (ಇಪಿಎಫ್‌ಒ) 2023–24ನೇ ಹಣಕಾಸು ವರ್ಷದಲ್ಲಿ ಹೊಸದಾಗಿ 1.09 ಕೋಟಿ ಸದಸ್ಯರು ಸೇರ್ಪಡೆಯಾಗಿದ್ದಾರೆ.

2022–23ರಲ್ಲಿ 1.14 ಕೋಟಿ ಸದಸ್ಯರು ಸೇರ್ಪಡೆಯಾಗಿದ್ದರು. ಇದಕ್ಕೆ ಹೋಲಿಸಿದರೆ ಹೊಸ ಚಂದಾದಾರರ ಸೇರ್ಪಡೆಯಲ್ಲಿ ಶೇ 4ಕ್ಕೂ ಹೆಚ್ಚು ಇಳಿಕೆಯಾಗಿದೆ ಎಂದು ಕೇಂದ್ರ ಸಾಂಖ್ಯಿಕ ಯೋಜನಾ ಅನುಷ್ಠಾನ ಸಚಿವಾಲಯದ ವರದಿ ತಿಳಿಸಿದೆ.

2019–20ರಲ್ಲಿ 1.10 ಕೋಟಿ, 2020–21ರಲ್ಲಿ 85 ಲಕ್ಷ, 2021–22ರಲ್ಲಿ 1.08 ಕೋಟಿ ಸದಸ್ಯರು ಸೇರ್ಪಡೆಯಾಗಿದ್ದರು. 2020 ಮತ್ತು 2021ರಲ್ಲಿ ಕೋವಿಡ್ ಸಾಂಕ್ರಾಮಿಕದಿಂದಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು, ಲಾಕ್‌ಡೌನ್ ಘೋಷಿಸಿದ್ದವು. ಇದರಿಂದ ಆರ್ಥಿಕ ಚಟುವಟಿಕೆ ಕುಂಠಿತಗೊಂಡಿತು. ಹಾಗಾಗಿ, ಈ ಅವಧಿಯಲ್ಲಿ ಹೊಸ ಚಂದಾದಾರರ ಸೇರ್ಪಡೆಯಲ್ಲಿ ಇಳಿಕೆಯಾಗಿದೆ ಎಂದು ತಿಳಿಸಿದೆ.

### ಎಫ್‌ಪಿಐ: ₹26,565 ಕೋಟಿ ಬಂಡವಾಳ ಒಳಹರಿವು

ನವದೆಹಲಿ (ಪಿಟಿಐ): ದೇಶದ ಷೇರುಪೇಟೆಗಳಲ್ಲಿ ಜೂನ್ ತಿಂಗಳಿನಲ್ಲಿ ಒಟ್ಟು ₹26,565 ಕೋಟಿ ವಿದೇಶಿ ಬಂಡವಾಳ ಹೂಡಿಕೆಯಾಗಿದೆ.

ಕಳೆದ ಎರಡು ತಿಂಗಳಿನಲ್ಲಿ ವಿದೇಶಿ ಬಂಡವಾಳ ಹೂಡಿಕೆಯು ಕಡಿಮೆಯಾಗಿತ್ತು. ರಾಜಕೀಯ ಸ್ಥಿರತೆ ಹಾಗೂ ಷೇರುಪೇಟೆಗಳಲ್ಲಿ ಸಕಾರಾತ್ಮಕ ವಹಿವಾಟು ನಡೆದಿರುವುದರಿಂದ ಹೂಡಿಕೆ ಪ್ರಮಾಣದಲ್ಲಿ ಏರಿಕೆಯಾಗಿದೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

‘ವಿದೇಶಿ ಬಂಡವಾಳ ಹೂಡಿಕೆದಾರರು (ಎಫ್‌ಪಿಐ) ಕೇಂದ್ರದ ಬಜೆಟ್ ಹಾಗೂ ಪ್ರಸಕ್ತ ಹಣಕಾಸು ವರ್ಷದ ಮೊದಲ ತ್ರೈಮಾಸಿಕದಲ್ಲಿ ಕಂಪನಿಗಳು ಗಳಿಸುವ ಲಾಭದತ್ತ ದೃಷ್ಟಿ ನೆಟ್ಟಿದ್ದಾರೆ. ಹಾಗಾಗಿ, ಒಳಹರಿವು ಪ್ರಮಾಣದಲ್ಲಿ ಸ್ಥಿರತೆ ಸಾಧ್ಯವಾಗಿದೆ’ ಎಂದು ಹಣಕಾಸು ಸಲಹಾ ಸಂಸ್ಥೆ ವಾಟರ್‌ಫೀಲ್ಡ್ ಅಡ್ವೈಸರ್ಸ್‌ನ ನಿರ್ದೇಶಕ ವಿಪುಲ್ ಭೋವರ್ ಹೇಳಿದ್ದಾರೆ.


## ಶಿಕ್ಷಣಕ್ಕಿಂತ 2 ಪಟ್ಟು ಮದುವೆ ಖರ್ಚು

### ಸರಾಸರಿ ವಿವಾಹ ವೆಚ್ಚ ₹12.50 ಲಕ್ಷ: ಜೆಫರಿಸ್ ವರದಿ

ನವದೆಹಲಿ (ಪಿಟಿಐ): ಭಾರತದಲ್ಲಿ ಪ್ರಾಥಮಿಕದಿಂದ ಪದವಿವರೆಗಿನ ಶಿಕ್ಷಣಕ್ಕೆ ಪೋಷಕರು ವ್ಯಯಿಸುವ ಖರ್ಚಿಗಿಂತಲೂ ವಿವಾಹದ ವೆಚ್ಚವು ಎರಡು ಪಟ್ಟು ಹೆಚ್ಚಿದೆ ಎಂದು ಜಾಗತಿಕ ಬ್ರೋಕರೇಜ್ ಸಂಸ್ಥೆ ಜೆಫರಿಸ್ ವರದಿ ತಿಳಿಸಿದೆ.

ದೇಶದಲ್ಲಿ ಮದುವೆಯೊಂದರ ಸರಾಸರಿ ವೆಚ್ಚ ₹12.50 ಲಕ್ಷ ಆಗಿದೆ. ವಿವಾಹ ಮಾರುಕಟ್ಟೆ ಮೌಲ್ಯವು ಅಂದಾಜು ₹10 ಲಕ್ಷ ಕೋಟಿಯಷ್ಟಿದೆ ಎಂದು ಹೇಳಿದೆ.

ವಾರ್ಷಿಕವಾಗಿ 80 ಲಕ್ಷದಿಂದ 1 ಕೋಟಿ ಮದುವೆಗಳು ನಡೆಯುತ್ತವೆ. ಚೀನಾ ಮತ್ತು ಅಮೆರಿಕದಲ್ಲಿ ನಡೆಯುವ ಮದುವೆಗಳಿಂತಲೂ ಹೆಚ್ಚಿದೆ. ಚೀನಾದಲ್ಲಿ 70 ಲಕ್ಷದಿಂದ 80 ಲಕ್ಷ ಹಾಗೂ ಅಮೆರಿಕದಲ್ಲಿ 20 ಲಕ್ಷದಿಂದ 25 ಲಕ್ಷ ವಿವಾಹ ಸಮಾರಂಭಗಳು ನಡೆಯುತ್ತವೆ ಎಂದು ವಿವರಿಸಿದೆ.



ಭಾರತದಲ್ಲಿ ಆಹಾರ ಮತ್ತು ದಿನಸಿ ಮಾರುಕಟ್ಟೆಯ ಮೌಲ್ಯವು ₹56.76 ಲಕ್ಷ ಕೋಟಿಯಿದ್ದು, ಮೊದಲ ಸ್ಥಾನದಲ್ಲಿದೆ. ಆ ನಂತರದ ಸ್ಥಾನದಲ್ಲಿ ವಿವಾಹ ಮಾರುಕಟ್ಟೆ ಇದೆ ಎಂದು ಹೇಳಿದೆ.

ಭಾರತದಲ್ಲಿ ಮದುವೆ ಸಮಾರಂಭ ಮತ್ತು ಅದಕ್ಕೆ ಮಾಡುವ ವೆಚ್ಚದ ವ್ಯಾಪ್ತಿಯು ವಿಸ್ತಾರವಾದುದು. ಇದರಿಂದ ಚಿನ್ನಾಭರಣ, ಸಿದ್ಧಉಡುಪು ಉದ್ಯಮಕ್ಕೆ ಹೆಚ್ಚು ಅನುಕೂಲ ಆಗುತ್ತಿದೆ. ದುಂದುವೆಚ್ಚದ ಮದುವೆಗಳಿಗೆ ಕಡಿವಾಣ ಹಾಕಲು ಸರ್ಕಾರದ ಮಟ್ಟದಲ್ಲಿ ಪ್ರಯತ್ನ ನಡೆಯುತ್ತಿದ್ದರೂ, ವಿದೇಶಗಳಲ್ಲಿ ಭಾರತೀಯರ ವೈಭವೋಪೇತ ಮದುವೆಗಳು ನಡೆಯುತ್ತಿವೆ ಎಂದು ಹೇಳಿದೆ.

ಅಖಿಲ ಭಾರತ ವರ್ತಕರ ಒಕ್ಕೂಟದ (ಸಿಎಐಟಿ) ಮಾಹಿತಿ ಪ್ರಕಾರ ಅಮೆರಿಕಕ್ಕಿಂತಲೂ ಭಾರತದ ಮದುವೆ ಮಾರುಕಟ್ಟೆ ಮೌಲ್ಯವು ಎರಡು ಪಟ್ಟು ಹೆಚ್ಚಿದೆ ಎಂದು ತಿಳಿಸಿದೆ.

ಹಲವು ದಿನಗಳವರೆಗೆ ಮದುವೆ ಮಹೋತ್ಸವ ಆಯೋಜಿಸಲಾಗುತ್ತದೆ. ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡು, ಇದಕ್ಕಾಗಿ ಯಥೇಚ್ಛವಾಗಿ ಹಣ ಖರ್ಚು ಮಾಡಲಾಗುತ್ತಿದೆ. ಕುಟುಂಬದ ಆದಾಯಕ್ಕಿಂತಲೂ ಬಹುಪಟ್ಟು ವೆಚ್ಚ ಮಾಡಲಾಗುತ್ತಿದೆ ಎಂದು ವರದಿ ಹೇಳಿದೆ.

## ಬಂಡವಾಳ ಸಂಗ್ರಹ: ಪಂಜಾಬ್ ಸಿಂಧ್ ಬ್ಯಾಂಕ್ ಮಂಡಳಿ ಒಪ್ಪಿಗೆ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಪಂಜಾಬ್ ಆ್ಯಂಡ್ ಸಿಂಧ್ ಬ್ಯಾಂಕ್ ಅರ್ಹ ಸಾಂಸ್ಥಿಕ ಹೂಡಿಕೆ (ಕ್ಯೂಐಪಿ) ಮೂಲಕ ₹2,000 ಕೋಟಿ ಸಂಗ್ರಹಕ್ಕೆ ಮುಂದಾಗಿದೆ.


‘ಈಗಾಗಲೇ, ಬಂಡವಾಳ ಸಂಗ್ರಹಿಸಲು ಆಡಳಿತ ಮಂಡಳಿಯು ಒಪ್ಪಿಗೆ ನೀಡಿದೆ. ಮಾರುಕಟ್ಟೆಯ ಸ್ಥಿತಿಗತಿ ಆಧರಿಸಿ ಎರಡನೇ ಅಥವಾ ಮೂರನೇ ತ್ರೈಮಾಸಿಕದೊಳಗೆ ಈ ಮೊತ್ತವನ್ನು ಸಂಗ್ರಹಿಸಲಾಗುವುದು’ ಎಂದು ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ಸ್ವರೂಪ್ ಕುಮಾರ್ ಸಹಾ ತಿಳಿಸಿದ್ದಾರೆ.

ಈ ಮೊತ್ತವು ಬ್ಯಾಂಕ್ ಅನಿರೀಕ್ಷಿತ ನಷ್ಟಕ್ಕೆ ತುತ್ತಾದಾಗ ಎದುರಿಸಲು ಹೊಂದಿರುವ ಸಮರ್ಪಕ ಬಂಡವಾಳ ಅನುಪಾತಕ್ಕೆ (ಸಿಎಆರ್) ನೆರವಾಗಲಿದೆ. ಮಾರ್ಚ್ ಅಂತ್ಯಕ್ಕೆ ಬ್ಯಾಂಕ್‌ನ ಸಿಎಆರ್ ಪ್ರಮಾಣವು ಶೇ 17.10ರಷ್ಟಿದೆ ಎಂದು ತಿಳಿಸಿದ್ದಾರೆ.

ಪ್ರಸಕ್ತ ಹಣಕಾಸು ವರ್ಷದಲ್ಲಿ ಬ್ಯಾಂಕ್‌ನ ಸಾಲ ನೀಡಿಕೆಯು ಶೇ 12ರಿಂದ 14ರಷ್ಟು ಏರಿಕೆಯಾಗಲಿದೆ. ರಿಟೇಲ್, ಕೃಷಿ, ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ದಿಮೆಗಳಿಗೆ (ಎಂಎಸ್‌ಎಂಇ) ಸಾಲ ನೀಡಿಕೆಯಲ್ಲಿ ಶೇ 15ರಿಂದ ಶೇ 18ರಷ್ಟು ಹೆಚ್ಚಳವಾಗಲಿದೆ ಎಂದು ಹೇಳಿದ್ದಾರೆ.

ಕೇಂದ್ರ ಸರ್ಕಾರವು ಪಂಜಾಬ್ ಆ್ಯಂಡ್ ಸಿಂಧ್ ಬ್ಯಾಂಕ್‌ನ ಶೇ 98.25ರಷ್ಟು ಷೇರುಗಳ ಮೇಲೆ ಒಡೆತನ ಹೊಂದಿದೆ.

**ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ**



| | |
|---|---|
| ಬೆಂಗಳೂರು | |
| 100ಕ್ಕೆ | ₹560 |
| 12 ಕ್ಕೆ | ₹75 |
| ಮೈಸೂರು | |
| 100ಕ್ಕೆ | ₹565 |

**ರಾಮನಗರ ರೇಷ್ಮೆಗೂಡು**



| | |
|---|---|
| ಮಿಶ್ರತಳಿ (ಸಿ.ಬಿ) | ₹300-466 |
| ದ್ವಿತಳಿ (ಬಿ.ವಿ) | ₹339-608 |

## ಬೈಡನ್ ಸ್ಪರ್ಧೆ: ಪಕ್ಷದೊಳಗೇ ಭಿನ್ನಾಭಿಪ್ರಾಯ

### ಅಮೆರಿಕ ಅಧ್ಯಕ್ಷೀಯ ಚುನಾವಣೆ: ಬೈಡನ್ ವಿರುದ್ಧ ಪ್ರಮುಖ ಪತ್ರಿಕೆಗಳ ಸಂಪಾದಕೀಯ

**ವಾಷಿಂಗ್ಟನ್ (ಪಿಟಿಐ):** ಜೋ ಬೈಡನ್ ಅವರು ಅಮೆರಿಕ ಅಧ್ಯಕ್ಷೀಯ ಚುನಾವಣೆಯಿಂದ ಹಿಂದೆ ಸರಿಯಬೇಕು ಎಂಬ ಅಭಿಪ್ರಾಯವನ್ನು ಡೆಮಾಕ್ರಟಿಕ್ ಪಕ್ಷದವರೇ ಮುಂದಿಡುತ್ತಿದ್ದಾರೆ. ಇದರಿಂದ, ಪಕ್ಷದ ಒಳಗೇ ಭಿನ್ನಾಭಿಪ್ರಾಯ ಮೂಡಿದೆ.

ಕಳೆದ ಗುರುವಾರ ಅಟ್ಲಾಂಟದಲ್ಲಿ, ಬೈಡನ್ ಹಾಗೂ ರಿಪಬ್ಲಿಕನ್ ಪಕ್ಷದ ಅಭ್ಯರ್ಥಿ ಡೊನಾಲ್ಡ್ ಟ್ರಂಪ್ ಅವರ ನಡುವಿನ ಚರ್ಚೆಯಲ್ಲಿ ಬೈಡನ್ ಅವರ ವಾದವು ಸಪ್ಪೆಯಾಗಿತ್ತು. ಇದೇ ಕಾರಣ ನೀಡಿ ಬೈಡನ್ ಅವರನ್ನು ಬದಲಾಯಿಸಬೇಕು ಎನ್ನುವ ಕೂಗು ಎದ್ದಿದೆ.

‘ಚರ್ಚೆಯಲ್ಲಿ ಬೈಡನ್ ಅವರ ಮಾತುಗಳು ಅರ್ಥವಾಗುತ್ತಿರಲಿಲ್ಲ. ಟ್ರಂಪ್ ಅವರ ಪ್ರಶ್ನೆಗೆ ಸರಿಯಾಗಿಯೂ ಉತ್ತರಿಸುತ್ತಿರಲಿಲ್ಲ. ಹಾಗಾಗಿ, ಬೈಡನ್ ಅವರನ್ನು ಪಕ್ಷದ ಅಭ್ಯರ್ಥಿಯನ್ನಾಗಿ ಮುಂದುವರಿಸುವುದು ಸರಿಯೇ ಎಂಬುದು ಪಕ್ಷದ ಹಲವರ ಅಭಿಪ್ರಾಯವಾಗಿದೆ’ ಎಂದು ಬಿಬಿಸಿ ವರದಿ ಮಾಡಿದೆ. ಆದರೆ, ಪಕ್ಷದ ಚುನಾವಣಾ ಪ್ರಚಾರದ ನೇತೃತ್ವವಹಿಸಿರುವ ಹಲವರು, ‘ಬೈಡನ್ ಅವರೇ ನಮ್ಮ ಪಕ್ಷದ ಅಭ್ಯರ್ಥಿ. ಅವರನ್ನು ಬದಲಾಯಿಸುವ ಪ್ರಶ್ನೆಯೇ ಇಲ್ಲ’ ಎಂದು ಪ್ರತಿಪಾದಿಸಿದ್ದಾರೆ.

> **ದೇಶವನ್ನು ಉಳಿಸಲು ಬೈಡನ್ ಅವರು ಚುನಾವಣೆಯಿಂದ ಹಿಂದೆ ಸರಿಯಬೇಕು**
> **ನ್ಯೂಯಾರ್ಕ್ ಟೈಮ್ಸ್ ಸಂಪಾದಕೀಯ**

> **ದೇಶಾಭಿಮಾನವನ್ನು ತೋರ್ಪಡಿಸಲು ಬೈಡನ್‌ಗೆ ಇದು ಸರಿಯಾದ ಸಮಯ. ಅವರು ಅಮೆರಿಕ ಅಧ್ಯಕ್ಷೀಯ ಚುನಾವಣೆಯಿಂದ ಹಿಂದೆ ಸರಿಯಬೇಕು**
> **ದಿ ಅಟ್ಲಾಂಟಿಕ್ ಪತ್ರಿಕೆ**

ಬೈಡನ್ ಪರವಾಗಿ ಪಕ್ಷದ 3,894 ಪ್ರತಿನಿಧಿಗಳು ಇದ್ದಾರೆ. ಪಕ್ಷದ ಅಭ್ಯರ್ಥಿಯಾಗಲು 1,975 ಪ್ರತಿನಿಧಿಗಳ ಬೆಂಬಲ ಸಾಕಾಗುತ್ತದೆ. ಆದರೆ, ನ್ಯೂಯಾರ್ಕ್ ಟೈಮ್ಸ್ ಸೇರಿದಂತೆ ಇತರ ಹಲವು ಪ್ರಮುಖ ಪತ್ರಿಕೆಗಳು, ‘ಬೈಡನ್ ಅವರೇ ಏಕೆ ಡೆಮಾಕ್ರಟಿಕ್ ಪಕ್ಷ ಅಭ್ಯರ್ಥಿಯಾಗಬೇಕು‘ ಎಂದು ಪ್ರಶ್ನಿಸಿವೆ.

‘ವರ್ಚಸ್ಸು ಕಳೆದುಕೊಂಡಿರುವ ಬೈಡನ್ ಅವರು ಟ್ರಂಪ್ ವಿರುದ್ಧ ಸೋಲುವುದು ಹೆಚ್ಚು ನಿಚ್ಚಳವಾಗಿದೆ’ ಎಂದು ಹಲವು ಪ್ರಮುಖ ಅಂಕಣಕಾರರು ಅಭಿಪ್ರಾಯಪಡುತ್ತಿದ್ದಾರೆ.

ನವೆಂಬರ್ 5ರಂದು ನಡೆಯಲಿರುವ ಚುನಾವಣೆಯಿಂದ ಹಿಂದೆ ಸರಿಯುವುದಿಲ್ಲ ಎಂದು ಬೈಡನ್ ಅವರು ಹೇಳಿದ್ದಾರೆ. ‘ಬರಾಕ್ ಒಬಾಮ ಹೇಳಿದ ಹಾಗೆ, ಗುರುವಾರದ ಚರ್ಚೆಯಲ್ಲಿ ನನ್ನ ಪ್ರದರ್ಶನವು ಸಪ್ಪೆಯಾಗಿಯೇ ಇತ್ತು. ನನ್ನ ಪ್ರದರ್ಶನದ ಕುರಿತು ನನಗೆ ಅರಿವಿದೆ. ಆದರೆ, ನಾನು ಕೈಚೆಲ್ಲುವುದಿಲ್ಲ. ನಾನು ಇನ್ನಷ್ಟು ಕಷ್ಟಪಡುತ್ತೇನೆ. ಗುರುವಾರ ರಾತ್ರಿ ನನಗೆ ನಿದ್ದೆ ಬಂದಿಲ್ಲ ನಿಜ. ಆದರೆ, ಟ್ರಂಪ್ ಅವರಿಗೂ ನಿದ್ದೆ ಬಂದಿಲ್ಲ. ಚರ್ಚೆಯಲ್ಲಿ ಆಡಿದ ಸುಳ್ಳುಗಳೇ ಸೋಲನ್ನು ಸೂಚಿಸುತ್ತವೆ. ಅಧ್ಯಕ್ಷನಾಗಿದ್ದಾಗ ಆತ ಏನೆಲ್ಲಾ ಮಾಡಿದ್ದಾನೆ ಎಂದು ಜನರಿಗೆ ನೆನಪಿದೆ’ ಎಂದು ಜೋ ಬೈಡನ್ ಹೇಳಿಕೊಂಡಿದ್ದಾರೆ.

### ಎಂ–ಕ್ಯಾಪ್ ಏರಿಕೆ

ನವದೆಹಲಿ (ಪಿಟಿಐ): ಕಳೆದ ವಾರ ನಡೆದ ವಹಿವಾಟಿನಲ್ಲಿ ಷೇರು ಸೂಚ್ಯಂಕಗಳು ಏರಿಕೆ ಕಂಡಿದ್ದರಿಂದ ಪ್ರಮುಖ 10 ಕಂಪನಿಗಳ ಪೈಕಿ 9 ಕಂಪನಿಗಳ ಮಾರುಕಟ್ಟೆ ಮೌಲ್ಯಕ್ಕೆ (ಎಂ–ಕ್ಯಾಪ್) ₹2.89 ಲಕ್ಷ ಕೋಟಿ ಸೇರ್ಪಡೆಯಾಗಿದೆ.

ರಿಲಯನ್ಸ್ ಇಂಡಸ್ಟ್ರೀಸ್ ಮಾರುಕಟ್ಟೆ ಮೌಲ್ಯಕ್ಕೆ ₹1.52 ಲಕ್ಷ ಕೋಟಿ, ಟಿಸಿಎಸ್ ₹34,733 ಕೋಟಿ, ಐಸಿಐಸಿಐ ಬ್ಯಾಂಕ್ ₹30,286 ಕೋಟಿ, ಭಾರ್ತಿ ಏರ್‌ಟೆಲ್ ₹18,267 ಕೋಟಿ, ಇನ್ಫೊಸಿಸ್ ₹14,656 ಕೋಟಿ, ಎಚ್‌ಡಿಎಫ್‌ಸಿ ಬ್ಯಾಂಕ್ ₹13,808 ಕೋಟಿ, ಎಸ್‌ಬಿಐ ₹11,111 ಕೋಟಿ, ಹಿಂದುಸ್ತಾನ್ ಯೂನಿಲಿವರ್ ₹7,953 ಕೋಟಿ ಮತ್ತು ಐಟಿಸಿ ಮಾರುಕಟ್ಟೆ ಮೌಲ್ಯಕ್ಕೆ ₹6,616 ಕೋಟಿ ಸೇರ್ಪಡೆಯಾಗಿದೆ. ಎಲ್‌ಐಸಿ ಎಂ–ಕ್ಯಾಪ್ ₹22,042 ಕೋಟಿ ಇಳಿಕೆಯಾಗಿದೆ.

### ಕಾರ್ಮಿಕರ ಮುಷ್ಕರ: ಪ್ರಯಾಣಿಕರ ಪರದಾಟ

## 407 ವಿಮಾನಯಾನ ರದ್ದುಗೊಳಿಸಿದ ವೆಸ್ಟ್‌ಜೆಟ್

**ಟೊರಾಂಟೊ (ಎಪಿ):** ಕೆನಡಾದ ಎರಡನೇ ಅತಿದೊಡ್ಡ ವಿಮಾನಯಾನ ಸಂಸ್ಥೆ ವೆಸ್ಟ್‌ಜೆಟ್ ತನ್ನ 407 ವಿಮಾನಯಾನಗಳನ್ನು ರದ್ದುಗೊಳಿಸಿತು. ಇದರಿಂದ 49 ಸಾವಿರ ಪ್ರಯಾಣಿಕರು ಪರದಾಡಬೇಕಾಯಿತು. ವಿಮಾನ ನಿರ್ವಹಣಾ ಕಾರ್ಮಿಕರ ಒಕ್ಕೂಟ ಮುಷ್ಕರ ನಡೆಸುವುದಾಗಿ ಘೋಷಿಸಿದ್ದರಿಂದ ವಿಮಾನಗಳ ಸಂಚಾರ ರದ್ದುಗೊಳಿಸಬೇಕಾಯಿತು.

‘ಸಂಸ್ಥೆಯು ಒಕ್ಕೂಟದ ಸಮಸ್ಯೆಗಳನ್ನು ಬಗೆಹರಿಸಲು ಆಸಕ್ತಿ ತೋರದ ಕಾರಣ ಸದಸ್ಯರು ಶುಕ್ರವಾರ ಸಂಜೆ ಮುಷ್ಕರ ಆರಂಭಿಸಿದರು’ ಎಂದು ದಿ ಏರ್‌ಕ್ರಾಫ್ಟ್ ಫ್ರಟೆರ್ನಲ್ ಅಸೋಸಿಯೇಷನ್ಸ್ ಹೇಳಿದೆ.

ಸೋಮವಾರ ‘ಕೆನಡಾ ದಿನ’ ಆಚರಣೆ ಇದ್ದ ಕಾರಣ ಅಲ್ಲಿಯ ಜನರಿಗೆ ದೀರ್ಘ ವಾರಾಂತ್ಯವಿತ್ತು. ಹೀಗಾಗಿ, ಈ ಮುಷ್ಕರದಿಂದ ಅಂತರರಾಷ್ಟ್ರೀಯ ಮತ್ತು ದೇಶೀಯ ವಿಮಾನಯಾನಕ್ಕೆ ತೊಡಕು ಉಂಟಾಗಿದೆ ಎನ್ನಲಾಗಿದೆ.

ಈ ಅಡಚಣೆಗೆ ಒಕ್ಕೂಟವನ್ನೇ ಗುರಿಮಾಡಿ ಮಾತನಾಡಿರುವ ಸಂಸ್ಥೆಯ ಸಿಇಒ, ‘ಅಮೆರಿಕದ ದುಷ್ಟರ ಒಕ್ಕೂಟವು ಕೆನಡಾದಲ್ಲಿ ಗೂಂಡಾವರ್ತನೆ ತೋರುತ್ತಿದೆ’ ಎಂದಿದ್ದಾರೆ.

‘ಗೌರವಯುತವಾಗಿ ಸಮಾಲೋಚನೆ ನಡೆಸಿ’ ಎನ್ನುವುದು ಸಂಸ್ಥೆ ಎದುರು ನಾವು ಇರಿಸಿರುವ ಒತ್ತಾಯ. ಅದರ ಈಡೇರಿಕೆ ನಿಟ್ಟಿನಲ್ಲಿ ಈ ಮುಷ್ಕರವು ಒಂದು ಪ್ರಯತ್ನವಾಗಿದೆ. ಪ್ರಯಾಣಿಕರಿಗೆ ಇದರಿಂದ ತೊಂದರೆಯಾದರೆ ಒಕ್ಕೂಟ ವಿಷಾದಿಸುತ್ತದೆ’ ಎಂದು ಮುಷ್ಕರನಿರತ ಕಾರ್ಮಿಕರೊಬ್ಬರು ಹೇಳಿದ್ದಾರೆ.

**ಪ್ರಯಾಣಿಕರ ಆಕ್ರೋಶ:** ‘ನಮ್ಮ ಪ್ರಯಾಣವನ್ನು ಸೋಮವಾರಕ್ಕೆ ಮುಂದೂಡಿರುವುದಾಗಿ ವಿಮಾನ ಯಾನ ಸಂಸ್ಥೆಯಿಂದ ಇ–ಮೇಲ್ ದೊರೆಯಿತು. ಕುಟುಂಬ ಸಮೇತ ಪ್ರವಾಸ ಹೋಗಲು ನಾವು 8 ತಿಂಗಳಿನಿಂದ ಕನಸು ಕಂಡಿದ್ದೆವು. ಇನ್ನು ಮುಂದೆ ನಾವು ಯಾರೂ ವೆಸ್ಟ್‌ಜೆಟ್‌ನ ಗ್ರಾಹಕರಾಗಿ ಉಳಿಯುವುದಿಲ್ಲ’ ಎಂದು ಪ್ರಯಾಣಿಕರಾದ ಸಮಿನ್ ಸಹನ್ ಮತ್ತು ಸಮೀ ಜಾನ್ ಆಕ್ರೋಶ ವ್ಯಕ್ತಪಡಿಸಿದರು.

### ಇಂದಿನಿಂದ ವಿಂಬಲ್ಡನ್ ಟೆನಿಸ್: ಸಿನ್ನರ್, ಅಲ್ಕರಾಜ್ ಮೇಲೆ ಕಣ್ಣು

# ಸ್ಪರ್ಧಾಕಣಕ್ಕೆ ಜೊಕೊವಿಚ್ ಸಜ್ಜು



ಲಂಡನ್‌ನಲ್ಲಿ ಅಭ್ಯಾಸ ನಡೆಸಿದ ನೊವಾಕ್ ಜೊಕೊವಿಚ್ –ಎಎಫ್‌ಪಿ ಚಿತ್ರ

ಲಂಡನ್ (ಎಎಫ್‌ಪಿ): ಏಳು ಬಾರಿಯ ಚಾಂಪಿಯನ್ ನೊವಾಕ್ ಜೊಕೊವಿಚ್ ಅವರು ಇಲ್ಲಿ ಸೋಮವಾರ ಆರಂಭವಾಗುವ ವಿಂಬಲ್ಡನ್ ಟೆನಿಸ್ ಟೂರ್ನಿಯಲ್ಲಿ ಕಣಕ್ಕೆ ಇಳಿಯಲು ಸಜ್ಜಾಗಿದ್ದಾರೆ. ಫ್ರೆಂಚ್ ಓಪನ್ ಟೂರ್ನಿನಲ್ಲಿ ಮೊಣಕಾಲಿನ ನೋವಿನಿಂದ ಹಿಂದೆ ಸರಿದಿದ್ದ ಅವರು ಈಗ ಚೇತರಿಸಿಕೊಂಡು, ಇದೀಗ ದಾಖಲೆಯ 25ನೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಯತ್ತ ಚಿತ್ತ ಹರಿಸಿದ್ದಾರೆ.

37 ವರ್ಷದ ಸರ್ಬಿಯಾದ ಆಟಗಾರ ಕಳೆದ ವರ್ಷ ಇಲ್ಲಿ ಫೈನಲ್‌ನಲ್ಲಿ ಕಾರ್ಲೋಸ್ ಅಲ್ಕರಾಜ್ ಅವರಿಗೆ ಮಣಿದು, ರನ್ನರ್ ಅಪ್ ಸ್ಥಾನ ಪಡೆದಿದ್ದರು. ಒಟ್ಟು 24ನೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಗೆದ್ದಿರುವ ಅವರು, ಈ ಋತುವಿನಲ್ಲಿ ಪ್ರಶಸ್ತಿಯ ಬರ ಎದುರಿಸುತ್ತಿದ್ದಾರೆ. ಮೊಣಕಾಲು ಶಸ್ತ್ರಚಿಕಿತ್ಸೆಗೆ ಒಳಗಾಗಿ ಲಂಡನ್‌ಗೆ ಬಂದಿಳಿದಿರುವ ಅವರು ಲಯಕ್ಕೆ ಮರಳುವ ವಿಶ್ವಾಸದಲ್ಲಿದ್ದಾರೆ.

ಜೊಕೊವಿಚ್ ಇಲ್ಲಿ 2011, 2014, 2015, 2018, 2019, 2021, 2022ರಲ್ಲಿ ಚಾಂಪಿಯನ್ ಕಿರೀಟ ಧರಿಸಿದ ದಾಖಲೆ ಹೊಂದಿದ್ದಾರೆ. ರೋಜರ್ ಫೆಡರರ್ ದಾಖಲೆಯ ಎಂಟು ಬಾರಿ ವಿಂಬಲ್ಡನ್ ಪ್ರಶಸ್ತಿ ಗೆದ್ದಿದ್ದಾರೆ. ಈ ಬಾರಿ ಜೊಕೊವಿಚ್ ಇಲ್ಲಿ ಚಾಂಪಿಯನ್ ಆದರೆ ಫೆಡರರ್ ದಾಖಲೆಯನ್ನು ಸರಿಗಟ್ಟಲಿದ್ದಾರೆ. ಜೊಕೊವಿಚ್ ಅವರು ಮಂಗಳವಾರ 123ನೇ ಕ್ರಮಾಂಕದ ಜೆಕ್ ಗಣರಾಜ್ಯದ ವಿಟ್ ಕೊಪ್ರಿವಾ ಅವರ ವಿರುದ್ಧ ಅಭಿಯಾನ ಆರಂಭಿಸುವರು.

ಜೂನ್‌ನಲ್ಲಿ ನಡೆದ ಫ್ರೆಂಚ್ ಓಪನ್‌ನಲ್ಲಿ ಕ್ವಾರ್ಟರ್ ಫೈನಲ್ ಹಂತ ತಲುಪಿದ್ದ ಜೊಕೊವಿಚ್, ನಾರ್ವೆಯ ಕ್ಯಾಸ್ಪರ್ ರುಡ್ ಅವರನ್ನು ಎದುರಿಸಬೇಕಿತ್ತು. ಹಿಂದೆ ಸರಿದ ನಂತರ ಜೊಕೊವಿಚ್ ಎಟಿಪಿ ರ‍್ಯಾಂಕಿಂಗ್‌ನಲ್ಲಿ ಎರಡನೇ ಸ್ಥಾನಕ್ಕೆ ಕುಸಿದಿದ್ದರು. ಇಟಲಿಯ 22 ವರ್ಷದ ಯಾನಿಕ್ ಸಿನ್ನರ್ ಅವರು ಅಗ್ರ ಕ್ರಮಾಂಕಕ್ಕೆ ಏರಿದ್ದರು. ಆ ಟೂರ್ನಿಯಲ್ಲಿ ಸ್ಪೇನ್‌ನ 21 ವರ್ಷ ವಯಸ್ಸಿನ ಅಲ್ಕರಾಜ್ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿದ್ದರು.

ಆಸ್ಟ್ರೇಲಿಯಾ ಓಪನ್ ಚಾಂಪಿಯನ್ ಸಿನ್ನರ್ ಮತ್ತು ಮೂರನೇ ಕ್ರಮಾಂಕದ ಅಲ್ಕರಾಜ್, ನಾಲ್ಕನೇ ಕ್ರಮಾಂಕದ ಜರ್ಮನಿಯ ಅಲೆಕ್ಸಾಂಡರ್ ಜ್ವೆರೆವ್ ಸ್ಪರ್ಧಾಕಣದಲ್ಲಿದ್ದಾರೆ.

# ಲೂಸ್ ಶತಕ: ದಕ್ಷಿಣ ಆಫ್ರಿಕಾ ಹೋರಾಟ

### ಸ್ನೇಹಾ ರಾಣಾಗೆ ಎಂಟು ವಿಕೆಟ್: ಮೊದಲ ಇನಿಂಗ್ಸ್‌ನಲ್ಲಿ ಭಾರತಕ್ಕೆ ಮುನ್ನಡೆ





ವಿಕೆಟ್ ಪಡೆದ ಸಂಭ್ರಮದಲ್ಲಿ ಭಾರತದ ಸ್ನೇಹಾ ರಾಣ (ಎಡಚಿತ್ರ). ಶತಕ ಸಿಡಿಸಿದ ಸುನೆ ಲೂಸ್ –ಪಿಟಿಐ ಚಿತ್ರಗಳು

ಚೆನ್ನೈ (ಪಿಟಿಐ): ಸ್ನೇಹಾ ರಾಣಾ ಅವರ ದಾಳಿಯ ಮುಂದೆ ಮೊದಲ ಇನಿಂಗ್ಸ್‌ನಲ್ಲಿ ಭಾರಿ ಹಿನ್ನಡೆ ಅನುಭವಿಸಿದ ದಕ್ಷಿಣ ಆಫ್ರಿಕಾ ಎರಡನೇ ಇನಿಂಗ್ಸ್‌ನಲ್ಲಿ ಪುಟಿದೆದ್ದಿತು.

ಚೆಪಾಕ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಮಹಿಳಾ ಟೆಸ್ಟ್ ಕ್ರಿಕೆಟ್ ಪಂದ್ಯದ ಮೂರನೇ ದಿನದಾಟದಲ್ಲಿ ಸುನೆ ಲೂಸ್ (109 ರನ್) ಶತಕ ಹಾಗೂ ನಾಯಕಿ ಲೌರಾ ವೊಲ್ವಾರ್ಟ್ (ಬ್ಯಾಟಿಂಗ್ 93; 252ಎ) ಅವರ ದಿಟ್ಟ ಬ್ಯಾಟಿಂಗ್‌ನಿಂದ ತಂಡವು ಎರಡನೇ ಇನಿಂಗ್ಸ್‌ನಲ್ಲಿ 85 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 232 ರನ್ ಗಳಿಸಿತು.

ಆದರೆ ಭಾರತ ತಂಡವು ಮೊದಲ ಇನಿಂಗ್ಸ್‌ನಲ್ಲಿ ಪೇರಿಸಿರುವ 603 ರನ್‌ಗಳ ಬೃಹತ್ ಮೊತ್ತವನ್ನು ಚುಕ್ತಾ ಮಾಡಲು ಪ್ರವಾಸಿ ಬಳಗವು ಇನ್ನೂ 105 ರನ್ ಗಳಿಸಬೇಕಿದೆ.

ಮೊದಲ ಇನಿಂಗ್ಸ್‌ನಲ್ಲಿ ಭಾರತದ ಸ್ನೇಹಾ ರಾಣಾ (77ಕ್ಕೆ8) ಅವರ ದಾಳಿಯ ಮುಂದೆ ದಕ್ಷಿಣ ಆಫ್ರಿಕಾ ತಂಡವು 84.3 ಓವರ್‌ಗಳಲ್ಲಿ 266 ರನ್‌ಗಳಿಗೆ ಎಲ್ಲ ವಿಕೆಟ್ ಕಳೆದುಕೊಂಡಿತು. ಅದರೊಂದಿಗೆ 337 ರನ್‌ಗಳ ಹಿನ್ನಡೆ ಅನುಭವಿಸಿತು.

ಭಾರತ ತಂಡವು ದಕ್ಷಿಣ ಆಫ್ರಿಕಾ ಮೇಲೆ ಫಾಲೋ ಆನ್ ಹೇರಿತು. ಎರಡನೇ ಇನಿಂಗ್ಸ್‌ನಲ್ಲಿಯೂ ಆರಂಭಿಕ ಆಘಾತ ಅನುಭವಿಸಿದ ಆಫ್ರಿಕಾ ತಂಡವು ನಂತರ ಚೇತರಿಸಿಕೊಂಡಿತು. ಲೌರಾ ಮತ್ತು ಲೂಸ್ ಎರಡನೇ ವಿಕೆಟ್ ಜೊತೆಯಾಟದಲ್ಲಿ 190 ರನ್ ಸೇರಿಸಿದರು.

ಇನಿಂಗ್ಸ್‌ನ 74ನೇ ಓವರ್‌ನಲ್ಲಿ ಹರ್ಮನ್‌ಪ್ರೀತ್ ಕೌರ್ ಅವರು ಸುನೆ ಲೂಸ್ ವಿಕೆಟ್ ಗಳಿಸಿ ಜೊತೆಯಾಟವನ್ನು ಮುರಿದರು.

**ಸಂಕ್ಷಿಪ್ತ ಸ್ಕೋರು:** ಮೊದಲ ಇನಿಂಗ್ಸ್: ಭಾರತ: 115.1 ಓವರ್‌ಗಳಲ್ಲಿ 6ಕ್ಕೆ603. ದಕ್ಷಿಣ ಆಫ್ರಿಕಾ: 84.3 ಓವರ್‌ಗಳಲ್ಲಿ 266 (ನಡೈನ್ ಡಿ ಕ್ಲರ್ಕ್ 39, ಸ್ನೇಹಾ ರಾಣಾ 77ಕ್ಕೆ8, ದೀಪ್ತಿ ಶರ್ಮಾ 47ಕ್ಕೆ2) ಎರಡನೇ ಇನಿಂಗ್ಸ್: ದಕ್ಷಿಣ ಆಫ್ರಿಕಾ: 85 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 232 (ಲೌರಾ ವೊಲ್ವಾರ್ಟ್ ಬ್ಯಾಟಿಂಗ್ 93, ಸುನೆ ಲೂಸ್ 109)

## ಕೊಪಾ: ಕ್ವಾರ್ಟರ್ ಫೈನಲ್‌ಗೆ ಕೆನಡಾ

ಒರ್ಲ್ಯಾಂಡೊ, ಅಮೆರಿಕ (ಎಪಿ): ಕೆನಡಾ ತಂಡವು ಕೊಪಾ ಅಮೆರಿಕ ಫುಟ್‌ಬಾಲ್ ಟೂರ್ನಿಯಲ್ಲಿ ಚಿಲಿ ತಂಡದ ಜೊತೆ ಗೋಲಿಲ್ಲದೇ ಡ್ರಾ ಮಾಡಿ ಕೊಂಡಿತು. ಆ ಮೂಲಕ ಕೆನಡಾ ಕ್ವಾರ್ಟರ್ ಫೈನಲ್ ಪ್ರವೇಶಿಸಿತು.

ಕೆನಡಾ ತಂಡದ ಗೋಲ್‌ಕೀಪರ್ ಮ್ಯಾಕ್ಸಿಮ್ ಕ್ರೆಪಿಯು ಅವರು ಮೂರು ಗೋಲುಗಳನ್ನು ತಡೆಯುವ ಮೂಲಕ ತಂಡದ ಗೆಲುವಿಗೆ ಪ್ರಮುಖ ಕಾಣಿಕೆ ನೀಡಿದರು. ‘ಎ’ ಗುಂಪಿನಲ್ಲಿ ಅರ್ಜೆಂಟೀನಾ 9 ಅಂಕಗಳೊಂದಿಗೆ ಅಗ್ರಸ್ಥಾನದಲ್ಲಿದ್ದರೆ, ಕೆನಡಾ ನಾಲ್ಕು ಅಂಕಗಳನ್ನು ಸಂಪಾದಿಸಿ ಎರಡನೇ ಸ್ಥಾನದಲ್ಲಿದೆ. ಸತತ ಎರಡನೇ ಬಾರಿಗೆ ಪ್ರಶಸ್ತಿ ಗೆಲ್ಲುವ ನೆಚ್ಚಿನ ತಂಡವಾಗಿರುವ ಅರ್ಜೆಂಟೀನಾ ಆಡಿದ ಎಲ್ಲ ಮೂರು ಪಂದ್ಯಗಳನ್ನು ಗೆದ್ದುಕೊಂಡಿದೆ. ಮುಖ್ಯ ಕೋಚ್ ರಿಕಾರ್ಡೊ ಗರೇಕಾ ಅವರ ಅನುಪಸ್ಥಿತಿಯಲ್ಲಿ ಚಿಲಿ ತಂಡ ಗ್ರೂಪ್ ಹಂತದ ಅಭಿಯಾನ ಪೂರ್ಣಗೊಳಿಸಿತು. 2021ರಲ್ಲಿ ನಡೆದ ಚಾಂಪಿಯನ್‌ಷಿಪ್ ಪಂದ್ಯದಲ್ಲಿ ಅರ್ಜೆಂಟೀನಾ 1-0 ಗೋಲುಗಳಿಂದ ಬ್ರೆಜಿಲ್ ತಂಡವನ್ನು ಮಣಿಸಿತ್ತು.

# ಇಂಗ್ಲೆಂಡ್‌ಗೆ ಮಣಿದ ಸ್ಲೊವಾಕಿಯಾ



ಜರ್ಮನಿಯ ಡಿಫೆಂಡರ್ ಡೇವಿಡ್ ರೌಮ್ ಅವರು ಗೋಲು ಗಳಿಸಲು ಯತ್ನಿಸಿದರು –ಎಎಫ್‌ಪಿ ಚಿತ್ರ

ಯುರೋ ಕಪ್ 2024 ಜರ್ಮನಿ

ಡಾರ್ಟ್ಮಂಡ್ (ಎಪಿ): ಆತಿಥೇಯ ಜರ್ಮನಿ ತಂಡವು ಭಾನುವಾರ ಯುರೋ ಕಪ್ ಫುಟ್‌ಬಾಲ್ ಟೂರ್ನಿಯಲ್ಲಿ 2–0 ಯಿಂದ ಡೆನ್ಮಾರ್ಕ್ ತಂಡವನ್ನು ಮಣಿಸಿ, ಕ್ವಾರ್ಟರ್ ಫೈನಲ್‌ಗೆ ಲಗ್ಗೆ ಇಟ್ಟಿದೆ.

ಕೈ ಹ್ಯಾವರ್ಟ್ಜ್ (53ನೇ ನಿ) ಮೊದಲ ಗೋಲು ಗಳಿಸಿದರೆ, ಜಮಾಲ್ ಮುಸಿಯಾಲ್ (68ನೇ ನಿ) ಜರ್ಮನಿಯ ಮುನ್ನಡೆಯನ್ನು ದ್ವಿಗುಣಗೊಳಿಸಿದರು. ಈ ಟೂರ್ನಿಯಲ್ಲಿ ಇದು ಜಮಾಲ್ ಅವರ ಮೂರನೇ ಗೋಲು. ಜರ್ಮನಿ ತಂಡದ ಪ್ರಬಲ ರಕ್ಷಣಾ ವ್ಯೂಹದಿಂದ ಡೆನ್ಮಾರ್ಕ್ ತಂಡಕ್ಕೆ ಗೋಲು ಗಳಿಸಲು ಅವಕಾಶ ಆಗಲಿಲ್ಲ. ಮಳೆ ಸುರಿದ ಕಾರಣ ಸುಮಾರು 25 ನಿಮಿಷಗಳ ಕಾಲ ಆಟ ಸ್ಥಗಿತಗೊಂಡಿತು. ಜರ್ಮನಿ ಮುಂದಿನ ಪಂದ್ಯದಲ್ಲಿ ಸ್ಪೇನ್ ಅಥವಾ ಜಾರ್ಜಿಯಾ ವಿರುದ್ಧ ಸೆಣಸಲಿದೆ.

**ಸ್ವಿಜರ್ಲೆಂಡ್‌ಗೆ ಜಯ:** ಮತ್ತೊಂದು ಪಂದ್ಯದಲ್ಲಿ ಸ್ವಿಜರ್ಲೆಂಡ್ 2-0ರಿಂದ ಹಾಲಿ ಚಾಂಪಿಯನ್ ಇಟಲಿಯನ್ನು ಸೋಲಿಸಿದೆ.

**ಇಂಗ್ಲೆಂಡ್‌ಗೆ ಜಯ:** ಭಾನುವಾರ ರಾತ್ರಿ ನಡೆದ 16 ಘಟ್ಟದ ಪಂದ್ಯದಲ್ಲಿ ಇಂಗ್ಲೆಂಡ್ ತಂಡವು 2–1ರಿಂದ ಸ್ಲೊವಾಕಿಯಾ ತಂಡವನ್ನು ಮಣಿಸಿತು. ಜೂಡ್ ಬೆಲ್ಲಿಂಗ್‌ಹ್ಯಾಮ್ (90 + 5ನೇ ನಿ) ಮತ್ತು ನಾಯಕ ಹ್ಯಾರಿ ಕೇನ್ ಇಂಗ್ಲೆಂಡ್ ಪರ ಗೋಲು ಗಳಿಸಿದರು. ಸ್ಲೊವಾಕಿಯಾ ಪರ ಇವಾನ್ ಸ್ಕ್ರಾನ್ಜ್ ಏಕೈಕ ಗೋಲು ತಂದಿತ್ತರು.

### ರಾಷ್ಟ್ರಮಟ್ಟದ ಫಿಡೆ ರೇಟೆಡ್ ರ‍್ಯಾಪಿಡ್ ಚೆಸ್ ಟೂರ್ನಿಗೆ ತೆರೆ

# ಶರಣ್‌ಗೆ ನಾರಾಯಣ ಗುರು ಟ್ರೋಫಿ

ಪ್ರಜಾವಾಣಿ ವಾರ್ತೆ



ನಾರಾಯಣ ಗುರು ಟ್ರೋಫಿ ಜೊತೆ ಶರಣ್ ರಾವ್

ಪಡುಬಿದ್ರಿ (ಉಡುಪಿ ಜಿಲ್ಲೆ): ಮೊದಲ ದಿನದ ಹಿನ್ನಡೆಯಿಂದ ಚೇತರಿಸಿಕೊಂಡು ಅಮೋಘ ಆಟವಾಡಿದ ಮಂಗಳೂರಿನ ಶರಣ್ ರಾವ್ ಭಾನುವಾರ ಇಲ್ಲಿ ಮುಕ್ತಾಯಗೊಂಡ ರಾಷ್ಟ್ರಮಟ್ಟದ ಫಿಡೆ ರೇಟೆಡ್ ರ‍್ಯಾಪಿಡ್ ಚೆಸ್ ಟೂರ್ನಿಯ ನಾರಾಯಣ ಗುರು ಟ್ರೋಫಿ ತಮ್ಮದಾಗಿಸಿಕೊಂಡರು.

ಶ್ರೀ ನಾರಾಯಣಗುರು ಸ್ಕೂಲ್ ಆಫ್ ಚೆಸ್ ಸಂಸ್ಥೆಯ ಉಡುಪಿ ಮತ್ತು ಕಾಪು ಘಟಕ, ಕಾಪು ಹಳೆ ಮಾರಿಯಮ್ಮ ಸಭಾಭವನದಲ್ಲಿ ಆಯೋಜಿಸಿದ್ದ ಟೂರ್ನಿಯ ಒಂಬತ್ತು ಸುತ್ತುಗಳಲ್ಲಿ ಅವರು 8.5 ಪಾಯಿಂಟ್ ಕಲೆ ಹಾಕಿದರು. ಟೂರ್ನಿಯಲ್ಲಿ ಭಾಗವಹಿಸಿದ ಏಕೈಕ ಇಂಟರ್‌ನ್ಯಾಷನಲ್ ಮಾಸ್ಟರ್ ಶರಣ್ ₹ 25 ಸಾವಿರ ಮತ್ತು ಟ್ರೋಫಿ ಗಳಿಸಿದರು.

ಶನಿವಾರ ಆರು ಸುತ್ತುಗಳಲ್ಲಿ 5.5 ಪಾಯಿಂಟ್ ಗಳಿಸಿದ್ದ ಎರಡನೇ ಶ್ರೇಯಾಂಕಿತ ಶರಣ್ ಭಾನುವಾರದ ಎಲ್ಲ ಸುತ್ತು ಗಳಲ್ಲೂ ಜಯಶಾಲಿಯಾದರು. ಅಗ್ರಶ್ರೇಯಾಂಕಿತ, ಕೇರಳದ ನಿತಿನ್ ಬಾಬು ಮತ್ತು ತಮಿಳುನಾಡಿನ ಆಕಾಶ್ ಜಿ ವಿರುದ್ಧ ಕ್ರಮ ವಾಗಿ 8 ಮತ್ತು 9ನೇ ಸುತ್ತುಗಳಲ್ಲಿ ಗೆದ್ದರು. ಐದನೇ ಸುತ್ತಿನಿಂದ 8ನೇ ಸುತ್ತಿನ ವರೆಗೆ ಆಕಾಶ್ ಅಗ್ರಸ್ಥಾನ ಉಳಿಸಿಕೊಂಡಿದ್ದರು.

ಆಕಾಶ್ ಜಿ, ಮಂಗಳೂರಿನ ಲಕ್ಷಿತ್ ಸಾಲ್ಯಾನ್ ಮತ್ತು ತಮಿಳುನಾಡಿನ ಎಸ್.ಎ ಕಣ್ಣನ್ ತಲಾ 8 ಪಾಯಿಂಟ್ ಗಳಿಸಿದರು. ಉತ್ತಮ ಟೈಬ್ರೇಕರ್ ಆಧಾರದಲ್ಲಿ ಆಕಾಶ್ ದ್ವಿತೀಯ, ಲಕ್ಷಿತ್ ತೃತೀಯ ಮತ್ತು ಕಣ್ಣನ್ ನಾಲ್ಕನೇ ಸ್ಥಾನ ಗಳಿಸಿದರು. 7.5 ಪಾಯಿಂಟ್‌ಗಳೊಂದಿಗೆ ನಿತಿನ್ ಬಾಬು ಐದನೇ ಸ್ಥಾನಕ್ಕೆ ಸಮಾಧಾನಪಟ್ಟುಕೊಂಡರು. ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದ ರಾಮಕೃಷ್ಣ ಜೆ, ಕರ್ನಾಟಕದ ಆರುಷ್ ಭಟ್ ಮತ್ತು ಶಾನ್ ಡಿಯೋನ್ ಸಿಕ್ವೇರ ಕೂಡ 7.5 ಪಾಯಿಂಟ್ ಗಳಿಸಿದರು.

**ತಿಂಗಳಲ್ಲಿ 3ನೇ ಪ್ರಶಸ್ತಿ:** ಶರಣ್ ರಾವ್ ಜೂನ್ ತಿಂಗಳಲ್ಲಿ ಗೆದ್ದ ಮೂರನೇ ಪ್ರಶಸ್ತಿ ಇದಾಗಿದೆ. ಜೂನ್ 14ರಿಂದ ಶ್ರೀಲಂಕಾದಲ್ಲಿ ನಡೆದ ರಾಹುಲಿಯನ್ಸ್ ಬ್ಲಿಜ್ ಚೆಸ್ ಹಬ್ಬ ಮತ್ತು 22ರಿಂದ ರೋಟರಿ ಕ್ಲಬ್ ಹುಬ್ಬಳ್ಳಿ ಉತ್ತರ ಆಯೋಜಿಸಿದ್ದ ಅಖಿಲ ಭಾರತ ಫಿಡೆ ರೇಟಿಂಗ್ ರ‍್ಯಾಪಿಡ್ ಚೆಸ್ ಟೂರ್ನಿಯಲ್ಲಿ ಅವರು ಚಾಂಪಿಯನ್ ಆಗಿದ್ದರು. ಮೇ 25ರಿಂದ ಕರ್ನಾಟಕ ರಾಜ್ಯ ಚೆಸ್ ಸಂಸ್ಥೆ ಆಯೋಜಿಸಿದ್ದ ರಾಜ್ಯ ರ‍್ಯಾಪಿಡ್ ಚೆಸ್ ಚಾಂಪಿಯನ್‌ಷಿಪ್‌ನಲ್ಲೂ ಅವರು ಪ್ರಶಸ್ತಿ ಗೆದ್ದಿದ್ದರು.

**ಕೊನೆಯ ಸುತ್ತಿನ ಪ್ರಮುಖ ಫಲಿತಾಂಶ:** ಮಂಗಳೂರಿನ ಶರಣ್ ರಾವ್‌ಗೆ ತಮಿಳುನಾಡಿನ ಆಕಾಶ್ ವಿರುದ್ಧ ಜಯ. ತಮಿಳುನಾಡಿನ ಎಸ್.ಎ ಕಣ್ಣನ್‌ಗೆ ಕರ್ನಾಟಕದ ದ್ರಿಕ್ಷು ಕೆ ವಸಂತ್ ಎದುರು, ಮಂಗಳೂರಿನ ಲಕ್ಷಿತ್ ಸಾಲ್ಯಾನ್‌ಗೆ ಗೋವಾದ ಜೋಶುವಾ ಮಾರ್ಕ್ ಟೆಲಿಸ್ ವಿರುದ್ಧ, ಕೇರಳದ ನಿತಿನ್ ಬಾಬುಗೆ ಕರ್ನಾಟಕದ ಪಂಕಜ್ ಭಟ್ ವಿರುದ್ಧ, ಕಾರ್ತಿಕ್ ಸಾಯ್‌ಗೆ ಕರ್ನಾಟಕದ ಲೀಲಾಜಯ ಕೃಷ್ಣ ವಿರುದ್ಧ ಹಾಗೂ ಕರ್ನಾಟಕದ ಪ್ರಶಾಂತ್ ನಾಯಕ್‌ಗೆ ತಮಿಳುನಾಡಿನ ದೀಪಕ್ ಲಕ್ಷಣ ಎದುರು ಜಯ; ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದ ರಾಮಕೃಷ್ಣ ಜೆ ಮತ್ತು ಮಂಗಳೂರಿನ ಶಾನ್ ಡಿಯೋನ್ ಸಿಕ್ವೇರಾ, ಕರ್ನಾಟಕದ ಆರುಷ್ ಭಟ್ ಮತ್ತು ಗೋವಾದ ಋಷಿಕೇಶ್ ಪರಬ್, ಕರ್ನಾಟಕದ ನಿಹಾಲ್ ಎನ್.ಶೆಟ್ಟಿ ಮತ್ತು ಮಹಾರಾಷ್ಟ್ರದ ಸಾಹು ವಿಕ್ರಮಾದಿತ್ಯ, ಕರ್ನಾಟಕದ ಚಿನ್ಮಯ ಎಸ್ ಭಟ್ ಮತ್ತು ಗೋವಾದ ಚೈತನ್ಯ ಗಾಂವ್ಕರ್ ನಡುವಿನ ಪಂದ್ಯ ಡ್ರಾ.

### ‘ಮನ್ ಕಿ ಬಾತ್’: ಪ್ರಜಾಪ್ರಭುತ್ವದಲ್ಲಿ ನಂಬಿಕೆಯಿಟ್ಟವರಿಗೆ ಪ್ರಧಾನಿ ಮೋದಿ ಕೃತಜ್ಞತೆ

# ‘ಭಾರತದ ಸಂಸ್ಕೃತಿಗೆ ಜಾಗತಿಕ ಮನ್ನಣೆ’

ಪ್ರಜಾವಾಣಿ ವಾರ್ತೆ/ ಪಿಟಿಐ



ನರೇಂದ್ರ ಮೋದಿ

ನವದೆಹಲಿ: ಪ್ರಧಾನಿಯಾಗಿ ಮೂರನೇ ಅವಧಿಗೆ ಅಧಿಕಾರ ವಹಿಸಿಕೊಂಡ ಬಳಿಕ ಭಾನುವಾರ ತಮ್ಮ ಮೊದಲ ‘ಮನ್ ಕಿ ಬಾತ್’ (ಮನದ ಮಾತು) ತಿಂಗಳ ರೇಡಿಯೊ ಕಾರ್ಯಕ್ರಮದಲ್ಲಿ ಮಾತನಾಡಿದ ನರೇಂದ್ರ ಮೋದಿ ಅವರು, ಸಂವಿಧಾನ ಮತ್ತು ಪ್ರಜಾಪ್ರಭುತ್ವದಲ್ಲಿ ನಂಬಿಕೆಯಿರಿಸಿದ ದೇಶದ ಜನರಿಗೆ ಕೃತಜ್ಞತೆ ಸಲ್ಲಿಸಿದ್ದಾರೆ.

ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ತಮ್ಮ ಹಕ್ಕು ಚಲಾಯಿಸಿದ ಸಮಾರು 65 ಕೋಟಿ ಮತದಾರರು ಮತ್ತು ವಿಶ್ವದ ಅತಿದೊಡ್ಡ ಮತದಾನ ಪ್ರಕ್ರಿಯೆಯನ್ನು ಸುಸೂತ್ರವಾಗಿ ನಡೆಸಿದ ಚುನಾವಣಾ ಆಯೋಗವನ್ನು ಅವರು ಶ್ಲಾಘಿಸಿದರು. ತಮ್ಮ 30 ನಿಮಿಷಗಳ ಮಾತಿನಲ್ಲಿ ಹಲವು ವಿಚಾರಗಳನ್ನು ಪ್ರಸ್ತಾಪಿಸಿದರು.

**ಒಲಿಂಪಿಕ್ಸ್‌ನಲ್ಲಿ ಯಶಸ್ಸಿಗೆ ಹಾರೈಕೆ:** ಮುಂಬರುವ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಭಾರತದ ಕ್ರೀಡಾಪಟುಗಳು ಉತ್ತಮ ಸಾಧನೆ ಮಾಡಲಿ ಎಂದು ಪ್ರಧಾನಿ ಅವರು ಶುಭಹಾರೈಸಿದರು. ದೇಶದ ಜನರು ‘ಚಿಯರ್ 4 ಭಾರತ್’ ಹ್ಯಾಷ್‌ಟ್ಯಾಗ್‌ನಡಿ ಕ್ರೀಡಾಪಟುಗಳಿಗೆ ಉತ್ತೇಜನ ನೀಡಬೇಕು ಎಂದು ಮನವಿ ಮಾಡಿದರು.

ಕಳೆದ ಬಾರಿ ಟೋಕಿಯೊದಲ್ಲಿ ನಡೆದಿದ್ದ ಒಲಿಂಪಿಕ್ಸ್‌ನಲ್ಲಿ ನಮ್ಮ ಕ್ರೀಡಾಪಟುಗಳು ನೀಡಿದ್ದ ಪ್ರದರ್ಶನವು ಜನರ ಹೃದಯ ಗೆದ್ದಿತ್ತು. ಈ ಬಾರಿಯ ಒಲಿಂಪಿಕ್ಸ್‌ನಲ್ಲಿ ಪಾಲ್ಗೊಳ್ಳುವ ಅಥ್ಲೀಟ್‌ಗಳು ಕಠಿಣ ತಯಾರಿಯಲ್ಲಿ ನಿರತರಾಗಿದ್ದಾರೆ ಎಂದು ಹೇಳಿದರು.

**ಭಾರತದ ಸಂಸ್ಕೃತಿಗೆ ಜಾಗತಿಕ ಮನ್ನಣೆ:** ಭಾರತದ ಸಂಸ್ಕೃತಿ ಮತ್ತು ಇಲ್ಲಿನ ಉತ್ಪನ್ನಗಳಿಗೆ ಜಾಗತಿಕ ಮನ್ನಣೆ ದೊರೆಯುತ್ತಿದೆ ಎಂಬುದನ್ನು ಕೆಲವೊಂದು ಉದಾಹರಣೆಗಳ ಮೂಲಕ ಅವರು ವಿವರಿಸಿದರು.

ಕುವೈತ್ ದೇಶದ ರೇಡಿಯೊದಲ್ಲಿ ಪ್ರಸಾರವಾಗಿದ್ದ ಹಿಂದಿ ಕಾರ್ಯಕ್ರಮದ ಆಡಿಯೊ ತುಣುಕನ್ನು ಕೇಳಿಸಿದ ಅವರು, ‘ಕುವೈತ್ ಸರ್ಕಾರವು ತನ್ನ ರಾಷ್ಟ್ರೀಯ ರೇಡಿಯೊದಲ್ಲಿ ಹಿಂದಿ ಭಾಷೆಯ ಕಾರ್ಯಕ್ರಮವೊಂದನ್ನು ಆರಂಭಿಸಿದೆ. ಆ ಕಾರ್ಯಕ್ರಮ ಪ್ರತಿ ಭಾನುವಾರ ಅರ್ಧ ಗಂಟೆ ಪ್ರಸಾರವಾಗುತ್ತದೆ. ಭಾರತದ ಸಂಸ್ಕೃತಿ, ಕಲೆ, ಚಲನಚಿತ್ರಗಳ ಕುರಿತ ಸಂವಾದವನ್ನು ಒಳಗೊಂಡ ಕಾರ್ಯಕ್ರಮವು ಕುವೈತ್‌ನಲ್ಲಿರುವ ಭಾರತೀಯರಲ್ಲಿ ಜನಪ್ರಿಯತೆ ಗಳಿಸಿದೆ’ ಎಂದು ಹೇಳಿದರು.

## ಕೇರಳದ ‘ಕಾರ್ತುಂಬಿ’ ಕೊಡೆಗೆ ಮೆಚ್ಚುಗೆ



ಕೊಡೆಗಳ ತಯಾರಿಕೆಯಲ್ಲಿ ನಿರತ ಮಹಿಳೆಯರು

ತಿರುವನಂತಪುರ: ಕೇರಳದ ಪಾಲಕ್ಕಾಡ್ ಜಿಲ್ಲೆಯ ಅಟ್ಟಪ್ಪಾಡಿಯ ಬುಡಕಟ್ಟು ಸಮುದಾಯದ ಮಹಿಳೆಯರು ತಯಾರಿಸುತ್ತಿರುವ ‘ಕಾರ್ತುಂಬಿ’ ಬ್ರ್ಯಾಂಡ್ ಕೊಡೆಗಳ ಬಗ್ಗೆ ಪ್ರಧಾನಿ ಅವರು ‘ಮನದ ಮಾತು’ ಕಾರ್ಯಕ್ರಮದಲ್ಲಿ ಪ್ರಸ್ತಾಪ ಮಾಡಿದರು.

‘ಕಾರ್ತುಂಬಿ ಕೊಡೆಗಳು ‘ನಯನಮನೋಹರ’ ಮತ್ತು ‘ವರ್ಣರಂಜಿತ’ ಆಗಿದ್ದು, ಅವುಗಳ ಬೇಡಿಕೆ ಹೆಚ್ಚುತ್ತಿದೆ. ಕೇರಳದ ಪುಟ್ಟ ಗ್ರಾಮದಿಂದ ಬಹುರಾಷ್ಟ್ರೀಯ ಕಂಪನಿಗಳವರೆಗೆ ಈ ಕೊಡೆಗಳ ಪಯಣ ಮುಂದುವರಿದಿದೆ. ಸ್ಥಳೀಯತೆಯನ್ನು ಉತ್ತೇಜಿಸುವ ‘ವೋಕಲ್ ಫಾರ್ ಲೋಕಲ್’ಗೆ ಇದು ಉತ್ತಮ ಉದಾಹರಣೆ’ ಎಂದರು.

ಅಟ್ಟಪ್ಪಾಡಿಯ ಹಾಡಿಗಳಲ್ಲಿರುವ 30 ಮಹಿಳೆಯರು ‘ಕಾರ್ತುಂಬಿ’ ಕೊಡೆಗಳ ತಯಾರಿಕೆಯಲ್ಲಿ ತೊಡಗಿದ್ದಾರೆ. ಬುಡಕಟ್ಟು ಜನರ ಅಭಿವೃದ್ಧಿಗಾಗಿ ಕೆಲಸ ಮಾಡುತ್ತಿರುವ ‘ಥಂಪು’ ಹೆಸರಿನ ಎನ್‌ಜಿಒ ಈ ಉಪಕ್ರಮವನ್ನು 2014ರಲ್ಲಿ ಆರಂಭಿಸಿತ್ತು.

## ಭಾಷಣದ ಪ್ರಮುಖ ಅಂಶಗಳು

- ವಿಶ್ವ ಪರಿಸರ ದಿನದ ಅಂಗವಾಗಿ ನಾನು ತಾಯಿಯ ಹೆಸರಿನಲ್ಲಿ ಒಂದು ಗಿಡ ನೆಟ್ಟಿದ್ದೇನೆ. 'ಅಮ್ಮನ ಹೆಸರಿನಲ್ಲಿ ಒಂದು ಗಿಡ' ಅಭಿಯಾನಕ್ಕೆ ಉತ್ತಮ ಸ್ಪಂದನ ದೊರೆತಿದೆ. ಹಲವರು ತಮ್ಮ ಅಮ್ಮನ ಜತೆ ಅಥವಾ ಆಕೆಯ ನೆನಪಿನಲ್ಲಿ ಗಿಡಗಳನ್ನು ನೆಟ್ಟು, ಅದರ ಫೋಟೊವನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಳ್ಳುತ್ತಿದ್ದಾರೆ.
- 10ನೇ ಅಂತರರಾಷ್ಟ್ರೀಯ ಯೋಗ ದಿನವನ್ನು ಜಗತ್ತಿನ ಎಲ್ಲ ದೇಶಗಳಲ್ಲೂ ಆಚರಿಸಲಾಯಿತು. ಶ್ರೀನಗರದಲ್ಲಿ ನಾನು ಪಾಲ್ಗೊಂಡಿದ್ದ ಕಾರ್ಯಕ್ರಮದಲ್ಲಿ ಸ್ಥಳೀಯರು, ಮಕ್ಕಳು ಮತ್ತು ಮಹಿಳೆಯರು ಜತೆ ಆಗಿದ್ದರು.
- ಸೌದಿ ಅರೇಬಿಯಾದಲ್ಲಿ ಇದೇ ಮೊದಲ ಬಾರಿಗೆ ಮಹಿಳೆಯೊಬ್ಬರ ನೇತೃತ್ವದಲ್ಲಿ ಯೋಗಾಸನ ಕಾರ್ಯಕ್ರಮ ನಡೆಯಿತು.
- ಭಾರತದ ಹಲವು ಉತ್ಪನ್ನಗಳಿಗೆ ಜಗತ್ತಿನಾದ್ಯಂತ ಬೇಡಿಕೆ ಹೆಚ್ಚುತ್ತಿದೆ. ನಮ್ಮ ಸ್ಥಳೀಯ ಉತ್ಪನ್ನಗಳಿಗೆ ಜಾಗತಿಕ ಮಾರುಕಟ್ಟೆಯಲ್ಲಿ ಬೇಡಿಗೆ ಬಂದಾಗ ಹೆಮ್ಮೆಯಾಗುವುದು ಸಹಜ. ಆಂಧ್ರಪ್ರದೇಶದ ಅಲ್ಲೂರಿ ಸೀತಾರಾಮರಾಜು ಜಿಲ್ಲೆಯಲ್ಲಿ ಬೆಳೆಯುವ ಅರಕು ಕಾಫಿ ಕೂಡ ಅಂತ ಉತ್ಪನ್ನಗಳಲ್ಲಿ ಒಂದು.

ಪ್ರಧಾನಿ ಅವರು ನೀಟ್ ವಿವಾದ, ರೈಲು ಅಪಘಾತ ಮತ್ತು ‘ಮೂಲಸೌಕರ್ಯಗಳ ಕುಸಿತ’ ಘಟನೆಗಳ ಬಗ್ಗೆ ಯಾವುದೇ ಪ್ರಸ್ತಾಪ ಮಾಡಿಲ್ಲ ಏಕೆ?

**ಪವನ್ ಖೇರಾ,** ಕಾಂಗ್ರೆಸ್ ಮುಖಂಡ

## ‘ಸಂಸ್ಕೃತ ವಾರಾಂತ್ಯ’ ಪ್ರಧಾನಿ ಶ್ಲಾಘನೆ

ಬೆಂಗಳೂರು (ಪಿಟಿಐ): ಸಂಸ್ಕೃತದಲ್ಲಿ ಮಾತನಾಡುವವರ ಸಂಖ್ಯೆಯನ್ನು ಹೆಚ್ಚಿಸಬೇಕು ಎಂದು ಬೆಂಗಳೂರಿನ ಯುವತಿಯೊಬ್ಬರು ಆರಂಭಿಸಿದ್ದ ‘ಸಂಸ್ಕೃತ ವಾರಾಂತ್ಯ’ ಈಗ ಹೊಸ ಮೈಲುಗಲ್ಲು ತಲುಪಿದೆ. ಪ್ರಧಾನಿ ನರೇಂದ್ರ ಮೋದಿ ಅವರು ಈ ಭಾನುವಾರ ತಮ್ಮ ‘ಮನದ ಮಾತು’ ಕಾರ್ಯಕ್ರಮದಲ್ಲಿ ‘ಸಂಸ್ಕೃತ ವಾರಾಂತ್ಯ’ದ ಬಗ್ಗೆ ಪ್ರಸ್ತಾಪಿಸಿದ್ದಾರೆ.

‘ಬೆಂಗಳೂರಿನಲ್ಲಿ ಕಬ್ಬನ್ ಪಾರ್ಕ್ ಎಂಬ ಉದ್ಯಾನವೊಂದಿದೆ. ಅಲ್ಲಿ ಕೆಲ ಹಿರಿಯರು–ಕಿರಿಯರು ಪ್ರತಿ ಭಾನುವಾರ ಸೇರುತ್ತಾರೆ ಮತ್ತು ಪರಸ್ಪರ ಸಂಸ್ಕೃತದಲ್ಲಿ ಮಾತನಾಡುತ್ತಾರೆ. ಸಮಷ್ಠಿ ಗುಬ್ಬಿ ಎಂಬ ಯುವತಿ ಆರಂಭಿಸಿದ ಈ ಕಾರ್ಯಕ್ರಮ ಜನಪ್ರಿಯತೆ ಪಡೆಯುತ್ತಿದೆ’ ಎಂದು ಹೇಳಿದ್ದಾರೆ.

ಸಂಸ್ಕೃತದಲ್ಲಿ ಎಂ.ಎ ಪದವಿ ಪಡೆದಿರುವ ಸಮಷ್ಠಿ ‘ಸ್ಥಾಯಿ’ (sthaayi.in) ಎಂಬ ಸಂಸ್ಥೆ ನಡೆಸುತ್ತಿದ್ದಾರೆ. ಸಂಸ್ಕೃತವನ್ನು ಹೆಚ್ಚು ಜನರು ಮಾತನಾಡಬೇಕು ಎಂಬ ಉದ್ದೇಶದಿಂದ ಸಮಷ್ಠಿ ಸಂಸ್ಕೃತ ನಡಿಗೆ, ಸಂಸ್ಕೃತ ಓಟ, ಸಂಸ್ಕೃತ ರೈಡ್ ಮತ್ತು ಸಂಸ್ಕೃತ ವಾರಾಂತ್ಯ ಕಾರ್ಯಕ್ರಮಗಳನ್ನು ಆಯೋಜಿಸುತ್ತಾರೆ.

‘ಸಂಸ್ಕೃತ ಜನಪ್ರಿಯಗೊಳಿಸಲು ಹಲವು ವರ್ಷಗಳಿಂದ ದುಡಿಯುತ್ತಿದ್ದೇನೆ. ನನ್ನ ಶ್ರಮವನ್ನು ಮೋದಿ ಅವರು ಗುರುತಿಸಿ, ಪ್ರಶಂಸಿಸಿದ್ದಾರೆ. ನನ್ನ ಸಂತೋಷಕ್ಕೆ ಎಲ್ಲೆಯೇ ಇಲ್ಲ’ ಎಂದು ಅವರು ಪ್ರತಿಕ್ರಿಯಿಸಿದ್ದಾರೆ.

# ಜನರಲ್ ದ್ವಿವೇದಿ ಸೇನಾ ಮುಖ್ಯಸ್ಥ



ಸೇನಾ ಮುಖ್ಯಸ್ಥರಾಗಿ ನೇಮಕರಾಗಿರುವ ಜನರಲ್ ಉಪೇಂದ್ರ ದ್ವಿವೇದಿ ಅವರಿಗೆ ನಿವೃತ್ತ ಸೇನಾ ಮುಖ್ಯಸ್ಥ ಜನರಲ್ ಮನೋಜ್ ಪಾಂಡೆ ಅವರು ಅಧಿಕಾರ ಹಸ್ತಾಂತರಿಸಿದರು –ಪಿಟಿಐ ಚಿತ್ರ

ನವದೆಹಲಿ (ಪಿಟಿಐ): ಭಾರತೀಯ ಸೇನೆಯ 30ನೇ ಮುಖ್ಯಸ್ಥರಾಗಿ ಜನರಲ್ ಉಪೇಂದ್ರ ದ್ವಿವೇದಿ ಅವರು ಭಾನುವಾರ ಅಧಿಕಾರ ಸ್ವೀಕರಿಸಿದರು.

ಸೇನೆಯಲ್ಲಿ ನಾಲ್ಕು ದಶಕಗಳಿಗೂ ಹೆಚ್ಚು ಕರ್ತವ್ಯ ನಿರ್ವಹಿಸಿದ ಬಳಿಕ ನಿವೃತ್ತಿ ಹೊಂದಿದ ಜನರಲ್ ಮನೋಜ್ ಪಾಂಡೆ ಅವರು ದ್ವಿವೇದಿ ಅವರಿಗೆ ಅಧಿಕಾರ ಹಸ್ತಾಂತರ ಮಾಡಿದರು.

ಚೀನಾ ಮತ್ತು ಪಾಕಿಸ್ತಾನ ಗಡಿಗಳಲ್ಲಿ ಹಲವು ಕಾರ್ಯಾಚರಣೆಗಳ ಅನುಭವವನ್ನು ದ್ವಿವೇದಿ ಹೊಂದಿದ್ದಾರೆ. ಭಾರತವು ನೈಜ ನಿಯಂತ್ರಣ ರೇಖೆ (ಎಲ್‌ಎಸಿ) ಸೇರಿದಂತೆ ಗಡಿಗಳಲ್ಲಿ ಭದ್ರತಾ ಸವಾಲುಗಳನ್ನು ಎದುರಿಸುತ್ತಿರುವ ಸಂದರ್ಭದಲ್ಲಿ ಅವರು ಸೇನೆಯ ಮುಖ್ಯಸ್ಥರಾಗಿದ್ದಾರೆ.

‘ಜನರಲ್ ದ್ವಿವೇದಿ ಅವರು ಅಪಾರ ಅನುಭವ ಮತ್ತು ಉತ್ತಮ ಸೇವಾ ದಾಖಲೆಗಳನ್ನು ಹೊಂದಿದ್ದಾರೆ. ಅತ್ಯುತ್ತಮ ಯೋಜನೆಗಳನ್ನು ರೂಪಿಸಿ, ಪರಿಣಾಮಕಾರಿಯಾಗಿ ಕಾರ್ಯಗತಗೊಳಿಸುವುದನ್ನು ಕರಗತ ಮಾಡಿಕೊಂಡಿಸಿದ್ದಾರೆ’ ಎಂದು ಸೇನೆ ಹೇಳಿದೆ.

ಅವರು ಫೆಬ್ರುವರಿ 19ರಿಂದ ಸೇನೆಯ ಉಪ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದ್ದಾರೆ. ಅದಕ್ಕೂ ಮುನ್ನ ಅವರು 2022ರಿಂದ 2024ರವರೆಗೆ ಉತ್ತರ ಕಮಾಂಡ್‌ನ ಜನರಲ್ ಆಫೀಸರ್ ಕಮಾಂಡಿಂಗ್–ಇನ್–ಚೀಫ್ ಆಗಿ ಸೇವೆ ಸಲ್ಲಿಸಿದ್ದರು.

ಮಧ್ಯ ಪ್ರದೇಶದ ರೇವಾ ಸೈನಿಕ ಶಾಲೆಯ ಹಳೆಯ ವಿದ್ಯಾರ್ಥಿಯಾಗಿರುವ ಅವರನ್ನು 1984ರಲ್ಲಿ ಜಮ್ಮು ಮತ್ತು ಕಾಶ್ಮೀರ ರೈಫಲ್ಸ್‌ನ ರೆಜಿಮೆಂಟ್‌ಗೆ ನಿಯೋಜಿಸಲಾಗಿತ್ತು.

ಚೀನಾದ ಜತೆ ನೈಜ ನಿಯಂತ್ರಣ ರೇಖೆ (ಎಲ್‌ಎಸಿ) ಸೇರಿದಂತೆ ವಿವಿಧ ಭದ್ರತಾ ಸವಾಲುಗಳನ್ನು ಭಾರತ ಎದುರಿಸುತ್ತಿರುವ ಸಮಯದಲ್ಲಿ ಜನರಲ್ ದ್ವಿವೇದಿ ಅವರು 13 ಲಕ್ಷ ಯೋಧರಿರುವ ಬಲಿಷ್ಠ ಸೇನೆಯ ನೇತೃತ್ವ ವಹಿಸಿಕೊಂಡಿದ್ದಾರೆ.

ಸೇನಾ ಸಿಬ್ಬಂದಿಯ ಮುಖ್ಯಸ್ಥರಾಗಿ ಅವರು ನೌಕಾಪಡೆ, ವಾಯುಪಡೆ ಜತೆ ಸಮನ್ವಯ ಸಾಧಿಸುವ ಕಾರ್ಯ ಮಾಡಲಿದ್ದಾರೆ. ರಾಷ್ಟ್ರೀಯ ಭದ್ರತೆಗೆ ಹೆಚ್ಚುತ್ತಿರುವ ಸವಾಲು ಮತ್ತು ಬೆದರಿಕೆಗಳನ್ನು ಪರಿಣಾಮಕಾರಿಯಾಗಿ ಎದುರಿಸಲು ಕಾರ್ಯಾಚರಣೆಗಾಗಿ ಸೇನೆಯನ್ನು ಸದಾ ಸಜ್ಜಾಗಿರುವಂತೆ ಮಾಡುವುದು ಅವರ ಆದ್ಯತೆಯಾಗಿದೆ ಎಂದು ಸೇನೆ ಹೇಳಿದೆ.

ತಮ್ಮ 40 ವರ್ಷಗಳ ಸುದೀರ್ಘ ಮತ್ತು ವಿಶಿಷ್ಟ ವೃತ್ತಿ ಜೀವನದಲ್ಲಿ ಅವರು ವಿವಿಧ ಕಮಾಂಡ್‌ಗಳಲ್ಲಿ ಮತ್ತು ವಿದೇಶಗಳಲ್ಲಿ ಕಾರ್ಯನಿರ್ವಹಿಸಿದ್ದಾರೆ. ಅವರು ಪರಮ ವಿಶಿಷ್ಟ ಸೇವಾ ಪದಕ, ಅತಿ ವಿಶಿಷ್ಟ ಸೇವಾ ಪದಕಗಳನ್ನು ಪಡೆದಿದ್ದಾರೆ. ದ್ವಿವೇದಿ ಅವರು ಚೀನಾದೊಂದಿಗಿನ ಗಡಿ ಸಮಸ್ಯೆಯನ್ನು ಪರಿಹರಿಸಲು ನಡೆಯುತ್ತಿರುವ ಮಾತುಕತೆಗಳಲ್ಲೂ ಸಕ್ರಿಯವಾಗಿ ತೊಡಗಿದ್ದಾರೆ.


## ಪಡೆಗಳ ಮುಖ್ಯಸ್ಥರು ಸಹಪಾಠಿಗಳು

ಹೊಸದಾಗಿ ಸೇನಾ ಮುಖ್ಯಸ್ಥರಾಗಿ ಅಧಿಕಾರ ಸ್ವೀಕರಿಸಿರುವ ಜನರಲ್ ಉಪೇಂದ್ರ ದ್ವಿವೇದಿ ಮತ್ತು ನೌಕಾಪಡೆಯ ಮುಖ್ಯಸ್ಥರಾಗಿರುವ ಅಡ್ಮಿರಲ್ ದಿನೇಶ್ ಕುಮಾರ್ ತ್ರಿಪಾಠಿ ಅವರು ಒಂದೇ ಸೈನಿಕ ಶಾಲೆಯಲ್ಲಿ ಸಹಪಾಠಿಗಳಾಗಿದ್ದರು ಎಂಬುದು ವಿಶೇಷ.

ತ್ರಿಪಾಠಿ ಅವರು ತಿಂಗಳ ಹಿಂದೆಯಷ್ಟೇ ನೌಕಾಪಡೆಯ ಮುಖ್ಯಸ್ಥರಾಗಿ ಅಧಿಕಾರ ವಹಿಸಿಕೊಂಡಿದ್ದಾರೆ. ಇದೀಗ ಅವರ ಬಾಲ್ಯ ಸ್ನೇಹಿತ ದ್ವಿವೇದಿ ಅವರು ಉನ್ನತ ಸ್ಥಾನ ಅಲಂಕರಿಸಿದ್ದಾರೆ. ಇಬ್ಬರೂ ಮಧ್ಯ ಪ್ರದೇಶದ ರೇವಾ ಸೈನಿಕ ಶಾಲೆಯಲ್ಲಿ 1973ರಲ್ಲಿ ವಿದ್ಯಾರ್ಥಿಗಳಾಗಿದ್ದರು. ಒಂದೇ ಶಾಲೆಯ ಇಬ್ಬರು ಸ್ನೇಹಿತರು ಮಿಲಿಟರಿಯ ಎರಡು ಶಾಖೆಗಳ ಉನ್ನತ ಹುದ್ದೆಗಳಿಗೆ ತಲುಪಿರುವುದು ಇದೇ ಮೊದಲು. ತ್ರಿಪಾಠಿ ಅವರು ಬಾಂಗ್ಲಾದೇಶ ಪ್ರವಾಸದಲ್ಲಿ ಇರುವ ಕಾರಣ ತಮ್ಮ ಸಹಪಾಠಿಯನ್ನು ಸ್ವಾಗತಿಸಲು ಲಭ್ಯರಿರಲಿಲ್ಲ.

# ನೆಲಕ್ಕೆ ಮೂಗು ಉಜ್ಜಿ ಕ್ಷಮೆ ಯಾಚನೆ

ಪ್ರಜಾವಾಣಿ ವಾರ್ತೆ



ಪ್ರದೀಪ್ ಮಿಶ್ರಾ

ಲಖನೌ: ‘ರಾಧಾ ರಾಣಿ’ ಕುರಿತು ಅವಹೇಳನಕಾರಿ ಹೇಳಿಕೆ ನೀಡಿದ ಬೆನ್ನಲ್ಲೇ ಬ್ರಜ್ ಪ್ರಾಂತ್ಯದಲ್ಲಿ ಸಂತ ಸಮುದಾಯದಿಂದ ತೀವ್ರ ಟೀಕೆಗೆ ಗುರಿಯಾಗಿದ್ದ ಖ್ಯಾತ ಕಥಾವಾಚಕ, ಹಿಂದೂ ಧರ್ಮದರ್ಶಿ ಪಂಡಿತ್ ಪ್ರದೀಪ್ ಮಿಶ್ರಾ ಬರ್ಸಾನಾದ ‘ರಾಧಾ–ರಾಣಿ’ ದೇವಸ್ಥಾನದಲ್ಲಿ ಸಾಷ್ಟಾಂಗ ನಮಸ್ಕರಿಸಿ, ಮೂಗನ್ನು ನೆಲಕ್ಕೆ ಉಜ್ಜಿ ಕ್ಷಮೆಯಾಚಿಸಿದರು.

‘ರಾಧಾ ರಾಣಿ’ ಭಗವಾನ್ ಶ್ರೀ ಕೃಷ್ಣನ ಪತ್ನಿಯಲ್ಲ. ಆಕೆ ಚಾತಾ ಗ್ರಾಮದ ನಿವಾಸಿ ಅನಯ್ ಘೋಷ್ ಅನ್ನು ಮದುವೆಯಾಗಿದ್ದಳು. ಆಕೆಯೂ ಬರ್ಸಾನಾಕ್ಕೆ ಸೇರಿದವಳಲ್ಲ, ಆಕೆಯ ತಂದೆ ವೃಷಭಾನು ವರ್ಷಕ್ಕೊಮ್ಮೆ ಬರ್ಸಾನಾಕ್ಕೆ ಭೇಟಿ ನೀಡುತ್ತಿದ್ದರು. ಈ ಕಾರಣದಿಂದ, ಆಕೆ ಹೆಸರಿನ ಮುಂದೆ ‘ಬರ್ಸಾನಾ’ವು ಸೇರಿಕೊಂಡಿದೆ ಎಂದು ಸೆಹೋರ್‌ನ ಕುಬೇರೇಶ್ವರ ಧಾಮದ ಮುಖ್ಯಸ್ಥ, ಖ್ಯಾತ ಕಥಾವಾಚಕ ಪ್ರದೀಪ್ ಮಿಶ್ರಾ ಅವರು ಸಾರ್ವಜನಿಕವಾಗಿ ಹೇಳಿಕೆ ನೀಡಿದ್ದರು.

ಇದರ ಬೆನ್ನಲ್ಲೇ, ಮಥುರಾ, ಬೃಂದಾವನ, ಬರ್ಸಾನಾ, ಅಯೋಧ್ಯೆ, ಹರಿದ್ವಾರ (ಬ್ರಜ್ ಪ್ರಾಂತ್ಯ) ಸೇರಿದಂತೆ ಹಲವು ಕಡೆಗಳಲ್ಲಿ ಸಂತ ಸಮುದಾಯದಿಂದ ತೀವ್ರ ಟೀಕೆಗೆ ಗುರಿಯಾಗಿದ್ದರು. ಮಿಶ್ರಾ ಅವರನ್ನು ಕಠಿಣ ಶಿಕ್ಷೆಗೆ ಒಳಪಡಿಸಬೇಕು ಎಂದು ಅವರು ಆಗ್ರಹಿಸಿದ್ದರು.

ದೇಶದ ವಿವಿಧ ಭಾಗದ ಸಂತರು ಇತ್ತೀಚೆಗೆ ‘ಮಹಾಪಂಚಾಯತ್’ ನಡೆಸಿ, ಮಿಶ್ರಾ ಹೇಳಿಕೆಯ ವಿರುದ್ಧ ಎಫ್‌ಐಆರ್ ದಾಖಲಿಸಿ, ತಕ್ಷಣ ಬಂಧಿಸಬೇಕು ಎಂದು ಆಗ್ರಹಿಸಿದ್ದರು. ಬ್ರಜ್ ಪ್ರಾಂತ್ಯ ಪ್ರವೇಶಿಸದಂತೆ ತಡೆಯುವುದಾಗಿ ಘೋಷಿಸಿದ್ದ ಸಂತರು, ಅವರ ಕಾರ್ಯಕ್ರಮಗಳನ್ನು ಬಹಿಷ್ಕರಿಸಲಾಗುವುದು’ ಎಂದು ಎಚ್ಚರಿಕೆ ನೀಡಿದ್ದರು.

ಇದರ ಬೆನ್ನಲ್ಲೇ ಶನಿವಾರ ಬರ್ಸಾನಾದ ಲಾಡ್ಲಿ ದೇವಾಲಯ (ರಾಧಾ ಜನ್ಮಸ್ಥಳ)ಕ್ಕೆ ಭೇಟಿ ನೀಡಿದ್ದ ಪ್ರದೀಪ್ ಮಿಶ್ರಾ, ತಮ್ಮ ಹೇಳಿಕೆ ಕುರಿತು ಕ್ಷಮೆಯಾಚಿಸಿದರು. ಹಲವಾರು ಜನರ ಮುಂದೆ ಸಾಷ್ಟಾಂಗ ನಮಸ್ಕಾರ ಮಾಡಿ, ದೇವರ ಮುಂಭಾಗದ ನೆಲದ ಮೇಲೆ ತಮ್ಮ ಮೂಗು ಉಜ್ಜಿ ಪ್ರಾಯಶ್ಚಿತ ಮಾಡಿಕೊಂಡರು.

‘ಮಿಶ್ರಾ ಅಧ್ಯಾಯ ಇಲ್ಲಿಗೆ ಮುಗಿದಿದೆ’ ಎಂದು ಬರ್ಸಾನಾದ ಧಾರ್ಮಿಕ ಪಂಡಿತರೊಬ್ಬರು ತಿಳಿಸಿದರು.

### ಅಮರನಾಥ ಯಾತ್ರೆ: 14 ಸಾವಿರ ಯಾತ್ರಾರ್ಥಿಗಳು ಭಾಗಿ

# ದರ್ಶನ ಮುಗಿಸಿದ ಮೊದಲ ತಂಡ



ಅಮರನಾಥ ಯಾತ್ರೆಗೆ ನೋಂದಣಿ ಮಾಡಿಕೊಳ್ಳುವ ಸಲುವಾಗಿ ಜಮ್ಮುವಿನಲ್ಲಿ ಕಾದುಕುಳಿತಿದ್ದ ಯಾತ್ರಾರ್ಥಿಗಳು –ಪಿಟಿಐ ಚಿತ್ರ

ಪ್ರಜಾವಾಣಿ ವಾರ್ತೆ

ಪಹಲ್‌ಗಾಮ್ (ಜಮ್ಮು ಮತ್ತು ಕಾಶ್ಮೀರ): ಪ್ರಸಿದ್ಧ ಅಮರನಾಥ ಯಾತ್ರೆಯು ಆರಂಭಗೊಂಡಿದೆ. ಯಾತ್ರೆಯ ಮೊದಲ ದಿನವಾದ ಶನಿವಾರ ಸುಮಾರು 14 ಸಾವಿರ ಯಾತ್ರಾರ್ಥಿಗಳು ದರ್ಶನ ಮುಗಿಸಿ ಮರಳಿದ್ದಾರೆ. ಇನ್ನೂ ಸಾವಿರಾರು ಮಂದಿ ದರ್ಶನಕ್ಕಾಗಿ ತಮ್ಮ ಯಾತ್ರೆ ಆರಂಭಿಸಿದ್ದಾರೆ.

ಹಿಮದಲ್ಲಿ ರೂಪುಗೊಂಡ ಶಿವಲಿಂಗದ ದರ್ಶನಕ್ಕಾಗಿ ಭಕ್ತಾದಿಗಳಲ್ಲಿ ಉತ್ಸಾಹ ಕಂಡುಬಂದಿತು. ಹಿರಿಯರು ಊರುಗೋಲುಗಳನ್ನು ಹಿಡಿದು ಬೆಟ್ಟ ಹತ್ತುತ್ತಿದ್ದರೆ, ಯುವ ಸಮೂಹವು ಚಾರಣದ ಉಡುಪು ತೊಟ್ಟಿತ್ತು. ಎಲ್ಲರೂ ಪ್ರಾರ್ಥಿಸುತ್ತಾ ಸಾಗಿದರು. ಯಾತ್ರಾರ್ಥಿಗಳ ಅನುಕೂಲಕ್ಕಾಗಿ ಸ್ಥಳೀಯರು ಅಂಗಡಿಗಳನ್ನು ತೆರೆದಿದ್ದರು. ಕೆಲವರು ವೈದ್ಯಕೀಯ ಶಿಬಿರಗಳು, ವಿಶ್ರಾಂತಿ ಕೇಂದ್ರಗಳ ವ್ಯವಸ್ಥೆ ಕಲ್ಪಿಸಿದ್ದರು.

13,827 ಭಕ್ತರ ಮೊದಲ ತಂಡವು ಶನಿವಾರ ದರ್ಶನ ಮುಗಿಸಿ ಹಿಂತಿರುಗಿದೆ. ಯಾತ್ರಿಕರ ಚಲನವಲನಗಳ ಮೇಲೆ ನಿಗಾ ಇರಿಸಲು ರೇಡಿಯೊ ಫ್ರೀಕ್ವೆನ್ಸಿ ಐಡೆಂಟಿಫಿಕೇಷನ್ ವ್ಯವಸ್ಥೆಯನ್ನು ಕೆಲ ವರ್ಷಗಳ ಹಿಂದೆ ಪರಿಚಯಿಸಲಾಗಿತ್ತು. ಈ ಬಾರಿಯೂ ಈ ವ್ಯವಸ್ಥೆ ಮುಂದುವರಿಸಲಾಗಿದೆ. ಯಾತ್ರಿಕರ ಸುರಕ್ಷತೆಗಾಗಿ ಈ ವ್ಯವಸ್ಥೆಯನ್ನು ರೂಪಿಸಲಾಗಿದೆ.

## ಟಿ20 ಕ್ರಿಕೆಟ್: ರೋಹಿತ್ ಶರ್ಮಾ, ವಿರಾಟ್ ಕೊಹ್ಲಿ ನಿವೃತ್ತಿ



**ವಿರಾಟ್ ಕೊಹ್ಲಿ** (ಅಂತರರಾಷ್ಟ್ರೀಯ ಟಿ20 ಕ್ರಿಕೆಟ್)

| | |
|---|---|
| 125 | ಪಂದ್ಯ |
| 4188 | ಒಟ್ಟು ರನ್ |
| 38 | ಅರ್ಧಶತಕ |
| 1 | ಶತಕ |
| 122* | ಗರಿಷ್ಠ |



**ರೋಹಿತ್ ಶರ್ಮಾ** (ಅಂತರರಾಷ್ಟ್ರೀಯ ಟಿ20 ಕ್ರಿಕೆಟ್)

| | |
|---|---|
| 159 | ಪಂದ್ಯ |
| 4231 | ಒಟ್ಟು ರನ್ |
| 32 | ಅರ್ಧಶತಕ |
| 5 | ಶತಕ |
| 121* | ಗರಿಷ್ಠ |

# ಕ್ರಿಕೆಟ್ ಕಣ್ಮಣಿಗಳಿಗೆ ವಿಜಯದ ವಿದಾಯ

ಪ್ರಜಾವಾಣಿ ವಾರ್ತೆ

ಬ್ರಿಜ್‌ಟೌನ್: ಒಬ್ಬರು ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ, ಇನ್ನೊಬ್ಬರು ಪತ್ರಿಕಾಗೋಷ್ಠಿಯಲ್ಲಿ ಅಂತರರಾಷ್ಟ್ರೀಯ ಟಿ20 ಕ್ರಿಕೆಟ್‌ಗೆ ತಮ್ಮ ನಿವೃತ್ತಿಯನ್ನು ಘೋಷಿಸಿದರು.

ಅವರು ಬೇರಾರೂ ಅಲ್ಲ. ಭಾರತ ತಂಡದ ಇಬ್ಬರು ಕಣ್ಮಣಿಗಳಾದ ವಿರಾಟ್ ಕೊಹ್ಲಿ ಮತ್ತು ರೋಹಿತ್ ಶರ್ಮಾ. ಶನಿವಾರ ಇಲ್ಲಿ ಟಿ20 ಕ್ರಿಕೆಟ್ ವಿಶ್ವಕಪ್ ಜಯಿಸಿದ ನಂತರ ಚುಟುಕು ಕ್ರಿಕೆಟ್ ಮಾದರಿಯಿಂದ ವಿದಾಯ ಹೇಳಿದರು.

ಚುಟುಕು ಕ್ರಿಕೆಟ್ ಮಾದರಿಯಿಂದ ಇವರಿಬ್ಬರೂ ಶೀಘ್ರದಲ್ಲಿಯೇ ಹೊರನಡೆಯಲಿದ್ದಾರೆ ಎಂಬುದು ಬಹಳಷ್ಟು ಜನರಿಗೆ ತಿಳಿದಿತ್ತು. ಆದರೆ ಭಾರತ ತಂಡವು ವಿಶ್ವಕಪ್ ಗೆದ್ದ ಸಂದರ್ಭದಲ್ಲಿಯೇ ಅವರು ಇದನ್ನು ಪ್ರಕಟಿಸಿದ್ದಾರೆ. ಇದರೊದಿಗೆ ಈ ಕಾಲಘಟ್ಟದ ಇಬ್ಬರು ಮಹಾನ್ ಆಟಗಾರರ ಟಿ20 ಆಟದ ವೈಭವಕ್ಕೆ ತೆರೆ ಬಿದ್ದಿದೆ.

ಈ ಮಾದರಿಯಲ್ಲಿ ಅತಿ ಹೆಚ್ಚು ರನ್ ಗಳಿಸಿರುವವರ ಪಟ್ಟಿಯಲ್ಲಿ ರೋಹಿತ್ (4231 ರನ್, 159 ಪಂದ್ಯ) ಮತ್ತು ವಿರಾಟ್ ಕೊಹ್ಲಿ (4188 ರನ್, 125 ಪಂದ್ಯ) ಕ್ರಮವಾಗಿ ಮೊದಲ ಹಾಗೂ ಎರಡನೇ ಸ್ಥಾನಗಳಲ್ಲಿದ್ದಾರೆ. ವಿರಾಟ್ ಅವರ ಸರಾಸರಿಯು (48.69) ರೋಹಿತ್ ಅವರಿಗಿಂತ (32.05) ಚೆನ್ನಾಗಿದೆ.

ಆದರೆ ಈ ಟೂರ್ನಿಗೆ ಅವರು ಆಡಲು ಬರುವ ಮುನ್ನ ಕ್ರಿಕೆಟ್ ವಲಯದಲ್ಲಿ ಒಂದು ಚರ್ಚೆ ನಡೆದಿತ್ತು. ಅದೇನೆಂದರೆ; 140ರ ಆಸುಪಾಸಿನಲ್ಲಿರುವ ಇವರಿಬ್ಬರ ಸ್ಟ್ರೈಕ್‌ರೇಟ್ ಇಂದಿನ ಟಿ20 ಮಾದರಿಗೆ ಹೊಂದಾಣಿಕೆಯಾಗುವಂತಹದ್ದಲ್ಲ. ಆದ್ದರಿಂದ ಇವರಿಬ್ಬರೂ ಹೊಸತನಕ್ಕೆ ಹೊಂದಿಕೊಳ್ಳಲು ಸಾಧ್ಯವೇ ಎಂಬ ಚರ್ಚೆಗಳು ನಡೆದಿದ್ದವು.

ಆದರೆ ಇಬ್ಬರೂ ಈ ಸವಾಲನ್ನು ಸ್ವೀಕರಿಸಿದರು. ಜೊತೆಯಾಗಿ ಇನಿಂಗ್ಸ್ ಆರಂಭಿಸಿದರು. ಅದರಲ್ಲಿ ರೋಹಿತ್ ಬಹುಬೇಗ ಆಕ್ರಮಣಶೀಲ ಬ್ಯಾಟಿಂಗ್‌ಗೆ ಒಗ್ಗಿಕೊಂಡರು. ಬೀಸಾಟದ ಮೂಲಕ ಬೌಲರ್‌ಗಳಿಗೆ ಬಿಸಿ ಮುಟ್ಟಿಸಿದರು. ಆದರೆ ಕೊಹ್ಲಿ ಬೇಗನೆ ಹೊಂದಿಕೊಳ್ಳಲಿಲ್ಲ. ಇಂಡಿಯನ್ ಪ್ರೀಮಿಯರ್ ಲೀಗ್‌ನಲ್ಲಿ ಅವರು ತಮ್ಮ ಸ್ಟ್ರೈಕ್‌ರೇಟ್ ಉತ್ತಮಪಡಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದರು. ಆದರೆ ಇಲ್ಲಿ ಅವರಿಗೆ ಅದು ಸಾಧ್ಯವಾಗಲಿಲ್ಲ. 8 ಪಂದ್ಯಗಳಿಂದ 151 ರನ್ ಗಳಿಸಿದರು. 18.87ರ ಸರಾಸರಿಯಲ್ಲಿ ಅವರು ರನ್ ಕಲೆಹಾಕಿದರು. ಆದರೆ ಫೈನಲ್‌ನಲ್ಲಿ ಅವರು ತೋರಿದ ದಿಟ್ಟತನ ತಂಡದ ಗೆಲುವಿಗೆ ಕಾರಣವಾಯಿತು. ಅವರು ಗಳಿಸಿದ 76 ರನ್‌ಗಳು ಬಹುಕಾಲ ನೆನಪಿನಲ್ಲಿ ಉಳಿಯಲಿವೆ. ಅವರಿಗೆ ಪಂದ್ಯಶ್ರೇಷ್ಠ ಗೌರವ ಒಲಿಯಿತು.

'ತಂಡದ ಹೆಚ್ಚು ಅನುಭವಿ ಆಟಗಾರರಾದ ನಮ್ಮ ಮೇಲೆ ಎಲ್ಲರಿಂದಲೂ ಅಪಾರ ನಿರೀಕ್ಷೆಗಳಿರುವುದು ಸಹಜ. ನಮಗೂ ಈ ಮಾದರಿಯಲ್ಲಿ ವಿಶ್ವಕಪ್ ಜಯಿಸಬೇಕೆಂಬ ಅದಮ್ಯ ಗುರಿ ಇತ್ತು. ನಾನು ಮತ್ತು ರೋಹಿತ್ ಈ ಬಗ್ಗೆ ಹಲವಾರು ಬಾರಿ ಆಳವಾಗಿ ಚರ್ಚಿಸಿದ್ದೇವೆ. ಕ್ರೀಸ್‌ಗೆ ಹೋಗುವ ಮುನ್ನ ಸಂಕಲ್ಪ ಮಾಡಿದ್ದೇವೆ' ಎಂದು ಕೊಹ್ಲಿ ಹೇಳಿದರು.

ಕೊಹ್ಲಿಗಿಂತ ರೋಹಿತ್ ಇಲ್ಲಿ ಒಂದು ಹೆಜ್ಜೆ ಮುಂದಿದ್ದರು. ಆಕ್ರಮಣಶೀಲ ಬ್ಯಾಟರ್ ಆಗಿರುವ ರೋಹಿತ್ ಆಟ ರಂಗೇರಿತು. ಎಂಟು ಪಂದ್ಯಗಳಿಂದ 257 ರನ್ ಕಲೆಹಾಕಿದರು. 156.70ರ ಸ್ಟ್ರೈಕ್‌ರೇಟ್ ನಲ್ಲಿ ಅವರು ಈ ರನ್ ಗಳಿಸಿದರು.

ಆಸ್ಟ್ರೇಲಿಯಾ ಎದುರಿನ ಪಂದ್ಯದಲ್ಲಿ ಅವರು 41 ಎಸೆತಗಳಲ್ಲಿ ಗಳಿಸಿದ್ದ 92 ರನ್‌ಗಳು ಭಾರತದ ಸೆಮಿಫೈನಲ್ ಹಾದಿಯಲ್ಲಿ ನಿಚ್ಚಳಗೊಳಿಸಿದ್ದವು. 37 ವರ್ಷದ ರೋಹಿತ್ ಅವರ ವೃತ್ತಿಜೀವನದಲ್ಲಿ ನೆನಪಿನಲ್ಲಿಡುವಂತಹ ಟೂರ್ನಿ ಇದಾಯಿತು.

2007ರಲ್ಲಿ ಟಿ20 ವಿಶ್ವಕಪ್ ಜಯಿಸಿದ್ದ ಮಹೇಂದ್ರಸಿಂಗ್ ಧೋನಿ ಬಳಗದಲ್ಲಿ ರೋಹಿತ್ ಆಡಿದ್ದರು. ಇದೀಗ ಕೆರೀಬಿಯನ್ ನಾಡಿನಲ್ಲಿ ವಿಶ್ವಕಪ್ ಜಯಿಸಿದ ತಂಡವನ್ನು ಮುನ್ನಡೆಸಿದರು.




ಟಿ20 ವಿಶ್ವಕಪ್ ವಿಜೇತ ಭಾರತ ತಂಡದೊಂದಿಗೆ ಬಿಸಿಸಿಐ ಅಧ್ಯಕ್ಷ ರೋಜರ್ ಬಿನ್ನಿ, ಕಾರ್ಯದರ್ಶಿ ಜಯ್ ಶಾ –ಎಎಫ್‌ಪಿ ಚಿತ್ರ

## ವಿಜೇತ ಭಾರತ ತಂಡಕ್ಕೆ ₹125 ಕೋಟಿ ಬಹುಮಾನ

ನವದೆಹಲಿ (ಪಿಟಿಐ): ಟಿ20 ವಿಶ್ವಕಪ್ ಟೂರ್ನಿಯಲ್ಲಿ ಚಾಂಪಿಯನ್ ಆದ ಭಾರತ ಕ್ರಿಕೆಟ್ ತಂಡಕ್ಕೆ ₹ 125 ಕೋಟಿ ನಗದು ಬಹುಮಾನವನ್ನು ಬಿಸಿಸಿಐ ಕಾರ್ಯದರ್ಶಿ ಜಯ್ ಶಾ ಅವರು ಘೋಷಿಸಿದ್ದಾರೆ. ಬಾರ್ಬಾಡೋಸ್‌ನಲ್ಲಿ ಫೈನಲ್‌ನಲ್ಲಿ 7 ರನ್‌ಗಳಿಂದ ದಕ್ಷಿಣ ಆಫ್ರಿಕಾ ವಿರುದ್ಧ ರೋಚಕ ಜಯ ಸಾಧಿಸಿದ ಭಾರತ ತಂಡವು ಎರಡನೇ ಬಾರಿಗೆ ಪ್ರಶಸ್ತಿಯನ್ನು ಗೆದ್ದುಕೊಂಡಿತು.

ವಿಶ್ವಕಪ್ ವಿಜೇತ ತಂಡಕ್ಕೆ ₹ 125 ಕೋಟಿ ನಗದು ಬಹುಮಾನವನ್ನು ಘೋಷಿಸಿರುವುದಾಗಿ ಶಾ ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

'ರೋಹಿತ್ ಶರ್ಮಾ ಅವರ ನಾಯಕತ್ವದಲ್ಲಿ ತಂಡವು ಐತಿಹಾಸಿಕ ಸಾಧನೆ ಮಾಡಿದೆ. ಐಸಿಸಿ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಅಜೇಯವಾಗಿ ಉಳಿದ ತಂಡವಾಗಿದೆ. ತಂಡವು ಟೂರ್ನಿಯುದ್ದಕ್ಕೂ ಅಸಾಧಾರಣ ಪ್ರತಿಭೆ, ದೃಢನಿಶ್ಚಯ ಮತ್ತು ಕ್ರೀಡಾ ಮನೋಭಾವ ಪ್ರದರ್ಶಿಸಿದೆ. ಈ ಅಸಾಧಾರಣ ಸಾಧನೆಗಾಗಿ ಎಲ್ಲಾ ಆಟಗಾರರು, ತರಬೇತುದಾರರು ಮತ್ತು ಸಹಾಯಕ ಸಿಬ್ಬಂದಿಗೆ ಅಭಿನಂದನೆಗಳು' ಎಂದು ಶಾ ತಿಳಿಸಿದ್ದಾರೆ.

## ಟಿ20 ಕ್ರಿಕೆಟ್: ಆಲ್‌ರೌಂಡರ್ ಜಡೇಜ ನಿವೃತ್ತಿ



ರವೀಂದ್ರ ಜಡೇಜ

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ತಂಡದ ಆಲ್‌ರೌಂಡರ್ ರವೀಂದ್ರ ಜಡೇಜ ಅಂತರರಾಷ್ಟ್ರೀಯ ಟಿ20 ಕ್ರಿಕೆಟ್‌ಗೆ ನಿವೃತ್ತಿ ಘೋಷಿಸಿದ್ದಾರೆ.

ಶನಿವಾರ ಟಿ20 ವಿಶ್ವಕಪ್ ಜಯಿಸಿದ ನಂತರ ವಿರಾಟ್ ಕೊಹ್ಲಿ ಮತ್ತು ರೋಹಿತ್ ಶರ್ಮಾ ಅವರು ಚುಟುಕು ಕ್ರಿಕೆಟ್ ಮಾದರಿಗೆ ವಿದಾಯ ಘೋಷಿಸಿದ್ದರು. ಈಗ ಅವರ ಸಾಲಿಗೆ ಎಡಗೈ ಸ್ಪಿನ್-ಆಲ್‌ರೌಂಡರ್ ಜಡೇಜ ಸೇರಿದ್ದಾರೆ.

35 ವರ್ಷದ ಅವರು ಅಮೆರಿಕ –ವೆಸ್ಟ್ ಇಂಡೀಸ್ ಆತಿಥ್ಯದಲ್ಲಿ ನಡೆದ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಎಂಟು ಪಂದ್ಯಗಳಲ್ಲಿ ಆಡಿದ್ದರು. ಒಟ್ಟು 14 ಓವರ್ ಬೌಲಿಂಗ್ ಮಾಡಿ ಒಂದು ವಿಕೆಟ್ ಗಳಿಸಿದ್ದರು. 35 ರನ್ ಬಿಟ್ಟುಕೊಟ್ಟಿದ್ದರು. ಬ್ಯಾಟಿಂಗ್‌ನಲ್ಲಿ 39 ರನ್ ಗಳಿಸಿದ್ದರು. ಇಂಗ್ಲೆಂಡ್ ಎದುರಿನ ಸೆಮಿಫೈನಲ್‌ನಲ್ಲಿ ಜಡೇಜ ಕ್ರೀಸ್‌ಗೆ ಬಂದಾಗ ತಂಡದ ಮೊತ್ತವು 6ಕ್ಕೆ146 ಆಗಿತ್ತು. ಜಡೇಜ ಅವರು 9 ಎಸೆತಗಳಲ್ಲಿ 17 ರನ್ ಗಳಿಸಿ ತಂಡದ ಮೊತ್ತವು 171ಕ್ಕೆ ಹೆಚ್ಚಲು ಪ್ರಮುಖ ಪಾತ್ರ ವಹಿಸಿದ್ದರು. ಆ ಪಂದ್ಯದಲ್ಲಿ ಭಾರತವು 68 ರನ್‌ಗಳಿಂದ ಜಯಿಸಿತ್ತು.

ಏಳನೇ ಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡುವ ಜಡೇಜ ಅವರು ಇಂತಹ ಪುಟ್ಟದಾದರೂ ಮಹತ್ವದ ಪಾತ್ರ ವಹಿಸಿದ ಹಲವಾರು ಪಂದ್ಯಗಳಿವೆ. ಬೌಲಿಂಗ್‌ನಲ್ಲಿಯೂ ಮಿಂಚಿದ್ದಾರೆ. ತಮ್ಮ ಸಣ್ಣ ಅಂತರದ ರನ್ ಅಪ್ ಮೂಲಕ ಓವರ್‌ಗಳನ್ನು ವೇಗವಾಗಿ ಮುಗಿಸುವ ಅವರ ಕಲೆಗೆ ಬ್ಯಾಟರ್‌ಗಳು ಒತ್ತಡಕ್ಕೆ ಒಳಗಾದ ಉದಾಹರಣೆಗಳು ಸಾಕಷ್ಟಿವೆ.

'ಒಬ್ಬ ಆಲ್‌ರೌಂಡರ್ ಆಗಿ ಒತ್ತಡದ ಸನ್ನಿವೇಶಗಳಲ್ಲಿ ತಂಡಕ್ಕೆ ಆಸರೆಯಾಗುವುದು ನನ್ನ ಕರ್ತವ್ಯ. ತಂಡದ ಜಯಕ್ಕೆ 30–40 ರನ್‌ಗಳ ಅವಶ್ಯಕತೆ ಇದ್ದಾಗ ಅಥವಾ ಒಂದೋ ಎರಡೋ ವಿಕೆಟ್‌ಗಳನ್ನು ಉರುಳಿಸುವ ಅಗತ್ಯವಿದ್ದಾಗ ಸ್ಪಂದಿಸಿದಾಗ ಸಿಗುವ ಆತ್ಮತೃಪ್ತಿ ಅಮೂಲ್ಯವಾದದ್ದು' ಎಂದು ಜಡೇಜ ಹೇಳುತ್ತಾರೆ.

ಕೊಲಂಬೊದಲ್ಲಿ 2009ರಲ್ಲಿ ನಡೆದಿದ್ದ ಶ್ರೀಲಂಕಾ ಎದುರಿನ ಪಂದ್ಯದಲ್ಲಿ ಜಡೇಜ ಪದಾರ್ಪಣೆ ಮಾಡಿದ್ದರು. 74 ಪಂದ್ಯಗಳಲ್ಲಿ ಆಡಿ 515 ರನ್ ಗಳಿಸಿದ್ದಾರೆ. ಒಟ್ಟು 54 ವಿಕೆಟ್‌ಗಳು ಅವರ ಖಾತೆಯಲ್ಲಿವೆ. ಈ ವಿಶ್ವಕಪ್ ಟೂರ್ನಿಯಲ್ಲಿ ಎಡಗೈ ಆಟಗಾರ ಅಕ್ಷರ್ ಪಟೇಲ್ ಅವರು ಆಲ್‌ರೌಂಡ್ ಆಟವು ರಂಗೇರಿತ್ತು. ಅವರು ಜಡೇಜ ಅವರ ಸ್ಥಾನವನ್ನು ತುಂಬಬಲ್ಲ ಆಲ್‌ರೌಂಡರ್ ಎಂದೂ ಹೇಳಲಾಗುತ್ತಿದೆ.

## ವಿಶ್ವಕಪ್: ಅಭಿನಂದನೆಗಳ ಮಹಾಪೂರ



ವಿಶ್ವಕಪ್ ಜಯಿಸಿರುವುದಕ್ಕೆ ವಿಶ್ವದ ಎಲ್ಲೆಡೆಯಿರುವ ಭಾರತೀಯರಿಂದ ಅಭಿನಂದನೆಗಳು. ಹುಟ್ಟುಹಬ್ಬಕ್ಕೆ ಅಮೂಲ್ಯವಾದ ಉಡುಗೊರೆಗೆ ಧನ್ಯವಾದಗಳು. (ಮುಂದಿನ ತಿಂಗಳು 43ನೇ ವರ್ಷಕ್ಕೆ ಕಾಲಿಡುತ್ತಿರುವ ಧೋನಿ)

**ಮಹೇಂದ್ರ ಸಿಂಗ್ ಧೋನಿ,** ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕ



1983 ಮತ್ತು 2011ರ ಏಕದಿನ ವಿಶ್ವಕಪ್ ಗೆಲುವು. 2007ರಲ್ಲಿ ಟಿ20 ವಿಶ್ವಕಪ್ ಐತಿಹಾಸಿಕ ವಿಜಯದ ನಂತರ ದೇಶಕ್ಕೆ ಈಗ 'ನಾಲ್ಕನೇ ಸ್ಟಾರ್' ಸಿಕ್ಕಿದೆ. ಟೀಮ್ ಇಂಡಿಯಾ ಜರ್ಸಿಗೆ ಸೇರುವ ಪ್ರತಿ ಗರಿಯು ದೇಶದ ಮಕ್ಕಳನ್ನು ಅವರ ಕನಸುಗಳಿಗೆ ಒಂದು ಹೆಜ್ಜೆ ಹತ್ತಿರವಾಗಲು ಪ್ರೇರೇಪಿಸುತ್ತದೆ.

**ಸಚಿನ್ ತೆಂಡೂಲ್ಕರ್,** ಮಾಜಿ ಕ್ರಿಕೆಟಿಗ




ಟ್ರೋಫಿಯನ್ನು ಗೆಲ್ಲುವುದು ಅಂತಿಮವಾಗಿ ಶತಕ ಗಳಿಸಿದಂತೆ. ಇದು ಬಹಳ ಸಮಯದ ನಂತರ ಭಾರತ ಕ್ರಿಕೆಟ್ ತಂಡಕ್ಕೆ ದೊಡ್ಡ ಗೆಲುವು.

**ಸುನಿಲ್ ಗವಾಸ್ಕರ್,** ವೀಕ್ಷಣೆ ವಿವರಣೆಗಾರ



ಟಿ20 ವಿಶ್ವ ಚಾಂಪಿಯನ್ ಆದ ಭಾರತ ತಂಡಕ್ಕೆ ಅಭಿನಂದನೆಗಳು. ಟೂರ್ನಿಯುದ್ದಕ್ಕೂ ಅಜೇಯವಾಗಿ ಉಳಿದಿರುವ ಅತ್ಯುತ್ತಮ ತಂಡವಾಗಿದೆ

**ವಿವಿಎಸ್ ಲಕ್ಷ್ಮಣ್**
ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿ ಮುಖ್ಯಸ್ಥ



ಅದ್ಭುತ ಗೆಲುವು. ದೇಶದಲ್ಲಿರುವ ಪ್ರತಿಭೆಗಳು ಇನ್ನೂ ಹೆಚ್ಚಿನದನ್ನು ಗೆಲ್ಲುತ್ತಾರೆ. ಬೂಮ್ರಾ, ವಿರಾಟ್, ಅಕ್ಷರ್, ಹಾರ್ದಿಕ್ ಮತ್ತು ಎಲ್ಲರಿಗೂ ಶುಭವಾಗಲಿ. ಹೆಮ್ಮೆಯ ಕ್ಷಣ.

**ಸೌರವ್ ಗಂಗೂಲಿ,** ಬಿಸಿಸಿಐ ಮಾಜಿ ಅಧ್ಯಕ್ಷ

## ಸಂಭ್ರಮದ ವೇಳೆ ಜೊಕೊವಿಚ್, ಮೆಸ್ಸಿ ಅನುಕರಣೆ ಮಾಡಿದ ಶರ್ಮಾ!

ಬೆಂಗಳೂರು: ಟಿ–20 ವಿಶ್ವಕಪ್ ಟ್ರೋಫಿ ಗೆದ್ದ ಬಳಿಕ ಸಂಭ್ರಮಾಚರಣೆಯಲ್ಲಿ ಭಾರತ ತಂಡದ ನಾಯಕ ರೋಹಿತ್ ಶರ್ಮಾ ಅವರು, ಫುಟ್‌ಬಾಲ್ ತಾರೆ ಲಯೊನಲ್ ಮೆಸ್ಸಿ ಹಾಗೂ ಟೆನಿಸ್ ತಾರೆ ನೊವಾಕ್ ಜೊಕೊವಿಚ್ ಅವರನ್ನು ಅನುಕರಣೆ ಮಾಡಿದ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

2022ರ ಫಿಫಾ ವಿಶ್ವಕಪ್ ಟ್ರೋಫಿ ಪಡೆದ ಬಳಿಕ 'ರಿಕ್ ಫ್ಲೇಯರ್ ಸ್ಟ್ರಟ್' ಹೋಲುವ ನಡಿಗೆಯನ್ನು ಮೆಸ್ಸಿ ಮಾಡಿದ್ದರು. ಬ್ರಿಡ್ಜ್‌ಟೌನ್‌ನ ಕೆನ್ಸಿಂಗ್ಟನ್ ಓವಲ್‌ನಲ್ಲಿ ಫೈನಲ್ ಗೆಲುವಿನ ಬಳಿಕ ಬಿಸಿಸಿಐ ಕಾರ್ಯದರ್ಶಿ ಜಯ್ ಶಾ ಅವರಿಂದ ಟ್ರೋಫಿ ಸ್ವೀಕರಿಸಲು ತೆರಳುವ ವೇಳೆ ಇದೇ ನಡಿಗೆಯನ್ನು ರೋಹಿತ್ ಶರ್ಮಾ ಅನುಕರಿಸಿದ್ದಾರೆ.

ರೋಹಿತ್ ಅವರ ಈ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ನೆಟ್ಟಿಗರ ಮೆಚ್ಚುಗೆಗೆ ಪಾತ್ರವಾಗಿದೆ. ಲಯೊನಲ್ ಮೆಸ್ಸಿ ಅವರ ಆ ವಿಡಿಯೊದೊಂದಿಗೆ ಅಭಿಮಾನಿಗಳು ಹಂಚಿಕೊಂಡಿದ್ದಾರೆ. ಟ್ರೋಫಿ ಸ್ವೀಕರಿಸಲು ಹೀಗೆ ತೆರಳಬೇಕು ಎಂದು ಕುಲದೀಪ್ ಯಾದವ್ ಅವರು ತೋರಿಸಿಕೊಡುವ ಇನ್ನೊಂದು ವಿಡಿಯೊ ಕೂಡ ಸಾಮಾಜಿಕ ಜಾಲತಾಣದಲ್ಲಿ ಹಂಚಿಕೆಯಾಗುತ್ತಿದೆ.

ಫಿಫಾ ವಿಶ್ವಕಪ್‌ನ ಇನ್‌ಸ್ಟಾಗ್ರಾಮ್ ತಾಣದಲ್ಲಿ ಇವರಿಬ್ಬರ ಚಿತ್ರಗಳನ್ನು ಹಂಚಿಕೊಳ್ಳಲಾಗಿದೆ.

ಗೆದ್ದ ಬಳಿಕ ರೋಹಿತ್ ಶರ್ಮಾ ಅವರು ಮಣ್ಣು ತಿನ್ನುವ ಚಿತ್ರವೂ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ. ಈ ಹಿಂದೆ ಟೆನಿಸ್ ತಾರೆ ನೊವಾಕ್ ಜೋಕೊವಿಚ್ ಕೂಡ ಇದೇ ರೀತಿ ಮೈದಾನದ ಮಣ್ಣನ್ನು ತಿಂದಿದ್ದರು.

**ತವರಿಗೆ ವಿಳಂಬ ಸಾಧ್ಯತೆ:** ವೆಸ್ಟ್‌ಇಂಡೀಸ್‌ನಲ್ಲಿ ಚಂಡಮಾರುತದ ಪ್ರಭಾವ ಇರುವ ಕಾರಣ ಟಿ20 ವಿಶ್ವಕಪ್ ವಿಜೇತ ಭಾರತ ತಂಡದ ಆಟಗಾರರು ತವರಿಗೆ ಮರಳುವುದು ವಿಳಂಬವಾಗುವ ಸಾಧ್ಯತೆಯಿದೆ.